ಕೆಳಕಂಡ ಸ್ಥಳಗಳಲ್ಲಿ ಹಾಲಿ ಇರುವ ಶಾಖೆಗಳನ್ನು ಸ್ಥಳಾಂತರಿಸುವುದಕ್ಕಾಗಿ, **ಮುಖ್ಯ ರಸ್ತೆಯಲ್ಲಿ** ಆದ್ಯತೆಯಾಗಿ **ನೆಲಮಹಡಿಯಲ್ಲಿ** ಸ್ವತಂತ್ರ ಪ್ರವೇಶ, ಉತ್ತಮ ಮುಂಭಾಗ, ಪಾರ್ಕಿಂಗ್ ಸ್ಥಳವಿರುವ, ಆರ್‌ಬಿಐ ನಿರ್ದಿಷ್ಟತೆಗೆ ಅನುಸಾರವಾಗಿ ಸ್ಟ್ರಾಂಗ್ ರೂಮ್‌ನ್ನು ನಿರ್ಮಿಸಲು ಸಿದ್ಧವಿರುವ ಮತ್ತು ಅಗತ್ಯವಾದ ವಿದ್ಯುತ್ ಲೋಡ್‌ನೊಂದಿಗೆ ಬಳಕೆಗೆ ಸಿದ್ಧವಿರುವ ವಾಣಿಜ್ಯ ಸ್ಥಳವನ್ನು ಹೊಂದಿದ ಮಾಲೀಕರಿಂದ **ಎರಡು–ಬಿಡ್ ವ್ಯವಸ್ಥೆಯ ಅಡಿಯಲ್ಲಿ** ಮೊಹರಾದ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ.

ಸ್ಥಳ	ಜಿಲ್ಲೆಯ ಹೆಸರು	ಜನ ಸಮುದಾಯ	ಅಂದಾಜು ಕಾರ್ಪೆಟ್ ಸ್ಥಳ ಚ.ಅಡಿಗಳಲ್ಲಿ
ಹೆಚ್ ಎಸ್ ಆರ್ ಲೇಔಟ್	ಬೆಂಗಳೂರು ನಗರ	ಮಹಾನಗರ	2500 ರಿಂದ 5000
ಲೊಟ್ಟೆಗೊಲ್ಲಹಳ್ಳಿ (ಮಾರುತಿ ನಗರ)	ಬೆಂಗಳೂರು ನಗರ	ಮಹಾನಗರ	2500
ವಿಜಯನಗರ	ಬೆಂಗಳೂರು ನಗರ	ಮಹಾನಗರ	2500
ಲ್ಯಾವೆಲ್ಲೆ ರಸ್ತೆ	ಬೆಂಗಳೂರು ನಗರ	ಮಹಾನಗರ	2500
ದೊಮ್ಮಸಂದ್ರ – ಸರ್ಜಾಪುರ ರಸ್ತೆ	ಬೆಂಗಳೂರು ನಗರ	ಮಹಾನಗರ	2500
ಪುಟ್ಟಣ್ಣಚೆಟ್ಟಿ ರಸ್ತೆ	ಬೆಂಗಳೂರು ನಗರ	ಮಹಾನಗರ	2500
ಎಸ್‌ಎಂಇ ಹೊಸಕೋಟೆ	ಬೆಂಗಳೂರು ಗ್ರಾಮೀಣ	ಅರೆ ನಗರ	1700

ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್ **http://www.canarabank.com** ನಲ್ಲಿ ಪ್ರಕಟಿಸಲಾಗಿದೆ. ಅಗತ್ಯವಾದ ಅರ್ಜಿಗಳನ್ನು ಮೇಲೆ ತಿಳಿಸಲಾದ ಕಛೇರಿಯಿಂದ ಪಡೆಯಬಹುದು ಅಥವಾ ಬ್ಯಾಂಕಿನ ವೆಬ್‌ಸೈಟ್‌ನಿಂದ **Announcement → Tenders** ಅಡಿಯಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರಸ್ತಾವನೆಗಳನ್ನು ನಮ್ಮ ಕಛೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ : **25–06–2024 ರಂದು ಸಂಜೆ 3.00 ಗಂಟೆಯವರೆಗೆ.** ಮುಂದೆ, ಮಾಹಿತಿಗಳು, ತಿದ್ದುಪಡಿಗಳು, ಮಾರ್ಪಾಡುಗಳು ಇದ್ದಲ್ಲಿ, ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು. "ಮಧ್ಯವರ್ತಿಗಳಿಗೆ ಅವಕಾಶವಿಲ್ಲ"

ಸ್ಥಳ : ಬೆಂಗಳೂರು
ದಿನಾಂಕ : 02–06–2024
ಸಹಿ/–
ಸಹಾಯಕ ಮಹಾ ಪ್ರಬಂಧಕರು

'ಕಾರ್ಮಿಕ ಸಂಘಟನೆಗಳ ಜೊತೆ ಚರ್ಚಿಸಿ ಸಮಸ್ಯೆ ಬಗೆಹರಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳೊಂದಿಗೆ ಚರ್ಚಿಸಿ ಕಾರ್ಮಿಕರ ಕುಂದು ಕೊರತೆಗಳನ್ನು ಬಗೆಹರಿಸಬೇಕು ಎಂದು ಕೆಎಸ್‌ಆರ್‌ಟಿಸಿ ಸ್ಟಾಫ್ ಆ್ಯಂಡ್ ವರ್ಕರ್ಸ್ ಫೆಡರೇಶನ್ ಆಗ್ರಹಿಸಿದೆ.

ಫೆಡರೇಷನ್‌ನ ಕೇಂದ್ರ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಈ ಬಗ್ಗೆ ವಿವಿಧ ನಿರ್ಣಯಗಳನ್ನು ಕೈಗೊಂಡಿದೆ.

ವಿವಿಧ ನಿಗಮಗಳು, ವಿಭಾಗ ಮಟ್ಟದಲ್ಲಿ, ಘಟಕಗಳ ಮಟ್ಟದಲ್ಲಿ ಮಾತ್ರವಲ್ಲದೇ ಕೇಂದ್ರ ಮಟ್ಟದಲ್ಲಿಯೂ ಸಂಘಟನೆಗಳೊಂದಿಗೆ ಸಭೆ ನಡೆಸಬೇಕು. ವೇತನ ಸಮಸ್ಯೆ ಸಹಿತ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು. ಶಕ್ತಿ ಯೋಜನೆಯಿಂದ ನೌಕರರಿಗೆ ಉಂಟಾಗಿರುವ ಸಮಸ್ಯೆಗಳನ್ನು ಬಗೆಹರಿಸಬೇಕು. ತಾಂತ್ರಿಕ ಸಿಬ್ಬಂದಿಗೆ ಪ್ರೋತ್ಸಾಹಧನ ಕೊಡಬೇಕು ಎಂದು ಒತ್ತಾಯಿಸಲಾಯಿತು.

ಅನಂತಸುಬ್ಬರಾವ್

ಫಾರಂ–4 ಅನ್ನು ಕಾನೂನು, ಒಪ್ಪಂದಗಳಿಗೆ ಅನುಗುಣವಾಗಿ ಪುನರ್‌ರಚಿಸಬೇಕು. ಸಿಬ್ಬಂದಿ ನೇಮಿಸಬೇಕು. ಕೆಎಸ್‌ಆರ್‌ಟಿಸಿಯಲ್ಲಿ ಅನುಕಂಪ ಆಧಾರಿತ ನೇಮಕಾತಿ ಮೂಲಕ ಕಿರಿಯ ಸಹಾಯಕ ಹುದ್ದೆಗಳನ್ನು ಭರ್ತಿ ಮಾಡಬೇಕು ಎಂದು ಆಗ್ರಹಿಸಲಾಯಿತು.

ಬೇಡಿಕೆಗಳನ್ನು ಶೀಘ್ರವಾಗಿ ಇತ್ಯರ್ಥಪಡಿಸದಿದ್ದರೆ ಜಂಟಿ ಕ್ರಿಯಾ ಸಮಿತಿಯು ಹಮ್ಮಿಕೊಳ್ಳುವ ಎಲ್ಲ ಚಳವಳಿಗಳಲ್ಲಿ ನೌಕರರು ಪಾಲ್ಗೊಳ್ಳಬೇಕು ಎಂದು ಕರೆ ನೀಡಲಾಯಿತು ಎಂದು ಫೆಡರೇಶನ್ ಅಧ್ಯಕ್ಷ ಎಚ್‌.ವಿ.ಅನಂತಸುಬ್ಬರಾವ್ ಅವರು ತಿಳಿಸಿದ್ದಾರೆ.

6, 7ರಂದು ವಿವಿಧೆಡೆ ನೀರು ಪೂರೈಕೆ ವ್ಯತ್ಯಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾವೇರಿ 5ನೇ ಹಂತದ ಯೋಜನೆ ಅನುಷ್ಠಾನಕ್ಕೆ ಸಂಪರ್ಕ ಸೇರಿದಂತೆ ಹಲವು ಕಾಮಗಾರಿ ನಡೆಯಲಿರುವುದರಿಂದ ಜೂನ್ 6 ಮತ್ತು 7ರಂದು ನಗರದಲ್ಲಿ ನೀರು ಸರಬರಾಜಿನಲ್ಲಿ ವ್ಯತ್ಯಯ ಉಂಟಾಗಲಿದೆ.

ಈ ಮೊದಲು ಜೂನ್ 4, 5ರಂದು ನೀರು ಪೂರೈಕೆಯಲ್ಲಿ ವ್ಯತ್ಯವಾಗಲಿದೆ ಎಂದು ತಿಳಿಸಲಾಗಿತ್ತು. ಈಗ ಕಾಮಗಾರಿ ದಿನ ಬದಲಾಗಿದೆ. ಗುರುವಾರ, ಶುಕ್ರವಾರ ನೀರು ಪೂರೈಕೆ ವ್ಯತ್ಯಯವಾಗಲಿದೆ ಎಂದು ಜಲಮಂಡಳಿ ಪ್ರಕಟಣೆ ತಿಳಿಸಿದೆ.

ಕಾವೇರಿ 1, 2, 3ನೇ ಹಂತ ಮತ್ತು 4ನೇ ಹಂತದ 1–2 ಘಟ್ಟಗಳ ನೀರು ಸರಬರಾಜು ಘಟಕಗಳಲ್ಲಿ ಕ್ರಮವಾಗಿ 12 ಹಾಗೂ 6 ಗಂಟೆ ಕಾಮಗಾರಿ ನಡೆಯಲಿದೆ ಎಂದು ತಿಳಿಸಲಾಗಿದೆ.

ಸ್ಪಾ ವ್ಯವಸ್ಥಾಪಕನ ಬಂಧನ | ಇಬ್ಬರು ಮಹಿಳೆಯರ ರಕ್ಷಣೆ

ಸ್ಪಾ ಹೆಸರಿನಲ್ಲಿ ವೇಶ್ಯಾವಾಟಿಕೆ, ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ಪಾ ಹೆಸರಿನಲ್ಲಿ ವೇಶ್ಯಾವಾಟಿಕೆ ನಡೆಸುತ್ತಿದ್ದ ಆರೋಪದಲ್ಲಿ ದೊಮ್ಮಲೂರಿನ ಸ್ಪಾವೊಂದರ ಮೇಲೆ ಪೊಲೀಸರು ದಾಳಿ ಮಾಡಿ, ಇಬ್ಬರು ಮಹಿಳೆಯರನ್ನು ರಕ್ಷಿಸಿದ್ದಾರೆ.

'ದೊಮ್ಮಲೂರು 2ನೇ ಹಂತದಲ್ಲಿರುವ ಸ್ಪಾನಲ್ಲಿ ವೇಶ್ಯಾವಾಟಿಕೆ ನಡೆಯುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ದಾಳಿ ಮಾಡಿ ಮಹಿಳೆಯರನ್ನು ರಕ್ಷಿಸಲಾಗಿದೆ. ಸ್ಪಾ ವ್ಯವಸ್ಥಾಪಕ ಮಣಿಯನ್ನು ಬಂಧಿಸಲಾಗಿದೆ ಎಂದು ಪೊಲೀಸರು ತಿಳಿಸಿದರು.

'ಸ್ಪಾ ಮಾಲೀಕ ಉಪ್ಪೇನ್ ರಾಟಿ ತಲೆಮರೆಸಿಕೊಂಡಿದ್ದಾರೆ. ವೇಶ್ಯಾವಾಟಿಕೆಯಲ್ಲಿ ತೊಡಗಿದ್ದ ಉತ್ತರ ಪ್ರದೇಶ ಮತ್ತು ನಾಗಾಲ್ಯಾಂಡ್ ಮೂಲದ ಇಬ್ಬರು ಮಹಿಳೆಯರನ್ನು ರಕ್ಷಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಸ್ಪಾದಲ್ಲಿ ಬಾಡಿ ಟು ಬಾಡಿ ಮಸಾಜ್, ಇತರ ಸೇವೆಗಳ ಹೆಸರಿನಲ್ಲಿ ಗ್ರಾಹಕರನ್ನು ಸೆಳೆಯಲಾಗುತ್ತಿತ್ತು. ಬಳಿಕ ಲೈಂಗಿಕ ಕ್ರಿಯೆಗೆ ಪುಸಲಾಯಿಸಿ ಹಣ ಸಂಪಾದಿಸುತ್ತಿದ್ದರು. ಸದ್ಯಕ್ಕೆ ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ. ಇಂದಿರಾನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ' ಎಂದು ತಿಳಿಸಿದರು.

ಅಪರಾಧ ಸುದ್ದಿ

ಬೈಕ್ ಕಳ್ಳತನ, ಮೊಬೈಲ್ ಸುಲಿಗೆ: ಆಟೊ ಚಾಲಕನ ಬಂಧನ

ಬೆಂಗಳೂರು: ದ್ವಿಚಕ್ರ ವಾಹನಗಳ ಕಳ್ಳತನ ಹಾಗೂ ಮೊಬೈಲ್ ಫೋನ್‌ಗಳನ್ನು ಸುಲಿಗೆ ಮಾಡುತ್ತಿದ್ದ ಆಟೊ ಚಾಲಕನನ್ನು ಹಲಸೂರು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

'ಶಿವಾಜಿನಗರದ ನಿವಾಸಿ ಶಾಬಾಜ್‌ಖಾನ್ (25) ಬಂಧಿತ ಆರೋಪಿ. ಆತನಿಂದ ಒಟ್ಟು ₹2.60 ಲಕ್ಷ ಮೌಲ್ಯದ ನಾಲ್ಕು ಮೊಬೈಲ್ ಫೋನ್, ಮೂರು ದ್ವಿಚಕ್ರ ವಾಹನಗಳನ್ನು ಜಪ್ತಿ ಮಾಡಿಕೊಳ್ಳಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಬಂಧಿತನ ವಿರುದ್ಧ ಹಲಸೂರು ಠಾಣೆಯ ವ್ಯಾಪ್ತಿಯಲ್ಲಿ ಮೂರು ಮೊಬೈಲ್ ಫೋನ್, ಹೊಸಕೋಟೆ ಠಾಣೆಯ ವ್ಯಾಪ್ತಿಯಲ್ಲಿ ಬೈಕ್ ಕಳವು ಮಾಡಿದ್ದ ಪ್ರಕರಣ ಪತ್ತೆಯಾಗಿವೆ. ಆರ್.ಟಿ. ನಗರ ಹಾಗೂ ಸಿದ್ದಾಪುರ ಠಾಣೆಗಳಲ್ಲೂ 2 ಮೊಬೈಲ್ ಕಳವು ಪ್ರಕರಣಗಳು ದಾಖಲಾಗಿವೆ' ಎಂದು ಮೂಲಗಳು ತಿಳಿಸಿವೆ.

ಇಬ್ಬರು ಡ್ರಗ್ಸ್ ಪೆಡ್ಲರ್ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದೇಶಿ ಪ್ರಜೆಗಳಿಂದ ಮಾದಕ ವಸ್ತು ಖರೀದಿಸಿ ಹೆಚ್ಚಿನ ಬೆಲೆಗೆ ಬೇರೆಯವರಿಗೆ ಮಾರಾಟ ಮಾಡುತ್ತಿದ್ದ ಇಬ್ಬರು ಡ್ರಗ್ ಪೆಡ್ಲರ್‌ಗಳನ್ನು ಜೆ.ಜೆ. ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

'ಪಾದರಾಯನಪುರದ ನಿವಾಸಿಗಳಾದ ಮಹಮ್ಮದ್ ಆದಿಲ್ (25), ಮುದಾಸೀರ್ ಪಾಷಾ ಅಲಿಯಾಸ್ ಕಿಂಗ್ ಬಂಧಿತರು. ಇವರಿಂದ 21 ಗ್ರಾಂ ಎಂಡಿಎಂಎ, ಎಲೆಕ್ಟ್ರಾನಿಕ್ ತೂಕದ ಯಂತ್ರ, ₹3 ಸಾವಿರ ನಗದು ಜಪ್ತಿ ಮಾಡಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

'ಬಾಣಸವಾಡಿ ಮತ್ತು ನೆಲಮಂಗಲದಲ್ಲಿ ವಾಸವಾಗಿರುವ ನೈಜಿರಿಯಾ ಪ್ರಜೆಗಳೊಂದಿಗೆ ಆರೋಪಿಗಳು ಡ್ರಗ್ಸ್ ವ್ಯವಹಾರ ನಡೆಸುತ್ತಿದ್ದರು. ಡ್ರಗ್ಸ್ ಖರೀದಿಸಲು ನೈಜಿರಿಯಾ ಪ್ರಜೆಗಳಿಗೆ ಕರೆ ಮಾಡುತ್ತಿದ್ದರು. ಬಳಿಕ ವಿದೇಶಿ ಪ್ರಜೆಗಳು ಒಂದು ನಿಗದಿತ ಸ್ಥಳದಲ್ಲಿ ಡ್ರಗ್ಸ್ ಇಟ್ಟು ಆರೋಪಿಗಳಿಗೆ ಲೋಕೇಷನ್ ಕಳುಹಿಸುತ್ತಿದ್ದರು. ನಂತರ ವಿದೇಶಿಗರಿಗೆ ಹಣ ಕಳುಹಿಸಿ, ಡ್ರಗ್ಸ್ ತಂದು ಬೇರೆಯವರಿಗೆ ಹೆಚ್ಚಿನ ಬೆಲೆಗೆ ಮಾರಾಟ ಮಾಡುತ್ತಿದ್ದರು' ಎಂದು ತಿಳಿಸಿದರು.

'ಇತ್ತೀಚೆಗೆ ವಿ.ಎಸ್.ಗಾರ್ಡನ್ ನಾಗರಕಲ್ಲು ದೇವಸ್ಥಾನ ಸಮೀಪದಲ್ಲಿ ಡ್ರಗ್ಸ್ ಮಾರಾಟ ಯತ್ನ ಕುರಿತ ಮಾಹಿತಿ ಆಧರಿಸಿ ದಾಳಿ ನಡೆಸಿ ಇಬ್ಬರನ್ನು ಬಂಧಿಸಲಾಗಿದೆ. ಮಹಮ್ಮದ್ ಆದಿಲ್ ವಿರುದ್ಧ ಈಗಾಗಲೇ ವಿವಿಧ ಠಾಣೆಗಳಲ್ಲಿ ಮೂರು ಡ್ರಗ್ಸ್ ಮಾರಾಟ ಪ್ರಕರಣಗಳಿವೆ' ಎಂದು ತಿಳಿಸಿದರು.

ನಂದಿ ಗಿರಿಧಾಮ: ಪ್ರವೇಶ ಅವಧಿ ಪರಿಷ್ಕರಣೆ

ಚಿಕ್ಕಬಳ್ಳಾಪುರ: ತಾಲ್ಲೂಕಿನ ಪ್ರಸಿದ್ಧ ಪ್ರವಾಸಿ ತಾಣ ನಂದಿ ಗಿರಿಧಾಮ ಪ್ರವೇಶದ ಅವಧಿಯನ್ನು ಪರಿಷ್ಕರಿಸಲಾಗಿದೆ. ಪ್ರವಾಸಿಗರಿಗೆ ಅನುಕೂಲ ಆಗುವಂತೆ ಬೆಳಗ್ಗೆ 5.30ರಿಂದ ಸಂಜೆ 6.30ರವರೆಗೆ ಪ್ರವೇಶದ ಅವಧಿ ನಿಗದಿಗೊಳಿಸಿ ಜಿಲ್ಲಾಧಿಕಾರಿ ಪಿ.ಎನ್.ರವೀಂದ್ರ ಆದೇಶ ಹೊರಡಿಸಿದ್ದಾರೆ.

ಕೊಡಗಿಗೆ ಎನ್‌ಡಿಆರ್‌ಎಫ್ ತಂಡ

ಮಡಿಕೇರಿ: ಮುಂಗಾರಿನಲ್ಲಿ ಕೊಡಗು ಜಿಲ್ಲೆಯಲ್ಲಿ ಸಂಭವಿಸಬಹುದಾದ ಪ್ರಾಕೃತಿಕ ವಿಕೋಪ ಎದುರಿಸಲು ರಾಷ್ಟ್ರೀಯ ವಿಪತ್ತು ನಿರ್ವಹಣಾ ತಂಡ (ಎನ್‌ಡಿಆರ್‌ಎಫ್) ತಂಡವು ಶನಿವಾರ ಜಿಲ್ಲೆಗೆ ಆಗಮಿಸಿದೆ. ಬೆಂಗಳೂರಿನ ಎನ್‌ಡಿಆರ್‌ಎಫ್‌ನ ರೀಜನಲ್ ರೆಸ್ಪಾನ್ಸ್ ಸೆಂಟರ್‌ನ 10ನೇ ಬೆಟಾಲಿಯನ್‌ನ 25 ಯೋಧರು ಇನ್‌ಸ್ಪೆಕ್ಟರ್ ಅಜಯ್ ಅವರ ನೇತೃತ್ವದಲ್ಲಿ ಇಲ್ಲಿನ ಕುಶಾಲನಗರಕ್ಕೆ ಬಂದರು. ಈ ತಂಡ ಮುಂಗಾರು ಮುಗಿಯುವವರೆಗೂ ಜಿಲ್ಲೆಯಲ್ಲೇ ಇರಲಿದೆ.

ಬೆಂಗಳೂರು ನಗರದ ಇನ್ನಷ್ಟು ಸುದ್ದಿಗಳು 7

ಕೆನರಾ ಬ್ಯಾಂಕ್ केनरा बैंक Canara Bank
Premises & Estate Section, G A Wing,
Head Office, No. 112, J C Road, Bangalore - 560002
NOTICE INVITING TENDERS
Canara Bank invites sealed tenders in two-bid system for the proposed **"COMPREHENSIVE RENOVATION WORKS FOR 11 FLATS AND EXTERNAL CIVIL RENOVATION OF BLOCK 19 AT BTM APARTMENTS, BANGALORE"**
For further details and other terms and conditions, please visit Bank's website https://canarabank.com/tenders.aspx. For any clarifications contact 080-22238819/22297695 extn 219/214. Last date for submission of tender form is 02/07/2024, 3:00 PM. Further, all addendum/corrigendum including modification if any, will be hosted at the Bank's website only.
Place : Bengaluru, Date : 02.06.2024 Sd/- Asst. General Manager

ಪಾಲಸಮುದ್ರದ ಸೀಮಾಸುಂಕ, ಪರೋಕ್ಷ ತೆರಿಗೆ ಮತ್ತು ಮಾದಕ ವಸ್ತು ರಾಷ್ಟ್ರೀಯ ಅಕಾಡೆಮಿಯಲ್ಲಿ (ಎನ್‌ಎಸಿಐಎನ್) ನಿವೃತ್ತಿ ಹೊಂದಿದ ಹೆಚ್ಚುವರಿ ಮಹಾನಿರ್ದೇಶಕ ಜಿ. ನಾರಾಯಣಸ್ವಾಮಿ ಅವರಿಗೆ ನಗರದಲ್ಲಿ ಹಮ್ಮಿಕೊಳ್ಳಲಾದ ಬೀಳ್ಕೊಡುಗೆ ಸಮಾರಂಭದಲ್ಲಿ ಜಾಲಹಳ್ಳಿಯ ಎನ್‌ಎಸಿಐಎನ್‌ನ ಕರ್ನಾಟಕ ವಲಯದ ಅಧಿಕಾರಿಗಳು ಮತ್ತು ಸಿಬ್ಬಂದಿ ಗೌರವಿಸಿದರು

ಚೈತನ್ಯ ಕಾಲೇಜಿಗೆ 10 ರ‍್ಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಚೈತನ್ಯ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳು ಈ ಬಾರಿಯ ಸಿಇಟಿಯಲ್ಲಿ 10 ರ‍್ಯಾಂಕ್‌ಗಳನ್ನು ಪಡೆದಿದ್ದಾರೆ. ಚೈತನ್ಯ ಪಿಯು ಮತ್ತು ಸಿಬಿಎಸ್‌ಇ ಕಾಲೇಜುಗಳು ಈ ಸಾಧನೆ ಮಾಡಿವೆ.

ಕಲ್ಯಾಣ್ ವಿ. ಅವರು ಪಶುವೈದ್ಯಕೀಯ, ಬಿಎಸ್‌ಸಿ ನರ್ಸಿಂಗ್, ಬಿ.ಫಾರ್ಮಾ, ಡಿ.ಫಾರ್ಮಾಗಳಲ್ಲಿ ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿದ್ದರೆ, ಮನೋಜ್ ಸೋಹನ್ ಗಜುಲ ಎಂಜಿನಿಯರಿಂಗ್‌ನಲ್ಲಿ 2ನೇ, ಬಿ.ಫಾರ್ಮಾ ಮತ್ತು ಡಿ.ಫಾರ್ಮಾದಲ್ಲಿ 7ನೇ ರ‍್ಯಾಂಕ್ ಪಡೆದಿದ್ದಾರೆ. ಅನಿಮೇಶ್ ಸಿಂಗ್ ರಾಥೋರ್ ಎಜಿಬಿಎಸ್‌ಸಿಯಲ್ಲಿ 3ನೇ ರ‍್ಯಾಂಕ್ ಹಾಗೂ ಎಂಜಿನಿಯರಿಂಗ್‌ನಲ್ಲಿ 5ನೇ ರ‍್ಯಾಂಕ್, ಆದಿತ್ಯ ಎ. ಅವರು ಎಜಿಬಿಎಸ್‌ಸಿಯಲ್ಲಿ 6ನೇ ರ‍್ಯಾಂಕ್ ಗಳಿಸಿದ್ದಾರೆ ಎಂದು ಚೈತನ್ಯ ಎಜುಕೇಷನಲ್ ಇನ್‌ಸ್ಟಿಟ್ಯೂಷನ್ಸ್ ಎಜಿಎಂ ವಿ. ಸತೀಶ್ ಕುಮಾರ್, ನಿರ್ದೇಶಕಿ ಸುಷ್ಮಾ ಬೊಪ್ಪನ ತಿಳಿಸಿದ್ದಾರೆ.

ಆದಿತ್ಯ ಎ.

ಮನೋಜ್

ಪ್ರಜ್ವಲ್‌ಗೆ ಕಠಿಣ ಶಿಕ್ಷೆಯಾಗಲಿ: ಜೋಶಿ

ಹುಬ್ಬಳ್ಳಿ: 'ಪ್ರಜ್ವಲ್ ರೇವಣ್ಣ ಕ್ಷಮಿಸಲು ಆಗದಂತಹ ಅಪರಾಧ ಮಾಡಿದ್ದಾರೆ. ಪೆನ್‌ಡ್ರೈವ್ ಹಂಚಿಕೆ ಇತ್ಯಾದಿ ನೋಡಿದರೆ, ಅವರು ಕ್ಷಮೆಗೆ ಅರ್ಹರಲ್ಲ. ಅವರಿಗೆ ಕಾನೂನು ರೀತಿ ಕಠಿಣ ಶಿಕ್ಷೆ ಆಗಬೇಕು. ಇದು ಗಂಭೀರ ಪ್ರಕರಣವಾಗಿದ್ದು, ನನ್ನ ಹಾಗೂ ನಮ್ಮ ಪಕ್ಷದ (ಬಿಜೆಪಿ) ಸ್ಪಷ್ಟ ನಿಲುವು' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು. 'ನಮ್ಮ ಭಾರತ ದೇಶದಲ್ಲಿ ಮಹಿಳೆಯರನ್ನು ಗೌರವದಿಂದ ಕಾಣುತ್ತೇವೆ. ಇಂಥ ಘಟನೆ ಹೇಸಿಗೆ ಹುಟ್ಟಿಸುತ್ತದೆ. ಮನಸ್ಸಿಗೆ ಕಿರಿಕಿರಿಯಾಗಿದೆ. ಕಟ್ಟುನಿಟ್ಟಾಗಿ ತನಿಖೆ ನಡೆಯಬೇಕು' ಎಂದರು.

ನಗರದಲ್ಲಿ ಇಂದು

'ಭಕ್ತಿ ಭಾವನಂದಂ' ಭಜನೆ: ಆಯೋಜನೆ: ಶ್ರೀ ಸತ್ಯ ಸಾಯಿ ಸೇವಾ ಸಂಸ್ಥೆ, ಸ್ಥಳ: ಸತ್ಯಸಾಯಿ ಆಶ್ರಮ, ಬೃಂದಾವನ, ಕಾಡುಗೋಡಿ, ಬೆಳಿಗ್ಗೆ 9

ಮೊದಲ ವರ್ಷದ ಪಿಯು ತರಗತಿ ಪ್ರಾರಂಭ ಮತ್ತು ಅಧಿಕ ಅಂಕ ಪಡೆದವರಿಗೆ ಸನ್ಮಾನ: ಎಂ.ಆರ್. ದೊರೆಸ್ವಾಮಿ, ಮುಖ್ಯ ಅತಿಥಿ: ಎಲ್.ಎ.ರವಿ ಸುಬ್ರಹ್ಮಣ್ಯ, ಉಪಸ್ಥಿತಿ: ಜೆ.ಸೂರ್ಯಪ್ರಸಾದ್, ಆಯೋಜನೆ: ಪಿಇಎಸ್ ಪಿಯು ಕಾಲೇಜು, ಸ್ಥಳ: ಡಾ.ಎಂ.ಆರ್.ಡಿ. ಸಭಾಂಗಣ, ಪಿಇಎಸ್ ವಿಶ್ವವಿದ್ಯಾಲಯ, ಹೊಸಕೆರೆಹಳ್ಳಿ, ಬೆಳಿಗ್ಗೆ 10

ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಸ್ಮರಣೆ: ಮಾಸ್ತಿ ಅವರ ಬಗ್ಗೆ ಉಪನ್ಯಾಸ: ರಜನಿ ಜಯರಾಂ, ಕಥಾ ವಾಚನ: ವಾಣಿಶ್ರೀ ಗಿರೀಶ್, ಮುಖ್ಯ ಅತಿಥಿ: ಬಿ.ಎಲ್. ಶ್ರೀನಿವಾಸ್, ಆಯೋಜನೆ: ಪ್ರತಿಭಾ ಹೊಂಗಿರಣ ಸಾಂಸ್ಕೃತಿಕ ವೇದಿಕೆ, ಸ್ಥಳ: ಕೆನ್ ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ವೈದೇಹಿ ಸಾಹಿತ್ಯ–ಮೂರು ಪುಸ್ತಕಗಳ ಚಿಂತನ ಮಂಥನ: 'ಸೀಮಾಂತೆ ಅಲ್ಲ ಸೀಮಾತೀತೆ', 'ನೆನಪು ಏಕತಾರಿ', 'ಹೆಗಲಲಿದೆ ಸಾವಿರ ಸವಾಲು', ಉದ್ಘಾಟನೆ ಮತ್ತು ಅಧ್ಯಕ್ಷತೆ: ಬಸವರಾಜ ಕಲ್ಗುಡಿ, ಕೃತಿಗಳ ಅವಲೋಕನ: ಎಂ.ಎಸ್. ಆಶಾದೇವಿ, ಎಸ್.ಆರ್. ವಿಜಯಶಂಕರ, ಉಪಸ್ಥಿತಿ: ಬಿ.ಎನ್.ಸುಮಿತ್ರಾ ಬಾಯಿ, ಆಯೋಜನೆ: ವೈದೇಹಿ ಅಭಿಮಾನಿಗಳ ಬಳಗ, ಸ್ಥಳ: ಬಿಎಂಶ್ರೀ ಪ್ರತಿಷ್ಠಾನ, 3ನೇ ಮುಖ್ಯರಸ್ತೆ, ಎನ್.ಆರ್. ಕಾಲೊನಿ, ಬೆಳಿಗ್ಗೆ 10

ವೈದೇಹಿ

'ಪರಸ್ಪರ' ಎಂಟನೇ ಮೈಲಿ ತಿಂಗಳ ಕಾರ್ಯಕ್ರಮ: 'ನಾನು ಮತ್ತು ನನ್ನ ಕಾವ್ಯ' ವಿಷಯದ ಬಗ್ಗೆ ಉಪನ್ಯಾಸ: ಸುಬ್ಬು ಹೊಲೆಯಾರ್, ಸ್ಥಳ: ಭೂಮಿಕಾ ಸೇವಾ ಫೌಂಡೇಶನ್, ಅಸೆಂಟ್ ಕಾಲೇಜು ಎದುರು, ಹೆಸರಘಟ್ಟ ರಸ್ತೆ, ಬೆಳಿಗ್ಗೆ 11

'ಸ್ಟಡೀಸ್ ಇನ್ ಇಂಡಿಯನ್ ಎಪಿಗ್ರಾಫಿ ಹಿಸ್ಟರಿ ಆ್ಯಂಡ್ ಕಲ್ಚರ್' ಪುಸ್ತಕ ಬಿಡುಗಡೆ: ಟಿ.ಎಸ್. ರವಿಶಂಕರ್, ಪುಸ್ತಕದ ಬಗ್ಗೆ ಮಾತು: ಶ್ರೀನಂದ ಬಾಪಟ್, ಅಧ್ಯಕ್ಷತೆ: ವಿ. ನಾಗರಾಜ್, ಆಯೋಜನೆ ಹಾಗೂ ಸ್ಥಳ: ದಿ ಮಿಥಿಕ್ ಸೊಸೈಟಿ, ಬೆಳಿಗ್ಗೆ 11

'ಸ್ವರ ಸಂಧ್ಯಾ' ಸಂಗೀತ ಕಾರ್ಯಕ್ರಮ: ಗಾಯನ: ತಾರಿಣಿ ನಗರಕರ್, ಪೂರ್ಣಿಮಾ ಭಟ್ ಕುಲಕರ್ಣಿ, ತಬಲಾ: ಮೇಘಶ್ಯಾಮ್ ಕೇಶವ್, ಸಾಗರ್ ಭರತರಾಜ್, ಹಾರ್ಮೋನಿಯಂ: ಮಧುಸೂದನ್ ಭಟ್, ಅಶ್ವಿನ್ ವಾಲ್ವಾಲ್ಕರ್, ಆಯೋಜನೆ: ಸಪ್ತಕ ಬೆಂಗಳೂರು, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ.ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 5.30

'ಆರಂಗೇತ್ರಂ' ರಂಗಪ್ರವೇಶ: ಲಿಖಿತ ಎ.ಟಿ., ಮುಖ್ಯ ಅತಿಥಿ: ನಾಗಶ್ರೀ ಕೆ.ಎಸ್., ಗೌರವ ಅತಿಥಿ: ಎ. ಕೃಷ್ಣಮೂರ್ತಿ, ಪ್ರಕಾಶ್ ಎಚ್.ಎಂ., ಆಯೋಜನೆ: ನಂದಿ ಭರತನಾಟ್ಯ ಕಲಾ ಶಾಲೆ, ಸ್ಥಳ: ಎ.ಡಿ.ಎ. ರಂಗಮಂದಿರ, ಜೆ.ಸಿ.ರಸ್ತೆ, ಸಂಜೆ 5.30

'ಲಾಕ್ ಔಟ್ ಅಲ್ಲ ನಾಕ್‌ಔಟ್' ನಾಟಕ ಪ್ರದರ್ಶನ: ನಿರ್ದೇಶನ: ಮಹೇಶ್ ಕುಮಾರ್, ಆಯೋಜನೆ: ಸ್ಟೇಜ್ ಬೆಂಗಳೂರು, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಸಂಜೆ 7.30

ಏಂಗೆಲ್ಸ್ 200 ಮಾಲಿಕೆ ಸಮಾರೋಪ ಹಾಗೂ 'ಕಾರ್ಲ್ ಮಾರ್ಕ್ಸ್ ಬಂಡವಾಳ' ಸಂಪುಟ 1 ಮತ್ತು 2 ಬಿಡುಗಡೆ: ಜಿ. ರಾಮಕೃಷ್ಣ, ಟಿ.ಆರ್. ಚಂದ್ರಶೇಖರ್, 'ಇಂದಿನ ಬಂಡವಾಳಶಾಹಿಯನ್ನು ಅರ್ಥೈಸಲು 'ಬಂಡವಾಳ'ದ ಓದು' ವಿಚಾರಸಂಕಿರಣ, ದಿಕ್ಸೂಚಿ ಭಾಷಣ: ವೆಂಕಟೇಶ ಆತ್ರೇಯ, ವಿಷಯ ವಿಸ್ತರಣೆ: ರಾಜೇಂದ್ರ ಚೆನ್ನಿ, ರತಿ ರಾವ್, ಕೆ.ಎನ್. ಉಮೇಶ್, ಆಯೋಜನೆ: ಕ್ರಿಯಾ ಮಾಧ್ಯಮ, ನವಕರ್ನಾಟಕ ಪ್ರಕಾಶನ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ.ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 10



ಡಾ.ಜಿ.ರಾಮಕೃಷ್ಣ

ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ ಕಳುಹಿಸಿ nagaradalli_indu@prajavani.co.in

Drilling of 6½" Surface and Robo Borewells

VIJAYALAKSHMI BOREWELLS-BANGALORE
94481-71416

AIR FORCE SCHOOL ASTE
GV Camp, Murugeshpalya, Bengaluru - 560 017
(Ph:080-25276920/ 25272332)
invites applications for the posts of

	Post	Nature of Appointment
(a)	TGT – SST	Contractual
(b)	Librarian	Contractual-Leave vacancy
(c)	PRT	Contractual
(d)	Lab Attendant	Regular
(e)	Computer Lab Attendant	Contractual-Panel
(f)	STEM Lab Co-ordinator	Part-time
(g)	Helpers (Male/Female)	Regular - Panel

Details of qualifications and documents required to be checked on **www.afsaste.edu.in**. Hard copies of resume/CV, along with relevant documents, two passport size photographs and covering letter stating the post applied for with complete contact details (i.e. present address, mobile nos, email id) should be submitted / posted to Air Force School, ASTE, GV Camp, Murugeshpalya, Bengaluru - 560017.
Last date of receipt is 17 June 2024 upto 1200 hrs. Soft copies will not be accepted.

ದಶಕಗಳಿಂದ ಬೋವಿಗಳ ಆಗ್ರಹ

‘ಕುಲಕಸುಬಿಗೆ ಅವಕಾಶ ಬೇಕು’

● ಕೆ.ನರಸಿಂಹಮೂರ್ತಿ

ಮೈಸೂರು: ‘ಕುಲಕಸುಬಿನಲ್ಲಿ ಅಭಿವೃದ್ಧಿ ಹೊಂದಲು ಮೇದಾರರು, ಮೀನುಗಾರರು, ಚಮ್ಮಾರ, ಕುಂಬಾರ, ಕುರಿ ಸಾಕುವವರಿಗೂ ಸರ್ಕಾರವು ಹಲವು ನೆರವು ಕೊಡುತ್ತಿದೆ. ಆದರೆ ಕಲ್ಲು ಹೊಡೆಯುವುದನ್ನೇ ನೆಚ್ಚಿಕೊಂಡಿರುವ ಬೋವಿಗಳಿಗೆ ಯಾವ ನೆರವೂ ಇಲ್ಲ. ಸರ್ಕಾರವೂ ಜಾಗ ಕೊಡಲ್ಲ. ಕಲ್ಲು ಹೊಡೆಯುವಂತೆಯೂ ಇಲ್ಲ. ಎಷ್ಟು ವರ್ಷವೆಂದು ಕ್ವಾರಿಗಳಲ್ಲಿ ಗುತ್ತಿಗೆದಾರರ ಬಳಿ ಕೂಲಿಯಾಳುಗಳಾಗಿ ಕೆಲಸ ಮಾಡಬೇಕು?’

– ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣ ತಾಲ್ಲೂಕಿನ ಅರಕೆರೆ ಹೋಬಳಿಯ ಶ್ರೀರಾಂಪುರದಲ್ಲಿ ತಲೆಮಾರುಗಳಿಂದ ಕಲ್ಲು ಹೊಡೆಯುವ ಕೆಲಸವನ್ನೇ ಮಾಡಿಕೊಂಡು ಬಂದವರ ಮನದಾಳ ಇದು.

90 ವರ್ಷದಿಂದ ಜನ ಇಲ್ಲಿ ಬಿಸಿಲು, ಮಳೆ, ಚಳಿ, ಗಾಳಿ ಲೆಕ್ಕಿಸದೆ ಕಲ್ಲು ಹೊಡೆಯುತ್ತಲೇ ಇದ್ದಾರೆ. ಇವರೆಲ್ಲ ಕೆಆರ್‌ಎಸ್ ಜಲಾಶಯ ಕಟ್ಟಲು ಬಂದ ಕುಟುಂಬದವರು. ಅವರಲ್ಲಿ ತಮಿಳು, ತೆಲುಗು, ಕನ್ನಡ ಮಾತನಾಡುವ ಬೋವಿ ಕುಟುಂಬದವರಿದ್ದಾರೆ.

160 ಕುಟುಂಬಗಳಿರುವ ಈ ಚಿಕ್ಕ ಊರಿನ ಸುತ್ತ ದಶಕಗಳಿಂದ ಕಲ್ಲು ಗಣಿಗಾರಿಕೆ ನಡೆಯುತ್ತಿದೆ. ಕ್ರಶರ್‌ಗಳೂ ದೊಡ್ಡ ಸಂಖ್ಯೆಯಲ್ಲೇ ಇವೆ. ಇಲ್ಲಿರುವ ಬೃಹತ್ತಾದ ಕಲ್ಲು ಬೆಟ್ಟಗಳು ಕರಗಲು ಈ ಕುಟುಂಬಗಳ ತಲೆಮಾರುಗಳ ಶ್ರಮ ಕಾರಣ. ಇಲ್ಲೇ ಹುಟ್ಟಿ ಇಲ್ಲೇ ಬೆಳೆದ ಬಹುತೇಕರ ಜೀವನ ಇಲ್ಲೇ ಕರಗುತ್ತಿದೆ. ಹೊಸ ತಲೆಮಾರಿಗೆ ಶಿಕ್ಷಣವೂ ದುಬಾರಿ. ಕುಲಕಸುಬಿಗೆ ಅವಕಾಶಗಳಿಲ್ಲದೆ ಸ್ವಾವಲಂಬನೆಯೂ ಇಲ್ಲ. ನೆಮ್ಮದಿಯೂ ಇಲ್ಲ. ಊರೂ ಅಭಿವೃದ್ಧಿಯಾಗಿಲ್ಲ. ಚುನಾವಣೆಗೊಮ್ಮೆ ಮಾತ್ರ ಮತ ಕೇಳುವ ಜನ ಇತ್ತ ಹೋಗುತ್ತಾರೆ.

ಭಾರತೀಯ ಬೋವಿ ಓಲ್ಡ್ ಕಮ್ಯುನಿಟಿ ಕೌನ್ಸಿಲ್ ಆಫ್ ಇಂಡಿಯಾದ ಮಂಡ್ಯ ಜಿಲ್ಲಾ ಶಾಖೆ ನೀಡಿರುವ ಗುರುತಿನ ಚೀಟಿ ಬಿಟ್ಟರೆ ಬೇರೆ ಯಾವುದೇ ಚೀಟಿ ಅವರ ಬಳಿ ಇಲ್ಲ. ಗುರುತಿನ ಚೀಟಿ ಪಡೆದ 700 ಮಂದಿ ಜಿಲ್ಲೆಯಲ್ಲಿದ್ದಾರೆ. ‘ಸರ್ಕಾರವೇ ಗುರುತಿನ ಚೀಟಿ ನೀಡಿ ಕೈಹಿಡಿಯಬೇಕು’ ಎಂಬ ಬೇಡಿಕೆಯೂ ಈಡೇರಿಲ್ಲ. ‘ಇದರ ಜೊತೆಯಲ್ಲಿ ಜಾತಿನಿಂದನೆ, ದೌರ್ಜನ್ಯವನ್ನೂ ನಿರಂತರವಾಗಿ ಎದುರಿಸಬೇಕು’ ಎಂಬುದು ಅವರ ಅಳಲು.

ಬಂಡೆ, ಕ್ವಾರಿಗಳಿರುವೆಡೆಯೇ ವಾಸಿಸುವುದು ಅನಿವಾರ್ಯ. ಜನ, ವಾಹನ ಸಂಪರ್ಕವಿಲ್ಲದೆ, ಉಳಿ, ಸುತ್ತಿಗೆಯ ಶಬ್ದ ಮತ್ತು ದೂಳಿನಲ್ಲೇ ಅವರ ಬದುಕು. ಹತ್ತಿರದ ಶ್ರೀರಾಂಪುರದಲ್ಲಿ ಅಂಗನವಾಡಿ ಇದೆ. ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಇದೆ. 6ನೇ ಕ್ಲಾಸ್ ಓದಲು 3 ಕಿಮೀ ದೂರದ ಜಕ್ಕನಹಳ್ಳಿಗೆ ಅಥವಾ 5 ಕಿಮೀ ದೂರದ ಟಿ.ಎಂ.ಹೊಸೂರಿಗೆ ಹೋಗಬೇಕು. ಆದರೆ ಇಲ್ಲಿಗೆ ಬಸ್ ಬರಲ್ಲ. ಬೈಸಿಕಲ್ ತುಳಿಯಬೇಕು ಅಥವಾ ತಂದೆ ಇಲ್ಲವೇ ತಾಯಿಯೇ ಶಾಲೆಗೆ ಕರೆದೊಯ್ಯಬೇಕು. ದಾರಿ ಸುರಕ್ಷವಲ್ಲ ಎನ್ನುವ ಕಾರಣಕ್ಕೆ ಹಲವು ಹೆಣ್ಣುಮಕ್ಕಳನ್ನು ಪ್ರೌಢಶಾಲೆಗೂ ಕಳಿಸಿಲ್ಲ.

ಇಲ್ಲಿಂದ ಶ್ರೀರಂಗಪಟ್ಟಣ 10 ಕಿಮೀ ದೂರ. ಮಂಡ್ಯ 15 ಕಿಮೀ ದೂರವಷ್ಟೇ. ಆದರೆ ಅಲ್ಲಿಗೆ ತುರ್ತು ಸಂದರ್ಭಗಳಲ್ಲಿ ಆಂಬುಲೆನ್ಸ್ ಬರಲು ಕನಿಷ್ಠ ಎರಡು ಗಂಟೆ ಬೇಕು. ಏಕೆಂದರೆ ಅಲ್ಲಿ ರಸ್ತೆಗಳಿರುವುದು ಕಲ್ಲು, ಜಲ್ಲಿ, ಜಲ್ಲಿಪುಡಿ ಸಾಗಿಸುವ ಲಾರಿಗಳಿಗಾಗಿ ಮಾತ್ರ. ಬೈಕ್, ಆಟೋ ಸಂಚಾರ ಕಡುಕಷ್ಟ. ಈ ಊರಿನ ಸುತ್ತಮುತ್ತ ಸುಮಾರು ನೂರು ಕ್ರಶರ್‌ಗಳಾದರೂ ಇರಬಹುದು. ಆದರೆ ಅಲ್ಲಿಯೂ ನಿಯಮಿತ ಕೆಲಸವಿಲ್ಲ. ಸ್ವಂತ ಜಮೀನೂ ಇಲ್ಲ. ಇವರ ಸಾಂಪ್ರದಾಯಿಕ ವೃತ್ತಿಯೇ ಸರ್ಕಾರಕ್ಕೆ, ಗುತ್ತಿಗೆದಾರರಿಗೆ ದೊಡ್ಡ ಆದಾಯದ ಮೂಲ. ಆದರೆ, ಇವರಿಗೆ ಮಾತ್ರ ಉದ್ಯೋಗದ ಅಭದ್ರತೆಯಿಂದ ಮುಕ್ತಿಯೇ ಇಲ್ಲ. ಹೀಗಾಗಿಯೇ ಜೀವನವೂ ನಿರಂತರ ಅಭದ್ರ.

ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ತಾಲ್ಲೂಕಿನ ಸುಮಾರು 20ಕ್ಕೂ ಹೆಚ್ಚು ಗ್ರಾಮಗಳಲ್ಲಿ 10ರಿಂದ 12 ಸಾವಿರ ಬೋವಿಗಳಿದ್ದು, ಕೆಲವರಷ್ಟೇ ಕೃಷಿ ಮಾಡುತ್ತಿದ್ದಾರೆ. ಶೇ 60ರಷ್ಟು ಮಂದಿ ಕಲ್ಲು ಒಡೆಯುತ್ತಾರೆ. ಕೆಲವರು ಶಿಲ್ಪಿಗಳಿದ್ದಾರೆ. ಶೇ 25ರಷ್ಟು ನಿರುದ್ಯೋಗಿಗಳಿದ್ದಾರೆ. ಮಹಿಳೆಯರೂ ಕಲ್ಲಿನ ಕೆಲಸ ಮಾಡುತ್ತಿದ್ದಾರೆ. ಇಂದಿಗೂ ಹರಿದ ಜೋಪಡಿಯ ಕೆಳಗೆ, ಗಿಡಗಳ ನೆರಳಿನಲ್ಲಿ ವೃತ್ತಿ ಮತ್ತು ಬದುಕನ್ನು ಸಾಗಿಸುತ್ತಿದ್ದಾರೆ.

ವ್ಯಾಪಾರ ಮಾಡಲು ಶಾಶ್ವತ ಜಾಗವೇ ಇಲ್ಲ. ಕಲ್ಲುಗಳನ್ನು ಒಡೆದು ದೇವಸ್ಥಾನದ ಮಾಲಗಂಬ, ದ್ವಾರಬಾಗಿಲು, ಶಿಖರ ಕಲ್ಲು, ಮೂರ್ತಿ, ದೇವರ ಪಾದ, ಮನೆಗಳಿಗೆ ಬೇಕಾದ ಮಾರಿಗಲ್ಲು, ಸೈಜುಗಲ್ಲು, ಕುದುರೆಕಲ್ಲು, ಚಾವಣಿಕಲ್ಲು, ಬೀಸುವ ಕಲ್ಲು, ಹಿಂಡಿಕಲ್ಲು, ಒರಳು ಕಲ್ಲು ಮಾರಾಟ ಮಾಡುತ್ತಿದ್ದಾರೆ. ಒಂದು ಕಾಲದಲ್ಲಿ, ಮುದ್ದೇಬಿಹಾಳ ಹಾಗೂ ಮಿಣಜಗಿ ಫರಸಿ, ಬೀಸುವ ಕಲ್ಲಿಗೆ ಹೊರ ರಾಜ್ಯಗಳಿಂದಲೂ ಬೇಡಿಕೆ ಇತ್ತು. ಈಗ ಇದರ ಬಳಕೆಯೇ ಕಡಿಮೆಯಾಗಿದೆ.

ದಶಕದಿಂದೀಚೆಗೆಸೈಜುಕಲ್ಲುಬಳಕೆಕಡಿಮೆಯಾಗಿರುವುದರಿಂದ, ಆ ಕೆಲಸ ಮಾಡುತ್ತಿದ್ದ ಬಾಗಲಕೋಟೆಯ ಬೋವಿಗಳು ಬೇರೆ ಕೆಲಸಗಳನ್ನು ಹುಡುಕಿಕೊಳ್ಳುತ್ತಿದ್ದಾರೆ. ಇಳಕಲ್ ತಾಲ್ಲೂಕಿನ ಬಲಕುಂದಿ, ಬಲಕುಂದಿ ತಾಂಡಾ, ಗುಡೂರ ಎಸ್.ಬಿ, ಹನಮನಾಳ, ಹಿರೇಕೊಡಗಲಿ, ಚಿಕ್ಕಕೊಡಗಲಿ, ಗುಳೇದಗುಡ್ಡ ಸೇರಿದಂತೆ ಹಲವೆಡೆ ಈ ಕೆಲಸ ಸಂಪೂರ್ಣ ನಿಂತಿದೆ.

ಕಟ್ಟಡ ನಿರ್ಮಾಣಕ್ಕೆ ಕಲ್ಲು ಬಳಕೆ ಕಡಿಮೆಯಾಗಿರುವುದು ಹಾಗೂ ಉದ್ಯಮಿಗಳು ಕಲ್ಲು ಗಣಿಗಾರಿಕೆ ಪ್ರವೇಶಿಸಿರುವುದರಿಂದ ಬೋವಿಗಳಿಗೆ ಗುತ್ತಿಗೆ ಪಡೆಯಲು ಸಾಧ್ಯವಾಗುತ್ತಿಲ್ಲ. ಯಂತ್ರಗಳೂ ಬಂದಿರುವುದರಿಂದ ಉದ್ಯೋಗ ಕಡಿಮೆಯಾಗಿದೆ. ಕಟ್ಟಡದ ಅಡಿಪಾಯಕ್ಕೆ ಕಚ್ಚಾ ಕಲ್ಲು (ರಬ್ಲಿ ಕಲ್ಲು) ಹಾಗೂ ಗ್ರಾನೈಟ್ ಗಣಿಗಾರಿಕೆಯಲ್ಲಿ ತ್ಯಾಜ್ಯ ರೂಪದಲ್ಲಿ ದೊರೆಯುವ ಕಲ್ಲುಗಳನ್ನು ಬಳಸಲಾಗುತ್ತಿದೆ.

ಗದಗ ತಾಲ್ಲೂಕಿನ ಚಿಂಚಲಿ ಹಾಗೂ ಬಸಾಪೂರ ಗ್ರಾಮದಲ್ಲಿ ಅತಿ ಹೆಚ್ಚು ಬೋವಿ ಸಮುದಾಯದವರಿದ್ದು, ಅನಾದಿಕಾಲದಿಂದಲೂ ಸ್ಫೋಟಕ ರಹಿತ ಕಲ್ಲು ಒಡೆಯುವುದು, ಮನೆ ಹಾಗೂ ದೇವಸ್ಥಾನಗಳ ನಿರ್ಮಾಣದಂತಹ ಕುಲಕಸುಬಿನಲ್ಲೇ ತೊಡಗಿಕೊಂಡಿದ್ದಾರೆ. ಚಿಂಚಲಿಯ 200ಕ್ಕೂ ಹೆಚ್ಚು ಕುಟುಂಬಗಳು ಅದನ್ನೇ ನೆಚ್ಚಿಕೊಂಡಿದ್ದು, ಜೀವನಮಟ್ಟ ಮಾತ್ರ ಸುಧಾರಿಸಿಲ್ಲ. ಇವರ ಹಣಕಾಸಿನ ಸ್ಥಿತಿ ಅಷ್ಟಕಷ್ಟೆ. ರಾಜ್ಯದಾದ್ಯಂತ್ಯ ಇದೇ ಕಥೆ. ವಾಸಿಸುವ ಸ್ಥಳದ ಹೆಸರು ಮಾತ್ರ ಬದಲಾಗುತ್ತದೆ.

‘ಈ ಪ್ರದೇಶದ ಸುತ್ತಮುತ್ತಲಿನ ಕಲ್ಲುಗುಡ್ಡಗಳಲ್ಲಿ ಸ್ಫೋಟಕ ಗಣಿಗಾರಿಕೆ ಬಂದಾಗಿನಿಂದ ಬದುಕು ಕಷ್ಟವಾಗಿದೆ. ಆದರೂ ಕೆಲವರು ಸ್ಫೋಟಕ ರಹಿತ ಕಲ್ಲುಗಣಿಗಾರಿಕೆ ಮಾಡಿಯೇ ಜೀವನ ಸಾಗಿಸುತ್ತಿದ್ದು, ಅದಕ್ಕೂ ಗಣಿ ಮತ್ತು ಪೊಲೀಸ್ ಅಧಿಕಾರಿಗಳು ಅಡ್ಡಿಪಡಿಸುತ್ತಾರೆ’ ಎಂದು ಹಲವು ಬಾರಿ ಪ್ರತಿಭಟನೆಗಳೂ ನಡೆದಿವೆ.

ಇದು ಬರಿ ಮೂರ್ನಾಲ್ಕು ಜಿಲ್ಲೆಗಳ ಕತೆ ಅಲ್ಲ. ಮೈಸೂರು, ಚಾಮರಾಜನಗರ, ಕೋಲಾರ, ಚಿಕ್ಕಬಳ್ಳಾಪುರ, ಚಿತ್ರದುರ್ಗ, ಕೊಪ್ಪಳ, ರಾಯಚೂರು, ಕಲಬುರಗಿ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ಹರಡಿಕೊಂಡಿರುವ ಈ ಸಮುದಾಯದವರೆಲ್ಲರ ಕತೆ. ಸನ್ನಿವೇಶಗಳು ಭಿನ್ನವಿರಬಹುದು. ಆದರೆ ಕಷ್ಟದ ಪರಿಸ್ಥಿತಿ, ಅತಂತ್ರ, ಅಭದ್ರ ಬದುಕಿನಲ್ಲಿ ಯಾವುದೇ ವ್ಯತ್ಯಾಸವಿಲ್ಲ.

ಶಿಕ್ಷಣದ ಅವಕಾಶವಿಲ್ಲದ್ದರಿಂದ ಉದ್ಯೋಗದ ಅವಕಾಶವೂ ಇಲ್ಲ. ರಾಜಕೀಯ ಅವಕಾಶಗಳೆನ್ನುವುದು ಸಹ ಅವರಿಗೆ ನಕ್ಷತ್ರದ ರೀತಿ. ನೋಡಿ ನಲಿಯಬೇಕಷ್ಟೇ. ಬೀಸುವ, ರುಬ್ಬುವ ಕಲ್ಲಿನಿಂದ ಬೃಹತ್ ಅಣೆಕಟ್ಟು ನಿರ್ಮಾಣದವರೆಗೆ ಮಹತ್ವದ ಪಾತ್ರ ವಹಿಸಿರುವ ಸಮುದಾಯಕ್ಕೆ ಆಧುನಿಕತೆ, ಗಣಿಗಾರಿಕೆಯ ಹೊಸ ನಿಯಮಗಳೇ ಉಳಿಪೆಟ್ಟು ನೀಡುತ್ತಿವೆ.

ನಮ್ಮ ಕೆಲಸ ನಮಗೆ ಕೊಡಿ...: ರಾಜ್ಯದಲ್ಲಿ ಪರಿಶಿಷ್ಟ ಜಾತಿಗೆ ಸೇರಿದ ಬೋವಿ (ವಡ್ಡರ) ಸಮುದಾಯವು, ‘ನಮ್ಮ ಕೆಲಸ ನಮಗೆ ಕೊಡಿ. ಸ್ವಾವಲಂಬನೆಗೆ ದಾರಿ ಮಾಡಿ’ ಎಂದು ಹಲವು ದಶಕಗಳಿಂದ ಆಗ್ರಹಿಸುತ್ತಲೇ ಇದೆ. ‘ಕುಲಕಸುಬಾದ ಕಲ್ಲು ಗಣಿಗಾರಿಕೆ ಮಾಡಲು ಅವಕಾಶಗಳಿಲ್ಲದೆ, ಗಣಿ ಗುತ್ತಿಗೆದಾರರ ಬಳಿ ಕೂಲಿ ಕೆಲಸ ಮಾಡಿಕೊಂಡೇ ಜೀವನ ಸಾಗಿಸಬೇಕೇ’ ಎಂಬುದು ಅವರ ಪ್ರಶ್ನೆ. ‘ಆರ್ಥಿಕ, ಸಾಮಾಜಿಕ, ಶೈಕ್ಷಣಿಕ, ಔದ್ಯೋಗಿಕ ಮತ್ತು ರಾಜಕೀಯ ಭದ್ರತೆಯೂ ಇಲ್ಲ’ ಎಂಬುದು ಅಸಹಾಯಕತೆ.

‘ವಿವಿಧ ಸಾಂಪ್ರದಾಯಿಕ ವೃತ್ತಿಗಳನ್ನು ನಿರ್ವಹಿಸುವ ಇತರೆ ಸಮುದಾಯಗಳಿಗೆ ವಿವಿಧ ಯೋಜನೆಗಳಿರುವಂತೆ ಭೋವಿಗಳಿಗೂ, ಅವರ ಸಾಂಪ್ರದಾಯಿಕ ವೃತ್ತಿಯನ್ನು ಉತ್ತೇಜಿಸಲು ಯಾವುದೇ ಯೋಜನೆ ಇಲ್ಲ’ ಎಂಬ ಕೊರಗು ದಶಕಗಳಿಂದ ಅವರನ್ನು ಬಾಧಿಸುತ್ತಿದೆ. ಕಲ್ಲುಗಣಿಗಾರಿಕೆ ನಡೆಯುವ ಆಸುಪಾಸಿನಲ್ಲೇ ಜೀವಿಸುವ ಅವರ ಕುಟುಂಬಗಳು ಮೂಲಸೌಕರ್ಯಗಳಿಲ್ಲದೆ ನಲುಗುತ್ತಿವೆ. ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಲೂ ಆಗದ ಪರಿಸ್ಥಿತಿಯಲ್ಲಿ ಬದಲಾವಣೆಯಾಗಿಲ್ಲ.

‘ಸರ್ಕಾರಿ ಜಮೀನುಗಳಲ್ಲಿ ಹರಾಜು ರಹಿತವಾಗಿ ಕಟ್ಟಡ ಕಲ್ಲು ಗಣಿ ಗುತ್ತಿಗೆ ಮಂಜೂರು ಮಾಡಲು, ಈಗ ಇರುವ ಗಣಿಗಾರಿಕೆ ಕಾನೂನು ಸಡಿಲಗೊಳಿಸಿ, 31 ಜಡ್‌ಸಿ ನಿಯಮವನ್ನು ರದ್ದುಪಡಿಸಬೇಕು. ಅವಕಾಶವಿರುವೆಡೆ ಎಲ್ಲ ಗ್ರಾಮಗಳಲ್ಲೂ ಸ್ಫೋಟಕ ರಹಿತ ಗಣಿ ಕೆಲಸವನ್ನು ಸ್ವತಂತ್ರವಾಗಿ ಮಾಡಲು ಅನುವು ಮಾಡಬೇಕು. ಗುರುತಿನ ಚೀಟಿ ಕೊಡಬೇಕು’ ಎಂಬ ಬೇಡಿಕೆಯೂ ಅರಣ್ಯರೋದನವಾಗಿಯೇ ಉಳಿದಿದೆ.

ಕಾಯುವುದೇ ಕಾಯಕ!: ಬೋವಿ ಸಮುದಾಯದವರು ಸೇರಿದಂತೆ ರಾಜ್ಯದಲ್ಲಿ ಸಾವಿರಾರು ಮಂದಿ ಗಣಿಗಾರಿಕೆಗೆ ಅನುಮತಿ ಕೋರಿ ಅರ್ಜಿ ಸಲ್ಲಿಸಿ ಕಾಯುತ್ತಲೇ ಇದ್ದಾರೆ. ಅವರ ಮನವಿ ಇಷ್ಟೇ: ಸ್ಫೋಟಕ ರಹಿತವಾಗಿ ಸಾಂಪ್ರದಾಯಿಕ ಕಲ್ಲು ಗಣಿಗಾರಿಕೆ ನಡೆಸಲು ಹರಾಜು ರಹಿತವಾಗಿ ಕನಿಷ್ಠ ಒಬ್ಬೊಬ್ಬರಿಗೆ ಅರ್ಧ ಎಕರೆಯನ್ನಾದರೂ ಹಂಚಿಕೆ ಮಾಡಿ’. ಆದರೆ, ಬದಲಾದ ನಿಯಮಗಳಲ್ಲಿ ಅದಕ್ಕೆ ಅವಕಾಶವಿಲ್ಲ.

ಕೋಲಾರ ಜಿಲ್ಲೆಯಲ್ಲಿ ಸುಮಾರು 700 ಮಂದಿ ₹2 ಸಾವಿರ ಮೊತ್ತದ ಡಿ.ಡಿ ಜೊತೆ ಅರ್ಜಿ ಸಲ್ಲಿಸಿದ್ದಾರೆ. ಈಗಾಗಲೇ ಎರಡು ವರ್ಷಗಳಾಗಿವೆ. ಜಿಲ್ಲೆಯ ಟೇಕಲ್‌ನಲ್ಲಿ ಕಲ್ಲು ಒಡೆಯುವವರಿಗೆಂದು 113 ಬ್ಲಾಕ್ ವಿಂಗಡಿಸಲಾಗಿದೆ. ಈಗಾಗಲೇ ಟೇಕಲ್, ಹುಣಸೀಕೋಟೆ, ಜಂಗಾನಹಳ್ಳಿ, ಉಳ್ಳೇರಹಳ್ಳಿ, ವೀರಕಪುತ್ರ, ಕದಿರೇನಹಳ್ಳಿ, ಅನಿಗಾನಹಳ್ಳಿ ಸೇರಿದಂತೆ ಸುತ್ತಲಿನ ಬೆಟ್ಟಗಳಲ್ಲಿ ಕಲ್ಲು ಸೀಳುವ ಕೆಲಸದಲ್ಲಿ ಹಲವರು ತೊಡಗಿಕೊಂಡಿದ್ದಾರೆ. ಹೆಚ್ಚಿನವರಿಗೆ ಪರವಾನಗಿ ಇಲ್ಲ. ‘ನಾವು ಮಾಡುವ ಕೆಲಸದ ಸ್ಥಳದಲ್ಲೇ ಪರವಾನಗಿ ಕೊಟ್ಟು, ರಾಜಧನ ಕಟ್ಟಿಸಿಕೊಳ್ಳಿ’ ಎಂಬ ಮನವಿಗೆ ಸರ್ಕಾರ ಸ್ಪಂದಿಸುತ್ತಿಲ್ಲ ಎನ್ನುವ ಬೇಸರ ಇವರಲ್ಲಿದೆ.

ಸ್ಥಳೀಯ ಕುಲಕಸುಬಿನವರ ಜತೆ ಬೇರೆ ಕಡೆಯವರು, ಉದ್ಯಮಿಗಳೂ ಅರ್ಜಿ ಸಲ್ಲಿಸಿರುವುದು ಅಡ್ಡಿಯಾಗಿ ಪರಿಣಮಿಸಿದೆ. ನೈಜ ಕಲ್ಲುಕುಟುಕರನ್ನು ಪತ್ತೆ ಹಚ್ಚಿ ಅವರ ಉದ್ಯೋಗವನ್ನು ಸಕ್ರಮಗೊಳಿಸಬೇಕು. ಏಕೆಂದರೆ, ಸರ್ಕಾರದ ಪ್ರಕಾರ ಹಲವರು ಅಕ್ರಮವಾಗಿ ಕಲ್ಲು ಗಣಿಗಾರಿಕೆ ನಡೆಸುತ್ತಿದ್ದಾರೆ. ಅದೇ ಕಾರಣಕ್ಕೆ, ಅವರ ಕಸುಬಿನ ಸಲಕರಣೆಗಳನ್ನು ಗಣಿ ಮತ್ತು ಭೂ ವಿಜ್ಞಾ ಇಲಾಖೆ ಅಧಿಕಾರಿಗಳು, ಪೊಲೀಸರು ವಶಕ್ಕೆ ಪಡೆಯುವ ಘಟನೆಗಳು ನಡೆಯುತ್ತಲೇ ಇವೆ. ಮತ್ತೆ ಅವುಗಳನ್ನು ವಾಪಸು ಪಡೆಯುವುದು ಕೂಡ ದೊಡ್ಡ ಸಾಹಸವೇ.

ಇಂಥ ಸಂಘರ್ಷಮಯ ವೃತ್ತಿ–ಬದುಕು ಹಸನಾಗಬೇಕು ಎಂಬ ಆಗ್ರಹ ಎಲ್ಲೆಡೆ ಕೇಳಿಬಂದರೂ ಗಟ್ಟಿ ಹೋರಾಟದ ಕೊರತೆಯೂ ಕಾಣುತ್ತದೆ. ಅದಕ್ಕೆ ಈ ಸಮುದಾಯಗಳ ಮುಖಂಡರು ಮೊದಲು ಒಟ್ಟಾಗಬೇಕು. ಆರ್ಥಿಕ ಹಾಗೂ ಸಾಮಾಜಿಕವಾಗಿ ಬಲಾಢ್ಯರಲ್ಲದ ಸಮುದಾಯದ ಮನವಿಗಳಿಗೆ ಸರ್ಕಾರವೂ ಸ್ಪಂದಿಸಬೇಕು. ಕಲ್ಲು ನೆಚ್ಚಿಕೊಂಡ ಬದುಕನ್ನು ಹಸನುಗೊಳಿಸಲು, ಸಾಮಾಜಿಕ, ಶೈಕ್ಷಣಿಕ, ರಾಜಕೀಯ ಬಲ ತುಂಬುವ ಕೆಲಸವೂ ಆಗಬೇಕು.

ಪೂರಕ ಮಾಹಿತಿ: ಕೆ.ಓಂಕಾರಮೂರ್ತಿ, ಬಸವರಾಜ ಹವಾಲ್ದಾರ, ಸತೀಶ ಬೆಳ್ಳಕ್ಕಿ, ಹರಿಶಂಕರ್ ಆರ್, ಶಂಕರ ಈ.ಹೆಬ್ಬಾಳ

ವಿಜಯಪುರ ಜಿಲ್ಲೆಯ ಮುದ್ದೇಬಿಹಾಳದಲ್ಲಿ ಕಟ್ಟಡ ನಿರ್ಮಾಣಕ್ಕಾಗಿ ಕಲ್ಲುಗಳನ್ನು ಸಿದ್ಧಗೊಳಿಸುತ್ತಿರುವ ಕಾರ್ಮಿಕ

ನಿಗಮದಿಂದ ಸಾಲ ಸೌಲಭ್ಯವಷ್ಟೇ ಸಾಕೆ?

‘2016ರಲ್ಲಿ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಸ್ಥಾಪನೆಯಾದ ಕರ್ನಾಟಕ ಬೋವಿ ಅಭಿವೃದ್ಧಿ ನಿಗಮವು ಸಮುದಾಯಕ್ಕೆ ಸಾಲ ಸೌಲಭ್ಯಗಳನ್ನು ನೀಡುವಷ್ಟಕ್ಕೆ ಮಾತ್ರ ಸೀಮಿತವಾಗಿದೆ. ಸ್ವಯಂ ಉದ್ಯೋಗ ಯೋಜನೆ, ಮೈಕ್ರೋ ಕ್ರೆಡಿಟ್ ಯೋಜನೆ, ಉದ್ಯಮಶೀಲತಾ ಯೋಜನೆ, ಭೂ ಒಡೆತನ ಯೋಜನೆ, ಗಂಗಾ ಕಲ್ಯಾಣ ಯೋಜನೆ ಅಡಿ ನೆರವು ನೀಡಲಾಗುತ್ತಿದೆ. ಕುಲಕಸುಬನ್ನು ಮಾಡಲು ಇರುವ ಕಾನೂನು ತೊಡಕುಗಳ ನಿವಾರಣೆಗೆ ಪ್ರಯತ್ನ ಮಾಡಿಲ್ಲ’ ಎಂಬ ಅಸಮಾಧಾನವೂ ಸಮುದಾಯದಲ್ಲಿದೆ.

‘ರಾಜಕೀಯ ವ್ಯಕ್ತಿಗಳ ಪ್ರಭಾವದಿಂದ, ನಿಗಮದ ಯೋಜನೆಗಳ ಲಾಭ ಕುಲವೃತ್ತಿ ಮಾಡುವವರಿಗೆ ದೊರಕುತ್ತಿಲ್ಲ. ಕೂಲಿಕಾರರು ಕೂಲಿಕಾರರಾಗಿಯೇ ಇದ್ದು, ಸರ್ಕಾರದ ವಿವಿಧ ಹುದ್ದೆಗಳಲ್ಲಿರುವ ಬೆರಳೆಣಿಕೆಯಷ್ಟು ಮಂದಿಗೂ ಸಮುದಾಯದ ಬಡವರ ಅಭಿವೃದ್ಧಿಯ ಕಾಳಜಿ ಅತಿಕಡಿಮೆ’ ಎಂದು ಮುದ್ದೇಬಿಹಾಳದ ಬೋವಿ ಸಮಾಜದ ಮುಖಂಡ ಪರಶುರಾಮ ನಾಲತವಾಡ ವಿಷಾದಿಸುತ್ತಾರೆ.

‘ಬೋವಿ ಜನಾಂಗದವರು ಕಲ್ಲು ಒಡೆಯುವುದು, ಕೆರೆ ತೊಡುವುದು, ಕಟ್ಟಡ ಕಟ್ಟುವುದು, ಮಣ್ಣು ಕೆಲಸ, ಗಾರೆ ಮತ್ತು ಇತರ ಕೂಲಿ ಕೆಲಸವನ್ನು ಮಾಡುತ್ತಿದ್ದು, ಸದರಿ ಜನಾಂಗದವರನ್ನು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅಭಿವೃದ್ಧಿ ಮಾಡಲು ಮತ್ತು ಮುಖ್ಯವಾಹಿನಿಗೆ ತರುವ ಉದ್ದೇಶದಿಂದ ನಿಗಮದ ವಿವಿಧ ಯೋಜನೆಯಡಿ ಆರ್ಥಿಕ ಸೌಲಭ್ಯ ಒದಗಿಸಲಾಗುತ್ತಿದೆ’ ಎಂಬ ಟಿಪ್ಪಣಿಯು ನಿಗಮದ ವೆಬ್‌ಸೈಟ್‌ನ ಮುಖಪುಟದಲ್ಲಿದೆ. ಕುಲಕಸುಬಿನಲ್ಲೇ ಸ್ವಾವಲಂಬಿಗಳಾಗಿಸುವ ಆಶಯ ಅಲ್ಲಿ ಕಂಡುಬರುವುದಿಲ್ಲ.

ಮುದ್ದೇಬಿಹಾಳದಲ್ಲಿ ಹಿಂಡಿಕಲ್ಲು, ಒರಳು ಕಲ್ಲು ಒಡೆಯುವ ತಯಾರಿಕೆಯಲ್ಲಿ ತೊಡಗಿರುವ ಕಾರ್ಮಿಕ

ಮಂಡ್ಯ ಜಿಲ್ಲೆಯ ಶ್ರೀರಾಂಪುರದ ಗುಡ್ಡದಲ್ಲಿ ಕಲ್ಲು ಒಡೆಯುವ ಕಾಯಕ

ಗಣಿಗಾರಿಕೆಯ ಕಾನೂನು ಬಿಗಿಗೊಳಿಸಿರುವುದರಿಂದ ಬೋವಿ ಸಮಾಜದವರು ಕಲ್ಲು ಗಣಿಗಾರಿಕೆಯಿಂದ ದೂರ ಸರಿದರು. ಈಗ ಗಾರೆ ಕೆಲಸ ಮಾಡುತ್ತಿದ್ದಾರೆ. ಕೆಲವರು ಕೆಲಸ ಹುಡುಕಿಕೊಂಡು ಗುಳೆ ಹೋಗಿದ್ದಾರೆ
ಅಶೋಕ ಲಿಂಬಾವಳಿ, ಬಳ್ಳಾರಿ

ಬೋವಿ ಸಮುದಾಯದ ಜನರ ಕುಲಕಸುಬಿಗೆ ಸರ್ಕಾರ ಸೌಲಭ್ಯ ಮತ್ತು ಕಾನೂನುಬದ್ಧವಾಗಿ ಅನುಕೂಲ ಕಲ್ಪಿಸಿದರೆ ಮಾತ್ರ ಏಳಿಗೆ ಸಾಧ್ಯ
ಎಚ್.ವೈ.ಸಂಕದ, ಗದಗ ಜಿಲ್ಲಾ ಭೋವಿ ಸಮುದಾಯದ ಅಧ್ಯಕ್ಷ

ಕಲ್ಲು ಒಡೆಯುವುದಕ್ಕೆ ಅನುಮತಿ ನೀಡಿ, ಸರ್ಕಾರಿ ಜಮೀನನ್ನು ಗುತ್ತಿಗೆಗೆ ಕೊಡಬೇಕು ಎಂದು ಕಟ್ಟಡ ಕಾರ್ಮಿಕರ ಸಂಘಟನೆಯ ಮೂಲಕ ಸರ್ಕಾರಕ್ಕೆ ಹಲವು ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ
ಹನಮಂತ ಬಂಡಿವಡ್ಡರ್, ಹಿರೇಕೊಡಗಲಿ, ಬಾಗಲಕೋಟೆ ಜಿಲ್ಲೆ

‘31 ಜಡ್‌ಸಿ ರದ್ದುಪಡಿಸಿ’

ಜಿ.ವಿ.ಸೀತಾರಾಂ

‘ಕರ್ನಾಟಕ ಉಪಖನಿಜ ರಿಯಾಯಿತಿ (ತಿದ್ದುಪಡಿ) ನಿಯಮಗಳು 1994ರ ನಿಯಮ 3ಎಫ್ ಅಡಿ ಸರ್ಕಾರಿ ಜಮೀನುಗಳಲ್ಲಿ ಹರಾಜು ರಹಿತವಾಗಿ ಕಟ್ಟಡ ಕಲ್ಲು ಗಣಿ ಗುತ್ತಿಗೆ ಮಂಜೂರು ಮಾಡಲು 31 ಜಡ್‌ಸಿ ನಿಯಮವನ್ನು ರದ್ದುಪಡಿಸಿದರೆ ಮಾತ್ರ ಬೋವಿಗಳ ಕುಲಕಸುಬು ಉಳಿಯಲು ಸಾಧ್ಯ’ ಎಂಬುದು ಬೋವಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ, ಮೈಸೂರಿನ ಜಿ.ವಿ.ಸೀತಾರಾಮು ಅವರ ಪ್ರತಿಪಾದನೆ.

‘ಎಂ ಸ್ಯಾಂಡ್ ಉತ್ಪಾದನೆಯನ್ನು ಹೆಚ್ಚಿಸಲೆಂದೇ ರೂಪಿಸಿದ ಈ ನಿಯಮದಿಂದ, ಬೋವಿ ಸಮುದಾಯದವರಿಗೆ ಸ್ವಂತ ಕಲ್ಲು ಗಣಿಗಾರಿಕೆ ಮಾಡುವ ಅವಕಾಶವೇ ಇಲ್ಲ. ಒಂದು ವೇಳೆ ಗಣಿಗಾರಿಕೆ ಮಾಡಿದರೆ ಅದು ಅಕ್ರಮವಾಗುತ್ತದೆ, ಇದು ಸಾಂಪ್ರದಾಯಿಕ ವೃತ್ತಿಪರರನ್ನು ಸಂಕಷ್ಟಕ್ಕೆ ದೂಡಿದೆ. ಹೀಗಾಗಿ ಅಂಥವರಿಗೆ ನೇರವಾಗಿ ಅರ್ಜಿ ಸಲ್ಲಿಸಲು ಅನುಕೂಲವಾಗುವಂತೆ ಅಥವಾ ಜಿಲ್ಲಾಧಿಕಾರಿ ಮೂಲಕ ಸ್ಫೋಟಕ ರಹಿತ ಗಣಿಗಾರಿಕೆ ಮಾಡಲು ಆಯಾ ತಾಲ್ಲೂಕುಗಳಲ್ಲಿ ಬೋವಿ ಸಮುದಾಯದವರಿಗೆ ಗುರುತಿನ ಚೀಟಿ ನೀಡಲು ಅನುಕೂಲ ವಾಗುವಂತೆ ಕಾನೂನು ರೂಪಿಸಬೇಕು ಎಂದು ಕೋರಿ ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಮನವಿ ಸಲ್ಲಿಸಲಾಗಿದೆ’ ಎಂದು ಅವರು ‘ಪ್ರಜಾವಾಣಿ’ಗೆ ತಿಳಿಸಿದರು.

’31 ಜಡ್‌ಸಿ ಪ್ರಕಾರ ಸಲ್ಲಿಸಿರುವ 1,500 ಅರ್ಜಿದಾರರಿಗೆ ಕಲ್ಲು ಗಣಿಗಾರಿಕೆಗೆ ಅನುಮತಿ ನೀಡಿದರೆ, ಬೋವಿ ಸಮುದಾಯದವರಿಗೆ 1 ಗುಂಟೆಯೂ ಸಿಗುವುದಿಲ್ಲ’ ಎಂದೂ ಪ್ರತಿಪಾದಿಸಿದರು. ಈ ಕುರಿತು, ಬೋವಿ ಗುರುಪೀಠದ ಇಮ್ಮಡಿ ಸಿದ್ದರಾಮೇಶ್ವರ ಸ್ವಾಮೀಜಿ ಕೂಡ ಇದೇ ಜನವರಿಯಲ್ಲಿ ಮುಖ್ಯಮಂತ್ರಿ ಸಿದ್ಧರಾಮಯ್ಯನವರಿಗೆ ಪತ್ರ ಬರೆದಿದ್ದಾರೆ.

ದೂಳು, ಅವಮಾನದಲ್ಲೇ ನಮ್ಮವರು ದಿನ ದೂಡುತ್ತಿದ್ದಾರೆ. ನಮ್ಮದೆಂಬ ಜಮೀನಿನಲ್ಲಿ ನಿಂತು ಕಲ್ಲು ಗಣಿಗಾರಿಕೆ ಮಾಡುವ ಅವಕಾಶ ಸಿಕ್ಕರೆ ಮಾತ್ರ ಬದುಕು ಬದಲಾಗುತ್ತದೆ
ಟಿ.ಸಿ.ಗುರಪ್ಪ, ಅಧ್ಯಕ್ಷ, ಭಾರತೀಯ ಬೋವಿ ಓಲ್ಡ್ ಕಮ್ಯುನಿಟಿ ಕೌನ್ಸಿಲ್ ಆಫ್ ಇಂಡಿಯಾ, ಮಂಡ್ಯ ಜಿಲ್ಲಾ ಶಾಖೆ

ಬ್ಲಾಕ್ ಇಟ್ಟಿಗೆ, ಸಿಮೆಂಟ್ ಕಾಲಂಗಳ ಮಾರಾಟ ಹೆಚ್ಚಿದ್ದರಿಂದ ಶೇ 90ರಷ್ಟು ಉದ್ಯೋಗ ಕುಸಿದಿದೆ. ಕಾನೂನು ತೊಡಕಿರುವುದರಿಂದ ಕುಲಕಸುಬನ್ನು ಬಿಟ್ಟು ಬಹುತೇಕರು ಹೊರರಾಜ್ಯಕ್ಕೆ ಗುಳೆ ಹೋಗುತ್ತಿದ್ದಾರೆ.
ಪರಶುರಾಮ ನಾಲತವಾಡ
ಮುದ್ದೇಬಿಹಾಳದ ಬೋವಿ ಸಮಾಜದ ಮುಖಂಡ

ಗುಂಡಣ್ಣ

25 ವರ್ಷಗಳ ಹಿಂದೆ

ಬುಧವಾರ, 2-6-1999

● **ನಿಲ್ಲದ ದಾಳಿ: ಹೆದ್ದಾರಿ ಧ್ವಂಸಕ್ಕೆ ಪಾಕ್ ಯತ್ನ ವಿಫಲ**

ನವದೆಹಲಿ, ಜೂನ್ 1 (ಪಿಟಿಐ, ಯುಎನ್‌ಐ)– ಪ್ರತಿಕೂಲ ಹವಾಮಾನದ ನಡುವೆಯೂ ವಾಯುಪಡೆಯ ಯುದ್ಧ ವಿಮಾನಗಳು ಜಮ್ಮು ಮತ್ತು ಕಾಶ್ಮೀರದ ಕಾರ್ಗಿಲ್ ವಲಯದಲ್ಲಿ ಪಾಕ್ ಬೆಂಬಲಿತ ಅತಿಕ್ರಮಣಕಾರರು ವಶಪಡಿಸಿಕೊಂಡಿರುವ ನೆಲೆಗಳ ಮೇಲೆ ಸತತ 7ನೇ ದಿನವಾದ ಇಂದೂ ದಾಳಿ ಮುಂದುವರಿಸಿದವು.

ಫ್ರಾನ್ಸ್‌ನಲ್ಲಿ ತಯಾರಾದ ಮಿರೇಜ್–2000 ಸೇರಿ ಈ ದಾಳಿಯನ್ನು ಪ್ರಮುಖವಾಗಿ ಮಿಗ್–21, ಮಿಗ್–23 ಹಾಗೂ ಮಿಗ್–27 ಯುದ್ಧ ವಿಮಾನಗಳು ಮಾಡಿದವು ಎಂದು ಮೂಲಗಳು ತಿಳಿಸಿವೆ.

50 ವರ್ಷಗಳ ಹಿಂದೆ

ಭಾನುವಾರ, 2-6-1974

● **20 ವರ್ಷದ ನಂತರ ಸತ್ತು ಬದುಕಿದ ಸಾಯಬಣ್ಣ**

ಕಲ್ಬುರ್ಗಿ, ಜೂನ್ 1– ಇಲ್ಲಿಂದ ಐದು ಕಿ.ಮೀ ದೂರದ ಹಳ್ಳಿಯೊಂದರಲ್ಲಿ 20 ವರ್ಷಗಳ ಹಿಂದೆ ಸತ್ತು ಸಮಾಧಿ ಮಾಡಲಾದ ವ್ಯಕ್ತಿಯೊಬ್ಬ ಬದುಕಿ ಬಂದ ವಿಚಿತ್ರ ಘಟನೆಯೊಂದು ವರದಿಯಾಗಿದೆ.

ಅನೇಕ ಗ್ರಾಮಸ್ಥರ ಸಮ್ಮುಖದಲ್ಲಿ 20 ವರ್ಷಗಳ ಹಿಂದೆ ಸಮಾಧಿ ಮಾಡಲಾದ ಸಾಯಬಣ್ಣ ಎಂಬ ವ್ಯಕ್ತಿ ಕಳೆದ ಮೇ 13ರಂದು ಹಳ್ಳಿಗೆ ಬಂದು ತನ್ನ ತಾಯಿ–ತಂದೆ ಮತ್ತು ಅಂತ್ಯಕ್ರಿಯೆ ದಿನ ಹಾಜರಿದ್ದ ಗ್ರಾಮಸ್ಥರನ್ನು ಗುರುತಿಸಿದನೆಂದು ಹೇಳಲಾಗಿದೆ. ಇದನ್ನು ನಂಬಲಾರದವರು ಸತ್ತು ಬದುಕಿ ಬಂದ ಸಾಯಬಣ್ಣನನ್ನು ನೋಡಲು ನೆಲೋಗಿಗೆ ಬಂದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಜೂನ್ 2, 2024

ಶ್ರೀ ಕ್ರೋಧಿ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ವೈಶಾಖ ಕೃಷ್ಣ ಏಕಾದಶಿ ಗಂ. 26-42 ನಕ್ಷತ್ರ: ರೇವತಿ ಗಂ. 25-40 ಯೋಗ: ಆಯುಷ್ಮಾನ್ ಗಂ. 12-11 ಕರಣ: ಬವ ಗಂ. 15-54, ವೃಷಭ ಮಾಸದ ನೇ 19 ದಿನ, ಮಳೆನಕ್ಷತ್ರ: ರೋಹಿಣಿ 3.
ರಾಹುಕಾಲ: ಸಾಯಂಕಾಲ 04-30 – 06-00
ಸೂರ್ಯೋದಯ: 06-06 ಸೂರ್ಯಾಸ್ತ : 06-51
ಮುಸ್ಲಿಂ ದಿನಾಂಕ: 24 ಜುಲ್ಖಾಯದ್
ಅದೃಷ್ಟ ಸಂಖ್ಯೆ: 1, 8

ಮೇಷ: ಸಾಮಾಜಿಕ ಕಾರ್ಯ ಎಂಬ ನೆಪದಲ್ಲಿ ಪಾಠ ಪ್ರವಚನಗಳ ಮೇಲೆ ನಿಮ್ಮ ಗಮನ ಕಡಿಮೆ ಆದಲ್ಲಿ ಹೆಚ್ಚಿನ ಕಷ್ಟ ಅನುಭವಿಸಬೇಕಾಗುತ್ತದೆ. ಗುರುವಿನ ಆಶೀರ್ವಾದ ಪಡೆದು ಕೆಲಸ ಶುರು ಮಾಡುವುದು ಸೂಕ್ತ.

ವೃಷಭ: ಕೋರ್ಟು ಕಚೇರಿ ವಿವಾದಗಳಲ್ಲಿ ರಾಜಿ ಮಾಡಿಕೊಳ್ಳಲು ಮುಂದಾದರೆ, ಶುಭ ಅಂತ್ಯ ಕಾಣಲಿದ್ದೀರಿ. ವಸ್ತ್ರ ವಿನ್ಯಾಸಕರ ಹೊಸ ವಿನ್ಯಾಸಕ್ಕೆ ಹೆಚ್ಚು ಬೇಡಿಕೆ ವ್ಯಕ್ತವಾಗಲಿದೆ. ಅಲರ್ಜಿಯಾಗುವ ಸಾಧ್ಯತೆ ಇದೆ.

ಮಿಥುನ: ಹಿರಿಯ ನಾಗರಿಕರನ್ನು ಮನೆಯಲ್ಲಿಯೇ ಶುಶ್ರೂಷೆ ಮಾಡುವವರಿಗೆ ತಮ್ಮ ನಿರೀಕ್ಷೆಯ ಹಣ ಸಿಗಲಾರದು. ಇಚ್ಛೆಗಳನ್ನು ನೆರವೇರಿಸಿಕೊಳ್ಳಲು ದೇವರ ಪ್ರಾರ್ಥನೆಯ ಜೊತೆಗೆ ನಿಮ್ಮ ಪ್ರಯತ್ನವೂ ಇರಲಿ.

ಕರ್ಕಾಟಕ: ಮನೆಗೆ ಹೊಂದಿಕೊಂಡಿರುವ ದೇವಾಲಯದ ಜೀರ್ಣೋದ್ಧಾರ ಮಾಡುವ ಮಾತುಕತೆ ಆಗಬಹುದು. ಭೂಸಂಬಂಧಿ ವ್ಯವಹಾರದಲ್ಲಿ ಇರುವವರಿಗೆ ಧನ ಲಾಭವಾಗಲಿದೆ. ಆದಾಯದಷ್ಟೇ ಖರ್ಚು ಸಹ ಇರಲಿದೆ.

ಸಿಂಹ: ಸದ್ಯಕ್ಕೆ ನಿಮಗೆ ಸಿಕ್ಕಿರುವ ಯಶಸ್ಸು ಅತ್ಯುನ್ನತ ಮಟ್ಟದ್ದಲ್ಲ ಎಂಬುದು ತಿಳಿದಿರಲಿ. ಮತ್ತಷ್ಟು ದೊಡ್ಡ ಯಶಸ್ಸಿಗಾಗಿ ಪ್ರಯತ್ನ ಪಟ್ಟರೆ ಉತ್ತಮ. ಈ ದಿನ ವಿವಿಧ ರೀತಿಯಲ್ಲಿ ಆಗುವ ಧನಾಗಮನ ಉತ್ತಮವಾಗಿರಲಿದೆ.

ಕನ್ಯಾ: ಸಾಮಾಜಿಕ ಜಾಲತಾಣಗಳಲ್ಲಿ ನಿಮ್ಮನ್ನು ವೀಕ್ಷಿಸಿದ ವ್ಯಕ್ತಿಯಿಂದ ಅನುಕೂಲಗಳಾಗುವ ಸಾಧ್ಯತೆ ಇದೆ. ಹಳೆಯ ಮಿತ್ರರ ಕೆಲವು ಮಾತುಗಳು ಸಂದರ್ಭಕ್ಕೆ ಅನುಸಾರವಾಗಿ ನೆನಪಾಗುತ್ತದೆ. ವಿಶೇಷ ವ್ಯಕ್ತಿಗಳನ್ನು ಭೇಟಿಯಾಗುವಿರಿ.

ತುಲಾ: ಮನಸ್ಸನ್ನು ಮತ್ತೆ ನಿಮ್ಮ ಹಾದಿಗೆ ತಂದುಕೊಳ್ಳಲು ಕ್ರೀಡೆಯಲ್ಲಿ ತೊಡಗಿಸಿಕೊಳ್ಳುವುದು ಅಥವಾ ವೀಕ್ಷಣೆ ಮಾಡಬಹುದು. ಮಕ್ಕಳ ವಿದ್ಯಾಭ್ಯಾಸವು ಉತ್ತಮವಾಗಿರಲಿದೆ. ನಿಮಗೆ ಬರಬೇಕಾದ ಹಣವು ಪೂರ್ಣವಾಗಿ ಬರಲಿದೆ.

ವೃಶ್ಚಿಕ: ನಿಮ್ಮ ಬಳಿ ಕೆಲಸವನ್ನು ಕಲಿತು ನಿಮಗಿಂತ ಹೆಚ್ಚು ದುಡಿಮೆ ಮಾಡುತ್ತಿರುವವರನ್ನು ಕಂಡು ಅಸೂಯೆ ಪಡುವಿರಿ. ಮಕ್ಕಳನ್ನು ಅವರ ಸಂಗಡಿಗರು ವಂಚನೆಯ ಕಡೆಗೆ ಕರೆದೊಯ್ಯದಂತೆ ಎಚ್ಚರ ವಹಿಸುವುದು ಉತ್ತಮ.

ಧನು: ದೇಹ ಬಾಧೆಗಳಿಂದ ಬಳಲುತ್ತಿರುವವರಿಗೆ ತಮ್ಮ ಅನಾರೋಗ್ಯದ ಬಗ್ಗೆ ಬೇಸರವಾಗಬಹುದು. ಈ ದಿನ ವ್ಯಕ್ತಿತ್ವದಲ್ಲಿ ಹಾಗೂ ಧನ ಲಾಭದಲ್ಲಿ ಒಂದು ರೀತಿಯ ಹೊಸ ಅನುಭವ ಹಾಗೂ ಅದೃಷ್ಟ ಕಾಣುವಿರಿ.

ಮಕರ: ಜನರ ನಿಂದನೆಗಳು ನಿಮ್ಮ ಕಿವಿಗೆ ಬೀಳಲಿದ್ದು, ವಾಸ್ತವತೆ ಬಗ್ಗೆ ಅವರಿಗೆ ಪರಿಚಯಿಸುವ ಹಠ ಮೂಡುತ್ತದೆ. ಯಂತ್ರೋಪಕರಣಗಳ ಸರಿಪಡಿಸುವಿಕೆ ಅಥವಾ ಬಿಡಿ ಭಾಗಗಳ ಮಾರಾಟದಿಂದ ಲಾಭ ಹೊಂದಲಿದ್ದೀರಿ.

ಕುಂಭ: ಸಣ್ಣ-ಪುಟ್ಟ ಅನಾರೋಗ್ಯಗಳಿಗೆ ನೀವೇ ಔಷಧ ಸೇವಿಸಿ ಹೆಚ್ಚಿನ ಅನಾರೋಗ್ಯಕ್ಕೆ ತುತ್ತಾಗದಿರಿ. ಮೊಬೈಲ್ ಕಂಪನಿಗಳಲ್ಲಿ ಕೆಲಸ ಮಾಡುತ್ತಿರುವವರಿಗೆ ನಿಮ್ಮ ಸ್ಥಾನದಲ್ಲಿ ಅಭದ್ರತೆ ಕಾಡಬಹುದು.

ಮೀನ: ಮನೆಯ ಜಗಳದಲ್ಲಿ ನಿಮ್ಮ ಮಾತಿನ ಅವಶ್ಯಕತೆ ಬಂದಾಗಲೂ ನಿಮ್ಮ ಮನಸ್ಸಿನ ಮಾತನು ಹೇಳಲು ಸಾಧ್ಯವಾಗುವುದಿಲ್ಲ. ನಿರುದ್ಯೋಗಿಗಳಿಗೆ ಕೆಲವು ಸಂಘ ಸಂಸ್ಥೆಗಳ ಸಹಾಯದಿಂದ ಉದ್ಯೋಗ ಫಲವಿದೆ.

ಪದಬಂಧ 5699

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಸಮುದ್ರ ಅಥವಾ ನದಿಯ ಉಬ್ಬರ (3)
6.ಇದು ಹೊಣೆಗೇಡಿತನವೆ ಬಿಡಿ! (5)
7.ಹತ್ತು ವರ್ಷದ ಅವಧಿಯು ಹಿಂದು ಮುಂದಾಗಿದೆ (3)
8.ಕಠೋರವಾದ ಕೈ! (2)
10.ಕಪಿ ಇಲ್ಲಿದೆ (2)
11.ಸರ ತರಲು ಹಚ್ಚಿದ ಪಾಳಿ! (3)
13.ಆಭರಣವಿಲ್ಲಿ ಉಲ್ಟಾ ಕಾಣುತ್ತಿದೆ (2)
14.ಸೂರ್ಯನ ಇನ್ನೊಂದು ಹೆಸರು (2)
18.ತೆಳುವಾಗಿರುವ ಲೋಹದ ಹಾಳೆ (3)
19.ನೀರಿನೊಡನೆ ಅಲೆಗಳು ಕೂಡಿದಾಗ ಕೇಳಿಸಿರುವ ವಾದ. (5)
20.ಇನ್ನೂ ಪರಿಷ್ಕೃತವಾಗದಿರುವ ಪ್ರತಿ (3)

ಮೇಲಿಂದ ಕೆಳಕ್ಕೆ
1.ಹೆದರಿಕೆಯನ್ನುಂಟು ಮಾಡುವುದು (4)
2.ಎಳ್ಳು ನೀರು ಬಿಡುವುದು (4)
3.ಈತ ಪಕ್ಕಾ ಆಲಸಿ (3)
4.ಹಾಲು ಮೊಸರು ಮಾರುವವನು (4)
5.ಕತ್ತಲೆಯ ರಾತ್ರಿ (4)
9.ರಸ ಒಸರುವ ಜಿಹ್ವೆ (3)
10.ಮಂದಿ ಹೊಕ್ಕಿರುವ ಗುಡಿ (3)
12.ಆನೆ ನಡುವಿದ್ದಾಗ ಕಂಡ ಬಿಸಿಲುಕುದುರೆ (4)
13.ಒಳ ಮನಸ್ಸು ಉಲ್ಟಾ ಕಾಣುತ್ತಿದೆ (4)
15.ಈ ಡಿಸ್ಟ್ರಿಬ್ಯೂಟರ್ ಪಕ್ಕಾ ಕನ್ನಡಿಗ! (4)
16.ತೆಳ್ಳಗಿನ ಸೊಂಟ(4)
17.ಮಗನೊಡನಿರುವ ಪುತ್ರಿ, (3)



5698ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3. ಭವಬಂಧನ 4. ಕೋರಿಕೆ
6. ಮಟ್ಟಸ 8. ರಮಣ
9. ಮಾರುತ 10. ಚಂದನ
11. ಮಧುರ 13. ರದನ
14. ರಜತೋತ್ಸವ.

ಮೇಲಿಂದ ಕೆಳಕ್ಕೆ:
1. ನವಸುಮ 2. ಪರಿಮಾಣ
5. ತರತಮ 7. ಸಮಾನತೆ
10. ಚಂದ್ರೋದಯ
12. ರಥೋತ್ಸವ

ಸುಡೊಕು 6084

	9				5		6	
2	7		4			8		5
	4				9		3	
4	6				7			
				4		1	7	6
8		7	5				4	
		4			2			7
7			1	5		6	8	
	8		7			2		4

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6083 ಸುಡೊಕು

6	7	9	3	5	4	2	1	8
5	2	4	1	6	8	9	3	7
1	8	3	2	7	9	6	5	4
8	6	7	9	3	5	1	4	2
2	4	5	6	1	7	3	8	9
9	3	1	4	8	2	5	7	6
4	1	8	5	9	6	7	2	3
3	9	2	7	4	1	8	6	5
7	5	6	8	2	3	4	9	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

230 ಸ್ಥಾನಗಳಿಗೆ ಸೀಮಿತವಾಗುವ ಎನ್‌ಡಿಎ: ಮೈತ್ರಿಕೂಟದ ಸಭೆಯ ಬಳಿಕ ಖರ್ಗೆ ಹೇಳಿಕೆ

‘ಇಂಡಿಯಾ ಬಣಕ್ಕೆ 295ಕ್ಕೂ ಹೆಚ್ಚು ಸ್ಥಾನ’

ಪ್ರಜಾವಾಣಿ ವಾರ್ತೆ

ನವದೆಹಲಿ: ಲೋಕಸಭಾ ಚುನಾವಣೆಯಲ್ಲಿ ‘ಇಂಡಿಯಾ’ ಮೈತ್ರಿಕೂಟ 295ಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಗೆಲ್ಲಲಿದೆ ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಶನಿವಾರ ವಿಶ್ವಾಸ ವ್ಯಕ್ತಪಡಿಸಿದರು.

ಲೋಕಸಭಾ ಚುನಾವಣೆಯ ಕೊನೆಯ ಹಂತದ ಮತದಾನ ಮುಕ್ತಾಯವಾದ ಬೆನ್ನಲ್ಲೇ ‘ಇಂಡಿಯಾ’ ಮೈತ್ರಿಕೂಟದ ನಾಯಕರು ದೆಹಲಿಯಲ್ಲಿ ಸಭೆ ಸೇರಿ ಜಯಿಸಬಹುದಾದ ಸ್ಥಾನಗಳ ಕುರಿತು ಲೆಕ್ಕ ಹಾಕಿದ್ದಾರೆ.

ಸಭೆಯಲ್ಲಿ ಕಾಂಗ್ರೆಸ್, ಸಮಾಜವಾದಿ ಪಕ್ಷ, ಆರ್‌ಜೆಡಿ, ಎಎಪಿ, ಎನ್‌ಸಿಪಿ (ಎಸ್‌ಪಿ), ಶಿವಸೇನಾ (ಯುಬಿಟಿ), ಡಿಎಂಕೆ, ಜೆಎಂಎಂ, ನ್ಯಾಷನಲ್ ಕಾನ್ಫರೆನ್ಸ್, ಸಿಪಿಎಂ, ಸಿಪಿಐ, ಸಿಪಿಐ (ಎಂಎಲ್)ಎಲ್, ವಿಐಪಿ ಪಕ್ಷಗಳ 23 ನಾಯಕರು ಭಾಗವಹಿಸಿದ್ದರು. ಟಿಎಂಸಿ, ಪಿಡಿಪಿ ಮತ್ತು ಕೆಲ ಸಣ್ಣ ಪಕ್ಷಗಳ ನಾಯಕರು ಸಭೆಯಲ್ಲಿ ಪಾಲ್ಗೊಂಡಿರಲಿಲ್ಲ.

ಸಭೆಯಲ್ಲಿ ಪಾಲ್ಗೊಂಡಿದ್ದ ನಾಯಕರು ನಿರ್ದಿಷ್ಟ ರಾಜ್ಯಗಳಲ್ಲಿ ತಮ್ಮ ಪಕ್ಷಗಳು ಜಯಿಸಬಹುದಾದ ಕ್ಷೇತ್ರಗಳ ಸಂಖ್ಯೆಗಳ ಅಂಕಿ ಅಂಶಗಳನ್ನು ನೀಡಿದರು. ಇವುಗಳನ್ನೆಲ್ಲ ಒಟ್ಟುಗೂಡಿಸಿದಾಗ 295 ಕ್ಷೇತ್ರಗಳಲ್ಲಿ ಜಯಿಸುವ ಮಾಹಿತಿ ದೊರೆಯಿತು ಎಂದು ಮೂಲಗಳು ತಿಳಿಸಿವೆ.

‘ಉತ್ತರ ಪ್ರದೇಶದಲ್ಲಿ 40ರಲ್ಲಿ ಗೆಲುವು’: ಉತ್ತರ ಪ್ರದೇಶದ ಒಟ್ಟು 80 ಕ್ಷೇತ್ರಗಳ ಪೈಕಿ ಇಂಡಿಯಾ ಬಣವು 40ರಲ್ಲಿ ಜಯಗಳಿಸಲಿದೆ ಎಂದು ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಸಭೆಯಲ್ಲಿ ತಿಳಿಸಿದರು. ಡಿಎಂಕೆ ಪಕ್ಷದ ನಾಯಕ ಟಿ.ಆರ್. ಬಾಲು ಅವರು, ತಮಿಳುನಾಡಿನ ಎಲ್ಲ 40 ಕ್ಷೇತ್ರಗಳು ವಿರೋಧ ಪಕ್ಷಗಳ ಪಾಲಾಗಲಿವೆ ಎಂದರು.

ಕರ್ನಾಟಕದಲ್ಲಿ 15 ಮತ್ತು ತೆಲಂಗಾಣದಲ್ಲಿ 10 ಸ್ಥಾನಗಳಲ್ಲಿ ಗೆಲುವು ದೊರೆಯಲಿವೆ ಎಂದು ಕಾಂಗ್ರೆಸ್ ನಾಯಕರು ಹೇಳಿದರೆ, ಆರ್‌ಜೆಡಿಯ ತೇಜಸ್ವಿ ಯಾದವ್ ಅವರು ಬಿಹಾರದಲ್ಲಿ ಕನಿಷ್ಠ 20 ಸ್ಥಾನಗಳನ್ನು ತಮ್ಮ ಮೈತ್ರಿಕೂಟ ಗೆಲ್ಲಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನಿವಾಸದಲ್ಲಿ ನಡೆದ ‘ಇಂಡಿಯಾ’ ಮೈತ್ರಿಕೂಟದ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಖರ್ಗೆ, ಕಾಂಗ್ರೆಸ್ ನಾಯಕರಾದ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ದೆಹಲಿ ಸಿ.ಎಂ ಅರವಿಂದ್ ಕೇಜ್ರಿವಾಲ್, ಜೆಎಂಎಂ ನಾಯಕಿ ಕಲ್ಪನಾ ಸೊರೇನ್, ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಮುಂತಾದವರು ಭಾಗಿಯಾಗಿದ್ದರು –ಪಿಟಿಐ ಚಿತ್ರ

> ಜನರೇ ನಮ್ಮ ನಾಯಕರಿಗೆ ಮಾಹಿತಿ ನೀಡಿದ್ದಾರೆ. ಸರ್ಕಾರದ ಸಮೀಕ್ಷೆಗಳೂ ಇವೆ ಮತ್ತು ಮಾಧ್ಯಮದವರ ಸಮೀಕ್ಷೆಗಳೂ ಇವೆ. ಆದರೆ ನಾವು ವಾಸ್ತವದ ಬಗ್ಗೆ ಹೇಳುತ್ತೇವೆ
>
> **ಮಲ್ಲಿಕಾರ್ಜುನ ಖರ್ಗೆ,** ಎಐಸಿಸಿ ಅಧ್ಯಕ್ಷ

ಇಂಡಿಯಾ ಬಣವು ದೆಹಲಿಯಲ್ಲಿ ನಾಲ್ಕು ಸ್ಥಾನಗಳನ್ನು ಗೆಲ್ಲಲಿದೆ ಎಂದು ಕೇಜ್ರಿವಾಲ್ ಹೇಳಿದರೆ, ಪಂಜಾಬ್ ಮತ್ತು ಚಂಡೀಗಢದಲ್ಲಿ ಎಎಪಿ ಮತ್ತು ಕಾಂಗ್ರೆಸ್ ಪಕ್ಷಗಳು ಎಲ್ಲ 14 ಸ್ಥಾನಗಳಲ್ಲಿ ಜಯಿಸಲಿವೆ ಎಂದು ಪಂಜಾಬ್ ಮುಖ್ಯಮಂತ್ರಿ ಭಗವಂತ ಮಾನ್ ತಿಳಿಸಿದರು.

ಮಹಾರಾಷ್ಟ್ರದಲ್ಲಿ ಶಿವಸೇನಾ (ಯುಬಿಟಿ) ನಾಯಕ ಅನಿಲ್ ದೇಸಾಯಿ ಅವರು ತಮ್ಮ ಮೈತ್ರಿಕೂಟವು 33 ಸ್ಥಾನಗಳನ್ನು ಪಡೆಯಲಿದೆ ಎಂದು ಹೇಳಿದರೆ, ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಅವರು 24–26 ಸ್ಥಾನಗಳು ಬರಬಹುದು ಎಂದು ಹೇಳಿದರು ಎಂದು ಮೂಲಗಳು ತಿಳಿಸಿವೆ.

ಪಶ್ಚಿಮ ಬಂಗಾಳದಲ್ಲಿ 30 ಸ್ಥಾನ: ಪಶ್ಚಿಮ ಬಂಗಾಳದಲ್ಲಿ ತೃಣಮೂಲ ಕಾಂಗ್ರೆಸ್ ಮತ್ತು ಕಾಂಗ್ರೆಸ್ ಎಡ ಮೈತ್ರಿಕೂಟವು ಸುಮಾರು 30 ಸ್ಥಾನಗಳಲ್ಲಿ ಜಯಿಸಬಹುದು ಮತ್ತು ಬಿಜೆಪಿ 12ರಲ್ಲಿ ಜಯಿಸಬಹುದು ಎಂದು ಮೂಲಗಳು ಹೇಳಿವೆ.

‘ಜನರಿಂದ ಪಡೆದ ಪ್ರತಿಕ್ರಿಯೆಗಳನ್ನು ಆಧರಿಸಿ ನಾವು ಮೌಲ್ಯಮಾಪನ ಮಾಡಿದ್ದೇವೆ. ಆದರೆ ಆಡಳಿತಾರೂಢ ಬಿಜೆಪಿಯು ಎಕ್ಸಿಟ್‌ಪೋಲ್‌ಗಳ ಮೂಲಕ ಸರ್ಕಾರದ ನಿರೂಪಣೆಗೆ ಮುಂದಾಗಿದೆ’ ಎಂದು ಖರ್ಗೆ ಅವರು ಸುದ್ದಿಗಾರರಿಗೆ ತಿಳಿಸಿದರು.

ಬಿಜೆಪಿಗೆ ಸುಮಾರು 220 ಮತ್ತು ಎನ್‌ಡಿಎಗೆ ಒಟ್ಟು 230 ಸ್ಥಾನಗಳು ಬರಬಹುದು ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ತಿಳಿಸಿದರು.

ಕೇಜ್ರಿವಾಲ್ ಅವರು ಭಾನುವಾರ ಜೈಲಿಗೆ ತೆರಳುವುದಕ್ಕೂ ಮುನ್ನ ‘ಇಂಡಿಯಾ’ ಮೈತ್ರಿಕೂಟದ ನಾಯಕರು ಚುನಾವಣಾ ಆಯೋಗವನ್ನು ಭೇಟಿ ಮಾಡಿ, ಮತ ಎಣಿಕೆ ದಿನದ ಸಮಸ್ಯೆಗಳ ಕುರಿತು ಚರ್ಚಿಸಲು ನಿರ್ಧರಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮೊದಲು ಮತದಾನ, ಬಳಿಕ ಅಂತ್ಯಸಂಸ್ಕಾರ

ಜಹಾನಾಬಾದ್ (ಬಿಹಾರ) (ಪಿಟಿಐ): ಏಳನೇ ಹಂತದ ಮತದಾನ ದಿನವಾದ ಶನಿವಾರ ಇಲ್ಲಿನ ದೇವ್‌ಕುಲಿ ಗ್ರಾಮದಲ್ಲಿ 80 ವರ್ಷದ ವೃದ್ಧೆಯೊಬ್ಬರು ನಿಧನರಾಗಿದ್ದು, ಅವರ ಕುಟುಂಬ ಸದಸ್ಯರು ಮೊದಲು ಮತದಾನ ಮಾಡಿ, ಬಳಿಕ ಅಂತ್ಯಸಂಸ್ಕಾರ ನೆರವೇರಿಸಿದರು.

‘ನನ್ನ ತಾಯಿ ಇಂದು ನಿಧನರಾದರು. ಅವರೆಂದೂ ಮರಳಿ ಬರುವುದಿಲ್ಲ. ಕುಟುಂಬ ಸದಸ್ಯರೆಲ್ಲಾ ಚರ್ಚಿಸಿ ಮೊದಲು ಮತದಾನ ಮಾಡಿ, ಬಳಿಕ ಅಂತ್ಯಸಂಸ್ಕಾರ ನೆರವೇರಿಸುವ ನಿರ್ಧಾರ ಕೈಗೊಂಡೆವು’ ಎಂದು ಮೃತ ಮಹಿಳೆಯ ಪುತ್ರ ಮಿಥಿಲೇಶ್ ಯಾದವ್ ತಿಳಿಸಿದರು.

ಬಿಹಾರದ ಎಂಟು ಲೋಕಸಭಾ ಕ್ಷೇತ್ರಗಳಿಗೆ ಶನಿವಾರ ಮತದಾನ ನಡೆದಿದೆ.

ಮತಗಟ್ಟೆಯಲ್ಲಿ ಕುಸಿದು ಸಾವು

ಲಖನೌ: ಸಲೇಂಪುರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಚಕ್ ಬಹಾವುದ್ದೀನ್ ಗ್ರಾಮದ ಮತಗಟ್ಟೆಯೊಂದರಲ್ಲಿ ರಾಂಬಚನ್ ಚೌಹಾಣ್ (70) ಎಂಬುವವರು ಕುಸಿದು ಬಿದ್ದು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರಾಂಬಚನ್ ಅವರು ಮತದಾನ ಮಾಡಲು ಸರದಿಯಲ್ಲಿ ನಿಲ್ಲುವುದಕ್ಕೂ ಮುನ್ನ ಕುಸಿದು ಬಿದ್ದು ಮೃತಪಟ್ಟಿದ್ದಾರೆ ಎಂದೂ ವಿವರಿಸಿದ್ದಾರೆ.

ಸರದಿಯಲ್ಲಿ ನಿಂತಿದ್ದಾಗ ತಲೆಸುತ್ತು ಬಂದು ರಾಂಬಚನ್ ಅವರು ಕುಸಿದು ಬಿದ್ದಿದ್ದಾರೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ಮೊದಲ ಬಾರಿ ಹಕ್ಕು ಚಲಾಯಿಸಿದ 92 ವರ್ಷದ ವ್ಯಕ್ತಿ

ಸಾಹಿಬ್‌ಗಂಜ್: ಜಾರ್ಖಂಡ್‌ನ ಸಾಹಿಬ್‌ಗಂಜ್ ಜಿಲ್ಲೆಯ ಮತಗಟ್ಟೆಯೊಂದರಲ್ಲಿ 92 ವರ್ಷದ ಅಂಧ ವ್ಯಕ್ತಿಯೊಬ್ಬರು ಮೊದಲ ಬಾರಿ ಮತದಾನ ಮಾಡಿದ್ದಾರೆ.

ಬದ್‌ಖೋರಿ ಗ್ರಾಮದ ಖಲೀಲ್ ಅನ್ಸಾರಿ ಎಂಬುವವರ ಹೆಸರು ಮತದಾರರ ಪಟ್ಟಿಯಲ್ಲಿ ಇಲ್ಲದಿರುವುದು ಪರಿಶೀಲನೆಯ ವೇಳೆ ಜಾರ್ಖಂಡ್‌ನ ಮುಖ್ಯ ಚುನಾವಣಾಧಿಕಾರಿಯ ಗಮನಕ್ಕೆ ಬಂದಿತ್ತು, ಅನ್ಸಾರಿ ಹೆಸರನ್ನು ಕೂಡಲೇ ಮತದಾರರ ಪಟ್ಟಿಗೆ ಸೇರಿಸುವಂತೆ ಅವರು ಸೂಚಿಸಿದ್ದರು ಎಂದು ಅಧಿಕಾರಿಗಳು ತಿಳಿಸಿದರು.

‘ನಾನು ಮೊದಲ ಬಾರಿ ಮತದಾನ ಮಾಡಿದ್ದೇನೆ’ ಎಂದು ಅನ್ಸಾರಿ ಅವರು ಹಕ್ಕು ಚಲಾಯಿಸಿದ ಬಳಿಕ ತಿಳಿಸಿದರು.

ಮತದಾನ ಬಹಿಷ್ಕಾರ

ಶಿಮ್ಲಾ: ರಸ್ತೆ, ಇಂಟರ್‌ನೆಟ್ ಸೌಲಭ್ಯ ಸೇರಿದಂತೆ ಮೂಲಸೌಲಭ್ಯಗಳನ್ನು ಒದಗಿಸಬೇಕೆಂದು ಆಗ್ರಹಿಸಿ, ಹಿಮಾಚಲ ಪ್ರದೇಶದ ಚಂಬಾ ಜಿಲ್ಲೆಯ ಮಖಾನ್ ಮತ್ತು ಚಾಚುಲ್ ಗ್ರಾಮಗಳ ಜನರು ಲೋಕಸಭಾ ಚುನಾವಣೆಯನ್ನು ಬಹಿಷ್ಕರಿಸಿದರು.

ಜಿಲ್ಲಾಡಳಿತದ ಅಧಿಕಾರಿಗಳು ತಮ್ಮ ಬೇಡಿಕೆಗಳನ್ನು ಈಡೇರಿಸುವವರೆಗೂ ಮತದಾನ ಮಾಡುವುದಿಲ್ಲ ಎಂದು ಗ್ರಾಮಸ್ಥರು ತಿಳಿಸಿದರು.

426 ಮಂದಿಯಿಂದ ಮತದಾನ ಬಹಿಷ್ಕಾರ:

(ದುಮ್ಕಾ ವರದಿ): ಕಲ್ಲಿದ್ದಲು ಸಂಗ್ರಹ ಘಟಕ ನಿರ್ಮಾಣವನ್ನು ವಿರೋಧಿಸಿ ಜಾರ್ಖಂಡ್‌ನ ದುಮ್ಕಾ ಜಿಲ್ಲೆಯ ಬಾಗ್ದುಭಿ ಗ್ರಾಮದ 426 ಮಂದಿ ಮತದಾನ ಬಹಿಷ್ಕರಿಸಿದರು.

ಬಾಗ್ದುಭಿ ಗ್ರಾಮದ ಮತಗಟ್ಟೆ ಸಂಖ್ಯೆ 94ರಲ್ಲಿ 430 ಮಂದಿ ಹೆಸರು ನೋಂದಾಯಿಸಿಕೊಂಡಿದ್ದು, ಇವರಲ್ಲಿ ಕೇವಲ ನಾಲ್ಕು ಮಂದಿ ಮಾತ್ರ ಹಕ್ಕು ಚಲಾಯಿಸಿದರು ಎಂದು ಅಧಿಕಾರಿಗಳು ತಿಳಿಸಿದರು.

ಮತದಾನ ಮಾಡಿದ ಪ್ರಮುಖರು

ಪತ್ನಿಯೊಂದಿಗೆ ಕೇಂದ್ರ ಸಚಿವ ಅನುರಾಗ್ ಠಾಕೂರ್

ಮಂಡಿ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವಿಕ್ರಮಾದಿತ್ಯ ಸಿಂಗ್

ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ

ಆರ್‌ಜೆಡಿ ಮುಖಂಡರಾದ ತೇಜಸ್ವಿ ಯಾದವ್ ಮತ್ತು ತೇಜ್ ಪ್ರತಾಪ್



ಚಿತ್ರನಟ ಮಿಥುನ್ ಚಕ್ರವರ್ತಿ

ಬಿಜೆಪಿ ಅಭ್ಯರ್ಥಿ ಕಂಗನಾ ರನೌತ್

ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ. ನಡ್ಡಾ

ಬಿಜೆಪಿ ಅಭ್ಯರ್ಥಿ ರವಿಶಂಕರ್ ಪ್ರಸಾದ್



ತೃಣಮೂಲ ಕಾಂಗ್ರೆಸ್ ಮುಖಂಡ ಶತ್ರುಘ್ನ ಸಿನ್ಹಾ

ಕಾಂಗ್ರೆಸ್ ನಾಯಕಿ ಸುಪ್ರಿಯಾ ಶ್ರೀನೇತ್

ಪಿಟಿಐ ಚಿತ್ರಗಳು

ಜಗತ್ತಿನ ಅತಿ ಎತ್ತರದ ಮತಗಟ್ಟೆಯಾದ ಹಿಮಾಚಲ ಪ್ರದೇಶದ ಕಿನ್ನೌರ್ ಜಿಲ್ಲೆಯ ತಾಶಿಗಂಗ್‌ನಲ್ಲಿ ಮತ ಚಲಾಯಿಸಿ ಸಂಭ್ರಮಿಸಿದ ಮತದಾರರು –ಪಿಟಿಐ ಚಿತ್ರ

ಲೋಕಸಭೆ ಚುನಾವಣೆ: ಮತದಾನ ಮುಕ್ತಾಯ, 4ರಂದು ಮತಎಣಿಕೆ

ಕೊನೆಯ ಹಂತ: ಶೇ 62ರಷ್ಟು ಮತದಾನ

ನವದೆಹಲಿ(ಪಿಟಿಐ): ಲೋಕಸಭಾ ಚುನಾವಣೆಯ ಕಡೆಯ ಹಂತದ ಮತದಾನದಲ್ಲಿ ಅರ್ಹ ಮತದಾರರ ಪೈಕಿ ಶೇಕಡ 62ರಷ್ಟು ಮಂದಿ ಹಕ್ಕು ಚಲಾಯಿಸಿದ್ದಾರೆ. ಚುನಾವಣಾ ಆಯೋಗದ ಆ್ಯಪ್‌ನಲ್ಲಿ ರಾತ್ರಿ 11.50 ಗಂಟೆಗೆ ಇದ್ದ ಮಾಹಿತಿ ಪ್ರಕಾರ ಇಷ್ಟು ಪ್ರಮಾಣದಲ್ಲಿ ಮತದಾನ ನಡೆದಿದೆ.

ಪಶ್ಚಿಮ ಬಂಗಾಲದ ಸಂದೇಶ್‌ಖಾಲಿ ಪ್ರದೇಶದಲ್ಲಿ ಟಿಎಂಟಿ ಹಾಗೂ ಬಿಜೆಪಿ ಕಾರ್ಯಕರ್ತರ ನಡುವೆ ಘರ್ಷಣೆ ನಡೆದಿದೆ. ಇವಿಎಂಗಳಲ್ಲಿ ದೋಷ ಕಂಡುಬಂದ ಹಾಗೂ ಕೆಲವು ಮತಗಟ್ಟೆಗಳಲ್ಲಿ ಅಕ್ರಮ ನಡೆದಿವೆ ಎಂಬ ದೂರುಗಳು ದಾಖಲಾಗಿವೆ.

ಏಳು ರಾಜ್ಯಗಳಲ್ಲಿ, ಒಂದು ಕೇಂದ್ರಾಡಳಿತ ಪ್ರದೇಶದಲ್ಲಿ ಒಟ್ಟು 57 ಲೋಕಸಭಾ ಸ್ಥಾನಗಳಿಗೆ ಶನಿವಾರ ಮತದಾನ ನಡೆಯಿತು. ಪ್ರಧಾನಿ ನರೇಂದ್ರ ಮೋದಿ ಅವರು ಸ್ಪರ್ಧಿಸುತ್ತಿರುವ ವಾರಾಣಸಿ ಕ್ಷೇತ್ರ ಕೂಡ ಇವುಗಳಲ್ಲಿ ಒಂದು.

> ಮತದಾರರು ತಮ್ಮ ಅತ್ಯಂತ ಪ್ರೀತಿಯ ಹಕ್ಕನ್ನು ಚಲಾಯಿಸಿದ್ದಾರೆ. ಭಾರತದ ಪ್ರಜಾತಂತ್ರ ಹಾಗೂ ಚುನಾವಣೆಯು ಮತ್ತೆ ಮ್ಯಾಜಿಕ್ ಮಾಡಿವೆ
>
> **ಕೇಂದ್ರ ಚುನಾವಣಾ ಆಯೋಗ**

ಒಡಿಶಾ ವಿಧಾನಸಭೆಯ 42 ಕ್ಷೇತ್ರಗಳಿಗೆ ಮತದಾನ ನಡೆಯಿತು. ಹಿಮಾಚಲ ಪ್ರದೇಶದ ನಾಲ್ಕು ವಿಧಾನಸಭಾ ಕ್ಷೇತ್ರಗಳಿಗೆ ಉಪ ಚುನಾವಣೆ ನಡೆಯಿತು.

ಚುನಾವಣಾ ಅಕ್ರಮದ ಆರೋಪದ ಕಾರಣಕ್ಕೆ ಸಂದೇಶ್‌ಖಾಲಿಯಲ್ಲಿ ಟಿಎಂಸಿ ಮತ್ತು ಬಿಜೆಪಿ ಬೆಂಬಲಿಗರ ನಡುವೆ ಘರ್ಷಣೆ ನಡೆಯಿತು. ಟಿಎಂಸಿಯ ಗೂಂಡಾಗಳು ಮತದಾರರಿಗೆ ಹಕ್ಕು ಚಲಾಯಿಸಲು ಬಿಡುತ್ತಿಲ್ಲ ಎಂದು ಬಿಜೆಪಿ ಅಭ್ಯರ್ಥಿ ರೇಖಾ ಪಾತ್ರಾ ಆರೋಪಿಸಿದರು. ಬಿಜೆಪಿಯ ಗೂಂಡಾಗಳು ಹಾಗೂ ರೇಖಾ ಅವರು ಚುನಾವಣೆಯ ಸಂದರ್ಭದಲ್ಲಿ ವಾತಾವರಣ ಹಾಳುಗೆಡವಲು ಯತ್ನಿಸುತ್ತಿದ್ದಾರೆ ಎಂದು ಟಿಎಂಸಿ ಆರೋಪಿಸಿತು.

ಬಸಂತಿ ಎಕ್ಸ್‌ಪ್ರೆಸ್ ಹೆದ್ದಾರಿಯಲ್ಲಿ ಟಿಎಂಸಿ, ಬಿಜೆಪಿ ಬೆಂಬಲಿಗರ ಗುಂಪು ಚದುರಿಸಲು ಪೊಲೀಸರು ಲಾಠಿ ಪ್ರಹಾರ ನಡೆಸಿದರು ಮತ್ತು ಅಶ್ರುವಾಯು ಶೆಲ್ ಸಿಡಿಸಿದರು.

ಮತದಾನ ಪ್ರಮಾಣ ಎಷ್ಟು?

ರಾಜ್ಯ	ಪ್ರಮಾಣ (%)
ಜಾರ್ಖಂಡ್	70.66
ಉತ್ತರ ಪ್ರದೇಶ	55.59
ಪಶ್ಚಿಮ ಬಂಗಾಳ	73.47
ಬಿಹಾರ	51.92
ಹಿಮಾಚಲ ಪ್ರದೇಶ	69.87
ಪಂಜಾಬ್	59.92
ಒಡಿಶಾ	70.67
ಚಂಡೀಗಢ (ಕೇಂದ್ರಾಡಳಿತ ಪ್ರದೇಶ)	67.90

ಧ್ಯಾನ ಅಂತ್ಯಗೊಳಿಸಿದ ಪ್ರಧಾನಿ ಮೋದಿ

ಕನ್ಯಾಕುಮಾರಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ಇಲ್ಲಿನ ವಿವೇಕಾನಂದ ಸ್ಮಾರಕದಲ್ಲಿ ಗುರುವಾರ ಆರಂಭಿಸಿದ್ದ 45 ತಾಸುಗಳ ಧ್ಯಾನವನ್ನು ಶನಿವಾರ ಅಂತ್ಯಗೊಳಿಸಿದರು. ನಂತರ ತಮಿಳು ಕವಿ ತಿರುವಳ್ಳುವರ್ ಪ್ರತಿಮೆಗೆ ಗೌರವ ಸಲ್ಲಿಸಿದರು.

ಧ್ಯಾನ ಅಂತ್ಯಗೊಂಡ ನಂತರ ಮೋದಿ ಅವರು ವಿವೇಕಾನಂದ ಸ್ಮಾರಕದ ಪಕ್ಕದಲ್ಲಿಯೇ ಇರುವ, 133 ಅಡಿ ಎತ್ತರದ ತಿರುವಳ್ಳುವರ್ ಪ್ರತಿಮೆಯ ಸ್ಥಳಕ್ಕೆ ನಾವೆಯ ಮೂಲಕ ತೆರಳಿದರು. ಪ್ರತಿಮೆಯ ಪಾದಗಳಿಗೆ ಬೃಹತ್ ಗಾತ್ರದ ಹಾರವನ್ನು ಇರಿಸಿದರು. ನಂತರ ನಾವೆಯ ಮೂಲಕ ಸಮುದ್ರ ತೀರವನ್ನು ತಲುಪಿದರು. ಆಗ ಅವರು ಬಿಳಿ ಬಣ್ಣದ ವಸ್ತ್ರ ಧರಿಸಿದ್ದರು.

ಅಲ್ಲಿಂದ ಹೆಲಿಕಾಪ್ಟರ್ ಮೂಲಕ ತಿರುವನಂತಪುರಕ್ಕೆ ತೆರಳಿದ ಪ್ರಧಾನಿ, ದೆಹಲಿಯ ಕಡೆ ಪ್ರಯಾಣ ಬೆಳೆಸಿದರು. ವಿವೇಕಾನಂದ ಸ್ಮಾರಕದಲ್ಲಿ ಇದ್ದ ಅವಧಿಯಲ್ಲಿ ಪ್ರಧಾನಿಯವರು ಧ್ಯಾನ ಮಾಡಿದ್ದಷ್ಟೇ ಅಲ್ಲದೆ, ‘ಸೂರ್ಯ ಅರ್ಘ್ಯ’ ಸಮರ್ಪಿಸಿದ್ದರು. ಧ್ಯಾನದ ಅವಧಿಯಲ್ಲಿ ಅವರು ಕೇಸರಿ ವಸ್ತ್ರ ಧರಿಸಿದ್ದರು.

ಧ್ಯಾನ ಮಾಡಲು ಅವರು ಕನ್ಯಾಕುಮಾರಿಗೆ ಬಂದಿದ್ದಕ್ಕೆ ‘ಇಂಡಿಯಾ’ ಮೈತ್ರಿಕೂಟದ ಪಕ್ಷಗಳಿಂದ ವಿರೋಧ ವ್ಯಕ್ತವಾಗಿತ್ತು. ಜೂನ್ 1ರಂದು ಕಡೆಯ ಹಂತದ ಮತದಾನ ಇರುವ ಕಾರಣ, ಧ್ಯಾನವನ್ನು ಟಿ.ವಿ. ವಾಹಿನಿಗಳಲ್ಲಿ ಪ್ರಸಾರ ಮಾಡುವುದಕ್ಕೆ ಅವು ವಿರೋಧ ವ್ಯಕ್ತಪಡಿಸಿದ್ದವು.

'ಮೋದಿ ಅವರು ಸ್ವಾಮಿ ವಿವೇಕಾನಂದರ ಪರಂಪರೆಗೆ ವಿರುದ್ಧವಾಗಿ ನಡೆದುಕೊಂಡು, ವಿವೇಕಾನಂದರ ಹೆಸರಿಗೆ ಕಳಂಕ ತರುವ ಕೆಲಸವನ್ನು ಮಾಡಿದ್ದಾರೆ ಎಂದು ಅವರು ಆರೋಪಿಸಿದ್ದಾರೆ.

ಸಂದೇಶ್‌ಖಾಲಿ: ಹಿಂಸಾಚಾರ

ಜೋಯ್ನಗರ್ ಕ್ಷೇತ್ರದಲ್ಲಿ ಕೆರೆಗೆ ಇವಿಎಂ ಎಸೆದ ಮತದಾರರು

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಸಂದೇಶ್‌ಖಾಲಿ ಪ್ರದೇಶದ ಬಶೀರ್‌ಹಾಟ್ ಲೋಕಸಭಾ ಕ್ಷೇತ್ರದಲ್ಲಿ ಶನಿವಾರ ನಡೆದ ಮತದಾನದ ವೇಳೆ ಚುನಾವಣಾ ಅಕ್ರಮ ವಿಚಾರಕ್ಕೆ ಸಂಬಂಧಿಸಿ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಮತ್ತು ಬಿಜೆಪಿ ಕಾರ್ಯಕರ್ತರ ನಡುವೆ ವ್ಯಾಪಕ ಹಿಂಸಾಚಾರ ನಡೆದಿದ್ದು, ಹಲವು ಮಂದಿ ಗಾಯಗೊಂಡಿದ್ದಾರೆ.

ಪರಿಸ್ಥಿತಿಯನ್ನು ನಿಯಂತ್ರಿಸಲು ಪೊಲೀಸರು ಅಶ್ರುವಾಯು ಶೆಲ್ ಸಿಡಿಸಿ, ಲಾಠಿ ಪ್ರಹಾರ ನಡೆಸಿದರು.

ಚುನಾವಣೆಯಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ವಿವಿಧ ರಾಜಕೀಯ ಪಕ್ಷಗಳು 1,899 ದೂರುಗಳನ್ನು ನೀಡಿವೆ ಎಂದು ಚುನಾವಣಾ ಆಯೋಗ ತಿಳಿಸಿದೆ. ಪೋಲಿಂಗ್ ಏಜೆಂಟರನ್ನು ಮತಗಟ್ಟೆ ಪ್ರವೇಶಿಸದಂತೆ ತಡೆದಿರುವುದು ಹಿಂಸಾಚಾರಕ್ಕೆ ಕಾರಣವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜನರು ಮತದಾನ ಮಾಡದಂತೆ ಟಿಎಂಸಿ ಗೂಂಡಾಗಳು ತಡೆದಿದ್ದಾರೆ ಎಂದು ಬಿಜೆಪಿ ಅಭ್ಯರ್ಥಿ ರೇಖಾ ಪಾತ್ರಾ ಆರೋಪಿಸಿದ್ದಾರೆ. ಇದಕ್ಕೆ ತಿರುಗೇಟು ನೀಡಿರುವ ಟಿಎಂಸಿ ಮುಖಂಡರು, ಬಿಜೆಪಿಯ ಗೂಂಡಾಗಳು ಹಿಂಸಾಚಾರಕ್ಕೆ ಪ್ರಚೋದನೆ ನೀಡಿದ್ದಾರೆ ಎಂದು ಹೇಳಿದ್ದಾರೆ.

ಸಂದೇಶ್‌ಖಾಲಿಯ ಬೈರಾಮರಿಯಲ್ಲಿ ಬಿಜೆಪಿ ಮತ್ತು ಟಿಎಂಸಿ ಕಾರ್ಯಕರ್ತರ ನಡುವೆ ನಡೆದ ಘರ್ಷಣೆಯಲ್ಲಿ ಮೂವರು ಗಾಯಗೊಂಡಿದ್ದಾರೆ. ಒಬ್ಬರನ್ನು ಬಂಧಿಸಲಾಗಿದೆ ಎಂದು ಬಶೀರ್‌ಹಾಟ್ ಪೊಲೀಸ್ ವರಿಷ್ಠಾಧಿಕಾರಿ ಹುಸೇನ್ ಮೆಹದಿ ರೆಹಮಾನ್ ತಿಳಿಸಿದರು.

ಮತದಾನದಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಜೋಯ್ನಗರ್ ಕ್ಷೇತ್ರ ವ್ಯಾಪ್ತಿಯ ಕುಲ್ತುಲಿಯಲ್ಲಿ ಮತದಾರರು ವಿದ್ಯುನ್ಮಾನ ಮತಯಂತ್ರ (ಇವಿಎಂ), ವಿವಿಪ್ಯಾಟ್ ಮತ್ತು ಚುನಾವಣಾ ಸಾಮಗ್ರಿಗಳನ್ನು ಕೆರೆಗೆ ಎಸೆದಿದ್ದಾರೆ.

ಜಾದವ್‌ಪುರ ಕ್ಷೇತ್ರ ವ್ಯಾಪ್ತಿಯ ಬಾಂಗರ್‌ನಲ್ಲಿ ಟಿಎಂಸಿ ಮತ್ತು ಇಂಡಿಯನ್ ಸೆಕ್ಯುಲರ್ ಫ್ರಂಟ್ (ಐಎಸ್‌ಎಫ್) ಕಾರ್ಯಕರ್ತರ ನಡುವೆ ನಡೆದ ಗಲಭೆಯ ವೇಳೆ ಮತಗಟ್ಟೆಯ ಸಮೀಪಕ್ಕೆ ಕಚ್ಚಾ ಬಾಂಬ್ ಎಸೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಮಮತಾ ಬ್ಯಾನರ್ಜಿ ಅವರ ಸೋದರಳಿಯ ಅಭಿಷೇಕ್ ಬ್ಯಾನರ್ಜಿ ಸ್ಪರ್ಧಿಸಿರುವ ಡೈಮಂಡ್ ಹಾರ್ಬರ್ ಕ್ಷೇತ್ರ ವ್ಯಾಪ್ತಿಯ ಮತಗಟ್ಟೆಗೆ ಪ್ರವೇಶಿಸದಂತೆ ಬಿಜೆಪಿ ಕಾರ್ಯಕರ್ತರನ್ನು ತಡೆಯಲಾಗಿದೆ. ಚುನಾವಣಾ ದಾಖಲೆಗಳನ್ನು ನಾಶಮಾಡಲಾಗಿದೆ. ಪೊಲೀಸರು ಅಭಿಷೇಕ್ ಅವರ ಪರವಾಗಿ ಕಾರ್ಯನಿರ್ವಹಿಸಿದ್ದಾರೆ’ ಎಂದು ಬಿಜೆಪಿ ಮುಖಂಡ ಅಮಿತ್ ಮಾಳವಿಯಾ ಅವರು ಎಕ್ಸ್ ವೇದಿಕೆಯಲ್ಲಿ ಆರೋಪಿಸಿದ್ದಾರೆ.

ಮತದಾನದಲ್ಲಿ ಅಕ್ರಮ ನಡೆದಿದೆ ಎಂದು ಆರೋಪಿಸಿ ಜೋಯ್ನಗರ್ ಕ್ಷೇತ್ರ ವ್ಯಾಪ್ತಿಯ ಕುಲ್ತುಲಿಯಲ್ಲಿ ಮತದಾರರು ವಿದ್ಯುನ್ಮಾನ ಮತಯಂತ್ರ (ಇವಿಎಂ), ವಿವಿಪ್ಯಾಟ್ ಮತ್ತು ಚುನಾವಣಾ ಸಾಮಗ್ರಿಗಳನ್ನು ಕೆರೆಗೆ ಎಸೆದಿದ್ದಾರೆ –ಪಿಟಿಐ ಚಿತ್ರ

ಅಲ್ಲಲ್ಲಿ ಘರ್ಷಣೆ

- ಸಂದೇಶ್‌ಖಾಲಿಯ ಬೈರಾಮಾರಿಯಲ್ಲಿ ಟಿಎಂಸಿ, ಬಿಜೆಪಿ ಬೆಂಬಲಿಗರ ನಡುವಿನ ಘರ್ಷಣೆಯಲ್ಲಿ ಮೂವರಿಗೆ ಗಾಯಗಳಾಗಿವೆ. ಒಬ್ಬನನ್ನು ಬಂಧಿಸಲಾಗಿದೆ.
- ಜಾದವಪುರ ಹಾಗೂ ಡೈಮಂಡ್ ಹಾರ್ಬರ್ ಕ್ಷೇತ್ರಗಳಲ್ಲಿಯೂ ಬಿಜೆಪಿ, ಟಿಎಂಸಿ ನಡುವೆ ಘರ್ಷಣೆ ನಡೆದಿದೆ.
- ಜಾದವಪುರ ಕ್ಷೇತ್ರದಲ್ಲಿ ಘರ್ಷಣೆಯಲ್ಲಿ ತೊಡಗಿದ್ದ ಟಿಎಂಸಿ ಹಾಗೂ ಐಎಸ್‌ಎಫ್ ಬೆಂಬಲಿಗರು. ಪೊಲೀಸರಿಂದ ಲಾಠಿ ಪ್ರಹಾರ. ಕಚ್ಚಾ ಬಾಂಬ್ ವಶಪಡಿಸಿಕೊಂಡ ಪೊಲೀಸರು.

ಅರುಣಾಚಲ ಪ್ರದೇಶ, ಸಿಕ್ಕಿಂ ಮತ ಎಣಿಕೆ ಇಂದು

ಇಟಾನಗರ/ ಗ್ಯಾಂಗ್ಟಕ್(ಪಿಟಿಐ): ಅರುಣಾಚಲ ಪ್ರದೇಶ ಮತ್ತು ಸಿಕ್ಕಿಂ ರಾಜ್ಯಗಳ ವಿಧಾನಸಭಾ ಚುನಾವಣೆಯ ಮತ ಎಣಿಕೆ ಭಾನುವಾರ (ಜೂನ್ 2) ನಿಗದಿಯಾಗಿದೆ. ಈ ಎರಡೂ ರಾಜ್ಯಗಳಲ್ಲಿ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಯ ಮತದಾನ ಏಪ್ರಿಲ್ 19 ರಂದು ಏಕಕಾಲದಲ್ಲಿ ನಡೆದಿತ್ತು.

60 ಕ್ಷೇತ್ರಗಳನ್ನು ಒಳಗೊಂಡಿರುವ ಅರುಣಾಚಲ ಪ್ರದೇಶ ವಿಧಾನಸಭೆಯ 50 ಸ್ಥಾನಗಳಿಗೆ ಮತದಾನ ನಡೆದಿತ್ತು. ಆಡಳಿತಾರೂಢ ಬಿಜೆಪಿಯು 10 ಕ್ಷೇತ್ರಗಳನ್ನು ಅವಿರೋಧವಾಗಿ ಗೆದ್ದುಕೊಂಡಿದೆ.

‘ವಿಧಾನಸಭಾ ಚುನಾವಣೆಯ ಮತ ಎಣಿಕೆಯು ರಾಜ್ಯದ 24 ಕೇಂದ್ರಗಳಲ್ಲಿ ಜೂನ್ 2ರಂದು ಬೆಳಿಗ್ಗೆ 6ರಿಂದ ಶುರುವಾಗಲಿದೆ. ಲೋಕಸಭಾ ಚುನಾವಣೆಯ ಮತಎಣಿಕೆ 25 ಕೇಂದ್ರಗಳಲ್ಲಿ ಜೂನ್ 4ರಂದು ನಡೆಯಲಿದೆ’ ಎಂದು ಅರುಣಾಚಲ ಪ್ರದೇಶದ ಮುಖ್ಯ ಚುನಾವಣಾಧಿಕಾರಿ ಪವನ್ ಕುಮಾರ್ ಸೇನ್ ತಿಳಿಸಿದರು.

‘ಮತ ಎಣಿಕೆಗಾಗಿ ಎರಡೂ ದಿನ (ಜೂನ್ 2 ಮತ್ತು ಜೂನ್ 4 ರಂದು) ಎರಡು ಸಾವಿರಕ್ಕೂ ಅಧಿಕ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ’ ಎಂದು ಹೇಳಿದರು.

2019ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯು 60 ರಲ್ಲಿ 41 ಸ್ಥಾನಗಳನ್ನು ಜಯಿಸಿತ್ತು. ಜೆಡಿಯು 7, ಎನ್‌ಪಿಪಿ 5, ಕಾಂಗ್ರೆಸ್ 4 ಮತ್ತು ಪಿಪಿಎ 1 ಸ್ಥಾನ ಗೆದ್ದುಕೊಂಡಿದ್ದರೆ, ಎರಡು ಸ್ಥಾನಗಳಲ್ಲಿ ಪಕ್ಷೇತರರು ಜಯಿಸಿದ್ದರು.

ಸಿಕ್ಕಿಂನ 32 ಕ್ಷೇತ್ರಗಳ ಮತ ಎಣಿಕೆಗೆ ಸಕಲ ಸಿದ್ಧತೆ ನಡೆಸಲಾಗಿದೆ. 2019ರಲ್ಲಿ ಸಿಕ್ಕಿಂ ಕ್ರಾಂತಿಕಾರಿ ಮೋರ್ಚಾ 17 ಹಾಗೂ ಸಿಕ್ಕಿಂ ಡೆಮಾಕ್ರಟಿಕ್ ಫ್ರಂಟ್ 15 ಸ್ಥಾನಗಳನ್ನು ಗೆದ್ದುಕೊಂಡಿತ್ತು.

ಸಾರ್ವಜನಿಕ ಸ್ಥಳದಲ್ಲಿ ಗುಡಿ ಪರಿಣಾಮ ಅನಾಹುತಕಾರಿ

ನವದೆಹಲಿ (ಪಿಟಿಐ): ಪ್ರತಿಯೊಬ್ಬ ಸಾಧುವಿಗೆ, ಬಾಬಾಗೆ ಮತ್ತು ಗುರುವಿಗೆ ಸಾರ್ವಜನಿಕ ಸ್ಥಳದಲ್ಲಿ ದೇವಸ್ಥಾನ ಅಥವಾ ಸಮಾಧಿ ಸ್ಥಳ ನಿರ್ಮಿಸಲು ಅವಕಾಶ ಕಲ್ಪಿಸಿ, ಆ ಸ್ಥಳವನ್ನು ವೈಯಕ್ತಿಕ ಲಾಭಕ್ಕೆ ಬಳಸಿಕೊಳ್ಳಲು ಅನುವು ಮಾಡಿಕೊಟ್ಟರೆ ಪರಿಣಾಮಗಳು ಅನಾಹುತಕಾರಿ ಆಗಿರುತ್ತವೆ ಎಂದು ದೆಹಲಿ ಹೈಕೋರ್ಟ್ ಹೇಳಿದೆ.

ಇಂತಹ ಅವಕಾಶ ಕಲ್ಪಿಸಿದರೆ ಸಾರ್ವಜನಿಕ ಹಿತವು ಅಪಾಯಕ್ಕೆ ಸಿಲುಕುತ್ತದೆ ಎಂದು ಕೂಡ ಅದು ಹೇಳಿದೆ. ಶಿವನ ಭಕ್ತರಾಗಿರುವ ನಾಗಾ ಸಾಧುಗಳು ಲೌಕಿಕ ಸಂಗತಿಗಳ ವಿಚಾರವಾಗಿ ಸಂಪೂರ್ಣವಾಗಿ ನಿರ್ಮೋಹಿಗಳಾಗಿರಬೇಕು. ಅವರು ತಮ್ಮ ಹೆಸರಿನಲ್ಲಿ ಆಸ್ತಿ ಹಕ್ಕು ಇರಬೇಕು ಎಂದು ಬಯಸುವುದು ಅವರದೇ ನಂಬಿಕೆಗಳು ಹಾಗೂ ಆಚರಣೆಗಳಿಗೆ ಅನುಗುಣವಾಗಿಲ್ಲ ಎಂದು ಹೈಕೋರ್ಟ್ ವಿವರಿಸಿದೆ.

ನ್ಯಾಯಮೂರ್ತಿ ಧರ್ಮೇಶ್ ಶರ್ಮ ಅವರ ಏಕಸದಸ್ಯ ಪೀಠವು ಈ ಮಾತು ಹೇಳಿದೆ. ಇಲ್ಲಿನ ತ್ರಿವೇಣಿ ಘಾಟ್‌ನಲ್ಲಿ ಇರುವ ನಾಗಾ ಬಾಬಾ ಭೋಲ ಗಿರಿ ಅವರ ಗುಡಿಯ ಗಡಿಯನ್ನು ಗುರುತಿಸುವಂತೆ ಜಿಲ್ಲಾ ಮ್ಯಾಜಿಸ್ಟ್ರೇಟರಿಗೆ ಸೂಚಿಸಬೇಕು ಎಂದು ಕೋರಿ ಮಹಂತ ನಾಗಾ ಬಾಬಾ ಶಂಕರ್ ಗಿರಿ ಅವರು ತಮ್ಮ ಉತ್ತರಾಧಿಕಾರಿಯ ಮೂಲಕ ಸಲ್ಲಿಸಿದ್ದ ಅರ್ಜಿಯನ್ನು ವಜಾಗೊಳಿಸುವ ಸಂದರ್ಭದಲ್ಲಿ ಶರ್ಮ ಈ ಮಾತು ಹೇಳಿದ್ದಾರೆ.

ದೆಹಲಿ ವಿಶೇಷ ಕಾನೂನುಗಳ ಕಾಯ್ದೆಯು 2006ರ ಕಾಲಮಿತಿಯನ್ನು ನಿಗದಿ ಮಾಡುವ ಮೊದಲೇ ತಾವು ಈ ಜಾಗವನ್ನು ಅಧೀನದಲ್ಲಿ ಇರಿಸಿಕೊಂಡಿದ್ದು,ಈ ಪ್ರದೇಶದ ಹಲವು ಕಟ್ಟಡಗಳನ್ನು ದೆಹಲಿ ಸರ್ಕಾರದ ನೆರೆ ನಿಯಂತ್ರಣ ಹಾಗೂ ನೀರಾವರಿ ಇಲಾಖೆಯ ಅಧಿಕಾರಿಗಳು 2023ರ ಫೆಬ್ರುವರಿಯಲ್ಲಿ ಧ್ವಂಸಗೊಳಿಸಿದರು. ಹೀಗಾಗಿ, ಗುಡಿಯನ್ನು ಕೂಡ ಧ್ವಂಸಗೊಳಿಸಬಹುದು ಎಂಬ ಆತಂಕ ತಮ್ಮನ್ನು ಕಾಡುತ್ತಿದೆ ಎಂದು ಅರ್ಜಿದಾರರು ಹೇಳಿದ್ದರು.

ಅರ್ಜಿಯಲ್ಲಿ ಹುರುಳಿಲ್ಲ ಎಂದು ಹೇಳಿರುವ ನ್ಯಾಯಪೀಠವು, ಈ ಸ್ಥಳವನ್ನು ಸ್ವಾಧೀನದಲ್ಲಿ ಇರಿಸಿಕೊಳ್ಳುವ ಯಾವುದೇ ಹಕ್ಕು ಅರ್ಜಿದಾರರಿಗೆ ಇಲ್ಲ ಎಂದು ಹೇಳಿದೆ. ‘ಅರ್ಜಿದಾರರು ಸ್ಥಳವನ್ನು ಅತಿಕ್ರಮಿಸಿಕೊಂಡಿದ್ದಾರೆ. ಅವರು ಸ್ಥಳವನ್ನು ಮೂವತ್ತು ಅಥವಾ ಅದಕ್ಕಿಂತ ಹೆಚ್ಚು ವರ್ಷಗಳಿಂದ ಬಳಕೆ ಮಾಡುತ್ತಿದ್ದಾರೆ ಎಂದಮಾತ್ರಕ್ಕೆ ಅವರಿಗೆ ಕಾನೂನಿನ ಅಡಿ ಯಾವುದೇ ಹಕ್ಕು ಲಭ್ಯವಾಗುವುದಿಲ್ಲ’ ಎಂದು ಪೀಠವು ಸ್ಪಷ್ಟಪಡಿಸಿದೆ.

ಜಿಲ್ಲಾಧಿಕಾರಿಗಳಿಗೆ ಕರೆ ಮಾಡಿ ಶಾ ಬೆದರಿಕೆ: ಕಾಂಗ್ರೆಸ್

ನವದೆಹಲಿ(ಪಿಟಿಐ): ‘ಜಿಲ್ಲಾ ಚುನಾವಣಾ ಅಧಿಕಾರಿಗಳೂ ಆಗಿರುವ ಜಿಲ್ಲಾಧಿಕಾರಿಗಳಿಗೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಕರೆ ಮಾಡಿ, ಬೆದರಿಕೆ ಹಾಕುತ್ತಿದ್ದಾರೆ’ ಎಂದು ಕಾಂಗ್ರೆಸ್ ಶನಿವಾರ ಆರೋಪಿಸಿದೆ.

‘ದೇಶದ 150 ಜಿಲ್ಲಾಧಿಕಾರಿಗಳೊಂದಿಗೆ ಸಚಿವ ಶಾ ಅವರು ಈಗಾಗಲೇ ಮಾತನಾಡಿದ್ದಾರೆ. ಇದು ಬಿಜೆಪಿಯ ಹತಾಶೆಯನ್ನು ತೋರಿಸುತ್ತದೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಅಧಿಕಾರದಿಂದ ಕೆಳಗಿಳಿಯಲಿರುವ ಕೇಂದ್ರ ಗೃಹ ಸಚಿವರು ಜಿಲ್ಲಾಧಿಕಾರಿಗಳಿಗೆ ಕರೆ ಮಾಡಿ ಬೆದರಿಕೆ ಒಡ್ಡುತ್ತಿರುವುದು ನಾಚಿಕೆಗೇಡಿನ ವಿಷಯ. ಅಧಿಕಾರಿಗಳು ಯಾವುದೇ ಒತ್ತಡಕ್ಕೆ ಮಣಿಯದೇ, ಸಂವಿಧಾನವನ್ನು ಎತ್ತಿಹಿಡಿಯಬೇಕು’ ಎಂದಿದ್ದಾರೆ.

ಅರ್ಜಿ ವಿಚಾರಣೆ: ಆದೇಶ ಕಾಯ್ದಿರಿಸಿದ ದೆಹಲಿ ನ್ಯಾಯಾಲಯ

ಜಾಮೀನು: ಕೇಜ್ರಿವಾಲ್‌ಗೆ ಸದ್ಯಕ್ಕೆ ಇಲ್ಲ ರಕ್ಷಣೆ

ನವದೆಹಲಿ (ಪಿಟಿಐ): ಹಣದ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಮಧ್ಯಂತರ ಜಾಮೀನು ಕೋರಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಸಲ್ಲಿಸಿರುವ ಅರ್ಜಿ ಕುರಿತ ಆದೇಶವನ್ನು ಇಲ್ಲಿನ ನ್ಯಾಯಾಲಯವೊಂದು ಜೂನ್ 5ಕ್ಕೆ ಕಾಯ್ದಿರಿಸಿದೆ.

ಕೇಜ್ರಿವಾಲ್ ಸಲ್ಲಿಸಿರುವ ಅರ್ಜಿಯು ಸುಪ್ರೀಂ ಕೋರ್ಟ್ ನೀಡಿರುವ ಮಧ್ಯಂತರ ಜಾಮೀನು ವಿಸ್ತರಣೆಗೆ ಸಂಬಂಧಿಸಿದ್ದಲ್ಲ; ಬದಲಿಗೆ, ಇದು ವೈದ್ಯಕೀಯ ಕಾರಣಗಳಿಗೆ ಮಧ್ಯಂತರ ಜಾಮೀನು ನೀಡುವಂತೆ ಕೋರುತ್ತಿದೆ ಎಂದು ಹೇಳಿದ ನ್ಯಾಯಾಧೀಶರಾದ ಕಾವೇರಿ ಬವೇಜಾ ಅವರು ಆದೇಶ ಕಾಯ್ದಿರಿಸಿದರು.

ಲೋಕಸಭಾ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಲು ಕೇಜ್ರಿವಾಲ್ ಅವರಿಗೆ ಸುಪ್ರೀಂ ಕೋರ್ಟ್ 21 ದಿನಗಳ ಮಧ್ಯಂತರ ಜಾಮೀನು ನೀಡಿತ್ತು. ಈ ಅವಧಿಯಲ್ಲಿ ಕೇಜ್ರಿವಾಲ್ ಅವರು ಉತ್ತರ ಪ್ರದೇಶ, ಪಂಜಾಬ್, ದೆಹಲಿ ಮತ್ತು ಮಹಾರಾಷ್ಟ್ರದಲ್ಲಿ ಪ್ರಚಾರ ನಡೆಸಿದ್ದಾರೆ.

ಮಧ್ಯಂತರ ಜಾಮೀನು ಕುರಿತ ಆದೇಶವನ್ನು ಶನಿವಾರವೇ ಪ್ರಕಟಿಸಬೇಕು ಎಂದು ಕೇಜ್ರಿವಾಲ್ ಪರ ವಕೀಲರು ನ್ಯಾಯಾಧೀಶರನ್ನು ಕೋರಿದರು. ಆದರೆ ಪರಿಶೀಲಿಸಬೇಕಿರುವ ದಾಖಲೆಗಳು ಹಲವು ಇವೆ ಎಂದು ನ್ಯಾಯಾಧೀಶರು ಈ ಕೋರಿಕೆಯನ್ನು ಪುರಸ್ಕರಿಸಲಿಲ್ಲ.

ಇ.ಡಿ. ಪರವಾಗಿ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, ‘ಮಧ್ಯಂತರ ಜಾಮೀನು ಅವಧಿಯುದ್ದಕ್ಕೂ ಕೇಜ್ರಿವಾಲ್ ಅವರು ಪ್ರಚಾರ ಕಾರ್ಯದಲ್ಲಿ ಭಾಗಿಯಾಗಿದ್ದರು. ಈಗ ಅವರು ಇದ್ದಕ್ಕಿದ್ದಂತೆ ತಮಗೆ ಹುಷಾರಿಲ್ಲ ಎನ್ನುತ್ತಿದ್ದಾರೆ. ಆರೋಗ್ಯದ ವಿಚಾರವಾಗಿ ಕೇಜ್ರಿವಾಲ್ ಸತ್ಯವನ್ನು ಮುಚ್ಚಿಟ್ಟು, ತಪ್ಪು ಹೇಳಿಕೆ ನೀಡಿದ್ದಾರೆ’ ಎಂದರು.

ಕೇಜ್ರಿವಾಲ್ ಅವರಿಗೆ ಹುಷಾರಿಲ್ಲ, ಅವರಿಗೆ ಚಿಕಿತ್ಸೆಯ ಅಗತ್ಯವಿದೆ ಎಂದು ಅವರ ಪರ ವಕೀಲರು ಹೇಳಿದರು.

‘ತಮ್ಮ ಆರೋಗ್ಯ ಸಮಸ್ಯೆ ಗಂಭೀರವಾಗಿದೆ ಎಂದು ಹೇಳುತ್ತಿರುವ ವ್ಯಕ್ತಿಯ ನಡತೆಯನ್ನು ಗಮನಿಸಿ. ಬಿಡುಗಡೆ ಆದಾಗಿನಿಂದಲೂ ಅವರು ಚುನಾವಣಾ ಪ್ರಚಾರದಲ್ಲಿ ತೊಡಗಿದ್ದಾರೆ. ತಾಸುಗಟ್ಟಲೆ ಪ್ರಚಾರ ನಡೆಸಿದ್ದಾರೆ. ಆಗ ಅವರ ಆರೋಗ್ಯಕ್ಕೆ ಏನೂ ಆಗಿರಲಿಲ್ಲ’ ಎಂದು ಇ.ಡಿ. ಹೇಳಿತು.

ವೈದ್ಯಕೀಯ ಪರೀಕ್ಷೆಯನ್ನು ವಿಳಂಬಗೊಳಿಸುವ ಮೂಲಕ ಕೋರ್ಟ್‌ಗೆ ವಂಚಿಸುವ ಉದ್ದೇಶವನ್ನು ಕೇಜ್ರಿವಾಲ್ ಹೊಂದಿದ್ದಾರೆ ಎಂದು ಇ.ಡಿ ಆರೋಪಿಸಿತು. ‘ಯಾವುದೇ ವೈದ್ಯಕೀಯ ಪರೀಕ್ಷೆಯ ಅಗತ್ಯ ಇದ್ದಲ್ಲಿ ಅವುಗಳನ್ನು ಜೈಲಿನಲ್ಲಿ ಒದಗಿಸಲಾಗುವುದು. ಅಗತ್ಯ ಎದುರಾದರೆ ಅವರನ್ನು ಏಮ್ಸ್ ಅಥವಾ ಬೇರೆ ಯಾವುದೇ ಆಸ್ಪತ್ರೆಗೆ ಕರೆದೊಯ್ಯಲಾಗುವುದು’ ಎಂದು ಕೂಡ ಹೇಳಿತು. ‘ತಾವು ಸತ್ತುಹೋಗಬಹುದು, ಕಿಡ್ನಿ ವಿಫಲವಾಗಬಹುದು ಎಂದು ಟಿ.ವಿ. ಮೂಲಕ ಹೇಳುವ ವ್ಯಕ್ತಿಯು ಮೇ 25ರಿಂದ ಕನಿಷ್ಠ ಪರೀಕ್ಷೆಗಳಿಗೂ ಒಳಗಾಗಲಿಲ್ಲ. ಇಡೀ ವ್ಯವಸ್ಥೆಯ ಮೇಲೆ ಈ ರೀತಿ ಮೋಜಿನ ಸವಾರಿ ಮಾಡುವಂತಿಲ್ಲ. ಅರ್ಜಿದಾರರು ಇಲ್ಲಿ ವ್ಯವಸ್ಥೆಯ ಜೊತೆ ಆಟವಾಡುತ್ತಿದ್ದಾರೆ’ ಎಂದೂ ಇ.ಡಿ. ಹೇಳಿತು.

ಇಂದು ಜೈಲಿಗೆ ವಾಪಸ್

ನವದೆಹಲಿ: ಮಧ್ಯಂತರ ಜಾಮೀನು ವಿಚಾರವಾಗಿ ನ್ಯಾಯಾಲಯ ಯಾವುದೇ ಆದೇಶ ನೀಡದ ಕಾರಣ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ತಿಹಾರ್ ಜೈಲಿಗೆ ಭಾನುವಾರ ಮರಳಬೇಕಿದೆ.

ಸುಪ್ರೀಂ ಕೋರ್ಟ್ ಮೇ 10ರಂದು ನೀಡಿರುವ ಆದೇಶದ ಅನ್ವಯ, ಕೇಜ್ರಿವಾಲ್ ಅವರು ಜೂನ್ 2ರಂದು ಶರಣಾಗಬೇಕಿದೆ. ಅವರಿಗೆ ಲೋಕಸಭಾ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗಲು ಮಧ್ಯಂತರ ಜಾಮೀನು ನೀಡಲಾಗಿತ್ತು.

ಹಟ್ಟಿ ಚಿನ್ನದ ಗಣಿ ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಅಧೀನ ಉದ್ದಿಮೆ)
ಹಟ್ಟಿ–584115, ಲಿಂಗಸುಗೂರು–ತಾ॥ ರಾಯಚೂರು ಜಿಲ್ಲೆ, ಕರ್ನಾಟಕ.
ದೂರವಾಣಿ.: 08537–275041

ಪರಿಷ್ಕೃತ ಪ್ರಕಟಣೆ

ಅಭ್ಯರ್ಥಿಗಳು **ಜಿ–8 ಹಾಗೂ ಜಿ–5 ದರ್ಜೆಯ ಹುದ್ದೆಗಳಿಗೆ** ಆನ್‌ಲೈನ್‌ನಲ್ಲಿ ಅರ್ಜಿಗಳನ್ನು ಸಲ್ಲಿಸಲು **ದಿನಾಂಕ: 30.05.2024ರ ಸಾಯಂಕಾಲ 5.00 ಗಂಟೆಯವರೆಗೆ** ವಿಸ್ತರಿಸಲಾಗಿದ್ದು, ಮುಂದುವರೆದು **ದಿನಾಂಕ:15.06.2024ರ ಸಾಯಂಕಾಲ 5.00 ಗಂಟೆಯವರೆಗೆ** ಪುನಃ ವಿಸ್ತರಿಸಲಾಗಿರುತ್ತದೆ ಹಾಗೂ ಸೆಕ್ಯೂರಿಟಿ ಗಾರ್ಡ್/ ಸೆಕ್ಯೂರಿಟಿ ಇನ್ಸ್‌ಪೆಕ್ಟರ್–ಹುದ್ದೆಗಳಿಗೆ ನಿಗದಿಪಡಿಸಿದ ಅರ್ಹತೆ ಹಾಗೂ ಇನ್ನಿತರ ತಿದ್ದುಪಡಿ ಮಾಡಿರುವ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ಕಂಪನಿಯ https:\\huttigold.karnataka.gov.in ವೆಬ್‌ಸೈಟ್‌ಗೆ ಭೇಟಿ ನೀಡಿ.

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು

ಭಾರತದ ಪ್ರಮುಖ ಚಿನ್ನದ ಉತ್ಪಾದಕರು

ಬಿಜೆಪಿ ದೂರು: ಇದೇ 7ರಂದು ರಾಹುಲ್ ಗಾಂಧಿ ಖುದ್ದು ಹಾಜರಿಗೆ ಆದೇಶ

ಸಿಎಂ–ಡಿಸಿಎಂಗೆ ಜಾಮೀನು

ಪ್ರಜಾವಾಣಿ ವಾರ್ತೆ

ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಿಟಿ ಸಿವಿಲ್ ಕೋರ್ಟ್ ಕಟ್ಟಡದಲ್ಲಿರುವ ಜನಪ್ರತಿನಿಧಿಗಳ 42ನೇ ಎಸಿಎಂಎಂ ವಿಶೇಷ ನ್ಯಾಯಾಲಯಕ್ಕೆ ಶನಿವಾರ ಬೆಳಿಗ್ಗೆ ಹಾಜರಾದರು

ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಬೆಂಗಳೂರು: ಪತ್ರಿಕೆಗಳಲ್ಲಿ ಸುಳ್ಳು ಜಾಹೀರಾತು ನೀಡಿ ಬಿಜೆಪಿ ವರ್ಚಸ್ಸಿಗೆ ಧಕ್ಕೆ ತಂದ ಆರೋಪದಡಿ ದಾಖಲಿಸಲಾಗಿರುವ ಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ಷರತ್ತುಬದ್ಧ ಜಾಮೀನು ನೀಡಿದೆ.

ಈ ಸಂಬಂಧ ಬಿಜೆಪಿಯ ರಾಜ್ಯ ಘಟಕದ ಕಾರ್ಯದರ್ಶಿ ಹಾಗೂ ವಿಧಾನಪರಿಷತ್ ಸದಸ್ಯ ಬಿ.ಎಸ್. ಕೇಶವಪ್ರಸಾದ್ ಸಲ್ಲಿಸಿರುವ ಖಾಸಗಿ ದೂರನ್ನು 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆಯ ವಿಶೇಷ ನ್ಯಾಯಾಲಯ'ದ 42ನೇ ಎಸಿಎಂಎಂ ಕೋರ್ಟ್ ವಿಚಾರಣೆಗೆ ಅಂಗೀಕರಿಸಿ ಆರೋಪಿಗಳಿಗೆ ಸಮನ್ಸ್ ಜಾರಿಗೊಳಿಸಿತ್ತು.

ಈ ಹಿನ್ನೆಲೆಯಲ್ಲಿ ಸಿದ್ದರಾಮಯ್ಯ ಮತ್ತು ಡಿ.ಕೆ.ಶಿವಕುಮಾರ್ ಇಬ್ಬರೂ ನ್ಯಾಯಾಲಯಕ್ಕೆ ಶನಿವಾರ ಖುದ್ದು ಹಾಜರಾದರು. ಆರೋಪಿಗಳ ಹಾಜರಿಯನ್ನು ದಾಖಲಿಸಿಕೊಂಡ ನ್ಯಾಯಾಧೀಶರು ಇಬ್ಬರಿಗೂ ತಲಾ ₹5 ಸಾವಿರ ನಗದು ಶ್ಯೂರಿಟಿ ಆಧಾರದಲ್ಲಿ ಜಾಮೀನು ಮಂಜೂರು ಮಾಡಿದರು. ಬಾಂಡ್ ಪತ್ರಗಳಿಗೆ ಸಹಿ ಹಾಕಿದ ನಂತರ ಇಬ್ಬರೂ ಆರೋಪಿಗಳು ಕೆಲ ಹೊತ್ತು ಕೋರ್ಟ್ ಹಾಲ್‌ನ ಹೊರಗಡೆಯ ಬೆಂಚ್‌ನಲ್ಲಿ ಕುಳಿತು ಸ್ನೇಹಿತರನ್ನು ಮಾತನಾಡಿಸಿ ಅಲ್ಲಿಂದ ತೆರಳಿದರು.

ಪ್ರಕರಣವೇನು?: '2023ರಲ್ಲಿ ನಡೆದ ಕರ್ನಾಟಕ ವಿಧಾನಸಭೆ ಚುನಾವಣೆಯ ಸಂದರ್ಭದಲ್ಲಿ, ಕರ್ನಾಟಕ ಪ್ರದೇಶ ಕಾಂಗ್ರೆಸ್ ಪಕ್ಷವು ರಾಷ್ಟ್ರೀಯ ಮತ್ತು ರಾಜ್ಯದ ಪ್ರಮುಖ ದಿನಪತ್ರಿಕೆಗಳಲ್ಲಿ 2023ರ ಮೇ 5ರಂದು ಜಾಹೀರಾತು ನೀಡಿ, ಆಡಳಿತಾರೂಢ ರಾಜ್ಯ ಬಿಜೆಪಿ ಸರ್ಕಾರ ಶೇ 40ರಷ್ಟು ಕಮಿಷನ್ ಸರ್ಕಾರ. ಇದು ಕಳೆದ ನಾಲ್ಕು ವರ್ಷಗಳಲ್ಲಿ ₹ 1.50 ಲಕ್ಷ ಕೋಟಿ ಲೂಟಿ ಹೊಡೆದಿರುವ ಭ್ರಷ್ಟ ಸರ್ಕಾರ' ಎಂದು ಆರೋಪಿಸಿದ್ದರು. 'ಈ ಆರೋಪಕ್ಕೆ ಫಿರ್ಯಾದುದಾರರೇ ಇಲ್ಲ. ಇದು ರಾಷ್ಟ್ರೀಯ ಪಕ್ಷವೊಂದರ ವಿರುದ್ಧ ಮಾಡಲಾಗಿರುವ ಆಧಾರ ರಹಿತ, ಪೂರ್ವಗ್ರಹ ಪೀಡಿತ ಮತ್ತು ಮಾನಹಾನಿಕರ ಆರೋಪ' ಎಂದು ಈ ಖಾಸಗಿ ದೂರು ದಾಖಲಿಸಲಾಗಿದೆ.

ಸಿದ್ದರಾಮಯ್ಯ ಪರ ಹೈಕೋರ್ಟ್ ವಕೀಲ ಸೂರ್ಯ ಮುಕುಂದರಾಜ್, ಡಿ.ಕೆ.ಶಿವಕುಮಾರ್ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ಎಸ್.ಎ. ಅಹಮದ್, ಸಿ.ಆರ್.ದೀಪು ಹಾಗೂ ಕಾಂಗ್ರೆಸ್ ಪಕ್ಷದ ಪರ ಸಂಜಯ ಯಾದವ್ ವಾದ ಮಂಡಿಸಿದರು.

ರಾಹುಲ್ ಗೈರು: ಈ ಪ್ರಕರಣದಲ್ಲಿ ಕಾಂಗ್ರೆಸ್ ಪಕ್ಷ ಮೊದಲ ಆರೋಪಿ. ಎರಡನೇ ಆರೋಪಿ ಡಿ.ಕೆ. ಶಿವಕುಮಾರ್. ಮೂರನೇ ಆರೋಪಿ ಸಿದ್ದರಾಮಯ್ಯ ಹಾಗೂ ನಾಲ್ಕನೇ ಆರೋಪಿಯಾಗಿ ಕಾಂಗ್ರೆಸ್ ವರಿಷ್ಠ ರಾಹುಲ್ ಗಾಂಧಿ ಇದ್ದಾರೆ.

ವಿಚಾರಣೆ ವೇಳೆ ರಾಹುಲ್ ಗಾಂಧಿ ಪರ ಹಾಜರಾಗಿದ್ದ ಹೈಕೋರ್ಟ್ ವಕೀಲ ನಿಶಿತ್ ಶೆಟ್ಟಿ, 'ಇವತ್ತು ಮಧ್ಯಾಹ್ನ ಇಂಡಿಯಾ ಮೈತ್ರಿಕೂಟದ ಸಭೆ ಇರುವ ಕಾರಣ ಅರ್ಜಿದಾರರ ಹಾಜರಿಗೆ ವಿನಾಯಿತಿ ನೀಡಬೇಕು' ಎಂದು ಕೋರಿದರು.

ಇದಕ್ಕೆ ಫಿರ್ಯಾದುದಾರರ ಪರ ಹೈಕೋರ್ಟ್ ವಕೀಲ ಎಂ.ವಿನೋದ್ ಕುಮಾರ್ ತೀವ್ರ ಆಕ್ಷೇಪ ವ್ಯಕ್ತಪಡಿಸಿದರು. ಇದನ್ನು ಪರಿಗಣಿಸಿದ ನ್ಯಾಯಾಧೀಶರು ವಿನಾಯ್ತಿ ನೀಡುವ ಬಗ್ಗೆ ಮಧ್ಯಾಹ್ನ ತೀರ್ಮಾನ ಮಾಡುವುದಾಗಿ ಹೇಳಿ ವಿಚಾರಣೆ ಮುಂದೂಡಿದರು. ಮಧ್ಯಾಹ್ನ ರಾಹುಲ್ ಗಾಂಧಿ ಪರ ವಕೀಲರು ಸಲ್ಲಿಸಿದ್ದ ಸಿಆರ್‌ಪಿಸಿ 205ರ ಅಡಿಯಲ್ಲಿನ ಅರ್ಜಿಯನ್ನು ಮಾನ್ಯ ಮಾಡಿ ಹಾಜರಿಗೆ ವಿನಾಯ್ತಿ ನೀಡಿದರು. ಅಂತೆಯೇ ಇದೇ 7ರಂದು ಖುದ್ದು ಹಾಜರಾಗುವಂತೆ ನಿರ್ದೇಶಿಸಿ ವಿಚಾರಣೆ ಮುಂದೂಡಿದರು.

'ನಾವು ನಮ್ಮ ಶಕ್ತಿ ತೋರಿಸುತ್ತೇವೆ'

ಬೆಂಗಳೂರು: 'ಇಡೀ ದೇಶದಲ್ಲೇ ಕರ್ನಾಟಕ ಬಿಜೆಪಿ ಅತ್ಯಂತ ಭ್ರಷ್ಟ ಪಕ್ಷ. ತಮ್ಮ ಭ್ರಷ್ಟಾಚಾರವನ್ನು ಬಯಲು ಮಾಡಲು ಅವರೇ ಕರೆಯುತ್ತಿದ್ದಾರೆ. ನಾವು ನಮ್ಮ ಶಕ್ತಿ ತೋರಿಸುತ್ತೇವೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ನಗರದ ಸಿವಿಲ್ ಕೋರ್ಟ್ ಮುಂಭಾಗದಲ್ಲಿ ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ನಮ್ಮ ಜಾಹೀರಾತುಗಳ ಬಗ್ಗೆ ಬಿಜೆಪಿಯವರು ದೂರು ನೀಡಿದ್ದಾರೆ. ನಾವು ಸುಮ್ಮನೆ ಜಾಹೀರಾತು ನೀಡಿಲ್ಲ. ಬಿಜೆಪಿ ನಾಯಕರ, ಸಚಿವರ ಹೇಳಿಕೆಗಳ ಆಧಾರದ ಮೇಲೆ ಹಾಗೂ ಮಾಧ್ಯಮಗಳಲ್ಲಿನ ವರದಿ ಆಧರಿಸಿ ಹಿಂದಿನ ರಾಜ್ಯ ಬಿಜೆಪಿ ಸರ್ಕಾರದ ಹಗರಣಗಳ ಬಗ್ಗೆ ಜಾಹೀರಾತು ನೀಡಿದ್ದೆವು. ಇದನ್ನೆಲ್ಲಾ ನಾವು ಸಾಬೀತು ಮಾಡುತ್ತೇವೆ' ಎಂದರು.

ನಾಲ್ಕು ವಿಭಾಗಗಳಲ್ಲಿ ವಿ. ಕಲ್ಯಾಣ್ ಪ್ರಥಮ

ಒಂದನೇ ಪುಟದಿಂದ

ಸಿಇಟಿಯಲ್ಲಿ ಭೌತವಿಜ್ಞಾನದಲ್ಲಿ 9, ರಸಾಯನ ವಿಜ್ಞಾನ ಮತ್ತು ಗಣಿತದಲ್ಲಿ ತಲಾ 15, ಜೀವವಿಜ್ಞಾನದಲ್ಲಿ 11 ಪಠ್ಯಕ್ಕೆ ಹೊರತಾದ ಪ್ರಶ್ನೆಗಳನ್ನು ಕೇಳಲಾಗಿತ್ತು. ವಿಷಯ ತಜ್ಞರ ನಿರ್ದೇಶನದ ಮೇರೆಗೆ ಈ ಪ್ರಶ್ನೆಗಳನ್ನು ಮೌಲ್ಯಮಾಪನದ ಸಂದರ್ಭದಲ್ಲಿ ಕೈಬಿಡಲಾಗಿತ್ತು. ಜತೆಗೆ ಭೌತವಿಜ್ಞಾನ ಮತ್ತು ಗಣಿತದಲ್ಲಿ ತಲಾ ಒಂದು ಕೃಪಾಂಕ ನೀಡಲಾಗಿದೆ. ಪರಿಷ್ಕೃತ ಸರಿ ಉತ್ತರಗಳ ಆಧಾರದಲ್ಲಿ ಮೆರಿಟ್ ಪಟ್ಟಿ ಸಿದ್ಧಪಡಿಸಲಾಗಿದೆ. ಈ ಬಾರಿ ಎರಡು ಬಾರಿ ಪಿಯುಸಿ ಪರೀಕ್ಷೆ ನಡೆಸಲಾಗಿದ್ದು, ಈ ಪರೀಕ್ಷೆಗಳ ಪೈಕಿ ಅತೀ ಹೆಚ್ಚು ಅಂಕಗಳನ್ನು ಪಡೆದಿರುವುದನ್ನೇ ಪರಿಗಣಿಸಲಾಗಿದೆ. ಅಭ್ಯರ್ಥಿಗಳು ವಿಷಯವಾರು ಅಂಕಗಳ ವಿವರಗಳನ್ನು ಜಾಲತಾಣದಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದು ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

'ಅಭ್ಯರ್ಥಿಗಳ ಮೂಲ ಪ್ರಮಾಣ ಪತ್ರಗಳ ಪರಿಶೀಲನೆ ಮುಗಿಯುವವರೆಗೂ ಈ ಅರ್ಹತೆ ತಾತ್ಕಾಲಿಕ ಸ್ವರೂಪದ್ದಾಗಿರುತ್ತದೆ. ಯುಜಿ ನೀಟ್ ಪರೀಕ್ಷೆಯ ಫಲಿತಾಂಶ ಮತ್ತು ಎಂಸಿಸಿ ಕೌನ್ಸೆಲಿಂಗ್ ವೇಳಾಪಟ್ಟಿಯನ್ನು ಗಣನೆಗೆ ತೆಗೆದುಕೊಂಡು, ಬಳಿಕ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ಜಂಟಿ ಕೌನ್ಸೆಲಿಂಗ್ ನಡೆಸಲಿರುವ ದಿನಾಂಕಗಳನ್ನು ಪ್ರಕಟಿಸಲಾಗುವುದು' ಎಂದು ಅವರು ಮಾಹಿತಿ ನೀಡಿದ್ದಾರೆ.

ಆರ್ಕಿಟೆಕ್ಚರ್ ಕೋರ್ಸ್‌ಗೆ ಪ್ರವೇಶ ಬಯಸಿರುವ ಅಭ್ಯರ್ಥಿಗಳಿಗೆ 'ನಾಟಾ' (ಎನ್‌ಎಟಿಎ) ಪರೀಕ್ಷೆಯಲ್ಲಿ ಅವರು ಗಳಿಸಲಿರುವ ಅಂಕಗಳನ್ನು ಪರಿಗಣಿಸಿ ರ‍್ಯಾಂಕ್ ಘೋಷಿಸಲಾಗುವುದು. ಬಿಪಿಟಿ, ಬಿಪಿಒ, ಬಿ.ಎಸ್ಸಿ (ಅಲೈಡ್ ಹೆಲ್ತ್ ಸೈನ್ಸ್) ಕೋರ್ಸ್‌ಗಳಿಗೆ ಸಂಬಂಧಿಸಿದ ಫಲಿತಾಂಶಕ್ಕೂ ಇದೇ ಸೂತ್ರ ಅನುಸರಿಸಲಾಗುವುದು ಎಂದು ಕೆಇಎ ಪ್ರಕಟಣೆ ತಿಳಿಸಿದೆ.

ಅಭ್ಯರ್ಥಿಗಳು ಒಎಂಆರ್ ಉತ್ತರ ಪತ್ರಿಕೆಯಲ್ಲಿ ನಮೂದಿಸಿರುವ ಉತ್ತರಗಳನ್ನು ಮತ್ತು ಸರಿಯಾದ ಉತ್ತರಗಳನ್ನು ಕೂಡ ಪ್ರಾಧಿಕಾರದ ಜಾಲತಾಣದಲ್ಲಿ ಪ್ರಕಟಿಸಲಾಗುವುದು. ವಿದ್ಯಾರ್ಥಿಗಳು ಅವುಗಳನ್ನು ತಮಗೆ ಪರೀಕ್ಷಾ ದಿನದಂದೇ ನೀಡಿರುವ ಒಎಂಆರ್ ಉತ್ತರ ಪತ್ರಿಕೆಗಳ ಜತೆ ತಾಳೆ ಮಾಡಿ ನೋಡಿಕೊಳ್ಳಬಹುದು. ವಿವಿಧ ಮೀಸಲಾತಿ ಪ್ರವರ್ಗಗಳ ಅಡಿ ಬರುವ ಅರ್ಹ ಅಭ್ಯರ್ಥಿಗಳ ವಿವರಗಳನ್ನು ಮತ್ತು ಜಿಲ್ಲಾವಾರು ಅಭ್ಯರ್ಥಿಗಳ ವಿವರಗಳನ್ನು ಕೂಡ ಈಗಾಗಲೇ ಪ್ರಕಟಿಸಲಾಗಿದೆ. http://kea.kar.nic.in ಕ್ಲಿಕ್ಕಿಸಿ ಫಲಿತಾಂಶ ನೋಡಬಹುದು.

ವಿವರ ತುಂಬಿದ್ದರಷ್ಟೇ ಫಲಿತಾಂಶ

'ಕೆಲವು ಅಭ್ಯರ್ಥಿಗಳು ತಮ್ಮ ಸಿಇಟಿ ಅರ್ಜಿಯಲ್ಲಿ ಜನ್ಮ ದಿನಾಂಕ, ದ್ವಿತೀಯ ಪಿಯುಸಿ ಅಂಕಗಳನ್ನು ನಮೂದಿಸಿಲ್ಲ. ಅಂಥವರ ಫಲಿತಾಂಶವನ್ನು ಸದ್ಯಕ್ಕೆ ತಡೆಹಿಡಿಯಲಾಗಿದೆ. ಅಂತಹ ಅಭ್ಯರ್ಥಿಗಳು ಪ್ರಾಧಿಕಾರದ ಪೋರ್ಟಲ್‌ನಲ್ಲಿ ಅಗತ್ಯ ವಿವರಗಳನ್ನು ತುಂಬಿದ ತಕ್ಷಣ ಫಲಿತಾಂಶವನ್ನು ಪ್ರಕಟಿಸಲಾಗುವುದು. ಆದ್ದರಿಂದ ಈ ಅಭ್ಯರ್ಥಿಗಳು ಆತಂಕಕ್ಕೆ ಒಳಗಾಗುವ ಅಗತ್ಯ ಇಲ್ಲ' ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ತಿಳಿಸಿದ್ದಾರೆ.

ಅಂಕಿ ಅಂಶ

3,49,653 ಸಿಇಟಿಗೆ ಅರ್ಜಿ ಸಲ್ಲಿಸಿದ್ದ ವಿದ್ಯಾರ್ಥಿಗಳು

3,10,314 ಸಿಇಟಿ ಬರೆದವರು

737 ಪರೀಕ್ಷೆ ನಡೆದ ಕೇಂದ್ರಗಳು

ಅರ್ಹತೆ ಪಡೆದವರು

2,74,595 ಎಂಜಿನಿಯರಿಂಗ್

2,15,965 ಬಿ.ಎಸ್ಸಿ (ಕೃಷಿ)

2,19,887 ಬಿ.ವಿ.ಎಸ್ಸಿ (ಪಶು ವೈದ್ಯಕೀಯ)

ಸಿಇಟಿ– ಮೊದಲ 10 ರ‍್ಯಾಂಕ್ ವಿಜೇತರು

ಎಂಜಿನಿಯರಿಂಗ್

	ಹೆಸರು	ಶಾಲೆ
1	ಹರ್ಷ ಕಾರ್ತಿಕೇಯ ವುಟುಕುರಿ	ನಾರಾಯಣ ಒಲಿಂಪಿಯಾಡ್ ಸ್ಕೂಲ್, ಸಹಕಾರ ನಗರ, ಬೆಂಗಳೂರು
2	ಮನೋಜ್ ಸೋಹನ್ ಗಜುಲ	ಶ್ರೀ ಚೈತನ್ಯ ಟೆಕ್ನೊ ಸ್ಕೂಲ್, ಮಾರತ್‌ಹಳ್ಳಿ, ಬೆಂಗಳೂರು
3	ಪಿ.ಜಿ. ಅಭಿನವ್	ನೆಹರೂ ಸ್ಮಾರಕ ವಿದ್ಯಾಲಯ, ಜಯನಗರ, ಬೆಂ.,
4	ಸನಾ ತಬ್ಸಮ್	ನಾರಾಯಣ ಪಿಯು ಕಾಲೇಜು, ಸಹಕಾರನಗರ, ಬೆಂ.,
5	ಅನಿಮೇಶ್ ಸಿಂಗ್ ರಾಥೋರ್	ಶ್ರೀ ಚೈತನ್ಯ ಟೆಕ್ನೊ ಸ್ಕೂಲ್, ಜೆ.ಪಿ. ನಗರ, ಬೆಂಗಳೂರು
6	ಪಿ. ಪ್ರಭವ್	ಆರ್.ವಿ ಪಿಯು ಕಾಲೇಜು, ಜಯನಗರ
7	ವಿದೀಪ್ ರೆಡ್ಡಿ ಜಾಲಪಲ್ಲಿ	ದಿಲ್ಲಿ ಪಬ್ಲಿಕ್ ಸ್ಕೂಲ್, ಸರ್ಜಾಪುರ ರಸ್ತೆ, ಬೆಂಗಳೂರು
8	ಶಾವನ್ ಥಾಮಸ್ ಕೋಶಿ	ಗೇರ್ ಇನ್ನೋವೆಟಿವ್ ಇಂಟರ್‌ನ್ಯಾಷನಲ್, ಬೆಂ.,
9	ವರಣಸಿ ಕಾರ್ತಿಕೇಯ ಶ್ರೀರಾಮ್	ಎಚ್‌ಎಂಆರ್ ನ್ಯಾಷನಲ್ ಕಾಲೇಜು ಹೆಣ್ಣೂರು, ಬೆಂಗಳೂರು
10	ವಿ. ಸಾಗರ್	ದಿಲ್ಲಿ ಪಬ್ಲಿಕ್ ಸ್ಕೂಲ್, ಕೋಣನಕುಂಟೆ, ಬೆಂಗಳೂರು

ಯೋಗ ಮತ್ತು ನ್ಯಾಚುರೋಪತಿ

	ಹೆಸರು	ಶಾಲೆ
1	ಎಸ್.ಆರ್. ನಿಹಾರ್	ಎಕ್ಸ್‌ಫರ್ಟ್ ಪಿಯು ಸಯನ್ಸ್ ಕಾಲೇಜು, ಕೊಡಿಯಾಲಬೈಲ್, ಮಂಗಳೂರು
2	ಸಂಜನಾ ಸಂತೋಷ್ ಕಟ್ಟಿ	ಎಕ್ಸ್‌ಫರ್ಟ್ ಕಾಲೇಜು, ವಳಚ್ಚಿಲ್, ಮಂಗಳೂರು
3	ಪ್ರೀತಂ ರಾವಲಪ್ಪ ಪನಸುದಕರ್	ಶೇಷಾದ್ರಿಪುರ ಪಿಯು ಕಾಲೇಜು, ಬೆಂಗಳೂರು
4	ವಜ್ರಕಾಂತ್ ಮಿರಗಿ	ನಾರಾಯಣ ಪಿಯು ಕಾಲೇಜು. ದಾಸರಹಳ್ಳಿ, ಬೆಂ.,
5	ಸ್ನೇಹಾ	ಕೇಂದ್ರೀಯ ವಿದ್ಯಾಲಯ, ಜಾಲಹಳ್ಳಿ, ಬೆಂಗಳೂರು
6	ಸ್ವಸ್ತಿಕ್ ಅಖಿಲ್ ಶರ್ಮಾ	ಎಕ್ಸ್‌ಫರ್ಟ್ ಕಾಲೇಜು, ವಳಚ್ಚಿಲ್, ಮಂಗಳೂರು
7	ನೈತಿಕ ಜೈನ್	ಆರ್.ವಿ ಪಿಯು ಕಾಲೇಜು, ಜಯನಗರ, ಬೆಂಗಳೂರು
8	ಸುಷ್ಮಾ ಅಮರೇಶ್	ಜಿ.ಆರ್ ಪಿಯು ಕಾಲೇಜು, ತಾತಗುಣಿ, ಬೆಂಗಳೂರು
9	ಎ. ಶಶಾಂಕ್	ವಿದ್ಯಾಮಂದಿರ ಪಿಯು ಕಾಲೇಜು, ಮಲ್ಲೇಶ್ವರ
10	ಎಂ. ಸುಹಾಸ್	ಎಕ್ಸ್‌ಫರ್ಟ್ ಕಾಲೇಜು, ವಳಚ್ಚಿಲ್, ಮಂಗಳೂರು

ಕೃಷಿ ವಿಜ್ಞಾನ– ಬಿ.ಎಸ್ಸಿ (ಕೃಷಿ)

	ಹೆಸರು	ಶಾಲೆ
1	ಎಸ್.ಆರ್. ನಿಹಾರ್	ಎಕ್ಸ್‌ಫರ್ಟ್ ಪಿಯು ಸಯನ್ಸ್ ಕಾಲೇಜು, ಕೊಡಿಯಾಲಬೈಲ್, ಮಂಗಳೂರು
2	ಮಿಹಿರ್ ಗಿರೀಶ್ ಕಾಮತ್	ಎಕ್ಸ್‌ಫರ್ಟ್ ಪಿಯು ಸಯನ್ಸ್ ಕಾಲೇಜು, ಕೊಡಿಯಾಲಬೈಲ್, ಮಂಗಳೂರು
3	ಅನಿಮೇಶ್ ಸಿಂಗ್ ರಾಥೋರ್	ಶ್ರೀ ಚೈತನ್ಯ ಟೆಕ್ನೊ ಸ್ಕೂಲ್. ಜೆ.ಪಿ. ನಗರ, ಬೆಂಗಳೂರು
4	ಸಂಜನಾ ಸಂತೋಷ್ ಕಟ್ಟಿ	ಎಕ್ಸ್‌ಫರ್ಟ್ ಕಾಲೇಜು, ವಳಚ್ಚಿಲ್, ಮಂಗಳೂರು
5	ಆರ್.ಎಂ. ಹರ್ಷಿತಾ	ವಿದ್ಯಾಜ್ಯೋತಿ ಪಿಯು ಕಾಲೇಜು, ಕೋಲಾರ
6	ಎ. ಆದಿತ್ಯಾ	ಶ್ರೀ ಚೈತನ್ಯ ಟೆಕ್ನೊ ಸ್ಕೂಲ್. ಜೆ.ಪಿ. ನಗರ, ಬೆಂಗಳೂರು
7	ಜಿ.ಎ. ಅಂಶಿಕಾ	ಸರ್ ಎಂ.ವಿ. ಪಿಯು ಕಾಲೇಜು, ದಾವಣಗೆರೆ
8	ಆಕಾಶ್ ಶ್ರೀಶೈಲ್ ಕಂಕನ್‌ವಾಡಿ	ಎಕ್ಸ್‌ಫರ್ಟ್ ಪಿಯು ಕಾಲೇಜು, ವಳಚ್ಚಿಲ್, ಮಂಗಳೂರು
9	ಆರ್. ಪ್ರಣವ್ ಟಾಟಾ	ಎಕ್ಸ್‌ಫರ್ಟ್ ಕಾಲೇಜು, ವಳಚ್ಚಿಲ್, ಮಂಗಳೂರು
10	ಪಿ. ಸ್ಕಂದ	ದೀಕ್ಷಾ ಪಿಯು ಕಾಲೇಜು, ತಳಘಟ್ಟಪುರ, ಬೆಂ.,

ಪಶು ವೈದ್ಯಕೀಯ (ಬಿ.ವಿ.ಎಸ್ಸಿ)

	ಹೆಸರು	ಶಾಲೆ
1	ವಿ. ಕಲ್ಯಾಣ್	ಶ್ರೀ ಚೈತನ್ಯ ಟೆಕ್ನೊ ಸ್ಕೂಲ್, ಮಾರತ್‌ಹಳ್ಳಿ, ಬೆಂ.,
2	ಡಿ.ಎನ್. ನಿತಿನ್	ನಾರಾಯಣ ಇ ಟೆಕ್ನೊ ಸ್ಕೂಲ್, ಯಲಹಂಕ, ಬೆಂ.,
3	ಎಸ್.ಆರ್. ನಿಹಾರ್	ಎಕ್ಸ್‌ಫರ್ಟ್ ಪಿಯು ಸಯನ್ಸ್ ಕಾಲೇಜು, ಕೊಡಿಯಾಲಬೈಲ್, ಮಂಗಳೂರು
4	ಧ್ರುವ ಅವಸ್ಥಿ	ನಾರಾಯಣ ಇ ಟೆಕ್ನೊ ಸ್ಕೂಲ್, ನಲ್ಲೂರಹಳ್ಳಿ, ಬೆಂ.,
5	ಸ್ನೇಹಾ	ಕೇಂದ್ರೀಯ ವಿದ್ಯಾಲಯ, ಜಾಲಹಳ್ಳಿ, ಬೆಂಗಳೂರು
6	ಸಂಜನಾ ಸಂತೋಷ್ ಕಟ್ಟಿ	ಎಕ್ಸ್‌ಫರ್ಟ್ ಕಾಲೇಜು, ವಳಚ್ಚಿಲ್, ಮಂಗಳೂರು
7	ವಜ್ರಕಾಂತ್ ಮಿರಗಿ	ನಾರಾಯಣ ಕಾಲೇಜು. ದಾಸರಹಳ್ಳಿ, ಬೆಂಗಳೂರು
8	ನಿಖಿಲ್ ಬಿ ಗೌಡ	ಎಕ್ಸ್‌ಲೆಂಟ್ ಕಾಲೇಜು, ಮೂಡುಬಿದಿರೆ
9	ಎಂ. ಸುಹಾಸ್	ಎಕ್ಸ್‌ಫರ್ಟ್ ಕಾಲೇಜು, ವಳಚ್ಚಿಲ್, ಮಂಗಳೂರು
10	ಅಕ್ಷತ್ ಮಿಶ್ರ	ನಾರಾಯಣ ಇ ಟೆಕ್ನೊ ಸ್ಕೂಲ್, ಯಲಹಂಕ, ಬೆಂ.,

ಬಿ. ಫಾರ್ಮಾ, ಫಾರ್ಮಾ ಡಿ

	ಹೆಸರು	ಶಾಲೆ
1	ವಿ. ಕಲ್ಯಾಣ್	ಶ್ರೀ ಚೈತನ್ಯ ಟೆಕ್ನೊ ಸ್ಕೂಲ್, ಮಾರತ್‌ಹಳ್ಳಿ, ಬೆಂ.,
2	ಹರ್ಷ ಕಾರ್ತಿಕೇಯ ವುಟುಕುರಿ	ನಾರಾಯಣ ಒಲಿಂಪಿಯಾಡ್ ಸ್ಕೂಲ್, ಸಹಕಾರ ನಗರ, ಬೆಂಗಳೂರು
3	ಡಿ.ಎನ್. ನಿತಿನ್	ನಾರಾಯಣ ಇ ಟೆಕ್ನೊ ಸ್ಕೂಲ್, ಯಲಹಂಕ, ಬೆಂ.,
4	ಸ್ನೇಹಾ	ಕೇಂದ್ರೀಯ ವಿದ್ಯಾಲಯ, ಜಾಲಹಳ್ಳಿ, ಬೆಂಗಳೂರು
5	ಎಸ್.ಆರ್. ನಿಹಾರ್	ಎಕ್ಸ್‌ಫರ್ಟ್ ಪಿಯು ಸಯನ್ಸ್ ಕಾಲೇಜು, ಕೊಡಿಯಾಲಬೈಲ್, ಮಂಗಳೂರು
6	ಧ್ರುವ ಅವಸ್ಥಿ	ನಾರಾಯಣ ಇ ಟೆಕ್ನೊ ಸ್ಕೂಲ್, ನಲ್ಲೂರಹಳ್ಳಿ, ಬೆಂ.,
7	ಮನೋಜ್ ಸೋಹನ್ ಗಜುಲ	ಶ್ರೀ ಚೈತನ್ಯ ಟೆಕ್ನೊ ಸ್ಕೂಲ್, ಮಾರತ್‌ಹಳ್ಳಿ, ಬೆಂ.,
8	ಸಂಜನಾ ಸಂತೋಷ್ ಕಟ್ಟಿ	ಎಕ್ಸ್‌ಫರ್ಟ್ ಕಾಲೇಜು, ವಳಚ್ಚಿಲ್, ಮಂಗಳೂರು
9	ವಜ್ರಕಾಂತ್ ಮಿರಗಿ	ನಾರಾಯಣ ಪಿಯು ಕಾಲೇಜು, ದಾಸರಹಳ್ಳಿ, ಬೆಂ.,
10	ನಿಖಿಲ್ ಬಿ ಗೌಡ	ಎಕ್ಸ್‌ಲೆಂಟ್ ಪಿಯು ಕಾಲೇಜು, ಮೂಡುಬಿದಿರೆ

ಬಿ.ಎಸ್ಸಿ ನರ್ಸಿಂಗ್

	ಹೆಸರು	ಶಾಲೆ
1	ವಿ. ಕಲ್ಯಾಣ್	ಶ್ರೀ ಚೈತನ್ಯ ಟೆಕ್ನೊ ಸ್ಕೂಲ್, ಮಾರತ್‌ಹಳ್ಳಿ, ಬೆಂ.,
2	ಡಿ.ಎನ್. ನಿತಿನ್	ನಾರಾಯಣ ಇ ಟೆಕ್ನೊ ಸ್ಕೂಲ್, ಯಲಹಂಕ, ಬೆಂ.,
3	ಎಸ್.ಆರ್. ನಿಹಾರ್	ಎಕ್ಸ್‌ಫರ್ಟ್ ಪಿಯು ಸಯನ್ಸ್ ಕಾಲೇಜು, ಕೊಡಿಯಾಲಬೈಲ್, ಮಂಗಳೂರು
4	ಧ್ರುವ ಅವಸ್ಥಿ	ನಾರಾಯಣ ಇ ಟೆಕ್ನೊ ಸ್ಕೂಲ್, ನಲ್ಲೂರಹಳ್ಳಿ, ಬೆಂ.,
5	ಸ್ನೇಹಾ	ಕೇಂದ್ರೀಯ ವಿದ್ಯಾಲಯ, ಜಾಲಹಳ್ಳಿ, ಬೆಂಗಳೂರು
6	ಸಂಜನಾ ಸಂತೋಷ್ ಕಟ್ಟಿ	ಎಕ್ಸ್‌ಫರ್ಟ್ ಕಾಲೇಜು, ವಳಚ್ಚಿಲ್, ಮಂಗಳೂರು
7	ವಜ್ರಕಾಂತ್ ಮಿರಗಿ	ನಾರಾಯಣ ಕಾಲೇಜು. ದಾಸರಹಳ್ಳಿ, ಬೆಂಗಳೂರು
8	ನಿಖಿಲ್ ಬಿ ಗೌಡ	ಎಕ್ಸ್‌ಲೆಂಟ್ ಕಾಲೇಜು, ಮೂಡುಬಿದಿರೆ
9	ಎಂ. ಸುಹಾಸ್	ಎಕ್ಸ್‌ಫರ್ಟ್ ಕಾಲೇಜು, ವಳಚ್ಚಿಲ್, ಮಂಗಳೂರು
10	ಅಕ್ಷತ್ ಮಿಶ್ರ	ನಾರಾಯಣ ಇ ಟೆಕ್ನೊ ಸ್ಕೂಲ್, ಯಲಹಂಕ, ಬೆಂ.,

ಸಿಇಟಿ: ರ‍್ಯಾಂಕ್ ವಿದ್ಯಾರ್ಥಿಗಳ ಅನಿಸಿಕೆ

ಸಿಇಟಿ ಎಂಜಿನಿಯರಿಂಗ್‌ನಲ್ಲಿ 3ನೇ ರ‍್ಯಾಂಕ್ ಬಂದಿರುವುದನ್ನು ಕಂಡು ಖುಷಿಯಾಯಿತು. ನನಗೆ ಶಿಕ್ಷಕರು ನೀಡುತ್ತಿದ್ದ ಸಲಹೆ, ಬೋಧನೆಯಿಂದ ಪರೀಕ್ಷೆ ಬರೆಯಲು ಸುಲಭವಾಯಿತು. ಅವರಿಗೆ ಮತ್ತು ಮನೆಯಲ್ಲಿ ಪ್ರೋತ್ಸಾಹ ನೀಡಿದ ಹೆತ್ತವರಿಗೆ ಕೃತಜ್ಞತೆ ಸಲ್ಲಿಸುತ್ತೇನೆ.

ಅಭಿನವ್ ಪಿ.ಜಿ., ನೆಹರೂ ಸ್ಮಾರಕ ವಿದ್ಯಾಲಯ, 7ನೇ ಬ್ಲಾಕ್, ಜಯನಗರ, ಬೆಂಗಳೂರು **(ಎಂಜಿನಿಯರಿಂಗ್‌ನಲ್ಲಿ ಮೂರನೇ ರ‍್ಯಾಂಕ್ ಪಡೆದ ವಿದ್ಯಾರ್ಥಿ)**



ಕಾಲೇಜಿನಲ್ಲಿಯೇ ಸಿಇಟಿಗೆ ತಯಾರಿ ನಡೆಸುತ್ತಿದ್ದೆ. ಅದನ್ನು ಹೊರತುಪಡಿಸಿ ಯಾವುದೇ ಕೋಚಿಂಗ್ ಕ್ಲಾಸ್‌ಗಳಿಗೆ ಹೋಗಿಲ್ಲ. ಶ್ರದ್ಧೆಯಿಂದ ಓದಿದರೆ ಕೋಚಿಂಗ್ ಬೇಕಾಗಿಲ್ಲ. ಇದೇ ರೀತಿ ಓದಿ ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿಯೂ ರ‍್ಯಾಂಕ್ ಪಡೆದಿದ್ದೆ. ಮುಂದೆ ವೈದ್ಯಕೀಯ ಶಿಕ್ಷಣ ಪಡೆಯಬೇಕು ಎಂಬುದು ನನ್ನ ಗುರಿ.

ಪ್ರೀತಮ್ ರಾವಲಪ್ಪ ಪಣಸುಧಾಕರ್, ಶೇಷಾದ್ರಿಪುರಂ ಪಿ.ಯು. ಕಾಲೇಜು **ಬಿಎನ್‌ವೈಎಸ್ (ಬ್ಯಾಚುಲರ್ ಆಫ್ ನ್ಯಾಚುರೋಪತಿ ಮತ್ತು ಯೋಗಿಕ್ ಸೈನ್ಸಸ್)ನಲ್ಲಿ 3ನೇ ರ‍್ಯಾಂಕ್ ಪಡೆದ ವಿದ್ಯಾರ್ಥಿ.**



ಬೇರೆ ಪರೀಕ್ಷೆಗಳಿಗೆ ಹೋಲಿಸಿದರೆ ಈ ಪರೀಕ್ಷೆ ಸುಲಭವಾಗಿತ್ತು. ವಿದ್ಯಾರ್ಥಿಗಳು ಸಮಯದ ಸರಿಯಾದ ಬಳಕೆ ಕಲಿತರೆ ಯಾವ ಪರೀಕ್ಷೆಯೂ ಕಷ್ಟವಲ್ಲ. ಸಿಇಟಿ ಪರೀಕ್ಷೆಗೆ ಸಮಯ ನಿಗದಿಪಡಿಸಿದ್ದೆ. ಅದೇ ಸಮಯದಲ್ಲಿ ಓದುತ್ತಿದ್ದೆ.

ಅನಿಮೇಶ್ ಸಿಂಗ್ ರಾಥೋರ್, ಶ್ರೀ ಚೈತನ್ಯ ಟೆಕ್ನೋ ಸ್ಕೂಲ್ **ಬಿ.ಎಸ್.ಸಿ(ಕೃಷಿ)ಯಲ್ಲಿ ಮೂರನೇ ರ‍್ಯಾಂಕ್ ಪಡೆದ ವಿದ್ಯಾರ್ಥಿ.**



ನಾನು ಬೆಳಿಗ್ಗೆ 8 ರಿಂದ ರಾತ್ರಿ 8ರ ತನಕ ಕೋಚಿಂಗ್ ತೆಗೆದುಕೊಳ್ಳುತ್ತಿದ್ದೆ. ಓದಿಗೆ ಹೆಚ್ಚು ಗಮನ ನೀಡಿದ್ದರಿಂದ ಈ ಫಲಿತಾಂಶ ಪಡೆಯಲು ಸಾಧ್ಯವಾಯಿತು. ವಿದ್ಯಾರ್ಥಿ ಜೀವನದಲ್ಲಿ ಕಷ್ಟಪಟ್ಟರೆ ಯಶಸ್ಸು ನಮ್ಮನ್ನು ಹುಡುಕಿಕೊಂಡು ಬರುತ್ತದೆ ಎಂಬುದಕ್ಕೆ ಈ ಫಲಿತಾಂಶವೇ ಸಾಕ್ಷಿ. ಮುಂದೆ ವೈದ್ಯನಾಗುವ ಗುರಿ ಇಟ್ಟುಕೊಂಡಿದ್ದೇನೆ.

ಡಿ.ಎನ್. ನಿತಿನ್, ನಾರಾಯಣ ಇ., ಟೆಕ್ನೋ ಪಾರ್ಕ್ ಸ್ಕೂಲ್, ದೊಡ್ಡಬೆಟ್ಟಹಳ್ಳಿ, ಯಲಹಂಕ **ಪಶು ವೈದ್ಯಕೀಯ ಪರೀಕ್ಷೆಯಲ್ಲಿ 2ನೇ ಹಾಗೂ ಬಿ.ಫಾರ್ಮಾದಲ್ಲಿ 3ನೇ ರ‍್ಯಾಂಕ್ ಗಳಿಸಿರುವ ವಿದ್ಯಾರ್ಥಿ.**

'ಈ ಬಾರಿ ಸಿಇಟಿ ಪ್ರಶ್ನೆಪತ್ರಿಕೆ ಕಠಿಣವಾಗಿದ್ದ ಕಾರಣ ರ‍್ಯಾಂಕ್ ನಿರೀಕ್ಷಿಸಿರಲಿಲ್ಲ. ತರಗತಿಯ ಪಾಠ ಗಂಭೀರವಾಗಿ ಮನನ ಮಾಡುವುದರ ಜೊತೆಗೆ ಕಾಲೇಜಿನಿಂದ ಬಂದ ಮೇಲೆ 3–4 ತಾಸು ಅಭ್ಯಾಸ ಮಾಡುತ್ತಿದ್ದೆ. ದೈನಂದಿನ ಅಧ್ಯಯನ ಅಂಕ ಗಳಿಕೆಗೆ ಸಹಕಾರಿಯಾಯಿತು. ಸಿಇಟಿಗಿಂತ ನೀಟ್ ಪರೀಕ್ಷೆ ಸಿದ್ಧತೆಗೆ ಹೆಚ್ಚು ಆದ್ಯತೆ ನೀಡಿದ್ದೆ. ನೀಟ್ ಫಲಿತಾಂಶ ಪ್ರಕಟಗೊಂಡ ಮೇಲೆ ಯಾವ ಕೋರ್ಸ್ ಮಾಡಬೇಕೆಂದು ನಿರ್ಧರಿಸುತ್ತೇನೆ'.

ನಿಹಾರ್ ಎಸ್.ಆರ್., ಮಂಗಳೂರು ವಳಚ್ಚಿಲ್ ಎಕ್ಸ್‌ಪರ್ಟ್ ಪಿಯು ಕಾಲೇಜು, **ಬಿಎನ್‌ವೈಎಸ್ ಮತ್ತು ಬಿಎಸ್ಸಿ (ಕೃಷಿ)ಯಲ್ಲಿ ಪ್ರಥಮ, ಬಿವಿಎಸ್ಸಿ (ಪಶುವೈದ್ಯಕೀಯ), ಬಿಎಸ್ಸಿ ನರ್ಸಿಂಗ್‌ನಲ್ಲಿ ತೃತೀಯ, ಬಿ ಫಾರ್ಮ ಮತ್ತು ಡಿ ಫಾರ್ಮಾದಲ್ಲಿ ತೃತೀಯ ರ‍್ಯಾಂಕ್**

'ಸಿಇಟಿಯಲ್ಲಿ ರ‍್ಯಾಂಕ್ ನಿರೀಕ್ಷೆ ಮಾಡಿರಲಿಲ್ಲ. ಕಠಿಣ ಪರಿಶ್ರಮ, ನಿರಂತರ ಅಭ್ಯಾಸದಿಂದ ಸಾಧನೆ ಆಗಿದೆ. ವೈದ್ಯಕೀಯ ಶಿಕ್ಷಣ ಒಲವಿನ ಕ್ಷೇತ್ರವಾಗಿದ್ದು, ನೀಟ್ ಫಲಿತಾಂಶಕ್ಕಾಗಿ ಕಾಯುತ್ತಿದ್ದೇನೆ'

ಸಂಜನಾ ಸಂತೋಷ್ ಕಟ್ಟಿ, ಮಂಗಳೂರು ವಳಚ್ಚಿಲ್ ಎಕ್ಸ್‌ಪರ್ಟ್ ಪಿಯು ಕಾಲೇಜು, **ಬಿಎನ್‌ವೈಎಸ್‌ನಲ್ಲಿ ಎರಡನೇ ರ‍್ಯಾಂಕ್, ಬಿಎಸ್ಸಿ ಕೃಷಿಯಲ್ಲಿ ನಾಲ್ಕನೇ ರ‍್ಯಾಂಕ್**



'ಉತ್ತಮ ಅಂಕದ ನಿರೀಕ್ಷೆ ಇತ್ತು. ರ‍್ಯಾಂಕ್ ನಿಜಕ್ಕೂ ಅನಿರೀಕ್ಷಿತ. ನೀಟ್ ಪರೀಕ್ಷೆಯ ಮೇಲೆ ಹೆಚ್ಚು ಗಮನ ಕೇಂದ್ರೀಕರಿಸಿದ್ದೆ. ಮೆಡಿಕಲ್ ಓದಬೇಕೆಂಬ ಕನಸಿದೆ. ನೀಟ್ ಫಲಿತಾಂಶ ಆಧರಿಸಿ, ಮುಂದಿನ ಕೋರ್ಸ್ ನಿರ್ಧರಿಸುತ್ತೇನೆ'

ಮಿಹಿರ್ ಗಿರೀಶ್ ಕಾಮತ್, ಮಂಗಳೂರು ವಳಚ್ಚಿಲ್ ಎಕ್ಸ್‌ಪರ್ಟ್ ಪಿಯು ಕಾಲೇಜು, **ಬಿಎಸ್ಸಿ ಕೃಷಿಯಲ್ಲಿ ದ್ವಿತೀಯ ರ‍್ಯಾಂಕ್**

ತೆಲಂಗಾಣದ 'ಪ್ರಭಾವಿ'ಗಳ ನಂಟು?

ಒಂದನೇ ಪುಟದಿಂದ

ಮೊದಲ ಕಂತಿನಲ್ಲಿ ₹ 5 ಕೋಟಿಯನ್ನು ಅಲ್ಲಿಗೆ ವರ್ಗಾವಣೆ ಮಾಡುವಲ್ಲಿ ಯಶಸ್ವಿಯೂ ಆಗಿತ್ತು. ನಂತರದಲ್ಲಿ 'ಪ್ರಭಾವಿ'ಗಳ ರಕ್ಷಣೆಯ ಧೈರ್ಯದಲ್ಲಿ ಕಾರ್ಯತಂತ್ರ ಬದಲಿಸಿ ಆರ್‌ಬಿಎಲ್ ಬ್ಯಾಂಕ್‌ನ ಬಂಜಾರಾ ಹಿಲ್ಸ್ ಶಾಖೆಯ ದಾರಿ ಹಿಡಿದಿತ್ತು. ಅಲ್ಲಿ ಮೊದಲ ಖಾತೆ ತೆರೆದ ತಿಂಗಳೊಳಗೆ ₹ 89.62 ಕೋಟಿಯನ್ನು ನಿಗಮದ ಖಾತೆಯಿಂದ ಲಪಟಾಯಿಸಿದೆ.

'ನಿಗಮದ ಅಧೀಕ್ಷಕ ಪಿ. ಚಂದ್ರಶೇಖರನ್ ಶಿವಮೊಗ್ಗದಲ್ಲಿ ಆತ್ಮಹತ್ಯೆ ಮಾಡಿಕೊಂಡ ಬಳಿಕ ಎಚ್ಚೆತ್ತ ಹಿರಿಯ ಅಧಿಕಾರಿಗಳು, ಹಣಕಾಸು ಇಲಾಖೆಯ ಲೆಕ್ಕಾಧಿಕಾರಿಗಳ ತಂಡವೊಂದರ ಮೂಲಕ ಅನೌಪಚಾರಿಕ ಪರಿಶೀಲನೆ ನಡೆಸಿದ್ದಾರೆ. ನಿಗಮದ ಹಣ ವರ್ಗಾವಣೆಯಾಗಿರುವ ಆರ್‌ಬಿಎಲ್ ಬ್ಯಾಂಕ್‌ನ ಬಂಜಾರಾ ಹಿಲ್ಸ್ ಶಾಖೆಯಲ್ಲಿನ ಕೆಲವು ಖಾತೆಗಳು ಮತ್ತು ಅಲ್ಲಿಂದ ಹಣ ವರ್ಗಾಯಿಸಿ ಕೊಂಡಿರುವ ಕೆಲವು ಖಾತೆಗಳಿಗೆ ರಾಜಕೀಯ ನಂಟು ಇರುವ ಮಾಹಿತಿ ಪರಿಶೀಲನೆ ವೇಳೆ ಲಭಿಸಿತ್ತು' ಎಂದು ಮೂಲಗಳು 'ಪ್ರಜಾವಾಣಿ'ಗೆ ತಿಳಿಸಿವೆ.

ಬೇನಾಮಿ ಖಾತೆಗಳೇ ಹೆಚ್ಚು: ವಿವಿಧ ಕಂಪನಿಗಳ ಹೆಸರಿನಲ್ಲಿ ಆರ್‌ಬಿಎಲ್ ಬ್ಯಾಂಕ್‌ನಲ್ಲಿ 18 ಖಾತೆಗಳನ್ನು ತೆರೆಯಲಾಗಿತ್ತು. ಅವುಗಳಿಗೆ ಮಾರ್ಚ್ 5ರಿಂದ ಮಾರ್ಚ್ 30ರ ಅವಧಿಯಲ್ಲಿ ಯೂನಿಯನ್ ಬ್ಯಾಂಕ್‌ನಲ್ಲಿರುವ ವಾಲ್ಮೀಕಿ ಅಭಿವೃದ್ಧಿ ನಿಗಮದ ಖಾತೆಯಿಂದ ಹಣ ವರ್ಗಾಯಿಸಲಾಗಿದೆ. ಹಣ ವರ್ಗಾವಣೆಯಾಗಿರುವ ಹೆಚ್ಚಿನ ಖಾತೆಗಳು ಬೆಂಗಳೂರಿನ ವಿವಿಧ ಕಂಪನಿಗಳ ಹೆಸರಿನಲ್ಲಿವೆ. ಆದರೆ, ಬಹುತೇಕ ಖಾತೆಗಳನ್ನು ಕಂಪನಿಗಳ ಹೆಸರನ್ನು ದುರ್ಬಳಕೆ ಮಾಡಿಕೊಂಡು ಬೇನಾಮಿ ಸ್ವರೂಪದಲ್ಲಿ ತೆರೆಯಲಾಗಿತ್ತು ಎಂಬುದೂ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆ ನಡೆಸಿರುವ ಪ್ರಾಥಮಿಕ ಪರಿಶೀಲನೆ ವೇಳೆ ಗೊತ್ತಾಗಿದೆ ಎಂದು ಮೂಲಗಳು ಹೇಳಿವೆ.

ನಿಗಮದ ಖಾತೆಯಿಂದ ವರ್ಗಾವಣೆ ಆಗಿರುವ ₹ 89.62 ಕೋಟಿಯನ್ನು ಮುಟ್ಟುಗೋಲು ಹಾಕಿಕೊಳ್ಳುವಂತೆ ಯೂನಿಯನ್ ಬ್ಯಾಂಕ್ ಅಧಿಕಾರಿಗಳ ಮೇಲೆ ಒತ್ತಡ ತರಲಾಗಿತ್ತು. ಆದರೆ, ಬಹುತೇಕ ಮೊತ್ತ ನಿಗಮದ ಖಾತೆಯಿಂದ ವರ್ಗಾವಣೆಯಾದ ದಿನವೇ ಆರ್‌ಬಿಎಲ್ ಬ್ಯಾಂಕ್‌ನ ಖಾತೆಗಳಿಂದ ವರ್ಗಾವಣೆ ಮತ್ತು ನಗದೀಕರಣ ಆಗಿರುವ ಮಾಹಿತಿ ಅಧಿಕಾರಿಗಳಿಗೆ ಲಭಿಸಿತ್ತು.

ಅಧಿಕಾರಿಗಳ ಹೇಳಿಕೆ ಬಗ್ಗೆಯೇ ಅನುಮಾನ

ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ ಅಧೀನದಲ್ಲಿರುವ ನಿಗಮಗಳು ನಿತ್ಯವೂ ತಮ್ಮ ಬಳಿ ಇರುವ ನಗದು, ಆ ದಿನ ವೆಚ್ಚವಾದ ಮೊತ್ತದ ಕುರಿತು ನಗದು ವಹಿಯಲ್ಲಿ ದಾಖಲಿಸಬೇಕು. ತಿಂಗಳಾಂತ್ಯದಲ್ಲಿ ಬ್ಯಾಂಕ್ ಖಾತೆಯ ವಹಿವಾಟು ವಿವರಗಳನ್ನು ನಗದು ವಹಿ ಜತೆ ತಾಳೆ ಮಾಡಿ ನೋಡಬೇಕು. ಆದರೆ, ಹಗರಣ ನಡೆದು ಎರಡು ತಿಂಗಳ ಬಳಿಕವೇ ತಮಗೆ ತಿಳಿಯಿತು ಎಂಬ ವಾಲ್ಮೀಕಿ ಅಭಿವೃದ್ಧಿ ನಿಗಮದ ಅಧಿಕಾರಿಗಳ ಹೇಳಿಕೆ ಬಗ್ಗೆಯೇ ವಿಶೇಷ ತನಿಖಾ ತಂಡಕ್ಕೆ ಅನುಮಾನ ವ್ಯಕ್ತವಾಗಿದೆ.

'ಅಧಿಕಾರಿಗಳು ಸುಳ್ಳು ಹೇಳುತ್ತಿದ್ದಾರೆಯೆ? ಅಥವಾ ನಿಗಮದಲ್ಲಿ ಉದ್ದೇಶಪೂರ್ವಕವಾಗಿ ಹಣಕಾಸು ವಹಿವಾಟಿನ ಪರಿಶೀಲನೆ ನಡೆಸದೆ ಮೌನ ವಹಿಸಲಾಗಿತ್ತೆ ಎಂಬುದರ ಕುರಿತು ತನಿಖೆ ನಡೆಸಲಾಗುತ್ತದೆ' ಎಂದು ಮೂಲಗಳು ತಿಳಿಸಿವೆ.

'ಕೈ' ಜಿಗಿದರೂ 'ಕಮಲ'ದ ಪ್ರಾಬಲ್ಯ

ಒಂದನೇ ಪುಟದಿಂದ

ಕಳೆದ ಚುನಾವಣೆಗೆ ಹೋಲಿಸಿದರೆ ಬಿಜೆಪಿ ಒಂದರಿಂದ 7 ಸ್ಥಾನಗಳನ್ನು ಕಳೆದುಕೊಳ್ಳುವ ಸಾಧ್ಯತೆ ಇದೆ ಎಂದು ಮತಗಟ್ಟೆ ಸಮೀಕ್ಷೆಗಳು ಅಂದಾಜು ಮಾಡಿವೆ. ಬಿಜೆಪಿ 18ರಿಂದ 24 ಲೋಕಸಭಾ ಕ್ಷೇತ್ರಗಳಲ್ಲಿ ಗೆಲುವು ಸಾಧಿಸಬಹುದು ಎಂದು ಉಲ್ಲೇಖಿಸಿವೆ.

ಜೆಡಿಎಸ್ ಹಾಲಿ ಒಂದು ಸ್ಥಾನ ಹೊಂದಿದೆ. ಈ ಚುನಾವಣೆಯಲ್ಲಿ ಮೂರು ಕ್ಷೇತ್ರಗಳಲ್ಲಿ ಸ್ಪರ್ಧಿಸಿದೆ. ಎರಡರಿಂದ ಮೂರು ಕ್ಷೇತ್ರಗಳಲ್ಲಿ ಗೆಲುವು ಸಾಧಿಸಬಹುದು ಎಂಬ ಅಭಿಪ್ರಾಯ ವ್ಯಕ್ತವಾಗಿದೆ.

25ಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಗೆಲುವು ಸಾಧಿಸುವುದಾಗಿ ಬಿಜೆಪಿ ಹೇಳಿಕೊಂಡಿದೆ. 17ಕ್ಕೂ ಹೆಚ್ಚು ಸ್ಥಾನಗಳಲ್ಲಿ ಗೆಲ್ಲುವುದಾಗಿ ಕಾಂಗ್ರೆಸ್ ಹೇಳುತ್ತಿದೆ. ಎರಡೂ ಪಕ್ಷಗಳ ಪ್ರತಿಪಾದನೆಗೆ ಭಿನ್ನವಾದ ಅಭಿಪ್ರಾಯ ಮತಗಟ್ಟೆ ಸಮೀಕ್ಷೆಗಳಲ್ಲಿ ಹೊರಬಿದ್ದಿದೆ.

ಕರ್ನಾಟಕ ಡಿಸಿಎಂ ಆರೋಪ ಕುರಿತು ತನಿಖೆ: ದೇವಸ್ವಂ ಸಚಿವ ರಾಧಾಕೃಷ್ಣನ್

ಪ್ರಾಣಿ ಬಲಿ ನಡೆದಿಲ್ಲ: ಕೇರಳ ಸರ್ಕಾರ

ತಿರುವನಂತಪುರ(ಪಿಟಿಐ): ಕರ್ನಾಟಕ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹೇಳಿಕೊಂಡಿರುವಂತೆ ರಾಜ್ಯದ ಕಣ್ಣೂರು ಜಿಲ್ಲೆಯ ತಳಿಪರಂಬದಲ್ಲಿರುವ ದೇವಸ್ಥಾನದಲ್ಲಿ ಯಾವುದೇ ಪ್ರಾಣಿ ಬಲಿ ನಡೆದಿಲ್ಲ ಎಂದು ಕೇರಳ ಸರ್ಕಾರ ಶನಿವಾರ ಹೇಳಿದೆ.

'ರಾಜ್ಯ ಸರ್ಕಾರ, ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ನನ್ನ ವಿರುದ್ಧ ತಳಿಪರಂಬ ಎಂಬಲ್ಲಿರುವ ರಾಜರಾಜೇಶ್ವರ ದೇವಸ್ಥಾನದಲ್ಲಿ ಪ್ರಾಣಿ ಬಲಿ ಕೊಡಲಾಗಿದೆ' ಎಂದು ಕರ್ನಾಟಕ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಈಚೆಗೆ ಆರೋಪಿಸಿದ್ದರು. ಈ ಹಿನ್ನೆಲೆಯಲ್ಲಿ ಕೇರಳ ಸರ್ಕಾರ ಈ ಮಾತು ಹೇಳಿದೆ.

'ತಳಿಪರಂಬ ದೇವಸ್ಥಾನದಲ್ಲಿ ಪ್ರಾಣಿ ಬಲಿ ನಡೆಸಲಾಗಿದೆ ಎಂಬುದಾಗಿ ಶಿವಕುಮಾರ್ ಆರೋಪಿಸಿದ್ದಾರೆ. ಈ ಕುರಿತು ತನಿಖೆ ನಡೆಸಲಾಗಿದೆ. ಜೊತೆಗೆ, ಮಲಬಾರ್ ದೇವಸ್ವಂ ಮಂಡಳಿಯಿಂದಲೂ ಮಾಹಿತಿ ಪಡೆಯಲಾಗಿದೆ. ದೇವಸ್ಥಾನದಲ್ಲಿ ಅಥವಾ ಅದರ ಸಮೀಪ ಇಂತಹ ಯಾವುದೇ ವಿಧಿ ನಡೆದಿಲ್ಲ ಎಂಬುದಾಗಿ ಪ್ರಾಥಮಿಕ ವರದಿಯಿಂದ ತಿಳಿದುಬಂದಿದೆ' ಎಂದು ದೇವಸ್ವಂ ಸಚಿವ ಕೆ.ರಾಧಾಕೃಷ್ಣನ್ ಹೇಳಿದ್ದಾರೆ.

'ಉಪಮುಖ್ಯಮಂತ್ರಿ ಶಿವಕುಮಾರ್ ಏಕೆ ಇಂಥ ಆರೋಪ ಮಾಡಿದರು ಎಂಬುದನ್ನು ಪರಿಶೀಲಿಸಬೇಕಿದೆ. ಅವರು ಆರೋಪಿಸಿರುವಂತಹ ಘಟನೆಗಳು ರಾಜ್ಯದ ಬೇರೆಡೆ ಎಲ್ಲಿಯಾದರೂ ನಡೆದಿವೆಯೇ ಎಂಬ ಬಗ್ಗೆಯೂ ಸರ್ಕಾರ ತನಿಖೆ ನಡೆಸುತ್ತಿದೆ' ಎಂದು ಸಚಿವ ರಾಧಾಕೃಷ್ಣನ್ ಹೇಳಿದ್ದಾರೆ.

'ಪ್ರಾಣಿ ಬಲಿ ನಿಷೇಧಿಸಿ 1968ರಲ್ಲಿಯೇ ಕಾನೂನು ಜಾರಿಗೆ ತರಲಾಗಿದೆ. ಹೀಗಾಗಿ, ಇಂತಹ ಕೃತ್ಯ ನಡೆದಿರುವ ಸಾಧ್ಯತೆ ಕಡಿಮೆ' ಎಂದೂ ಅಭಿಪ್ರಾಯಪಟ್ಟಿದ್ದಾರೆ.

ಬಿಷ್ಣೋಯ್ ಗುಂಪಿನ ನಾಲ್ವರ ಬಂಧನ

ಮುಂಬೈ(ಪಿಟಿಐ): ಬಾಲಿವುಡ್ ನಟ ಸಲ್ಮಾನ್ ಖಾನ್ ಮೇಲೆ ದಾಳಿ ನಡೆಸಲು ಸಂಚು ರೂಪಿಸಿದ ಪ್ರಕರಣಕ್ಕೆ ಸಂಬಂಧಿಸಿ ಲಾರೆನ್ಸ್ ಬಿಷ್ಣೋಯ್ ಗ್ಯಾಂಗ್‌ಗೆ ಸೇರಿದ ನಾಲ್ವರನ್ನು ನವಿಮುಂಬೈ ಪೊಲೀಸರು ಬಂಧಿಸಿದ್ದಾರೆ ಎಂದು ಹಿರಿಯ ಅಧಿಕಾರಿಯೊಬ್ಬರು ಶನಿವಾರ ಹೇಳಿದ್ದಾರೆ.

ಧನಂಜಯ್ ತಾಪೆಸಿಂಗ್ ಅಲಿಯಾಸ್ ಅಜಯ್ ಕಶ್ಯಪ್, ಗೌರವ್ ಭಾಟಿಯಾ ಅಲಿಯಾಸ್ ನಹ್ಹಿ, ವಸ್ಪಿ ಖಾನ್ ಅಲಿಯಾಸ್ ವಸೀಮ್ ಚಿಕ್ನಾ ಹಾಗೂ ರಿಜ್ವಾನ್ ಖಾನ್ ಅಲಿಯಾಸ್ ಜಾವೇದ್ ಖಾನ್ ಬಂಧಿತರು.

'ಬಂಧಿತ ಈ ನಾಲ್ವರು, ಜೈಲಿನಲ್ಲಿರುವ ಲಾರೆನ್ಸ್ ಬಿಷ್ಣೋಯ್ ಹಾಗೂ ಆತನ ತಮ್ಮ ಅನ್ಮೋಲ್ ಬಿಷ್ಣೋಯ್ ಸಂಪರ್ಕದಲ್ಲಿದ್ದರು. ಈ ಸಹೋದರರ ಅಣತಿಯಂತೆ, ಸಲ್ಮಾನ್‌ಗೆ ಸೇರಿದ ಸ್ಥಳಗಳು ಹಾಗೂ ಅವರ ಫಾರ್ಮ್‌ಹೌಸ್‌ನಲ್ಲಿ ಬಂಧಿತರು ಪರಿಶೀಲನೆ ಕೈಗೊಂಡಿದ್ದರು' ಎಂದು ಅಧಿಕಾರಿ ತಿಳಿಸಿದ್ದಾರೆ.

ಪ್ರಜಾವಾಣಿ
ಪತ್ರಿಕೆ ಚಂದಾದಾರಿಕೆ/ವಿತರಣೆಗೆ ಸಂಬಂಧಿಸಿದ ಸಮಸ್ಯೆಗಳಿಗೆ ಸಂಪರ್ಕಿಸಿ
(ವಿಳಂಬವಾಗಿ ಪತ್ರಿಕೆ ತಲುಪುವುದು, ಪತ್ರಿಕೆ ತಲುಪದೇ ಇರುವುದು, ನಿಯಮಿತವಾಗಿ ಪತ್ರಿಕೆ ಪೂರೈಕೆ ಆಗದಿರುವುದು)
: 9008366666
: support@deccanherald.co.in

ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಯೂನಿವರ್ಸಿಟಿ, ಬೆಂಗಳೂರು
No. BASEU/ENG/14/2022 Date: 31-05-2024
ಟೆಂಡರ್ ಪ್ರಕಟಣೆ
ಹಣಕಾಸು ಅಧಿಕಾರಿಗಳು, ಡಾ. ಬಿ.ಆರ್. ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ವಿಶ್ವವಿದ್ಯಾಲಯ, ಬೆಂಗಳೂರು ರವರು ವಿಶ್ವವಿದ್ಯಾಲಯದ ಉಪಯೋಗಕ್ಕಾಗಿ **3 ಸಂಖ್ಯೆಯ ಹವಾನಿಯಂತ್ರಿತ ಕಾರುಗಳನ್ನು, ಒಂದು ವರ್ಷದ ಅವಧಿಗೆ ಬಾಡಿಗೆಗೆ ಪಡೆಯಲು** ಟೆಂಡರ್ ಆಹ್ವಾನಿಸಲಾಗಿದೆ. **Tender No. BASE/2024-25/SE0005 Call-4.** ಅಂದಾಜು ಮೊತ್ತ **ರೂ: 15,12,000/–.** ಇ.ಎಂ.ಡಿ. **ರೂ. 37,800/–ಗಳು.** ಟೆಂಡರ್ ಅನ್ನು ದಿನಾಂಕ: **15.06.2024ರ ಸಂಜೆ 5.00 ಗಂಟೆಯೊಳಗೆ** ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ವೆಬ್‌ಸೈಟ್ **(https://kppp.karnataka.gov.in)** ಮುಖಾಂತರ ಸಲ್ಲಿಸಬೇಕು. ಟೆಂಡರ್ ಅನ್ನು ರದ್ದುಪಡಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿರುತ್ತದೆ. ಹೆಚ್ಚಿನ ವಿವರಗಳನ್ನು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ವೆಬ್‌ಸೈಟ್ **(https://kppp.karnataka.gov.in)** ನಲ್ಲಿ ಪಡೆಯಬಹುದಾಗಿರುತ್ತದೆ.
DIPR/CP/YC/173/2024-25 ಸಹಿ/– ಹಣಕಾಸು ಅಧಿಕಾರಿಗಳು
ಸಂಪರ್ಕಿಸಿ: ಜ್ಞಾನ ಭಾರತಿ ಮುಖ್ಯ ರಸ್ತೆ, ನಾಗರಭಾವಿ ಅಂಚೆ, ಬೆಂಗಳೂರು, ಕರ್ನಾಟಕ – 560072 ಸಹಾಯವಾಣಿ: 080–29557767 ಇ–ಮೇಲ್: info@base.ac.in

ಕರ್ನಾಟಕ ಸರ್ಕಾರ – ಜಿಲ್ಲಾ ಪಂಚಾಯಿತಿ, ಶಿವಮೊಗ್ಗ
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಶಿವಮೊಗ್ಗ
Ph: 08182–222936 E–Mail: zpedsmg@yahoo.com
ಕಾಇಂ/ಪಂರಾಇವಿ/ಶಿ/ಹೊಗುಟೆಂ/2024–25/177 ದಿ:30.05.2024
ಕೆ.ಪಿ.ಪಿ.ಪಿ ಟೆಂಡರ್ ಪ್ರಕಟಣೆ
ಶಿವಮೊಗ್ಗ ಜಿಲ್ಲೆಯ 2024–25 ನೇ ಸಾಲಿಗೆ ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಶಿವಮೊಗ್ಗ ಹಾಗೂ ಉಪವಿಭಾಗ ಕಛೇರಿಗಳಲ್ಲಿ ಅಗತ್ಯವಿರುವ ಕಂಪ್ಯೂಟರ್ ಆಪರೇಟರ್ ಮತ್ತು ಡಿ ಗ್ರೂಪ್ ನೌಕರರುಗಳ ಹುದ್ದೆಗಳ ಸಿಬ್ಬಂದಿ ಸೇವೆಯನ್ನು ಹೊರಸಂಪನ್ಮೂಲ ಏಜೆನ್ಸಿಯ ಮುಖಾಂತರ ಎರಡು ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಕೆ.ಪಿ.ಪಿ.ಪಿ. ಮೂಲಕ ಟೆಂಡರ್ ಅಹ್ವಾನಿಸಲಾಗಿದೆ. ಇಚ್ಛೆಯುಳ್ಳ ಸಂಸ್ಥೆಯವರು ಟೆಂಡರ್‌ಗಳನ್ನು ಆನ್‌ಲೈನ್ ಮೂಲಕ ಸಲ್ಲಿಸುವ ಕೊನೆಯ ದಿನಾಂಕ: 15.06.2024 ರ ಸಂಜೆ: 4.30 ಗಂಟೆವರೆಗೆ ಕೆ.ಪಿ.ಪಿ.ಪಿ. ಪೋರ್ಟಲ್ https://kppp.karnataka.gov.in/ ಮುಖಾಂತರ ಟೆಂಡರ್‌ನಲ್ಲಿ ಭಾಗವಹಿಸಬಹುದು ಹಾಗೂ ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು.
ಸಹಿ/– ಕಾರ್ಯಪಾಲಕ ಇಂಜಿನಿಯರ್, ಪಂ.ರಾ.ಇಂ ವಿಭಾಗ, ಶಿವಮೊಗ್ಗ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/04/06/24–25/37

ಕರ್ನಾಟಕ ಸರ್ಕಾರ
(ಮೂಲಸೌಲಭ್ಯ ಅಭಿವೃದ್ಧಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ)
ಕರ್ನಾಟಕ ಜಲಸಾರಿಗೆ ಮಂಡಳಿ
ಮೆರೀನ್ ಇಂಜಿನೀಯರ್‌ರವರ ಕಛೇರಿ, ಬೈತ್‌ಖೋಲ್, ಕಾರವಾರ–581302
ಕ್ರ.ಸಂ: ಎಂಇ/ಜಿಎನ್‌ಎಲ್/ಸಿಆರ್–03/2023 ದಿನಾಂಕ: 30.05.2024
ಟೆಂಡರ್ ಪ್ರಕಟಣೆ 2ನೇ ಕರೆ
(ಇ–ಪೊಕ್ಯೂರ್‌ಮೆಂಟ್‌ನಲ್ಲಿ ಮಾತ್ರ) (ದ್ವಿ–ಲಕೋಟೆ ಪದ್ಧತಿಯಲ್ಲಿ)
ಈ ಕೆಳಗಿನ ಕಾಮಗಾರಿಯನ್ನು ಕೈಗೊಳ್ಳಲು ಇ–ಪೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಈ ಕೆಳಗೆ ಸಹಿ ಮಾಡಿರುವವರಿಂದ ಟೆಂಡರ್ ಕರೆಯಲಾಗಿದೆ. ಸದರಿ ಟೆಂಡರ್ ಪ್ರಕಟಣೆ ಬಗ್ಗೆ **https://kppp.karnataka.gov.in website** ನಲ್ಲಿ ಹೆಚ್ಚಿನ ಮಾಹಿತಿ ಪಡೆದುಕೊಂಡು ಈ ಕೆಳಗಿನ ಕೆಲಸದಲ್ಲಿ ಹೆಸರಾಂತ, ವಿಶ್ವಾಸಾರ್ಹ, ವ್ಯವಹಾರಕುಶಲ ಹಾಗೂ ಅನುಭವ ಹೊಂದಿರುವ ಆಸಕ್ತ ಗುತ್ತಿಗೆದಾರರು/ಸಂಸ್ಥೆಗಳಿಂದ/ಶಿಪ್ಪಿಂಗ ಏಜೆನ್ಸಿಗಳಿಂದ ಕೆಳ ಸಹಿದಾರರು ಇ–ಪ್ರೊಕ್ಯೂರ್‌ಮೆಂಟ್ (KPPP) ಪೋರ್ಟಲ್ ಮುಖಾಂತರ ಈ ಟೆಂಡರನಲ್ಲಿ ಪಾಲ್ಗೊಳ್ಳಬಹುದಾಗಿದೆ. **(Tender Indent No. IDD/2023-24/SE0013/CALL-2)**
ಕಾಮಗಾರಿಯ ಹೆಸರು: (1) Providing 2 Nos. of minimum 30 Ton Bollard pull capacity each Tug service on **revenue sharing basis** for berthing and unberthing of ships and search and rescue operations for a period of 3 years at Karwar Port, Uttara Kannada round the clock (24 hrs a day) including Handling, Operation and Maintenance (HOM) charges of Tug, Fuel, Lubricants, Water, Manning Crew, Maintenance, etc., and inclusive of all applicable taxes.
Bidding Parameter is Payment of Royalty per GRT of the vessels berthed and unberthed each way subject to minimum of Rs.5000/- payable to the Karnataka Maritime Board subject to conditions mentioned in the bid document
ಇ.ಎಂ.ಡಿ: **As mentioned in bid document,** ಟೆಂಡರ್ ಬಗ್ಗೆ ಆಕ್ಷೇಪಣೆ ಮತ್ತು ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ ಹಾಗೂ ಸಮಯ: **18.06.2024 @ 17:30 hours,** ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **20.06.2024 @ 17:30 hours.**
ಆಸಕ್ತ ಗುತ್ತಿಗೆದಾರರು/ಸಂಸ್ಥೆ/ಶಿಪ್ಪಿಂಗ ಏಜೆನ್ಸಿದಾರರು ಹೆಚ್ಚಿನ ಮಾಹಿತಿ ಹಾಗೂ ಸಾಮಾನ್ಯ ವಿಚಾರಣೆಗಾಗಿ ಟೆಂಡರ್‌ನ ಆಕ್ಷೇಪಣೆ ಮತ್ತು ಸ್ಪಷ್ಟೀಕರಣದ ಕೊನೆಯ ದಿನಾಂಕದೊಳಗೆ ಈ ಕಛೇರಿಯ **ದೂರವಾಣಿ ಸಂ.: 08382–221402** ಮತ್ತು **ಇ–ಮೇಲ್: marineengineerkwr@gmail.com** ಕ್ಕೆ ಕಛೇರಿ ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ.
ಸಹಿ/– ಮೆರೀನ್ ಇಂಜಿನೀಯರ್, ಕಾರವಾರ
DIPR/ADK/KSMCA/16/24-25 dt. 01.06.2024

1.ನಗರದ ಸಂಪಿಗೆ ರಸ್ತೆಯಲ್ಲಿ ಮಳೆ ಸುರಿಯುತ್ತಿದ್ದಾಗ ಕೊಡೆ ಹಿಡಿದು ಬಸ್‌ಗಾಗಿ ಕಾಯುತ್ತಿರುವ ಜನರು 2.ಮಲ್ಲೇಶ್ವರದಲ್ಲಿ ಮಹಿಳೆಯೊಬ್ಬರು ತಾನು ಕರೆದೊಯ್ಯುತ್ತಿದ್ದ ಅಂಗವಿಕಲರೊಬ್ಬರಿಗೆ ಫ್ಲೆಕ್ಸ್ ಬಳಸಿ ಮಳೆಯಿಂದ ರಕ್ಷಣೆ ನೀಡಿರುವುದು

– ಪ್ರಜಾವಾಣಿ ಚಿತ್ರಗಳು

ನಗರದ ಹಲವು ರಸ್ತೆಗಳಲ್ಲಿ ತುಂಬಿದ ನೀರು; ವಾಹನ ಸಂಚಾರಕ್ಕೆ ತೊಡಕು

ವಾರದ ನಂತರ ತಂಪೆರೆದ ಭಾರಿ ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಲವು ದಿನಗಳ ವಿರಾಮದ ಬಳಿಕ ನಗರದಲ್ಲಿ ಶನಿವಾರ ಗುಡುಗು, ಮಿಂಚು ಸಹಿತ ಧಾರಾಕಾರವಾಗಿ ಮಳೆಯಾಗಿದೆ.

ನೀರು ಹರಿದು ಹೋಗಲು ಸರಿಯಾದ ವ್ಯವಸ್ಥೆ ಇಲ್ಲದ ಕಾರಣ ಅನೇಕ ಕಡೆಗಳಲ್ಲಿ ರಸ್ತೆಯೇ ಕಾಲುವೆಯಂತಾಯಿತು. ಇದರಿಂದ ವಾಹನ ಸಂಚಾರಕ್ಕೆ ತೊಡಕಾಯಿತು. ಕೆಲವು ಕಡೆಗಳಲ್ಲಿ ಮನೆಗಳಿಗೆ ನೀರು ನುಗ್ಗಿದೆ.

ಪೀಣ್ಯ ಕೈಗಾರಿಕಾ ವಲಯ, ದೊಡ್ಡನೆಕುಂದಿ, ವಿದ್ಯಾಪೀಠ, ರಾಜಾಜಿನಗರ, ಎಚ್‌ಎಎಲ್, ಹೊರಮಾವು, ಎಂ.ಜಿ. ರಸ್ತೆ, ಸುಬ್ರಹ್ಮಣ್ಯ ನಗರ, ಶಿವಾಜಿನಗರ, ಆರ್‌.ಟಿ.ನಗರ ಸೇರಿದಂತೆ ನಗರದ ವಿವಿಧ ಕಡೆಗಳಲ್ಲಿ ಉತ್ತಮ ಮಳೆಯಾಗಿದೆ. ನಗರದ ಹಲವು ಪ್ರದೇಶಗಳಲ್ಲಿ ಮಧ್ಯರಾತ್ರಿಯವರಗೂ ಮಳೆ ಮುಂದುವರಿದಿತ್ತು.

ಹೆಬ್ಬಾಳ ಪಿ.ಎಸ್ ಬಳಿ ವಾಹನ ರಸ್ತೆಗೆ ಉರುಳಿ ಬಿದ್ದಿದ್ದರಿಂದ ವಾಹನ ಸಂಚಾರಕ್ಕೆ ತೊಂದರೆ ಉಂಟಾಯಿತು. ಹೆಬ್ಬಾಳದ ಮೇಲಿನ ರ‍್ಯಾಂಪ್‌ನಲ್ಲಿ ನೀರು ನಿಂತು ಸಮಸ್ಯೆ ಉಂಟಾಯಿತು. ಇಲ್ಲಿನ ಪಾದಚಾರಿ ಅಂಡರ್‌ಪಾಸ್‌ನಲ್ಲಿಯೂ ನೀರು ನಿಂತಿತ್ತು. ಇಲ್ಲಿನ ಸಮಸ್ಯೆಗಳಿಂದಾಗಿ ವಿಮಾನ ನಿಲ್ದಾಣ ಕಡೆಗೆ ಹೋಗುವ ವಾಹನಗಳು, ವೀರಣ್ಣ ಪಾಳ್ಯ ಕಡೆಗೆ ಸಂಚರಿಸುವ ವಾಹನಗಳು ಪರದಾಡುವಂತಾಯಿತು. ಕೆಂಪಾಪುರ ಬಳಿ ರಸ್ತೆಯಲ್ಲಿಯೇ ನೀರು ನಿಂತಿದ್ದರಿಂದ ವಾಹನಗಳು ನಿಧಾನವಾಗಿ ಚಲಿಸಿದವು.

ಗೊರಗುಂಟೆಪಾಳ್ಯ ಸುತ್ತಮುತ್ತ ಭಾರಿ ಮಳೆಯಾಗಿದ್ದರಿಂದ ತುಮಕೂರು ರಸ್ತೆಯಲ್ಲಿ ವಾಹನಗಳು ಸಾಲುಗಟ್ಟಿ ನಿಂತಿದ್ದರಿಂದ ಕೆಲವು ಗಂಟೆಗಳಷ್ಟು ಹೊತ್ತು ಸಂಚಾರದಟ್ಟಣೆ ಉಂಟಾಯಿತು.

ವೀರಸಂದ್ರ ಜಂಕ್ಷನ್‌ನಿಂದ ಹೊಸೂರು ಕಡೆಗೆ, ಹುಣಸೇಮಾರನ ಹಳ್ಳಿಯಿಂದ ವಿಮಾನ ನಿಲ್ದಾಣ ರಸ್ತೆ ಕಡೆಗೆ, ರೈನ್‌ಬೊ ಜಂಕ್ಷನ್‌ನಿಂದ ಕಾರ್ತಿಕನಗರದ ಕಡೆಗೆ, ವಿಂಡ್ಸರ್ ಮ್ಯಾನರ್ ಜಂಕ್ಷನ್‌ನಿಂದ ಪ್ಯಾಲೇಸ್ ಗುಟ್ಟಹಳ್ಳಿ ಕಡೆಗೆ ಹೋಗುವ ವಾಹನಗಳು ನಿಧಾನವಾಗಿ ಚಲಿಸಿದವು.

ಪಣತ್ತೂರು ರೈಲ್ವೆ ಸೇತುವೆ ಜಲಾವೃತ ವಾಗಿದ್ದು, ಸಂಚಾರಕ್ಕೆ ತೀವ್ರ ಅಡಚಣೆ ಉಂಟಾಗಿದೆ. ಕೆಂಗೇರಿಯಲ್ಲಿ ವಾಹನ ಕೆಟ್ಟು ನಿಂತಿರುವುದರಿಂದ ಗೋಪಾಲನ್ ಮಾಲ್ ಕಡೆಗೆ ಹೋಗುವ ವಾಹನಗಳಿಗೆ ತೊಂದರೆಯಾಯಿತು. ಬಿಇಎಲ್ ಸರ್ಕಲ್‌ನಲ್ಲಿ ರಸ್ತೆಯಲ್ಲಿ ನೀರು ನಿಂತು ಕೊಳದಂತಾಗಿತ್ತು. ಬಿನ್ನಿಮಿಲ್ ಜಂಕ್ಷನ್‌ನಲ್ಲಿ ನೀರು ನಿಂತಿದ್ದರಿಂದ ಮಾಗಡಿ ರಸ್ತೆ ಕಡೆಗೆ ವಾಹನಗಳು ನಿಧಾನಗತಿಯಲ್ಲಿ ಸಂಚರಿಸಿದವು.

ಚೂಡಸಂದ್ರ ಸಿಗ್ನಲ್ ಬಳಿ ಮರದ ಕೊಂಬೆ ಬಿದ್ದ ಕಾರಣ ರಾಯಸಂದ್ರ ಸಿಗ್ನಲ್‌ನಲ್ಲಿ ವಾಹನ ಸಂಚಾರಕ್ಕೆ ತೊಡಕುಂಟಾಯಿತು. ರಾಜೀವ್‌ಗಾಂಧಿ ವೃತ್ತದ ಬಳಿ ನೀರು ನಿಂತಿದ್ದರಿಂದ ಮಂತ್ರಿಮಾಲ್ ಕಡೆಗೆ ವಾಹನಗಳು ಸಂಚರಿಸಲು ಕಷ್ಟಪಟ್ಟವು. ಬನ್ನೇರುಘಟ್ಟದ ರಸ್ತೆಯಲ್ಲಿಯೂ ನೀರು ರಸ್ತೆಯಲ್ಲಿಯೇ ಹರಿಯಿತು.

ಕೆಂಪಾಪುರ ಬಳಿ ರಸ್ತೆಯನ್ನು ಮಳೆನೀರು ಆವರಿಸಿರುವುದು

ಪೂರ್ವಸಿದ್ಧತೆ ಮಾಡಿಕೊಳ್ಳದ ಬಿಬಿಎಂಪಿ

ಈ ವರ್ಷ ಮಳೆಗಾಲದಲ್ಲಿ ಅನಾಹುತವಾಗದಂತೆ ಕ್ರಮ ವಹಿಸಲಾಗಿದೆ ಎಂದು ಬಿಬಿಎಂಪಿ ಅಧಿಕಾರಿಗಳು ಪದೇ ಪದೇ ಹೇಳಿದ್ದರೂ, ಮಳೆ ಬಂದಾಗ ಸಮಸ್ಯೆಗಳು ಮುಂದುವರಿದಿವೆ.

ರಸ್ತೆಗಳಲ್ಲಿ ಮಳೆನೀರು ನಿಲ್ಲದಂತೆ ಎಲ್ಲ ರೀತಿಯ ಕ್ರಮಗಳನ್ನು ಕೈಗೊಳ್ಳಲಾಗಿದೆ ಎಂದು ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಹೇಳುತ್ತಲೇ ಇದ್ದಾರೆ. ಆದರೆ, ಶನಿವಾರ ಮಧ್ಯಾಹ್ನದಿಂದ ರಾತ್ರಿವರೆಗೆ ನಗರದ ರಸ್ತೆಗಳು ಮಳೆ ನೀರಿನಿಂದ ತುಂಬಿಹೋಗಿದ್ದವು.

ಚರಂಡಿಗಳಲ್ಲಿ ನೀರು ಹರಿಯುವ ಬದಲು ಬಹುತೇಕ ಕಡೆಗಳಲ್ಲಿ ರಸ್ತೆಯಲ್ಲಿಯೇ ನೀರು ಹರಿಯುತ್ತಿದೆ. ರಾಮಕೃಷ್ಣ ನಗರ ಸಹಿತ ಹಲವು ಪ್ರದೇಶಗಳಲ್ಲಿ ಮನೆಗಳಿಗೆ ನೀರು ನುಗ್ಗಿದೆ. ಬಿಬಿಎಂಪಿ ಸರಿಯಾದ ಕ್ರಮ ವಹಿಸದೇ ತೊಂದರೆ ಉಂಟಾಗಿದೆ ಎಂದು ಸ್ಥಳೀಯರು ದೂರಿದ್ದಾರೆ.

ಎಲ್ಲಿ ಹೆಚ್ಚು ಮಳೆ? (ಸೆಂ.ಮೀ.ಗಳಲ್ಲಿ)

ಪೀಣ್ಯ ಕೈಗಾರಿಕೆ ಪ್ರದೇಶ	7.6	ಎಚ್‌ಎಎಲ್ ವಿಮಾನ ನಿಲ್ದಾಣ	4.1
ಹೊರಮಾವು	6.0	ಯಲಹಂಕ	4.05
ವಿದ್ಯಾಪೀಠ	5.85	ವಿದ್ಯಾರಣ್ಯಪುರ	4.0
ಹೇರೋಹಳ್ಳಿ	5.6	ದೊರೆಸಾನಿಪಾಳ್ಯ	3.85
ಹಂಪಿನಗರ	5.6	ಪುಲಕೇಶಿನಗರ	3.75
ದೊಡ್ಡನೆಕ್ಕುಂದಿ	5.35	ಕೋಣನಕುಂಟೆ	3.65
ಕೊಡಿಗೇಹಳ್ಳಿ	4.95	ಉತ್ತರಹಳ್ಳಿ	3.6
ಜಕ್ಕೂರು	4.9	ಮಾರತ್‌ಹಳ್ಳಿ	3.55
ನಾಯಂಡಹಳ್ಳಿ	4.8	ಬಾಗಲಕುಂಟೆ	3.55
ರಾಜೇಶ್ವರಿನಗರ	4.7	ಕೆಂಗೇರಿ	3.45
ಚೊಕ್ಕಸಂದ್ರ	4.6	ನಂದಿನಿಲೇಔಟ್	3.4
ವಿಶ್ವನಾಥ ನಾಗೇನಹಳ್ಳಿ	4.45	ಚೌಡೇಶ್ವರಿನಗರ	3.1
ಹೆಮ್ಮಿಗೆಪುರ	4.25	ಕೂನೇನ ಅಗ್ರಹಾರ	3.1
ಮಾರುತಿ ಮಂದಿರ	4.2		

ಒಂಬತ್ತು ಮರಗಳು ಧರೆಗೆ

ನಗರದಲ್ಲಿ ಶನಿವಾರ ಮಧ್ಯಾಹ್ನದಿಂದ ಸುರಿದ ಭಾರಿ ಮಳೆಗೆ ಹಲವು ಪ್ರದೇಶಗಳಲ್ಲಿ ಒಂಬತ್ತು ಮರಗಳು ಧರೆಗುರುಳಿವೆ. 32 ಸ್ಥಳಗಳಲ್ಲಿ ಮರದ ಕೊಂಬೆಗಳು ಉರುಳಿವೆ.

ರಾಜರಾಜೇಶ್ವರಿನಗರ, ದಕ್ಷಿಣ ಹಾಗೂ ಪೂರ್ವ ವಲಯದಲ್ಲಿ ತಲಾ ಎರಡು ಮರಗಳು ಉರುಳಿ ಬಿದ್ದಿದ್ದರೆ, ದಕ್ಷಿಣ, ದಾಸರಹಳ್ಳಿ, ಮಹದೇವಪುರದಲ್ಲಿ ತಲಾ ಒಂದು ಮರ ಧರೆಗುರುಳಿದೆ.

ಮನೆಗಳಿಗೆ ನೀರು: ಬೊಮ್ಮನಹಳ್ಳಿ ವಲಯದ ಸಾರಕ್ಕಿ ಸಿಗ್ನಲ್ ರಾಮಕೃಷ್ಣನಗರದ ಬಳಿ ಜಲಮಂಡಳಿ ಪೈಪ್ ಲೈನ್ ಕಾಮಗಾರಿಯಿಂದಾಗಿ ಕಲ್ವರ್ಟ್ ಬ್ಲಾಕ್ ಆಗಿದ್ದ ಪರಿಣಾಮ ಸಾಕಷ್ಟು ಮನೆಗಳಿಗೆ ನೀರು ನುಗ್ಗಿದೆ.

‘ಮರಣಪೂರ್ವ ಹೇಳಿಕೆಯೇ ಅಪರಾಧ ನಿರ್ಣಯಕ್ಕೆ ಆಧಾರ’

ನವದೆಹಲಿ(ಪಿಟಿಐ): ಮರಣಕ್ಕೂ ಮುನ್ನ ವ್ಯಕ್ತಿ ನೀಡುವ ಹೇಳಿಕೆ ಪ್ರಾಮಾಣಿಕವಾಗಿದ್ದಲ್ಲಿ ಅದು ನ್ಯಾಯಾಲಯದ ವಿಶ್ವಾಸ ಹೆಚ್ಚಿಸುತ್ತದೆ. ಯಾವುದೇ ದೃಢೀಕರಣವಿಲ್ಲದೆಯೇ, ಇಂತಹ ವಿಶ್ವಾಸಾರ್ಹ ‘ಮರಣಪೂರ್ವ ಹೇಳಿಕೆಯನ್ನೇ ಅಪರಾಧ ನಿರ್ಣಯಕ್ಕೆ ಆಧಾರವಾಗಿ ಪರಿಗಣಿಸಬಹುದು ಎಂದು ಸುಪ್ರೀಂ ಕೋರ್ಟ್ ಹೇಳಿದೆ.

‘ನ್ಯಾಯಾಲಯವು ಮರಣಪೂರ್ವ ಹೇಳಿಕೆಯನ್ನು ಕೂಲಂಕಷವಾಗಿ ಪರಿಶೀಲಿಸಬೇಕು. ಇಂತಹ ಹೇಳಿಕೆಯು ದೃಢವಾಗಿಯು, ನಂಬಲರ್ಹವಾಗಿಯೂ ಹಾಗೂ ಯಾರದೋ ನಿರ್ದೇಶನವಿಲ್ಲದೇ ನೀಡಲಾಗಿದೆ ಎಂಬುದನ್ನು ಖಾತ್ರಿಪಡಿಸಿಕೊಳ್ಳಬೇಕು’ ಎಂದು ನ್ಯಾಯಮೂರ್ತಿಗಳಾದ ಅಭಯ್ ಎಸ್.ಓಕಾ ಹಾಗೂ ಉಜ್ಜಲ್ ಭುಯಾನ್ ಅವರಿದ್ದ ನ್ಯಾಯಪೀಠ ಹೇಳಿದೆ.

ಪತ್ನಿಯನ್ನು ಕೊಲೆ ಮಾಡಿದ್ದ, ಸೇನೆಯ ಮಾಜಿ ಸಿಬ್ಬಂದಿ ಅಪರಾಧಿ ಎಂದು ತೀರ್ಮಾನಿಸಿದ್ದನ್ನು ಎತ್ತಿ ಹಿಡಿದು ಮೇ 15ರಂದು ಹೊರಡಿಸಿರುವ ಆದೇಶದಲ್ಲಿ ನ್ಯಾಯಪೀಠ ಈ ಮಾತು ಹೇಳಿದೆ.

ಮಹಾರಾಷ್ಟ್ರದ ಬೀಡ್ ಜಿಲ್ಲೆಯಲ್ಲಿ 22 ವರ್ಷಗಳ ಹಿಂದೆ ಈ ಕೊಲೆ ನಡೆದಿತ್ತು. ಸೇನೆಯ ಮಾಜಿ ಸಿಬ್ಬಂದಿಯ ಪತ್ನಿ ಪೊಲೀಸ್ ಕಾನ್‌ಸ್ಟೆಬಲ್ ಆಗಿದ್ದರು.

‘ಯಾವುದೇ ವ್ಯಕ್ತಿ ನೀಡುವ ಮರಣಪೂರ್ವ ಹೇಳಿಕೆಯನ್ನು ಒಪ್ಪಿಕೊಳ್ಳುವ ಮುನ್ನ, ಆ ಹೇಳಿಕೆಯನ್ನು ಸ್ವಯಂಪ್ರೇರಣೆಯಿಂದ ನೀಡಲಾಗಿದೆ ಎಂಬ ಬಗ್ಗೆ ನ್ಯಾಯಾಲಯ ತೃಪ್ತಿ ವ್ಯಕ್ತಪಡಿಸಬೇಕು. ಈ ಎಲ್ಲ ಅಂಶಗಳು ದೃಢಪಟ್ಟಾಗ, ಅಂತಹ ಹೇಳಿಕೆಗೆ ಹೆಚ್ಚು ಮಾನ್ಯತೆ ಸಿಗುತ್ತದೆ. ಈ ಹೇಳಿಕೆಯೇ ಅಪರಾಧ ನಿರ್ಣಯಕ್ಕೆ ಆಧಾರವಾಗುತ್ತದೆ’ ಎಂದೂ ನ್ಯಾಯಪೀಠ ಹೇಳಿದೆ.

ವಿಚಾರಣಾ ನ್ಯಾಯಾಲಯವು ಸೇನೆಯ ಮಾಜಿ ಸಿಬ್ಬಂದಿ ತಪ್ಪಿತಸ್ಥ ಎಂದು 2008ರಲ್ಲಿ ಆದೇಶಿಸಿತ್ತು. ಆತನಿಗೆ ಜೀವಾವಧಿ ಶಿಕ್ಷೆ ಹಾಗೂ ₹25 ಸಾವಿರ ದಂಡ ವಿಧಿಸಿತ್ತು.

ವಿಚಾರಣಾ ನ್ಯಾಯಾಲಯದ ಆದೇಶವನ್ನು ಬಾಂಬೆ ಹೈಕೋರ್ಟ್ ಎತ್ತಿ ಹಿಡಿದಿತ್ತು. ಈ ಆದೇಶ ಪ್ರಶ್ನಿಸಿ ಪತಿ ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ್ದ ಸುಪ್ರೀಂ ಕೋರ್ಟ್, ಶಿಕ್ಷೆಯನ್ನು ಅಮಾನತಿನಲ್ಲಿ ಇಟ್ಟು, 2016ರಲ್ಲಿ ಜಾಮೀನು ನೀಡಿತ್ತು.

ಆದರೆ, ಆತನ ಪತ್ನಿ ನೀಡಿದ್ದ ಮರಣಪೂರ್ವ ಹೇಳಿಕೆಯನ್ನು ಒಪ್ಪಿಕೊಂಡಿದ್ದ ಸುಪ್ರೀಂ ಕೋರ್ಟ್, ಅದನ್ನೇ ಸಾಕ್ಷ್ಯವಾಗಿ ಪರಿಗಣಿಸಿತ್ತು.

‘ಮರಣಪೂರ್ವ ಹೇಳಿಕೆಯನ್ನು ಸೂಕ್ಷ್ಮವಾಗಿ ಪರಿಶೀಲಿಸಿದ ನಂತರ, ಈ ಪ್ರಕರಣದಲ್ಲಿ ಅರ್ಜಿದಾರ ಅಪರಾಧ ಎಸಗಿರುವುದು ಸ್ಪಷ್ಟವಾಗಿದ್ದು, ಆತ ತಪ್ಪಿತಸ್ಥ ಎಂಬುದಾಗಿ ಯಾವುದೇ ಸಂಶಯಕ್ಕೆ ಎಡೆಮಾಡದಂತೆ ಸಾಬೀತುಪಡಿಸಲಾಗಿದೆ’ ಎಂದು ಸುಪ್ರೀಂಕೋರ್ಟ್ ಮೇ 15ರಂದು ನೀಡಿದ ಆದೇಶದಲ್ಲಿ ಹೇಳಿದೆ.

ಅಲ್ಲದೇ, ಎರಡು ವಾರದ ಒಳಗಾಗಿ ಶರಣಾಗಿ, ಶಿಕ್ಷೆ ಅನುಭವಿಸುವಂತೆಯೂ ಅರ್ಜಿದಾರಗೆ ನಿರ್ದೇಶನ ನೀಡಿದೆ

ತನಿಖೆ ಹಂತದಲ್ಲಿರುವ ಹಗರಣಗಳ ಮಾಹಿತಿ ನೀಡಿ: ರಾಜ್ಯಪಾಲ

ಕೋಲ್ಕತ್ತ (ಪಿಟಿಐ): ತನಿಖೆಯ ವಿವಿಧ ಹಂತದಲ್ಲಿರುವ ಎಲ್ಲಾ ಹಗರಣಗಳ ಕುರಿತು ಸಮಗ್ರ ವರದಿ ನೀಡುವಂತೆ ಪಶ್ಚಿಮ ಬಂಗಾಳ ರಾಜ್ಯಪಾಲ ಸಿ.ವಿ. ಆನಂದ್ ಬೋಸ್ ಅವರು ರಾಜ್ಯದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೆ ಪತ್ರ ಬರೆದಿದ್ದಾರೆ ಎಂದು ರಾಜಭವನ ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದೆ.

ಸಂವಿಧಾನದಡಿ ನೀಡಲಾಗಿರುವ ಅವಕಾಶ ಉಲ್ಲೇಖಿಸಿ ಈ ಪತ್ರ ಬರೆದಿದ್ದಾರೆ. ಆಡಳಿತ ಮತ್ತು ಉದ್ದೇಶಿತ ಶಾಸನಗಳ ಕುರಿತು ಸಚಿವ ಸಂಪುಟ ತೆಗೆದುಕೊಳ್ಳುವ ನಿರ್ಧಾರಗಳನ್ನು ಎಲ್ಲಾ ರಾಜ್ಯಗಳ ಮುಖ್ಯಮಂತ್ರಿಗಳೂ ತಮ್ಮ ರಾಜ್ಯಪಾಲರಿಗೆ ತಿಳಿಸಬೇಕು. ಶಾಲಾ ಸಿಬ್ಬಂದಿ ನೇಮಕಾತಿ ಮತ್ತು ಪಡಿತರ ವಿತರಣೆ ಹಗರಣ ಹಾಗೂ ಜಾನುವಾರು ಕಳ್ಳಸಾಗಣೆ, ಕಲ್ಲಿದ್ದಲು ಕಳ್ಳತನ ಪ್ರಕರಣಗಳೂ ಸೇರಿ ರಾಜ್ಯದಲ್ಲಿ ನಡೆದಿರುವ ಎಲ್ಲಾ ಭ್ರಷ್ಟಾಚಾರ ಪ್ರಕರಣಗಳ ತನಿಖೆ ಕುರಿತ ಮಾಹಿತಿ ನೀಡಬೇಕು ಎಂದು ಅವರು ಕೇಳಿದ್ದಾರೆ.

ರಾಜ್ಯದ ಆಡಳಿತದ ಬಹು ಹಂತಗಳಲ್ಲಿ ಭ್ರಷ್ಟಾಚಾರ ಹಾಸುಹೊಕ್ಕಾಗಿರುವುದಕ್ಕೆ ಈ ಪ್ರಕರಣಗಳು ನಿದರ್ಶನಗಳಾಗಿವೆ ಎಂದು ರಾಜಭವನ ಹೇಳಿದೆ.

ಉದಕಮಂಡಲ ರೇಸ್

ಡೆಡಿಕೇಟ್ ಗೆಲ್ಲುವ ನಿರೀಕ್ಷೆ

ನೀಲ್‌ಗಿರೀಸ್ ಗೋಲ್ಡ್ ಕಪ್ ಭಾನುವಾರದ ಊದಕಮಂಡಲ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಡೆಡಿಕೇಟ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಬೆಳಿಗ್ಗೆ 10.30 ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಗ್ರೇಸ್ 1, ಸಿಯಾನ್ 6, ಗ್ಯಾಂಡೊಲ್ಫಿನಿ 2
2ನೇ ರೇಸ್: ಸೇಫ್ಟಿ 3, ಲೆಬುವಾ 1, ಸ್ಟೋಲನ್ ಗ್ಲಾನ್ಸ್ 6
3ನೇ ರೇಸ್: ಫಾರೆಸ್ಟ್ ಫ್ರಾಗ್ರಾನ್ಸ್ 1, ರಾಯಲ್ ಚಿವಾಲ್ರಿ 5, ಜೂಲಿಯೆಟ್ ರೋಸ್ 8
4ನೇ ರೇಸ್: ಡೆಡಿಕೇಟ್ 6, ನಾಟಿ ಡ್ಯಾನ್ಸರ್ 3, ಸಂಥಿಂಗ್ ರಾಯಲ್ 2
5ನೇ ರೇಸ್: ಬಥಾರ 8, ಪ್ರೊಪೋಸ್ಡ್ 2, ಸ್ಪಿರಿಟ್ ಆಫ್ ದಿ ರೋಸ್ 3
6ನೇ ರೇಸ್: ಸೀಕಿಂಗ್ ದಿ ಸ್ಟಾರ್ಸ್ 9, ಸುಪ್ರೀಮ್ ಗ್ಲ್ಯಾಡಿಯೂರ್ 2, ನಾಟಿ ವಂಡರ್ 3
7ನೇ ರೇಸ್: ಅಮೇಜಿಂಗ್ ಅಟ್ರ್ಯಾಕ್ಷನ್ 2, ಮಾರ್ಕ್ವಿಟ 6, ಅಂಗವಾಯ್ 1
8ನೇ ರೇಸ್: ರಾಯಲ್ ಬೆರೊನ್ 1, ಗೋಲ್ಡ್ ಫೇಮ್ 10, ಕ್ವೀನ್ ಅನುಲಾ 6

ಉತ್ತಮ ಬೆಟ್: ಸೇಫ್ಟಿ

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್
4,5,6,7,8	2,3,4	6,7,8

371ಜೆ ಮೀಸಲು ಅನ್ಯಾಯ: ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 371–ಜೆ ಮೀಸಲಾತಿಯನ್ನು ರಾಜ್ಯದ ಎಲ್ಲ ಭಾಗಗಳ ಹುದ್ದೆಗಳ ಭರ್ತಿಗೆ ಅನ್ವಯಿಸುವುದರಿಂದ ಕರ್ನಾಟಕದ ಇತರೆ ಪ್ರದೇಶಗಳಿಗೆ ಅನ್ಯಾಯವಾಗುತ್ತಿದೆ ಎಂದು ಹಸಿರು ಪ್ರತಿಷ್ಠಾನದ ಸದಸ್ಯರು ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ಪ್ರತಿಭಟಿಸಿದರು.

‘ಕಲ್ಯಾಣ ಕರ್ನಾಟಕಕ್ಕೆ ಸಂಬಂಧಿಸಿದ ಖಾಲಿ ಹುದ್ದೆಗಳ ಭರ್ತಿಗೆ ಆದ್ಯತೆ ನೀಡಿದಂತೆ ಇತರ ಜಿಲ್ಲೆಗಳಲ್ಲಿಯೂ ಖಾಲಿ ಹುದ್ದೆಗಳ ಭರ್ತಿಗೆ ಕ್ರಮಕೈಗೊಳ್ಳುತ್ತಿಲ್ಲ. ಇದರಿಂದ ಎಲ್ಲ ಕಡೆ ಕಲ್ಯಾಣ ಕರ್ನಾಟಕದ ನೌಕರರೇ ಹೆಚ್ಚಾಗುತ್ತಿದ್ದಾರೆ’ ಎಂದು ದೂರಿದರು.

‘ಬಡ್ತಿಯನ್ನು ನೀಡುವಾಗ ಜ್ಯೇಷ್ಠತಾ ಪಟ್ಟಿಯನ್ನು ಪ್ರತ್ಯೇಕವಾಗಿ ಮಾಡುವ ಬದಲು ಒಂದೇ ಮಾಡುತ್ತಿರುವುದರಿಂದ ಕರ್ನಾಟಕದ ಇತರ ಭಾಗದ ಜಿಲ್ಲೆಗಳಲ್ಲಿರುವ ನೌಕರರಿಗೆ ಅನ್ಯಾಯವಾಗುತ್ತಿದೆ’ ಎಂದೂ ಪ್ರತಿಭಟನಾಕಾರರು ದೂರಿದರು.

‘371–ಜೆ ತಿದ್ದುಪಡಿಯ ಸೌಲಭ್ಯಕ್ಕೆ ಸಹಮತ ನೀಡಿದ ನೌಕರರನ್ನು ಮಾತ್ರ ಕಲ್ಯಾಣ ಕರ್ನಾಟಕ ಕೋಟಾದಲ್ಲಿ ಪರಿಗಣಿಸಲಾಗಿದೆ. ಅಭಿಮತ ನೀಡದ ಆ ಭಾಗದ ನೌಕರರನ್ನು ಕರ್ನಾಟಕದ ಕೋಟಾಗೆ ಸೇರಿಸಲಾಗಿದೆ. ಇದರಿಂದ ಉಳಿದ 24 ಜಿಲ್ಲೆಗಳ ಆಕಾಂಕ್ಷಿಗಳಿಗೆ ಅನ್ಯಾಯವಾಗಿದೆ. ರಾಜ್ಯಮಟ್ಟದ ವ್ಯಾಪ್ತಿಯಲ್ಲಿ ಬಾರದ ಬಿಡಿಎ, ಬಿಬಿಎಂಪಿಯಂಥ ಕಚೇರಿಗಳಲ್ಲಿಯೂ ಕಲ್ಯಾಣ ಕರ್ನಾಟಕ ಕೋಟಾ ನಿಗದಿ ಮಾಡಲಾಗಿದೆ’ ಎಂದು ಆರೋಪಿಸಿದರು.

ಕಲ್ಯಾಣ ಕರ್ನಾಟಕಕ್ಕೆ ಸಂಬಂಧಿಸಿದ ಖಾಲಿ ಹುದ್ದೆಗಳನ್ನು ತುಂಬಲು ಆದ್ಯತೆ ನೀಡಿದಂತೆ ರಾಜ್ಯದ ಇತರ ಜಿಲ್ಲೆಗಳಲ್ಲಿಯೂ ಖಾಲಿ ಹುದ್ದೆಗಳನ್ನು ತುಂಬಲು ಕ್ರಮ ಕೈಗೊಳ್ಳುತ್ತಿಲ್ಲ. ಇದರಿಂದ ಎಲ್ಲ ಕಡೆ ಕಲ್ಯಾಣ ಕರ್ನಾಟಕದ ನೌಕರರೇ ಹೆಚ್ಚಾಗುತ್ತಿದ್ದಾರೆ. ಬಡ್ತಿ ನೀಡುವಾಗ ಜ್ಯೇಷ್ಠತಾ ಪಟ್ಟಿಯನ್ನು ಪ್ರತ್ಯೇಕವಾಗಿ ಮಾಡುವ ಬದಲು ಒಂದೇ ಮಾಡುತ್ತಿರುವುದರಿಂದ ಕರ್ನಾಟಕದ ಇತರ ಭಾಗದ ನೌಕರರಿಗೆ ಅನ್ಯಾಯವಾಗುತ್ತಿದೆ’ ಎಂದು ಪ್ರತಿಭಟನಾಕಾರರು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಷ್ಠಾನದ ಅಧ್ಯಕ್ಷ ಕೆ.ಜಿ. ಕುಮಾರ್, ಸದಸ್ಯರಾದ ಎಚ್.ಎನ್. ಮಂಜುನಾಥ್, ವೇಣುಗೋಪಾಲ್, ಅರ್ಜುನ, ಸುಭಾಷ್ ಸಿ., ಭಾಗವಹಿಸಿದ್ದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಶನಿವಾರ ನಡೆದ ಪ್ರತಿಭಟನೆಯಲ್ಲಿ ಹಸಿರು ಪ್ರತಿಷ್ಠಾನದ ಸದಸ್ಯರು ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಹಸಿರು ಪ್ರತಿಷ್ಠಾನದ ಅಪಸ್ವರ ಕಲಬುರಗಿಯಲ್ಲಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ‘371 (ಜೆ) ವಿಶೇಷ ಸ್ಥಾನದಿಂದ 24 ಜಿಲ್ಲೆಗಳ ಜನರಿಗೆ ಅನ್ಯಾಯ ಆಗುತ್ತಿದೆ ಎಂದು ಹಸಿರು ಪ್ರತಿಷ್ಠಾನ ಮುಖಂಡರು ಹುಸಿ ಆರೋಪ ಮಾಡಿ, ತಪ್ಪು ಸಂದೇಶ ರವಾನಿಸಿ ಅಖಂಡ ಕರ್ನಾಟಕವನ್ನು ಒಡೆಯುವಂತಹ ನೀಚ ಕೃತ್ಯ ಎಸಗುತ್ತಿದ್ದಾರೆ’ ಎಂದು ಕಲ್ಯಾಣ ಕರ್ನಾಟಕ ಹೋರಾಟ ಸಮಿತಿಯ ಮುಖಂಡರು ಆರೋಪಿಸಿ ನಗರದಲ್ಲಿ ಶನಿವಾರ ಪ್ರತಿಭಟಿಸಿದರು.

ಸರ್ದಾರ್ ವಲ್ಲಭಭಾಯಿ ಪಟೇಲ್ ವೃತ್ತದಲ್ಲಿ ಹೋರಾಟ ಸಮಿತಿ ನೇತೃತ್ವದಲ್ಲಿ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷರು, ಬೋಧಕರು, ವಿದ್ಯಾರ್ಥಿಗಳು, ಚಿಂತಕರು, ಹಿಂದುಳಿದ, ಕನ್ನಡಪರ ಸಂಘಟನೆಗಳ ಮುಖಂಡರು ಬೃಹತ್ ಪ್ರತಿಭಟನೆ ನಡೆಸಿದರು.

‘371 (ಜೆ) ಜಾರಿಯಾಗಿ 10 ವರ್ಷಗಳು ಕಳೆದಿವೆ. ಕೆಲವು ಸವಲತ್ತುಗಳು ಈಗಷ್ಟೇ ಸಿಗುವ ಹಂತದಲ್ಲಿವೆ. ಆದರೆ, ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಸಹಿಸದ ಕೆಲವು ಪಟ್ಟಭದ್ರರು ಸಂವಿಧಾನ, ಮತ್ತು ಮೀಸಲಾತಿ ವಿರೋಧಿ ನಡೆಯನ್ನು ಅನುಸರಿಸುತ್ತಿದ್ದಾರೆ. ಸರ್ಕಾರ ಇದನ್ನು ಗಂಭೀರವಾಗಿ ಪರಿಗಣಿಸಿ, ಹಸಿರು ಪ್ರತಿಷ್ಠಾನವನ್ನು ನಿಷೇಧಿಸಬೇಕು’ ಎಂದು ಪ್ರತಿಭಟನಕಾರರು ಒತ್ತಾಯಿಸಿದರು.

ಹೋರಾಟಗಾರ ಲಕ್ಷ್ಮಣ ದಸ್ತಿ, 'ಮೂರು ದಶಕಗಳಿಗೂ ಹೆಚ್ಚು ಕಾಲ ಹೋರಾಡಿ 371 (ಜೆ) ಪಡೆದಿದ್ದೇವೆ. ಅದನ್ನು ಉಳಿಸಿಕೊಳ್ಳಲು ಮತ್ತೊಂದು ಸುತ್ತಿನ ಹೋರಾಟಕ್ಕೂ ಹಿಂಜರಿಯುವುದಿಲ್ಲ’ ಎಂದು ಎಚ್ಚರಿಸಿದರು.

‘ಹಸಿರು ಪ್ರತಿಷ್ಠಾನವು ಕಲ್ಯಾಣ ಕರ್ನಾಟಕದ ಬಗ್ಗೆ ಜನರಿಗೆ ತಪ್ಪು ಸಂದೇಶ ರವಾನಿಸುತ್ತಿದೆ. ಇದು ಹೀಗೆಯೇ ಮುಂದುವರಿದರೆ ಉಗ್ರ ಸ್ವರೂಪದ ಚಳವಳಿಯೇ ನಡೆಸಬೇಕಾಗುತ್ತದೆ’ ಎಂದು ಎಚ್ಚರಿಸಿದರು.

ವಿಧಾನ ಪರಿಷತ್ ಸದಸ್ಯ ಶಶೀಲ್ ಜಿ.ನಮೋಶಿ, ಸಾಹಿತಿ ಪ್ರೊ. ಆರ್.ಕೆ.ಹುಡಗಿ, ಶರಣ ಬಸವೇಶ್ವರ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಬಸವರಾಜ ದೇಶಮುಖ ಸೇರಿ ಹಲವರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ದೋಣಿ ಮುಗುಚಿ ಏಳು ಜನರ ಸಾವು

ಶಿಯೋಪುರ್ (ಪಿಟಿಐ): ಮಧ್ಯಪ್ರದೇಶದ ಶಿಯೋಪುರ್ ಜಿಲ್ಲೆಯ ಸೀಪ್ ನದಿಯಲ್ಲಿ ಶನಿವಾರ ದೋಣಿ ಮುಗುಚಿ ಐವರು ಮಕ್ಕಳು ಸೇರಿದಂತೆ ಏಳು ಮಂದಿ ಮೃತಪಟ್ಟಿದ್ದಾರೆ.

ದೋಣಿಯಲ್ಲಿ ಒಟ್ಟು 11 ಜನರಿದ್ದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಆಲ್ಟರ್‌ನೇಟಿವ್ 2024 ಕಾರ್ಯಕ್ರಮ

ಪರಿಸರ ರಕ್ಷಣೆ: ಯುವಜನರಿಗೆ ಕರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಸರ ರಕ್ಷಣೆ, ನಗರವನ್ನು ಸ್ವಚ್ಛವಾಗಿಡುವ ಕಾರ್ಯಗಳಲ್ಲಿ ಸರ್ಕಾರ ಜೊತೆಗೆ ಸಾರ್ವಜನಿಕರು ಮುಖ್ಯವಾಗಿ ಯುವಜನರು ಕೈಜೋಡಿಸಬೇಕು’ ಎಂದು ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎನ್. ಮಂಜುನಾಥ ಪ್ರಸಾದ್ ಶನಿವಾರ ತಿಳಿಸಿದರು.

ವಿಶ್ವ ಪರಿಸರ ದಿನಾಚರಣೆ ಅಂಗವಾಗಿ ಎಂ.ಎಸ್.ರಾಮಯ್ಯ ವೈದ್ಯಕೀಯ ಕಾಲೇಜಿನಲ್ಲಿ ವಿಮೋವೆ ಫೌಂಡೇಶನ್ ಆಯೋಜಿಸಿದ್ದ ‘ಹಸಿರು ಮತ್ತು ಆಕರ್ಷಕ (ವೈಬ್ರೆಂಟ್) ಬೆಂಗಳೂರಿಗಾಗಿ ಯುವಜನರು–ಆಲ್ಟರ್‌ನೇಟಿವ್ 2024’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಗರದಲ್ಲಿ ಜನಸಂಖ್ಯೆ ಗಣನೀಯವಾಗಿ ಹೆಚ್ಚಳವಾಗುತ್ತಿರುವುದು ಪರಿಸರದ ಮೇಲೆ ಪರಿಣಾಮ ಬೀರುತ್ತಿದೆ. ಜನಸಂಖ್ಯೆಗೆ ಅನುಗುಣವಾಗಿ ಹಸಿರು ಪರಿಸರವನ್ನು ಹೆಚ್ಚಳ ಮಾಡಬೇಕಿದೆ. ಯುವಜನರಿಂದ ಮಾತ್ರ ಇದು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಮಾತನಾಡಿ, ‘ಪರಿಸರವನ್ನು ಉಳಿಸಿಕೊಳ್ಳದೆ ಬದುಕಲು ಸಾಧ್ಯವಿಲ್ಲ. ಮುಂದಿನ ಪೀಳಿಗೆಯು ಆರೋಗ್ಯಕರ ಜೀವನಕ್ಕಾಗಿ ಗಿಡಗಳನ್ನು ನೆಟ್ಟು ಹಸಿರು ಹೆಚ್ಚಿಸಬೇಕು. ಮನೆಗಳಲ್ಲಿ ಮಳೆ ನೀರು ಸಂಗ್ರಹ ವ್ಯವಸ್ಥೆ ಅಳವಡಿಸಬೇಕು. ನಿತ್ಯ ಸಾಮಗ್ರಿಗಳನ್ನು ತರಲು ಕಾಗದ, ಬಟ್ಟೆ ಚೀಲಗಳನ್ನು ಬಳಸಬೇಕು’ ಎಂದು ಸಲಹೆ ಮಾಡಿದರು.

ಜಲಮಂಡಳಿ ಅಧ್ಯಕ್ಷ ಡಾ.ರಾಮ್‌ಪ್ರಸಾತ್ ಮನೋಹರ್ ಅವರು, ‘ನಗರದ ಜನಸಂಖ್ಯೆಯಲ್ಲಿ ಶೇ 65ರಷ್ಟು ಯುವಜನರಿದ್ದಾರೆ. ಈ ಎಲ್ಲರೂ ಜಲಮಂಡಳಿಯ ಜೊತೆ ಕೈಜೋಡಿಸಿದರೆ ‘ವಾಟರ್ ಸರ್‌ಪ್ಲಸ್’ ಬೆಂಗಳೂರನ್ನಾಗಿ ಮಾಡಬಹುದು’ ಎಂದರು.

ಬೆಂಗಳೂರು ಸಮುದ್ರ ಮಟ್ಟಕ್ಕಿಂತ ಸುಮಾರು 1000 ಮೀ. ಎತ್ತರದಲ್ಲಿರುವ ಕಾರಣ 100 ಕಿ.ಮೀ. ದೂರದಲ್ಲಿರುವ ಕಾವೇರಿ ನದಿಯಿಂದ ನೀರು ತರುವುದು ಕಷ್ಟ. ನಗರದಲ್ಲಿರುವ ವೃಷಭಾವತಿ, ಅರ್ಕಾವತಿ, ದಕ್ಷಿಣ ಪಿನಾಕಿನಿ ಹಾಗೂ ಸುವರ್ಣಮುಖಿ ನದಿಗಳಿಗೆ ಪುನರ್ಜೀವ ನೀಡಿದರೆ ನಗರದಲ್ಲಿ ನೀರಿನ ಸಮಸ್ಯೆಯನ್ನು ನಿವಾರಿಸಬಹುದು. ಈ ನಾಲ್ಕು ನದಿಗಳು ನಾಲೆಗಳಾಗಿ ಬದಲಾಗಿವೆ. ಯುವಜನರು ಈ ನಾಲೆಗಳನ್ನು ಮತ್ತೆ ನದಿಗಳನ್ನಾಗಿ ಪುನಜೀವಗೊಳಿಸಲು ಒತ್ತು ನೀಡಬೇಕು ಎಂದು ಸಲಹೆ ನೀಡಿದರು.

ಬಿಬಿಎಂಪಿ ಅರಣ್ಯ, ಪರಿಸರ ಮತ್ತು ಹವಾಮಾನ ವೈಪರೀತ್ಯ ನಿರ್ವಹಣೆಯ ವಿಶೇಷ ಆಯುಕ್ತರಾದ ಪ್ರೀತಿ ಗೆಹಲೋತ್, ಬೆಂಗಳೂರು ಉತ್ತರ ಸಂಚಾರ ಡಿಸಿಪಿ ಸಿರಿ ಗೌಡ, ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ, ಮಾಲಿನ್ಯ ನಿಯಂತ್ರಣ ಮಂಡಳಿಯ ಸದಸ್ಯ ಕಾರ್ಯದರ್ಶಿ ಬಾಲಚಂದ್ರ, ಗೋಕುಲ ಶೈಕ್ಷಣಿಕ ಫೌಂಡೇಶನ್‌ನ ಸಿಇಒ ಶ್ರೀನಿವಾಸ ಮೂರ್ತಿ, ವಿಮೋವೆ ಫೌಂಡೇಶನ್ ಸಂಸ್ಥಾಪಕ ಮತ್ತು ಆಲ್ಟರ್ನೇಟಿವ್ 24 ಕಾರ್ಯಕ್ರಮದ ಮುಖ್ಯ ರೂವಾರಿ ವಿನಯ ಶಿಂಧೆ, ದಿ ನ್ಯಾಚುರಲ್ ಸ್ಕೂಲ್ ಸಂಸ್ಥಾಪಕಿ ಪ್ರಿಯಾ ವೆಂಕಟೇಶ್ ಸಂವಾದ ನಡೆಸಿಕೊಟ್ಟರು.

‘ನಮ್ಮ ಬೆಂಗಳೂರು ಯುವಜನರ ಸಮೀಕ್ಷೆ’ ವರದಿಯನ್ನು ಇದೇ ಸಂದರ್ಭದಲ್ಲಿ ಬಿಡುಗಡೆಗೊಳಿಸಲಾಯಿತು. ವಿಡಿಯೊ ರೀಲ್ ಸ್ಪರ್ಧೆಯನ್ನು ಕಾಲೇಜು ವಿದ್ಯಾರ್ಥಿಗಳಿಗಾಗಿ ಆಯೋಜಿಸಿದ್ದು, ವಿಜೇತರಿಗೆ ನಗದು ಬಹುಮಾನ ವಿತರಿಸಲಾಯಿತು.

ಎಂ.ಎಸ್. ರಾಮಯ್ಯ ವೈದ್ಯಕೀಯ ಕಾಲೇಜಿನಲ್ಲಿ ಶನಿವಾರ ವಿಮೋವೆ ಫೌಂಡೇಶನ್ ಆಯೋಜಿಸಿದ್ದ ‘ಹಸಿರು ಮತ್ತು ಆಕರ್ಷಕ(ವೈಬ್ರೆಂಟ್) ಬೆಂಗಳೂರಿಗಾಗಿ ಯುವಜನರು–ಆಲ್ಟರ್‌ನೇಟಿವ್ 2024’ ಕಾರ್ಯಕ್ರಮವನ್ನು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಉದ್ಘಾಟಿಸಿದರು

PUBLIC NOTICE

My client intends to purchase the properties mentioned and described in the Schedule hereunder from its owners **Smt. Gowramma**, wife of Shri. Hanume Gowda and **Shri. K. H. Basavaraja**, son of Shri. Hanume Gowda. The Owners represent that they are the absolute owners of their respective properties, and they have good marketable, right, title and interest therein and that apart from them there are no other person/s having any right or claim over the Schedule Property. The Owners further represent that they have not entered into any Agreements/Memorandum of Understanding etc., for sale/transfer of the Schedule Property nor have mortgaged, created any, right, interest, lien or encumbered the Schedule Property or any part thereof in any manner with any person/s. Any person/s having objection/s or claims, shall with documentary evidence lodge their objection/s or claims **within 7 (Seven) days** from the date of this Notice with the Undersigned, failing which, my client shall proceed with the above-mentioned transactions.

SCHEDULE

All that piece and parcel of the agricultural dry lands bearing (1) **Survey No. 14/6** (earlier part of composite Survey No. 14), measuring **02 acre 10 guntas**; (2) **Survey No. 14/9** (earlier part of Survey No. 14/6, much earlier part of composite Survey No. 14) measuring **02 acre 10 guntas**; and (3) **Survey No. 14/7** (earlier part of composite Survey No. 14), measuring **01 acre 02½ guntas** (excluding 03 guntas of Kharab Land), measuring in total **05 acres 22½ guntas** (excluding 03 guntas of Kharab Land), all the above properties are conjoint to one another and form a composite block and are situated at **Byrashettyhalli Village, Kasaba Hobli, Nelamangala Taluk, Bengaluru Rural District** and the Composite block is bounded on the:

East by : Properties bearing Survey Nos.15 and 28;
West by : Properties bearing Survey Nos.14/4 and 14/5;
North by : Thimmasandra Village Border; and
South by : Properties bearing Survey Nos.14/8, 28 and Road.

Jayanth M Pattanshetti, Advocate,
Jayanth Pattanshetti Associates LLP
102, Ground Floor, “Rams Infantry Manor”,
No.70, Infantry Road, Bengaluru-560001.
Ph: 080 41238367/41238516

Bengaluru
Date: 02-06-2024

PUBLIC NOTICE

The general public is hereby notified that my client intends to purchase the schedule immovable property from **Mr.M.Muktar Ahamed S/o Late K. Mohammed Peer Saab,** residing at No.M 275, K M Beedi works, Muslim Block, Unit-2, Kanakapura Town, Kanakapura Taluk, Ramanagara District.

Any person having any right, title, and interest whatsoever in the schedule property may submit his/her/their objections with supporting documents to the undersigned **within 15 days** from the date of this publication failing which my client would proceed and finalize the transaction with the above said person.

SCHEDULE OF THE PROPERTY

ITEM NO.1 : All that piece and parcel of the agricultural dry land bearing Survey Number **88/2 measuring 1 Acre 07 guntas,** situated at Kallahalli Village, Kasaba Hobli, Kanakapura Taluk, Ramanagara District bounded on:
East by : Sy No.93/1, **West by** : Sy No.88/1.
North by : Sy No.92, **South by** : Sy No.88/3.

ITEM NO.2 : All that piece and parcel of the agricultural dry land bearing Survey Number **93/1 measuring 00 Acre 36 guntas,** situated at Kallahalli Village, Kasaba Hobli, Kanakapura Taluk, Ramanagara District bounded on:
East by : Sy No.93/2, **West by** : Sy No.88/2.
North by : Sy No.92, **South by** : Sy No.94.

ITEM NO.3: All that piece and parcel of the agricultural dry land bearing Survey Number **93/2 measuring 00 Acre 31 guntas,** situated at Kallahalli Village, Kasaba Hobli, Kanakapura Taluk, Ramanagara District bounded on:
East by : Sy No.93/5, **West by** : Sy No.93/1.
North by : Sy No.92, **South by** : Sy No.94.

ITEM NO.4 : All that piece and parcel of the agricultural dry land bearing Survey Number **93/5 measuring 01 Acre 00 guntas,** situated at Kallahalli Village, Kasaba Hobli, Kanakapura Taluk, Ramanagara District bounded on:
East by : Sy No.93/3, **West by** : Sy No.93/2.
North by : Sy No.92, **South by** : Sy No.94.

ITEM NO.5 : All that piece and parcel of the agricultural dry land bearing Survey Number **94/2 measuring 00 Acre 29 guntas,** situated at Kallahalli Village, Kasaba Hobli, Kanakapura Taluk, Ramanagara District bounded on:
East by : Sy No.94/3, **West by** : Sy No.94/1.
North by : Sy No.93, **South by** : Sy No.106/3.

ITEM NO.6: All that piece and parcel of the agricultural dry land bearing Survey Number **106/3 measuring 00 Acre 35 guntas,** situated at Kallahalli Village, Kasaba Hobli, Kanakapura Taluk, Ramanagara District bounded on:
East by : Sy No.94/3, **West by** : Sy No.106/2.
North by : Sy No.94/2, **South by** : Sy No.105.

Milan. K. A, Advocate
No.10, Brundavana, Yashoda Nagara, Opposite Jakkur Aero Drome & Piller No.43, Yelahanka, KIA Road, Bengaluru 560 064,
Mob: 7829509266/ 9900699788.

ನೈಋತ್ಯ ರೈಲ್ವೆ G2G

ಟೆಂಡರ್ ಸೂಚನೆ ಸಂ.: SWRTMYPR202425WT02
ದಿನಾಂಕ: 24.05.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
UNIMAT 8269 ಯಂತ್ರದ ಪ್ರಮುಖ ದುರಸ್ತಿ ಕಾರ್ಯಗಳು.	ರೂ. 4,70,46,600/-

Last date for submission of bids: Up to 11:00 hrs. of 26.06.2024

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಕಾರ್ಯನಿರ್ವಾಹಕ ಇಂಜಿನಿಯರ್ / ಟ್ರ್ಯಾಕ್ ಯಂತ್ರಗಳು ಬೆಂಗಳೂರು
PUB/118/AAV/PRB/SWR/2024-25
South Western Railway-SWR SWRRLY SWRRLY

ನೈಋತ್ಯ ರೈಲ್ವೆ G2G

ಟೆಂಡರ್ ಸೂಚನೆ ಸಂ.: CAO/CN/BNC/9/2024
ದಿನಾಂಕ: 27.05.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಶ್ರೀ ಎಂ ವಿಶ್ವೇಶ್ವರಯ್ಯ ಟರ್ಮಿನಲ್‌ನಲ್ಲಿ ನಿರ್ವಹಣಾ ಮೂಲಸೌಕರ್ಯದ ಪ್ರಸ್ತಾವಿತ ಉನ್ನತೀಕರಣ / ಅಭಿವೃದ್ಧಿ. ವಂದೇ ಭಾರತ್ ಚೇರ್ ಕಾರ್ ರೈಲುಗಳ ನಿರ್ವಹಣೆ – ಬೈಯ್ಯಪ್ಪನಹಳ್ಳಿ ಎಂಡ್ ಕಡೆಗೆ 60ಮೀ ಉದ್ದದ ಮೆಮು ಶೆಡ್‌ನ ವಿಸ್ತರಣೆ. (ಟೆಂಡರ್ ಉಲ್ಲೇಖ ಸಂಖ್ಯೆ: BYPL-3CT-19)	ರೂ. 5,05,09,891/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 20–06–2024, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಎಂಜಿನಿಯರ್ / ನಿರ್ಮಾಣ / ಕಾಮಗಾರಿಗಳು ಬೆಂಗಳೂರು ಕಂಟೋನ್ಮೆಂಟ್
PUB/124/AAV/PRB/SWR/2024-25
South Western Railway-SWR SWRRLY SWRRLY

ನೈಋತ್ಯ ರೈಲ್ವೆ G2G

ಟೆಂಡರ್ ಸೂಚನೆ ಸಂ.: BE-29-2024 -25-0T-06

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಬೆಂಗಳೂರು ಕಂಟೋನ್ಮೆಂಟ್ – ವೈಟ್‌ಫೀಲ್ಡ್ ಕ್ವಾಡ್ರುಪ್ಲಿಂಗ್ ಯೋಜನೆಯಡಿಯಲ್ಲಿ ಬೆಂಗಳೂರು ಪ್ರದೇಶದಲ್ಲಿ ಟೈಪ್–II (5 ಘಟಕಗಳು), ಟೈಪ್–III (4 ಘಟಕಗಳು), ಟೈಪ್–IV (3 ಘಟಕಗಳು), ಟೈಪ್–V (1 ಘಟಕ) ಗಳ ಪ್ರಸ್ತಾವಿತ ನಿರ್ಮಾಣ: ಸಿಬ್ಬಂದಿ ವಸತಿಗೃಹಗಳ ನಿರ್ಮಾಣ–ವಿದ್ಯುತ್ ವ್ಯವಸ್ಥೆ, ಬೆಂಗಳೂರು – ಬೆಂಗಳೂರಿನಲ್ಲಿ ಓಆರ್‌ಎಚ್ ಆಗಿ ಪರಿವರ್ತಿಸಲು ಅಸ್ತಿತ್ವದಲ್ಲಿರುವ ಹಳೆಯ 4 ಆರ್‌ಇ ರೆಸ್ಟ್ ಹೌಸ್‌ಗಳ ನವೀಕರಣ, ಬೆಂಗಳೂರಿನ ಸ್ಟೇಷನ್ ಕಟ್ಟಡದ ಎರಡನೇ ಮಹಡಿಯಲ್ಲಿ ಅಸ್ತಿತ್ವದಲ್ಲಿರುವ ಹಳೆಯ ಆರ್ ಇಕಚೇರಿಯಲ್ಲಿ ಓಆರ್‌ಎಚ್‌ಗಾಗಿ 10 ಕೊಠಡಿಗಳ ಪರಿವರ್ತನೆ, ಬೆಂಗಳೂರು – ಕೆಎಸ್‌ಆರ್ ಸ್ಟೇಷನ್ ಕಟ್ಟಡದಲ್ಲಿ ಓಆರ್‌ಎಚ್‌ನ ಅಸ್ತಿತ್ವದಲ್ಲಿರುವ ನಾಲ್ಕು ಕೊಠಡಿಗಳ ನವೀಕರಣ ಮತ್ತು ಬೆಂಗಳೂರಿನಲ್ಲಿ ಎಸ್‌ಎಸ್‌ಇ ಎಸ್‌ಆರ್‌ಎಂ ಕಚೇರಿಯ ಮೊದಲ ಮಹಡಿಯಲ್ಲಿ ಎಸ್‌ಎಸ್‌ಇ ಸಿಗ್ನಲ್ & ಟೆಲಿ ಕಚೇರಿಯ ನಿರ್ಮಾಣ– ಎಲೆಕ್ಟ್ರಿಕಲ್ ಕಾಮಗಾರಿಗಳು.	ರೂ. 68,32,382/-

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 18–06–2024, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಹಿರಿಯ ವಿಭಾಗೀಯ ವಿದ್ಯುತ್ ಎಂಜಿನಿಯರ್ / ಬೆಂಗಳೂರು
PUB/123/AAV/PRB/SWR/2024-25
South Western Railway-SWR SWRRLY SWRRLY

ವಿನಿಮಯ ದರ

$ ಡಾಲರ್	83.50
£ ಪೌಂಡ್	106.27
€ ಯುರೊ	90.58
¥ ಯೆನ್ (100ಕ್ಕೆ)	53

ಎನ್ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹580
12 ಕ್ಕೆ	₹80
ಮೈಸೂರು	
100ಕ್ಕೆ	₹580

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1490 (1490)
ಸೋಯಾ (ರಿಫೈನ್ಡ್)	₹960 (960)
ಸೂರ್ಯಕಾಂತಿ (ರಿಫೈನ್ಡ್)	₹970 (970)
ಪಾಮೋಲಿನ್	₹910 (910)

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹8450-8450
ಕೆ.ಆರ್.ಪೇಟೆ	₹8000-9450
ತಿಪಟೂರು	₹8500-10105
ತುರುವೇಕೆರೆ	₹8700-9000

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹189
ಆರ್‌ಎಸ್‌ಎಸ್-5	₹182
ಗುಡ್ ಲಾಟ್ (ಪ್ರತಿ ಕೆಜಿಗೆ)	₹172

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹266-496
ದ್ವಿತಳಿ (ಬಿ.ವಿ)	₹372-685

ಮುಂಬೈ ಧಾರಣೆ

ಶೇಂಗಾ

01-6-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1500 (1500)
ಒಂದು ವಾರದ ಡೆಲಿವರಿ	1495 (1495)
ಸೋಯಾ ಕಚ್ಚಾ	925 (925)
ಪಾಮ್ ವಾರದ ಡೆಲಿವರಿ	908 (908)
ಸೂರ್ಯಕಾಂತಿ ಎಣ್ಣೆ ಕಚ್ಚಾ	925 (915)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹71,225 (72,000)
ಬೆಳ್ಳಿ ಕೆ.ಜಿ ₹90,250 (92,400)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮುದ್ರೆಮನೆ ಕಾಫಿ

(50 ಕೆಜಿಗೆ)

ಎಪಿ	₹15750
ಎಸಿ	₹9100
ಆರ್‌ಪಿ	₹16000
ಆರ್‌ಸಿ	₹10010

ಹೊಸ ಮಾದರಿ ವಾಹನಗಳ ಬಿಡುಗಡೆಯಿಂದ ವಹಿವಾಟು ಹೆಚ್ಚಳ: ಕಂಪನಿಗಳ ವಿಶ್ಲೇಷಣೆ

ಪ್ರಯಾಣಿಕ ವಾಹನ ಮಾರಾಟ ಹೆಚ್ಚಳ

ನವದೆಹಲಿ (ಪಿಟಿಐ): ಟೊಯೊಟ, ಮಹೀಂದ್ರ ಆ್ಯಂಡ್ ಮಹೀಂದ್ರ, ಹುಂಡೈ, ಕಿಯಾ, ಟಾಟಾ ಮೋಟರ್ಸ್‌ನ ವಾಹನಗಳ ಸಗಟು ಮಾರಾಟವು ಮೇನಲ್ಲಿ ಏರಿಕೆಯಾಗಿದೆ. ಆದರೆ, ಎಂ.ಜಿ ಮೋಟರ್ಸ್, ಮಾರುತಿ ಸುಜುಕಿ ವಾಹನಗಳ ಮಾರಾಟದಲ್ಲಿ ಇಳಿಕೆಯಾಗಿದೆ.

ಮಾರುಕಟ್ಟೆಗೆ ಹೊಸ ಮಾದರಿಯ ವಾಹನಗಳ ಬಿಡುಗಡೆಯಿಂದಾಗಿ ಮಾರಾಟದ ಪ್ರಮಾಣ ಏರಿಕೆಯಾಗಿದೆ ಎಂದು ಕಂಪನಿಗಳು ಶನಿವಾರ ತಿಳಿಸಿವೆ.

ಟೊಯೊಟ: ಟೊಯೊಟ ಕಿರ್ಲೋಸ್ಕರ್ ಮೋಟರ್‌ನ (ಟಿಕೆಎಂ) 25,273 ವಾಹನಗಳು ಮಾರಾಟವಾಗಿವೆ. ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಮಾರಾಟದಲ್ಲಿ ಶೇ 24ರಷ್ಟು ಏರಿಕೆ ಆಗಿದೆ. ಕಳೆದ ತಿಂಗಳು ದೇಶೀಯವಾಗಿ 23,959 ವಾಹನಗಳು ಮಾರಾಟವಾಗಿದ್ದರೆ, 1,314 ವಾಹನಗಳು ರಫ್ತಾಗಿವೆ.

ಮಹೀಂದ್ರ ಆ್ಯಂಡ್ ಮಹೀಂದ್ರ: ಮಹೀಂದ್ರ ಆ್ಯಂಡ್ ಮಹೀಂದ್ರ ವಾಹನದ ಸಗಟು ಮಾರಾಟದಲ್ಲಿ ಶೇ 17ರಷ್ಟು ಹೆಚ್ಚಳವಾಗಿದೆ. ಒಟ್ಟು 71,682 ವಾಹನಗಳು ಮಾರಾಟವಾಗಿವೆ. ದೇಶೀಯ ಪ್ರಯಾಣಿಕ ವಾಹನ ಮಾರಾಟದಲ್ಲಿ ಶೇ 31ರಷ್ಟು ಏರಿಕೆಯಾಗಿದ್ದು, 43,218 ವಾಹನ ಮಾರಾಟವಾಗಿವೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 32,886 ಮಾರಾಟವಾಗಿದ್ದವು. ರಫ್ತು ಪ್ರಮಾಣ ಶೇ 2ರಷ್ಟು ಏರಿಕೆಯಾಗಿದ್ದು, 2,671 ವಾಹನ ಮಾರಾಟವಾಗಿವೆ. ಟ್ರ್ಯಾಕ್ಟರ್‌ಗಳ ಒಟ್ಟು ಮಾರಾಟ 37,109 ಆಗಿದ್ದು, ಶೇ 9ರಷ್ಟು ಏರಿಕೆಯಾಗಿದೆ.

ಹುಂಡೈ: ಹುಂಡೈ ಮೋಟರ್ ಇಂಡಿಯಾ ಲಿಮಿಟೆಡ್‌ನ (ಎಚ್‌ಎಂಐಎಲ್) ಒಟ್ಟು 63,551 ವಾಹನಗಳು ಮಾರಾಟವಾಗಿದ್ದು, ಶೇ 7ರಷ್ಟು ಹೆಚ್ಚಳವಾಗಿದೆ. ಹಿಂದಿನ ಇದೇ ಅವಧಿಯಲ್ಲಿ 59,601 ವಾಹನ ಮಾರಾಟವಾಗಿದ್ದವು. ದೇಶೀಯ ವಾಹನ ಮಾರಾಟ 48,601 ರಿಂದ 49,151ಕ್ಕೆ ಏರಿಕೆಯಾಗಿದೆ. ರಫ್ತು ಪ್ರಮಾಣ 11 ಸಾವಿರದಿಂದ 14,400ಕ್ಕೆ ಹೆಚ್ಚಳವಾಗಿದೆ.

ಕಿಯಾ: ಕಿಯಾ ಇಂಡಿಯಾದ ಸಗಟು ವಾಹನ ಮಾರಾಟದಲ್ಲಿ ಶೇ 4ರಷ್ಟು ಏರಿಕೆಯಾಗಿದ್ದು, 19,500 ವಾಹನ ಮಾರಾಟವಾಗಿವೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 18,766 ಮಾರಾಟವಾಗಿದ್ದವು.

ಟಾಟಾ ಮೋಟರ್ಸ್: ಟಾಟಾ ಮೋಟರ್ಸ್‌ನ 76,766 ವಾಹನಗಳು ಮಾರಾಟವಾಗಿದ್ದು, ಶೇ 2ರಷ್ಟು ಏರಿಕೆಯಾಗಿದೆ. ದೇಶೀಯ ಮಾರಾಟ 73,448 ರಿಂದ 75,173ಕ್ಕೆ ಹೆಚ್ಚಳವಾಗಿದೆ. ವಿದ್ಯುತ್‌ಚಾಲಿತ ವಾಹನಗಳು ಸೇರಿದಂತೆ ಪ್ರಯಾಣಿಕ ವಾಹನಗಳ ಮಾರಾಟ 45,984 ರಿಂದ 47,075ಕ್ಕೆ ಏರಿಕೆಯಾಗಿದೆ. ವಾಣಿಜ್ಯ ವಾಹನ ಮಾರಾಟದಲ್ಲಿ ಶೇ 2ರಷ್ಟು ಹೆಚ್ಚಳವಾಗಿದ್ದು, 29,691 ಮಾರಾಟವಾಗಿವೆ.

ಎಂ.ಜಿ ಮೋಟರ್: ಮಾರಾಟ ಇಳಿಕೆ

ಎಂ.ಜಿ ಮೋಟರ್ ಇಂಡಿಯಾ ವಾಹನ ಮಾರಾಟ ಶೇ 5ರಷ್ಟು ಇಳಿಕೆಯಾಗಿದ್ದು, 4,769 ವಾಹನಗಳು ಮಾರಾಟವಾಗಿವೆ. ಹಿಂದಿನ ವರ್ಷದ ಇದೇ ಅವಧಿಯಲ್ಲಿ 5,006 ವಾಹನ ಮಾರಾಟವಾಗಿದ್ದವು.

ಮಾರುತಿ ಸುಜುಕಿ: ಮಾರುತಿ ಸುಜುಕಿ ಇಂಡಿಯಾದ 1.74 ಲಕ್ಷ ವಾಹನಗಳು ಮಾರಾಟವಾಗಿದೆ. ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಮಾರಾಟದಲ್ಲಿ ಶೇ 2ರಷ್ಟು ಇಳಿಕೆಯಾಗಿದೆ. ದೇಶೀಯ ಪ್ರಯಾಣಿಕ ವಾಹನ ಮಾರಾಟದಲ್ಲಿ ಅಲ್ಪ ಏರಿಕೆಯಾಗಿದ್ದು, 1.43 ಲಕ್ಷದಿಂದ 1.44 ಲಕ್ಷಕ್ಕೆ ಮುಟ್ಟಿದೆ. ರಫ್ತು 26,477 ರಿಂದ 17,367ಕ್ಕೆ ಕುಸಿದಿದೆ ಎಂದು ಕಂಪನಿ ತಿಳಿಸಿದೆ.

ಸುದ್ದಿ 2 ನಿಮಿಷ

ವಾಣಿಜ್ಯ ಬಳಕೆ ಸಿಲಿಂಡರ್, ವಿಮಾನ ಇಂಧನ ದರ ಇಳಿಕೆ

ನವದೆಹಲಿ (ಪಿಟಿಐ): ಸತತ ಮೂರನೇ ತಿಂಗಳೂ ವಾಣಿಜ್ಯ ಸಿಲಿಂಡರ್ ದರವು ಇಳಿಕೆಯಾಗಿದೆ. ಜೊತೆಗೆ ವಿಮಾನಗಳಲ್ಲಿ ಬಳಸುವ ಇಂಧನ ಬೆಲೆಯಲ್ಲಿಯೂ ಭಾರಿ ಇಳಿಕೆಯಾಗಿದೆ.

ವಾಣಿಜ್ಯ ಬಳಕೆಯ 19 ಕೆ.ಜಿ ತೂಕದ ಅಡುಗೆ ಸಿಲಿಂಡರ್ ದರವನ್ನು ಶನಿವಾರ ₹69 ಕಡಿತ ಗೊಳಿಸಲಾಗಿದೆ. ಈಗ ದರವು ₹1,676 ಆಗಿದೆ. ಏಪ್ರಿಲ್ 1ರಂದು ₹30.5 ಮತ್ತು ಮೇ 1ರಂದು ₹19 ಬೆಲೆ ಇಳಿಕೆಯಾಗಿತ್ತು.

ಅಂತರರಾಷ್ಟ್ರೀಯ ಮಟ್ಟದಲ್ಲಿನ ಕಚ್ಚಾ ತೈಲದ ದರ ಹಾಗೂ ವಿದೇಶಿ ವಿನಿಮಯ ದರದ ಆಧಾರದ ಮೇಲೆ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು, ಎಟಿಎಫ್ ಹಾಗೂ ಸಿಲಿಂಡರ್ ಬೆಲೆಯನ್ನು ಪರಿಷ್ಕರಿಸಿವೆ.

ಮನೆಗಳಲ್ಲಿ ಬಳಸುವ ಅಡುಗೆ ಅನಿಲ ಸಿಲಿಂಡರ್ ದರದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಸದ್ಯ, 14.2 ಕೆ.ಜಿ ತೂಕದ ಸಿಲಿಂಡರ್ ದರವು ₹803 ಆಗಿದೆ. ಪೆಟ್ರೋಲ್ ಮತ್ತು ಡೀಸೆಲ್ ದರದಲ್ಲಿಯೂ ಬದಲಾವಣೆ ಆಗಿಲ್ಲ.

ಎಟಿಎಫ್ ದರ ಇಳಿಕೆ: ವಿಮಾನಗಳಲ್ಲಿ ಬಳಸುವ ಇಂಧನದ (ಎಟಿಎಫ್) ಬೆಲೆಯನ್ನು ಶೇ 6.5ರಷ್ಟು ಇಳಿಕೆ ಮಾಡಲಾಗಿದೆ. ಸದ್ಯ, ನವದೆಹಲಿಯಲ್ಲಿ ಪ್ರತಿ ಕಿಲೋ ಲೀಟರಿಗೆ ₹6,673 ದರ ಕಡಿಮೆಯಾಗಿದೆ (ಒಂದು ಕಿಲೋ ಲೀಟರ್ ಎಂದರೆ ಒಂದು ಸಾವಿರ ಲೀಟರ್). ದೆಹಲಿಯಲ್ಲಿ ಪ್ರತಿ ಕಿಲೋ ಲೀಟರ್ ದರವು ₹94,969 ಆಗಿದೆ.

ಮೇ ನಲ್ಲಿ ಪ್ರತಿ ಕಿಲೋ ಲೀಟರಿಗೆ ಎಟಿಎಫ್ ದರ ₹749.25 ಹೆಚ್ಚಳವಾಗಿತ್ತು. ಸ್ಥಳೀಯ ತೆರಿಗೆ ಆಧಾರದ ಮೇಲೆ ರಾಜ್ಯಗಳವಾರು ಎಟಿಎಫ್ ಬೆಲೆಯಲ್ಲಿ ವ್ಯತ್ಯಾಸವಾಗಲಿದೆ. ಮುಂಬೈನಲ್ಲಿ ಪ್ರತಿ ಕಿಲೋ ಲೀಟರ್ ದರವು ₹95,173 ರಿಂದ ₹88,834ಕ್ಕೆ ಇಳಿದಿದೆ.

ಕಬ್ಬಿಣ ಅದಿರು ಉತ್ಪಾದನೆ ಏರಿಕೆ

ನವದೆಹಲಿ (ಪಿಟಿಐ): ಕಬ್ಬಿಣದ ಅದಿರು, ಸುಣ್ಣದ ಕಲ್ಲು ಮತ್ತು ಅಲ್ಯೂಮಿನಿಯಂ ಉತ್ಪಾದನೆ 2024–25ರ ಹಣಕಾಸು ವರ್ಷದ ಮೊದಲ ತಿಂಗಳಾದ ಏಪ್ರಿಲ್‌ನಲ್ಲಿ ಏರಿಕೆ ಆಗಿದೆ ಎಂದು ಗಣಿ ಸಚಿವಾಲಯ ತಿಳಿಸಿದೆ.

ಕಬ್ಬಿಣದ ಅದಿರು ಉತ್ಪಾದನೆ ಶೇ 4ರಷ್ಟು ಏರಿಕೆಯಾಗಿದ್ದು, 2.6 ಕೋಟಿ ಟನ್ ಉತ್ಪಾದನೆ ಆಗಿದೆ. ಹಿಂದಿನ ವರ್ಷದ ಇದೇ ತಿಂಗಳಲ್ಲಿ 2.5 ಕೋಟಿ ಟನ್‌ನಷ್ಟಿತ್ತು.

ಸುಣ್ಣದ ಕಲ್ಲು ಉತ್ಪಾದನೆ 3.85 ಕೋಟಿ ಟನ್‌ನಿಂದ 3.93 ಕೋಟಿ ಟನ್‌ಗೆ ಹೆಚ್ಚಳವಾಗಿದೆ. ಅಲ್ಯೂಮಿನಿಯಂ ಉತ್ಪಾದನೆ ಶೇ 1ರಷ್ಟು ಏರಿಕೆಯಾಗಿದ್ದು, 3.42 ಲಕ್ಷ ಟನ್ ಆಗಿದೆ.

ಪ್ರಸ್ತುತ ಹಣಕಾಸು ವರ್ಷದ ಏಪ್ರಿಲ್‌ನಲ್ಲಿ ಕಬ್ಬಿಣದ ಅದಿರು ಮತ್ತು ಸುಣ್ಣದಕಲ್ಲು ಉತ್ಪಾದನೆ ಏರಿಕೆಯಾಗಿದೆ. ಇದು ಉಕ್ಕು ಮತ್ತು ಸಿಮೆಂಟ್ ಕೈಗಾರಿಕೆಗಳಲ್ಲಿನ ದೃಢವಾದ ಬೇಡಿಕೆಯನ್ನು ಪ್ರತಿಬಿಂಬಿಸುತ್ತದೆ. ಅಲ್ಯೂಮಿನಿಯಂ ಹೆಚ್ಚಳವು ಇಂಧನ, ಮೂಲಸೌಕರ್ಯ, ನಿರ್ಮಾಣ, ವಾಹನ ಮತ್ತು ಯಂತ್ರೋಪಕರಣಗಳಲ್ಲಿನ ಬಳಕೆಯ ಹೆಚ್ಚಳವನ್ನು ಸೂಚಿಸುತ್ತದೆ ಎಂದು ಗಣಿ ಸಚಿವಾಲಯ ಹೇಳಿದೆ.

ಜಿಎಸ್‌ಟಿ: ₹1.73 ಲಕ್ಷ ಕೋಟಿ ಸಂಗ್ರಹ

ನವದೆಹಲಿ (ಪಿಟಿಐ): ದೇಶದ ಸರಕು ಮತ್ತು ಸೇವಾ ತೆರಿಗೆಯ (ಜಿಎಸ್‌ಟಿ) ಮೂಲಕ 2024–25ರ ಹಣಕಾಸು ವರ್ಷದ ಮೇ ನಲ್ಲಿ ₹1.73 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದೆ.

ಕಳೆದ ಹಣಕಾಸು ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 10ರಷ್ಟು ಏರಿಕೆಯಾಗಿದೆ. ಆಮದು ಪ್ರಮಾಣ ನಿಧಾನಗತಿಯ ನಡುವೆಯೂ ದೇಶೀಯ ವಹಿವಾಟು ಹೆಚ್ಚಳದಿಂದ ವರಮಾನ ಏರಿಕೆಯಾಗಿದೆ ಎಂದು ಹಣಕಾಸು ಸಚಿವಾಲಯ ಶನಿವಾರ ತಿಳಿಸಿದೆ.

ಏಪ್ರಿಲ್‌ನಲ್ಲಿ ₹2.10 ಲಕ್ಷ ಕೋಟಿ ದಾಖಲೆಯ ಗರಿಷ್ಠ ಜಿಎಸ್‌ಟಿ ಸಂಗ್ರಹವಾಗಿತ್ತು. ಕಳೆದ ತಿಂಗಳು ಮರುಪಾವತಿ ನಂತರ ನಿವ್ವಳ ಜಿಎಸ್‌ಟಿ ವರಮಾನವು ₹1.44 ಲಕ್ಷ ಕೋಟಿಯಾಗಿದ್ದು, ಕಳೆದ ಅವಧಿಗೆ ಹೋಲಿಸಿದರೆ ಶೇ 6.9ರಷ್ಟು ಹೆಚ್ಚಳವಾಗಿದೆ.

ಮೇ ವರೆಗೆ ಒಟ್ಟು ₹3.83 ಲಕ್ಷ ಕೋಟಿ ಸಂಗ್ರಹವಾಗಿದ್ದು, ಶೇ 11.3ರಷ್ಟು ಬೆಳವಣಿಗೆ ಆಗಿದೆ. ಮರುಪಾವತಿ ನಂತರ ನಿವ್ವಳ ಜಿಎಸ್‌ಟಿ ಆದಾಯವು ₹3.36 ಲಕ್ಷ ಕೋಟಿಗಳಷ್ಟಾಗಿದೆ. ಇದು ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 11.6 ಹೆಚ್ಚಳವಾಗಿದೆ ಎಂದು ತಿಳಿಸಿದೆ.

ಜಿಎಸ್‌ಟಿ ವರಮಾನ ಸಂಗ್ರಹ (ಮೇ 2024)



ಕರ್ನಾಟಕದ ಸಂಗ್ರಹ ಏರಿಕೆ

ಕರ್ನಾಟಕದಲ್ಲಿ ₹11,889 ಕೋಟಿ ಜಿಎಸ್‌ಟಿ ಸಂಗ್ರಹವಾಗಿದ್ದು, ಶೇ 15ರಷ್ಟು ಏರಿಕೆಯಾಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ₹10,317 ಕೋಟಿ ಸಂಗ್ರಹವಾಗಿತ್ತು.

ಶಾಂತಿ ಮೆರವಣಿಗೆ ಉಕ್ರೇನ್‌ನಲ್ಲಿ ನಡೆಯುತ್ತಿರುವ ಯುದ್ಧವನ್ನು ಖಂಡಿಸಿ ಹಂಗೇರಿಯ ಬುಡಾಪೆಸ್ಟ್‌ನಲ್ಲಿ ಶನಿವಾರ ನಡೆದ ಶಾಂತಿ ಮೆರವಣಿಗೆಯಲ್ಲಿ ಭಾಗವಹಿಸಿದ್ದ ಜನಸಮೂಹ– ಎ.ಪಿ ಚಿತ್ರ

ಪುಣೆ ಅಪಘಾತ: ಬಾಲಕನ ತಾಯಿ ಬಂಧನ

ಪ್ರಜಾವಾಣಿ ವಾರ್ತೆ/ಪಿಟಿಐ

ಪುಣೆ: ಪೋಶೆ ಕಾರು ಅಪಘಾತ ಪ್ರಕರಣದಲ್ಲಿ ಕಾನೂನಿನ ಜೊತೆ ಸಂಘರ್ಷಕ್ಕೆ ಸಿಲುಕಿರುವ ಬಾಲಕನ ತಾಯಿ ಶಿವಾನಿ ಅಗರ್ವಾಲ್ ಅವರನ್ನು ಪುಣೆ ಪೊಲೀಸರು ಬಂಧಿಸಿದ್ದಾರೆ. ಬಾಲಕನ ರಕ್ತದ ಮಾದರಿಯನ್ನು ಬದಲಿಸಿ, ಆತನ ತಾಯಿಯ ರಕ್ತದ ಮಾದರಿಯನ್ನು ಇರಿಸಲಾಗಿತ್ತು ಎಂಬುದು ಖಚಿತವಾದ ನಂತರ ಈ ಬಂಧನ ಆಗಿದೆ ಎಂದು ಪೊಲೀಸರು ಹೇಳಿದ್ದಾರೆ.

ಪ್ರಕರಣದ ತನಿಖೆಯ ಭಾಗವಾಗಿ ಪೊಲೀಸರು ನಿರೀಕ್ಷಣಾ ಗೃಹದಲ್ಲಿ ಇರುವ ಬಾಲಕನ ಜೊತೆ, ಆತನ ತಾಯಿಯ ಉಪಸ್ಥಿತಿಯಲ್ಲಿ, ಸರಿಸುಮಾರು ಒಂದು ಗಂಟೆ ಮಾತನಾಡಿದರು.

ಬಾಲಕನನ್ನು ವಿಚಾರಣೆಗೆ ಗುರಿಪಡಿಸಲು ಬಾಲನ್ಯಾಯ ಮಂಡಳಿಯು (ಜೆಜೆಬಿ) ಪೊಲೀಸರಿಗೆ ಅನುಮತಿ ನೀಡಿದೆ.

ದಕ್ಷಿಣ ಆಫ್ರಿಕಾ: ಬಹುಮತ ಕಳೆದುಕೊಂಡ ಎಎನ್‌ಸಿ

ಜೋಹಾನಸ್‌ಬರ್ಗ್ (ಎಎಫ್‌ಪಿ): ಮೂರು ದಶಕಗಳಿಂದ ದಕ್ಷಿಣ ಆಫ್ರಿಕಾದಲ್ಲಿ ಅಧಿಕಾರದಲ್ಲಿರುವ 'ದ ಆಫ್ರಿಕನ್ ಕಾಂಗ್ರೆಸ್' (ಎಎನ್‌ಸಿ) ಪಕ್ಷವು ಈ ಬಾರಿ ಬಹುಮತ ಪಡೆಯುವಲ್ಲಿ ವಿಫಲವಾಗಿದ್ದು, ಇತರ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳುವ ಅನಿವಾರ್ಯತೆ ಎದುರಾಗಿದೆ.

ಶನಿವಾರ ಮತ ಎಣಿಕೆ ನಡೆದಿದ್ದು, ಅಧ್ಯಕ್ಷ ಸಿರಿಲ್ ರಾಮಫೋಸಾ ನೇತೃತ್ವದ ಎಎನ್‌ಸಿಯು ಶೇಕಡ 40ರಷ್ಟು ಮತವನ್ನು ಪಡೆದಿದೆ. 2019ರಲ್ಲಿ ಎಎನ್‌ಸಿಯು ಶೇಕಡ 57.5ರಷ್ಟು ಮತವನ್ನು ಗಳಿಸಿತ್ತು. ಚುನಾವಣಾ ಆಯೋಗವು ಅಧಿಕೃತ ಫಲಿತಾಂಶವನ್ನು ಇನ್ನೂ ಘೋಷಣೆ ಮಾಡಿಲ್ಲ.

1994ರಿಂದ ಏಕಾಧಿಪತ್ಯ ಸ್ಥಾಪಿಸಿದ್ದ ಎಎನ್‌ಸಿಗೆ ಈ ಬಾರಿ ಸಂಕಷ್ಟ ಎದುರಾಗಿದ್ದು, ದಕ್ಷಿಣ ಆಫ್ರಿಕಾ ರಾಜಕೀಯ ಕ್ಷೇತ್ರದಲ್ಲಿ ಇದೊಂದು ಐತಿಹಾಸಿಕ ಬೆಳವಣಿಗೆಯಾಗಿದೆ.

ಎಎನ್‌ಸಿ ಇತರ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಂಡು ಸರ್ಕಾರ ರಚಿಸಬಹುದು ಅಥವಾ ಇತರ ಪಕ್ಷಗಳ ಮನವೊಲಿಸಿ ಮರುಚುನಾವಣೆ ನಡೆಯುವಂತೆ ನೋಡಿಕೊಳ್ಳುವ ಸಾಧ್ಯತೆ ಇದೆ.

'ಚುನಾವಣೆಗೆ ಮುನ್ನವೆ ಇತರ ಪಕ್ಷಗಳೊಂದಿಗೆ ಮಾತುಕತೆ ನಡೆಸಿದ್ದೇವೆ. ಅಂತಿಮ ಫಲಿತಾಂಶ ಬಂದ ಬಳಿಕ ಪಕ್ಷದ ಉನ್ನತ ಸಮಿತಿಯು ಸಭೆ ಸೇರಿ ನಿರ್ಧಾರ ಕೈಗೊಳ್ಳಲಿದೆ' ಎಂದು ಎಎನ್‌ಸಿಯ ಪ್ರಭಾರಿ ಕಾರ್ಯದರ್ಶಿ ಹನರಲ್ ನೋಮ್‌ವುಲ್ಲಾ ಮೊಕೊನ್ಯಾನೆ ತಿಳಿಸಿದ್ದಾರೆ.

ಪ್ರಮುಖ ವಿರೋಧ ಪಕ್ಷವಾಗಿರುವ ಡೆಮಾಕ್ರಾಟಿಕ್ ಅಲಯನ್ಸ್ (ಡಿಎ) ಎರಡನೇ ಸ್ಥಾನದಲ್ಲಿದ್ದು, ಶೇಕಡ 21.71ರಷ್ಟು ಮತವನ್ನು ಗಳಿಸಿದೆ.

'ದಕ್ಷಿಣ ಆಫ್ರಿಕಾದಲ್ಲಿ ಈವರೆಗೆ ಬಹುಮತ ಇಲ್ಲದ ಸರ್ಕಾರ ರಚನೆಯಾಗಿಲ್ಲ. ಆದರೆ ಬೇರೆ ಪಕ್ಷಕ್ಕೆ ಈ ಅವಕಾಶ ಇದೆ' ಎಂದು ಡಿಎ ಪಕ್ಷದ ನಾಯಕಿ ಹೆಲೆನ್ ಝಿಲ್ಲೆ ತಿಳಿಸಿದ್ದಾರೆ.

ಆಕಸ್ಮಿಕ ಲಾಭ ತೆರಿಗೆ ಇಳಿಕೆ

ನವದೆಹಲಿ (ಪಿಟಿಐ): ದೇಶದಲ್ಲಿ ಉತ್ಪಾದನೆ ಆಗುವ ಕಚ್ಚಾ ತೈಲದ ಮೇಲಿನ ಆಕಸ್ಮಿಕ ಲಾಭ ತೆರಿಗೆಯನ್ನು ಕೇಂದ್ರ ಸರ್ಕಾರವು ಪ್ರತಿ ಟನ್‌ಗೆ ₹5,700 ರಿಂದ ₹5,200ಕ್ಕೆ ಇಳಿಸಿದೆ.

ವಿಶೇಷ ಹೆಚ್ಚುವರಿ ಅಬಕಾರಿ ಸುಂಕ (ಎಸ್‌ಎಇಡಿ) ರೂಪದಲ್ಲಿ ಈ ತೆರಿಗೆ ವಿಧಿಸಲಾಗುತ್ತದೆ. ಆದರೆ ಡೀಸೆಲ್, ಪೆಟ್ರೋಲ್ ಮತ್ತು ವಿಮಾನ ಇಂಧನದ (ಎಟಿಎಫ್) ಮೇಲಿನ ತೆರಿಗೆಯಲ್ಲಿ ಏರಿಕೆ ಮಾಡದೆ ಯಥಾಸ್ಥಿತಿ ಕಾಯ್ದುಕೊಳ್ಳಲಾಗಿದೆ. ಹೊಸ ದರಗಳು ಜೂನ್ 1ರಿಂದ ಜಾರಿಗೆ ಬಂದಿವೆ ಎಂದು ತಿಳಿಸಿದೆ.

ಮೊದಲ ಬಾರಿಗೆ 2022ರ ಜುಲೈ 1ರಿಂದ ಆಕಸ್ಮಿಕ ಲಾಭ ತೆರಿಗೆಗಳನ್ನು ವಿಧಿಸಲು ಸರ್ಕಾರವು ಆರಂಭಿಸಿತು. ಸರಾಸರಿ ತೈಲ ಬೆಲೆಗಳ ಆಧಾರದ ಮೇಲೆ ಪ್ರತಿ ಹದಿನೈದು ದಿನಗಳಿಗೊಮ್ಮೆ ಈ ತೆರಿಗೆ ದರಗಳನ್ನು ಮರು ಪರಿಶೀಲಿಸಲಾಗುತ್ತದೆ.

ಮುಂಬೈ: ಬಾಂಬ್ ಬೆದರಿಕೆ ಇಂಡಿಗೊ ವಿಮಾನ ತುರ್ತು ಭೂಸ್ಪರ್ಶ

ಮುಂಬೈ(ಪಿಟಿಐ): ಬಾಂಬ್ ಬೆದರಿಕೆ ಕರೆ ಬಂದ ಹಿನ್ನೆಲೆಯಲ್ಲಿ, ಚೆನ್ನೈನಿಂದ ಮುಂಬೈಗೆ ತೆರಳಿದ್ದ ಇಂಡಿಗೊ ವಿಮಾನವು ಇಲ್ಲಿ ಶನಿವಾರ ತುರ್ತು ಭೂಸ್ಪರ್ಶ ಮಾಡಿತು.

'ಬೆಳಿಗ್ಗೆ 8.45ಕ್ಕೆ ವಿಮಾನವು ಮುಂಬೈ ವಿಮಾನನಿಲ್ದಾಣದಲ್ಲಿ ತುರ್ತು ಭೂಸ್ಪರ್ಶ ಮಾಡಿದ ನಂತರ, ವಿಮಾನದಲ್ಲಿದ್ದ ಎಲ್ಲ 172 ಪ್ರಯಾಣಿಕರನ್ನು ಸುರಕ್ಷಿತವಾಗಿ ಇಳಿಸಲಾಯಿತು' ಎಂದು ಮೂಲಗಳು ಹೇಳಿವೆ.

'ಚೆನ್ನೈನಿಂದ ಮುಂಬೈಗೆ ಹೊರಟಿದ್ದ ವಿಮಾನದಲ್ಲಿ (6ಇ5314) ಬಾಂಬ್ ಇಡಲಾಗಿದೆ ಎಂಬ ಬೆದರಿಕೆ ಕರೆ ಬರುತ್ತಿದ್ದಂತೆಯೇ, ಮುಂಬೈನಲ್ಲಿರುವ ಏರ್ ಟ್ರಾಫಿಕ್ ಕಂಟ್ರೋಲ್‌ಗೆ ಪೈಲಟ್ ಮಾಹಿತಿ ನೀಡಿದರು. ಬೆನ್ನಲ್ಲೇ, ತುರ್ತು ಘೋಷಿಸಲಾಯಿತು' ಎಂದು ತಿಳಿಸಿವೆ.

'ಪ್ರಯಾಣಿಕರನ್ನು ಇಳಿಸಿದ ನಂತರ, ಶಿಷ್ಟಾಚಾರದಂತೆ ವಿಮಾನವನ್ನು ಪ್ರತ್ಯೇಕ ಸ್ಥಳಕ್ಕೆ ಒಯ್ದು, ಸುರಕ್ಷತೆಗೆ ಸಂಬಂಧಿಸಿ ಪರಿಶೀಲನೆಗೆ ಒಳಪಡಿಸಲಾಯಿತು' ಎಂದು ಇಂಡಿಗೊ ಸಂಸ್ಥೆ ತಿಳಿಸಿದೆ.

ಒಂದು ವಾರದ ಅವಧಿಯಲ್ಲಿ, ಇಂಡಿಗೊ ಸಂಸ್ಥೆಯ ವಿಮಾನಕ್ಕೆ ಬಾಂಬ್ ಬೆದರಿಕೆ ಬಂದ ಎರಡನೇ ಘಟನೆ ಇದಾಗಿದೆ. ಮೇ 28ರಂದು ವಾರಾಣಸಿಯಿಂದ ದೆಹಲಿಗೆ ಹೊರಟಿದ್ದ ಸಂಸ್ಥೆಯ ವಿಮಾನದಲ್ಲಿ ಬಾಂಬ್ ಇಡಲಾಗಿದೆ ಎಂಬ ಬೆದರಿಕೆ ಕರೆಯು ಸಾಕಷ್ಟು ಆತಂಕ ಮೂಡಿಸಿತ್ತು.

ಶ್ರೀಲಂಕಾ: ಐಎಸ್ ಶಂಕಿತರಿಗೆ ನೆರವಾದ ವ್ಯಕ್ತಿಯ ಬಂಧನ

ಕೊಲಂಬೊ(ಪಿಟಿಐ): ನಿಷೇಧಿತ ಇಸ್ಲಾಮಿಕ್ ಸ್ಟೇಟ್ (ಐಎಸ್) ಉಗ್ರ ಸಂಘಟನೆ ಜತೆ ಸಂಪರ್ಕ ಹೊಂದಿದ್ದ ಆರೋಪದ ಮೇಲೆ ಭಾರತದ ಅಹಮದಾಬಾದ್ ವಿಮಾನ ನಿಲ್ದಾಣದಲ್ಲಿ ಬಂಧಿತರಾಗಿದ್ದ ಶ್ರೀಲಂಕಾದ ನಾಲ್ವರು ಪ್ರಜೆಗಳಿಗೆ ನೆರವಾಗಿದ್ದ ಶಂಕಿತ ವ್ಯಕ್ತಿಯನ್ನು ಶ್ರೀಲಂಕಾ ಪೊಲೀಸರು ಬಂಧಿಸಿದ್ದಾರೆ.

ಶ್ರೀಲಂಕಾದ ಅಪರಾಧ ತನಿಖಾ ವಿಭಾಗದ (ಸಿಐಡಿ) ಪೊಲೀಸರು ಶುಕ್ರವಾರ ಕೊಲಂಬೊದಲ್ಲಿ ಪುಷ್ಪರಾಜ್ ಒಸ್ಮಾನ್ (47) ಎಂಬಾತ ನನ್ನು ಬಂಧಿಸಿದ್ದರು. ಈತನ ಬಗ್ಗೆ ಸುಳಿವು ಅಥವಾ ಮಾಹಿತಿ ನೀಡುವವರಿಗೆ ಶ್ರೀಲಂಕಾ ಪೊಲಿಸರು ಇತ್ತೀಚೆಗೆ ₹20 ಲಕ್ಷ ಬಹುಮಾನ ಘೋಷಿಸಿದ್ದರು. ಆತನ ವಿಡಿಯೊ ಬಿಡುಗಡೆ ಮಾಡಿದ್ದರು.

ಈತನು, ಅಹಮದಾಬಾದ್ ವಿಮಾನ ನಿಲ್ದಾಣದಲ್ಲಿ ಬಂಧಿತರಾಗಿರುವ ನಾಲ್ವರ ಜತೆ ದೂರವಾಣಿ ಸಂಪರ್ಕ ಹೊಂದಿರುವ ಸಾಧ್ಯತೆ ಇದೆ ಎಂದು ಪೊಲೀಸರು ತಿಳಿಸಿದ್ದಾರೆ. ಈ ನಾಲ್ವರು ಮೇ 19ರಂದು ಕೊಲಂಬೊದಿಂದ ಚೆನ್ನೈ ಮೂಲಕ ಅಹಮದಾಬಾದ್‌ಗೆ ಬಂದಿದ್ದರು. ಅವರನ್ನು ಗುಜರಾತ್ ಭಯೋತ್ಪಾದನಾ ನಿಗ್ರಹ ದಳದ ಪೊಲೀಸರು ಅಹಮದಾಬಾದ್ ವಿಮಾನ ನಿಲ್ದಾಣದಲ್ಲಿ ಬಂಧಿಸಿದ್ದರು.

ಅಡಿಕೆ ಧಾರಣೆ

ಬಂಟ್ವಾಳ	
ಕೋಕ	18000-28500
ಹೊಸತು	28500-38000
ಹಳತು	38000-46500
ಚಿತ್ರದುರ್ಗ	
ಅಪಿ	52839-53269
ಬೆಟ್ಟೆ	37119-37589
ಕೆಂಪುಗೋಟು	29610-30099
ರಾಶಿ	52329-52779
ಕಾರ್ಕಳ	
ಹೊಸತು	25000-38000
ಹಳತು	30000-46500
ಸಿದ್ದಾಪುರ	
ಕೆಂಪುಗೋಟು	28899-32199
ರಾಶಿ	47699-49799
ತಟ್ಟಿಬೆಟ್ಟೆ	33699-33699
ಬಿಳಿಗೋಟು	26899-31209
ಚಾಲಿ	34299-36899
ಕೋಕ	26099-28899
ಶಿರಸಿ	
ಬೆಟ್ಟೆ	34099-47891
ಬಿಳಿಗೋಟು	24130-30372
ಚಾಲಿ	33099-37898
ಕೆಂಪುಗೋಟು	27099-31599

ಲಿಂಗತ್ವ ಸಂವೇದನೆ ಸಮಿತಿ ಪುನರ್ ರಚನೆ

ನವದೆಹಲಿ (ಪಿಟಿಐ): ಲಿಂಗತ್ವ ಸಂವೇದನೆ ಮತ್ತು ಆಂತರಿಕ ದೂರುಗಳ ಸಮಿತಿಯನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಅವರು ಪುನರ್ ರಚಿಸಿದ್ದಾರೆ.

12 ಜನ ಸದಸ್ಯರ ಈ ಸಮಿತಿಗೆ ನ್ಯಾಯಮೂರ್ತಿ ಹಿಮಾ ಕೊಹ್ಲಿ ಅಧ್ಯಕ್ಷರಾಗಿರುತ್ತಾರೆ. ನ್ಯಾಯಮೂರ್ತಿ ಬಿ.ವಿ. ನಾಗರತ್ನ, ಹೆಚ್ಚುವರಿ ರಿಜಿಸ್ಟ್ರಾರ್ ಸುಖದಾ ಪ್ರೀತಂ, ಹಿರಿಯ ವಕೀಲರಾದ ಮೀನಾಕ್ಷಿ ಅರೋರ, ಮಹಾಲಕ್ಷ್ಮಿ ಪಾವನಿ ಅವರು ಪುನರ್ ರಚನೆ ಆಗಿರುವ ಸಮಿತಿಯಲ್ಲಿ ಇದ್ದಾರೆ.

ಸುಪ್ರೀಂ ಕೋರ್ಟ್ ವಕೀಲರ ಸಂಘದ ಪ್ರತಿನಿಧಿ ಸೌಮ್ಯಜಿತ್ ಪಾಣಿ, ಅಡ್ವೊಕೇಟ್ ಆನ್ ರೆಕಾರ್ಡ್ ಅನಿಂದಿತಾ ಪೂಜಾರಿ, ವಕೀಲೆ ಮಧು ಚೌಹಾಣ್, ಪ್ರೊಫೆಸರ್ ಶ್ರುತಿ ಪಾಂಡೆ, ಹಿರಿಯ ವಕೀಲರಾದ ಜೈದೀಪ್ ಗುಪ್ತಾ, ಮೇನಕಾ ಗುರುಸ್ವಾಮಿ ಮತ್ತು, ಷಿಕಾಗೊ ವಿಶ್ವವಿದ್ಯಾಲಯದ ದೆಹಲಿ ಕೇಂದ್ರದ ಕಾರ್ಯನಿರ್ವಾಹಕ ನಿರ್ದೇಶಕಿ ಲೇನಿ ಚೌಧುರಿ ಅವರು ಸಮಿತಿಯಲ್ಲಿ ಇದ್ದಾರೆ.

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

Log on to : https://homages.deccanherald.com
or
Scan QR code to access booking form

HY KASTURI
14 May 1932 - 1 June 2024

Wife of the late Dr HS Subrahmanyam
A kind, gentle, lovely Amma to
Lakshmi, Anand & Aditya

Funeral at 11 am, Sunday 2 June 2024
Banashankari Crematorium
Banashankari II Stage
Bangalore 70

Contact Anand 9916474392, Aditya 9980760710

ವೈಕುಂಠ ಸಮಾರಾಧನೆ



ಶ್ರೀ ಎಸ್. ವೀರಣ್ಣನವರು
ಜನನ : 15-01-1930
ಮರಣ : 22-05-2024

ದಿನಾಂಕ: 22-05-2024ನೇ ಬುಧವಾರ ದೈವಾಧೀನರಾದರೆಂದು ತಿಳಿಸಲು ವಿಷಾಧಿಸುತ್ತೇವೆ. ಇವರ ತತ್ಸಂಬಂಧವಾದ ವೈಕುಂಠ ಸಮಾರಾಧನೆಯನ್ನು ದಿನಾಂಕ: 02-06-2024ನೇ ಭಾನುವಾರ ಮಧ್ಯಾಹ್ನ 12-00 ಗಂಟೆಗೆ ಚಿತ್ರದುರ್ಗ ತಾಲ್ಲೂಕು, ಕ್ಯಾದಿಗೆರೆ ಗ್ರಾಮ, ಗೊಲ್ಲರಹಟ್ಟಿ, ತೋಟದ ಮನೆಯಲ್ಲಿ ಏರ್ಪಡಿಸಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು
ದಿ|| ಎಸ್. ವೀರಣ್ಣನವರ ಕುಟುಂಬದವರು
ಮೊ: 9900975559

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.

ಬುಕ್ ಮಾಡಿ

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ರಿಯಲ್ ಎಸ್ಟೇಟ್ ಸೆಲ್ಲಿಂಗ್

Sites

Bannerghatta Road

SITE FOR sale SIMHAPURI LAYOUT, Near Jigani Industrial area, Bengaluru 6100 sq ft. 9591932764

ಉದ್ಯೋಗಾವಕಾಶ

Marketing & Sales

Farmgate Agro Milch Pvt Ltd.
Chittoor Dist., AP
Under the new Management for Milk Sales in Bangalore
ASMs-3 with 5 yrs Exp. & Executives-20 with 3 yrs Exp. positions are vacant.
Interested candidates may send their Resumes to :
hrctr@farmgateagro.com
Mob: 9573229977

Drivers

ಚಾಲಕ ಅಗತ್ಯವಿದೆ! ಬೆಂಗಳೂರಿನಲ್ಲಿ ಎವರೆಸ್ಟ್ ಫ್ಲೀಟ್ CNG ಕಾರ್ ಅನ್ನುಓಡಿಸಿ ಮತ್ತು ತಿಂಗಳಿಗೆ ₹35,000* ಸಂಪಾದಿಸಿ!! +91 9493275000 ಗೆ ಕರೆಮಾಡಿ

Wanted

ಶ್ರೀಕ್ಷೇತ್ರ ತೈಲೇಶ್ವರ ಗಾಣಿಗರ ಮಹಾಸಂಸ್ಥಾನ ಮಠ, ನೆಲಮಂಗಲ
ಬೇಕಾಗಿದ್ದಾರೆ
ವಾಹನ ಚಾಲಕ,
ಸಸ್ಯಹಾರಿ ಅಡುಗೆಯವರು,
ಪುರುಷ ಶುಶ್ರೂಷಕ (Male Nurse)
ವಸತಿ ಸೌಕರ್ಯ ಲಭ್ಯವಿದೆ
ಸಂಪರ್ಕಿಸಿ:
9480259762
9448359762

ವಸತಿಗೃಹಕ್ಕೆ ಸ್ವಾಗತಕಾರರು (Receptionist) ಹಾಗೂ ರೂಂ ಬಾಯ್ಸ್ ಬೇಕಾಗಿದ್ದಾರೆ. ಖುದ್ದಾಗಿ ಬೆಳಿಗ್ಗೆ 10 ಗಂಟೆಯೊಳಗೆ ಸಂಪರ್ಕಿಸಿ. ವಿಳಾಸ: ಶ್ರೀಕಮಲ್ ಹೋಟೆಲ್(ಲಾಡ್ಜ್), ಕಬ್ಬನ್ ಪೇಟೆ ಮುಖ್ಯರಸ್ತೆ, ಅವಿನ್ಯೂರಸ್ತೆ ಕ್ರಾಸ್, ಮೈಸೂರುಬ್ಯಾಂಕ್ ಸರ್ಕಲ್ ಹತ್ತಿರ, ಬೆಂಗಳೂರು-02. 080 - 22215903

Part-Time Jobs

ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ವೈವಾಹಿಕ

Matrimonial Bureaus

MARATHA VIVAH
Maratha Highly Qualified Service & Settled Businessman Profiles Available.
Key Features
1. Authentic Profiles.
2. Personalised match making
3. Excellent customer service
Contact : 9945188077
marathavivah.com

ಪ್ರವಾಸ

Travel

8 ದಿನಗಳ ಮುಕ್ತಿನಾಥ ನೇಪಾಳ ವಿಶೇಷ. 7/11 ದಿನಗಳು ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್. 11 ದಿನಗಳ ವಿಯೆಟ್ನಾಂ ಮತ್ತು ಕಾಂಬೋಡಿಯ. 6 ದಿನಗಳ ಬಾಲಿ. 13 ದಿನಗಳ ಚಾರ್‌ಧಾಮ್. 9/5 ದಿನಗಳ ಕಾಶಿ,ಅಯೋಧ್ಯ,ಗಯಾ. 6 ದಿನಗಳ ಶ್ರೀಲಂಕಾ. ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. 9900080793 9900080792

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ಶಿಕ್ಷಣ
ಶಿಕ್ಷಣಕ್ಕೆ ಸಂಬಂಧಿತ ಎಲ್ಲಾ ಜಾಹೀರಾತುಗಳ ಪ್ರಕಟಣೆಗಾಗಿ
www.dhclassifieds.com
ಬುಕ್ ಮಾಡಿ
*Conditions apply
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9731810277 | +91 9845114560 | +91 9900428036

ಮೊದಲ ಪಂದ್ಯದಲ್ಲಿ ಪಟೇಲ್ ಬಳಗಕ್ಕೆ ಜಾಫರ್ ಪಡೆ ಸವಾಲು

ಅಮೆರಿಕ– ಕೆನಡಾ ಹಣಾಹಣಿ

ಕೆನಡಾ ತಂಡದಲ್ಲಿರುವ ದಾವಣಗೆರೆಯ ಶ್ರೇಯಸ್ ಮೊವ್ವಾ – ಎಎಫ್‌ಪಿ ಚಿತ್ರ

ಅಮೆರಿಕ ತಂಡದಲ್ಲಿರುವ ಮೂಡಿಗೆರೆಯ ನಾಸ್ತುಷ್ ಕೆಂಜಿಗೆ –ಎಎಫ್‌ಪಿ ಚಿತ್ರ

ಪಂದ್ಯ ಆರಂಭ: ಬೆಳಿಗ್ಗೆ 6 (ಭಾರತೀಯ ಕಾಲಮಾನ)
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್

ಬಲಾಬಲ
(ಟಿ20 ಮಾದರಿ)
ಪಂದ್ಯ 7
ಅಮೆರಿಕ ಜಯ 5
ಕೆನಡಾ ಜಯ 2

ಡಲ್ಲಾಸ್ (ಪಿಟಿಐ): ಕ್ರೀಡಾ ಜಗತ್ತಿಗೆ ಹಲವಾರು ಖ್ಯಾತನಾಮ ಕ್ರೀಡಾಪಟುಗಳನ್ನು ನೀಡಿದ ದೇಶ ಅಮೆರಿಕ. ಇದೀಗ ಕ್ರಿಕೆಟ್‌ನತ್ತ ಚಿತ್ತ ಹೊರಳಿಸಿದೆ.

ಭಾನುವಾರ (ಭಾರತೀಯ ಕಾಲಮಾನ) ಬೆಳಿಗ್ಗೆ ಆರಂಭವಾಗಲಿರುವ ಒಂಬತ್ತನೇ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯೊಂದಿಗೆ ಈ ದೇಶದಲ್ಲಿ ಹೊಸ ಪರ್ವ ಶುರುವಾಗಲಿದೆ. ಗ್ರ್ಯಾಂಡ್ ಪ್ರಿಯರಿ ಕ್ರೀಡಾಂಗಣದಲ್ಲಿ ನಡೆಯಲಿರುವ ಉದ್ಘಾಟನಾ ಪಂದ್ಯದಲ್ಲಿ ಅಮೆರಿಕ ಮತ್ತು ಕೆನಡಾ ತಂಡಗಳು ಮುಖಾಮುಖಿಯಾಗಲಿವೆ.

ಭಾರತ ಮೂಲದ ಮೊನಾಂಕ್ ಪಟೇಲ್ ಅಮೆರಿಕ ತಂಡಕ್ಕೆ ಹಾಗೂ ಪಾಕಿಸ್ತಾನ ಮೂಲದ ಸಾದ್ ಬಿನ್ ಜಾಫರ್ ಅವರು ಕೆನಡಾ ಬಳಗಕ್ಕೆ ನಾಯಕತ್ವ ವಹಿಸಿದ್ದಾರೆ. ಆದರೆ ಇನ್ನೊಂದು ವಿಶೇಷವೆಂದರೆ ಈ ಎರಡೂ ತಂಡಗಳಲ್ಲಿ ಭಾರತ, ಪಾಕ್, ಇಂಗ್ಲೆಂಡ್ ಮತ್ತು ಸ್ಥಳೀಯ ಆಟಗಾರರು ಇದ್ದಾರೆ. ಅಮೆರಿಕ ತಂಡಕ್ಕೆ ಆಸ್ಟ್ರೇಲಿಯಾದ ಮಾಜಿ ಕ್ರಿಕೆಟಿಗ ಸ್ಟುವರ್ಟ್ ಲಾ ಅವರು ಮುಖ್ಯ ಕೋಚ್ ಆಗಿದ್ದಾರೆ. ಅಮೆರಿಕ ತಂಡದಲ್ಲಿ ಚಿಕ್ಕಮಗಳೂರಿನ ಮೂಡಿಗೆರೆಯ ನಾಸ್ತುಷ್ ಕೆಂಜಿಗೆ ಹಾಗೂ ಕೆನಡಾದಲ್ಲಿ ದಾವಣಗೆರೆಯ ಶ್ರೇಯಸ್ ಮೊವ್ವಾ ಇದ್ದಾರೆ.

ಈ ಪಂದ್ಯದಲ್ಲಿ ಅಮೆರಿಕವೇ ಗೆಲುವಿನ ಫೇವರಿಟ್. ಈಚೆಗಷ್ಟೇ ಬಾಂಗ್ಲಾ ಎದುರಿನ ಸರಣಿಯಲ್ಲಿ 2–1ರಿಂದ ಗೆದ್ದು ಬಂದಿರುವ ಅಮೆರಿಕ ಆತ್ಮವಿಶ್ವಾಸದಲ್ಲಿದೆ. ಅಲ್ಲದೇ ಈಚೆಗೆ ನಡೆದಿದ್ದ ಇನ್ನೊಂದು ಸರಣಿಯಲ್ಲಿ ಅಮೆರಿಕ 4–0ಯಿಂದ ಕೆನಡಾ ವಿರುದ್ಧವೂ ಜಯಿಸಿತ್ತು. ಅಮೆರಿಕ ತಂಡದಲ್ಲಿ ನ್ಯೂಜಿಲೆಂಡ್‌ನ ಅನುಭವಿ ಬ್ಯಾಟರ್ ಕೋರಿ ಆ್ಯಂಡರ್ಸನ್ ಇದ್ದಾರೆ. 2015ರ ಟೂರ್ನಿಯಲ್ಲಿ ಕಿವೀಸ್ ಫೈನಲ್ ತಲುಪಿದ್ದ ಸಂದರ್ಭದಲ್ಲಿ ಕೋರಿ ಆಡಿದ್ದರು.

ತಂಡದ ನಾಯಕ ಮೊನಾಂಕ್ ಪಟೇಲ್ ಮೂಲತಃ ಗುಜರಾತ್‌ನ ಆನಂದ್ ನಗರದವರು. ಇಲ್ಲಿಯೇ ವಯೋಮಿತಿ ಕ್ರಿಕೆಟ್‌ನಲ್ಲಿ ಆಡಿದ್ದರು. 2016ರಲ್ಲಿ ಅಮೆರಿಕಕ್ಕೆ ತೆರಳಿದ್ದರು.

ಮುಖ್ಯಾಂಶಗಳು
- ಅಮೆರಿಕ ತಂಡಕ್ಕೆ ಇದು ಚೊಚ್ಚಲ ವಿಶ್ವಕಪ್ ಟೂರ್ನಿ
- ಈ ಪಂದ್ಯದಲ್ಲಿ ಇಬ್ಬರು ಕನ್ನಡಿಗರ ಮುಖಾಮುಖಿ
- ಅಮೆರಿಕ ತಂಡಕ್ಕೆ ಸ್ಟುವರ್ಟ್ ಲಾ ಕೋಚ್

ಟಿ20 ವಿಶ್ವಕಪ್‌ನಲ್ಲಿ ಆಡುವ ಅಮೆರಿಕ ತಂಡದ ಕ್ವಾಲಿಫೈಯರ್ ಟೂರ್ನಿಯಲ್ಲಿ ಪಟೇಲ್ ಆರು ಇನಿಂಗ್ಸ್‌ಗಳಿಂದ 208 ರನ್ ಗಳಿಸಿದ್ದರು. 2019ರಲ್ಲಿ ಅವರು ಯುನೈಟೆಡ್ ಅರಬ್ ಎಮಿರೇಟ್ಸ್ ವಿರುದ್ಧ ಅಂತರರಾಷ್ಟ್ರೀಯ ಟಿ20 ಪಂದ್ಯಕ್ಕೆ ಪದಾರ್ಪಣೆ ಮಾಡಿದರು.

ಐಪಿಎಲ್‌ನಲ್ಲಿ ಈ ಹಿಂದೆ ಆಡಿದ್ದ ಎಡಗೈ ಸ್ಪಿನ್ನರ್ ಹರಮೀತ್ ಸಿಂಘ್ (ಮುಂಬೈ ಇಂಡಿಯನ್ಸ್, ರಾಜಸ್ಥಾನ ರಾಯಲ್ಸ್) ಹಾಗೂ ಮಿಲಿಂದ್ ಕುಮಾರ್ (ರಾಯಲ್ ಚಾಲೆಂಜರ್ಸ್ ಬೆಂಗಳೂರು) ಅವರೂ ಅಮೆರಿಕ ತಂಡದಲ್ಲಿದ್ದಾರೆ.

ಹ್ಯಾಮ್‌ಸ್ಟ್ರಿಂಗ್ ಗಾಯದಿಂದ ಚೇತರಿಸಿಕೊಂಡಿರುವ ಅಲಿ ಖಾನ್ ಈಗ ಫಿಟ್ ಆಗಿದ್ದಾರೆ. ಬೌಲಿಂಗ್ ಆಲ್‌ರೌಂಡರ್ ನಿತೀಶ್ ಕುಮಾರ್ ಅವರು ಈ ಮುಂದೆ ಕೆನಡಾ ತಂಡದಲ್ಲಿ 18 ಪಂದ್ಯಗಳಲ್ಲಿ ಆಡಿದ್ದರು. 2019ರಲ್ಲಿ ಅಮೆರಿಕ ತಂಡಕ್ಕೆ ಸೇರ್ಪಡೆಯಾದರು.

ಎಡಗೈ ಸ್ಪಿನ್ನರ್ ಸಾದ್ ಬಿನ್ ಜಾಫರ್ ಅವರು ಕೆನಡಾ ತಂಡದ ಅನುಭವಿ ಆಟಗಾರ. ಬ್ಯಾಟರ್ ಆ್ಯರನ್ ಜಾನ್ಸನ್, ಎಡಗೈ ವೇಗಿ ಖಲೀಂ ಸನಾ ಮೇಲೂ ಅಪಾರ ನಿರೀಕ್ಷೆ ಇದೆ. ಈ ತಂಡದಲ್ಲಿರುವ ಆಟಗಾರರ ಪೈಕಿ ನಾಲ್ವರು ಮಾತ್ರ 30 ವರ್ಷದೊಳಗಿನವರಾಗಿದ್ದಾರೆ.

ತಂಡಗಳು

ಮೊನಾಂಕ್ ಪಟೇಲ್

ಅಮೆರಿಕ: ಮೊನಾಂಕ್ ಪಟೇಲ್ (ನಾಯಕ), ಆ್ಯರನ್ ಜೋನ್ಸ್ (ಉಪನಾಯಕ), ಆ್ಯಂಡ್ರಿಸ್ ಗೌಸ್, ಕೋರಿ ಆ್ಯಂಡರ್ಸನ್, ಅಲಿ ಖಾನ್, ಹರ್ಮೀತ್ ಸಿಂಗ್, ಜೆಸ್ಸಿ ಸಿಂಗ್, ಮಿಲಿಂದ್ ಕುಮಾರ್, ನಿಸರ್ಗ್ ಪಟೇಲ್, ನಿತೀಶ್ ಕುಮಾರ್, ನಾಸ್ತುಷ್ ಕಂಜಿಗೆ , ಸೌರಭ್ ನೇತ್ರಾಳ್ವಕರ್, ಶ್ಯಾಡ್ಲಿ ವ್ಯಾನ್ ಶಾಲ್ಕವಿಕ್, ಸ್ಟೀವನ್ ಟೇಲರ್, ಶಯಾನ್ ಜಹಾಂಗೀರ್. ಸ್ಟುವರ್ಟ್ ಲಾ (ಮುಖ್ಯ ಕೋಚ್), ಮೈಕೆಲ್ ವೂಸ್ (ಸಹಾಯಕ ಕೋಚ್)

ಸಾದ್ ಬಿನ್ ಜಾಫರ್

ಕೆನಡಾ: ಸಾದ್ ಬಿನ್ ಜಾಫರ್ (ನಾಯಕ), ಆ್ಯರನ್ ಜಾನ್ಸನ್, ರವೀಂದರ್ ಪಾಲ್ ಸಿಂಗ್, ನವನೀತ್ ಧಲಿವಾಲ್, ಕಲೀಂ ಸನಾ, ದಿಲೊನ್ ಹ್ಯಾಲಿಗರ್, ಜೆರೆಮಿ ಗೊರ್ಡಾನ್, ನಿಖಿಲ್ ದತ್ತಾ, ಪರಗತ್ ಸಿಂಗ್, ನಿಕೊಲಸ್ ಕಿರ್ಟನ್, ರಯಾನ್ ಖಾನ್ ಪಠಾಣ್, ಜುನೇದ್ ಸಿದ್ಧಿಕಿ, ದಿಲ್‌ಪ್ರೀತ್ ಬಜ್ವಾ, ಶ್ರೇಯಸ್ ಮೊವ್ವಾ, ರಿಷ್ವಿ ಜೋಶಿ. ಪುಬುದು ದಸನಾಯಕೆ (ಮುಖ್ಯ ಕೋಚ್), ಖುರಮ್ ಚೊಹಾನ್ (ಸಹಾಯಕ ಕೋಚ್).

ಅಮೆರಿಕದಲ್ಲಿ ಕ್ರಿಕೆಟ್; ವಿರಾಟ್ ಕೊಹ್ಲಿ ಸಂತಸ

ಮುಂಬೈ (ಪಿಟಿಐ): 'ಅಮೆರಿಕದಲ್ಲಿ ನಾವು ಕ್ರಿಕೆಟ್ ಆಡುತ್ತೇವೆ ಎಂದೂ ಊಹಿಸಿರಲೂ ಇಲ್ಲ. ಇದೀಗ ಅಂತಹ ಅವಕಾಶ ಕೂಡಿ ಬಂದಿದೆ. ಅಮೆರಿಕದಲ್ಲಿ ನಡೆಯುತ್ತಿರುವ ಟಿ20 ವಿಶ್ವಕಪ್ ಟೂರ್ನಿಯು ಜಗತ್ತಿನಲ್ಲಿ ವೃದ್ಧಿಸುತ್ತಿರುವ ಕ್ರಿಕೆಟ್ ಜನಪ್ರಿಯತೆ ತೋರಿಸುತ್ತದೆ' ಎಂದು ಭಾರತ ತಂಡದ ವಿರಾಟ್ ಕೊಹ್ಲಿ ಅಭಿಪ್ರಾಯಪಟ್ಟರು.

ಭಾನುವಾರದಿಂದ ಟೂರ್ನಿ ಆರಂಭಗೊಳ್ಳಲಿದೆ. ಕೊಹ್ಲಿ ಶುಕ್ರವಾರ ನ್ಯೂಯಾರ್ಕ್‌ಗೆ ಬಂದಿದ್ದು, ಶನಿವಾರ ಅಭ್ಯಾಸ ಆರಂಭಿಸಿದರು.

'ಪ್ರಾಮಾಣಿಕವಾಗಿ ಹೇಳಬೇಕೆಂದರೆ ಅಮೆರಿಕದಲ್ಲಿ ನಾವು ಕ್ರಿಕೆಟ್ ಆಡಲಿದ್ದೇವೆ ಎಂದು ಅಂದುಕೊಂಡಿರಲಿಲ್ಲ. ಅದು ಈಗ ನಿಜವಾಗಿದೆ' ಎಂದು ವಿರಾಟ್ ಹೇಳಿರುವ ವಿಡಿಯೊವನ್ನು ಮುಂಬೈಯಲ್ಲಿರುವ ಅಮೆರಿಕದ ರಾಯಭಾರಿ ಕಚೇರಿಯು ಹಂಚಿಕೊಂಡಿದೆ.

'ಕ್ರಿಕೆಟ್ ಜನಪ್ರಿಯತೆ ಮತ್ತು ಪ್ರಭಾವ ಹೆಚ್ಚುತ್ತಿವೆ. ಈ ಬದಲಾವಣೆಯನ್ನು ಸ್ವೀಕರಿಸಲು ಅಮೆರಿಕ ಸಿದ್ಧವಾಗಿದೆ. ವಿಶ್ವಕಪ್ ಆಯೋಜನೆಯ ಮೂಲಕ ಕ್ರಿಕೆಟ್ ಮತ್ತಷ್ಟು ಜನಪ್ರಿಯಗೊಳ್ಳಲು ನೆರವಾಗಲಿದೆ' ಎಂದು ಕೊಹ್ಲಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ.

ವಿಂಡೀಸ್‌ಗೆ ಪಾಪುವಾ ಸವಾಲು

ವೆಸ್ಟ್ ಇಂಡೀಸ್ ತಂಡದ ನಾಯಕ ರೋವ್ಮನ್ ಪೊವೆಲ್

ಜಾರ್ಜ್‌ಟೌನ್, ಗಯಾನ (ಪಿಟಿಐ): ಚುಟುಕು ಮಾದರಿಯಲ್ಲಿ ಎರಡು ಬಾರಿ ವಿಶ್ವಕಪ್ ಗೆದ್ದಿರುವ ವೆಸ್ಟ್ ಇಂಡೀಸ್ ತಂಡವು ಭಾನುವಾರ ಪಾಪುವಾ ನ್ಯೂಗಿನಿ ಎದುರು ಕಣಕ್ಕಿಳಿಯಲಿದೆ.

2012 ಮತ್ತು 2016ರಲ್ಲಿ ವಿಂಡೀಸ್ ವಿಶ್ವಕಪ್ ಗೆದ್ದಿತ್ತು. ಎಂಟು ವರ್ಷಗಳ ಹಿಂದೆ ಕೋಲ್ಕತ್ತದ ಈಡನ್ ಗಾರ್ಡನ್‌ನಲ್ಲಿ ನಡೆದಿದ್ದ ವಿಶ್ವಕಪ್ ಫೈನಲ್‌ನಲ್ಲಿ ಕೊನೆಯ ಓವರ್‌ನಲ್ಲಿ ಕಾರ್ಲೋಸ್ ಬ್ರಾಥ್‌ವೇಟ್ ನಾಲ್ಕು ಸಿಕ್ಸರ್ ಹೊಡೆದು ತಂಡಕ್ಕೆ ಗೆಲುವಿನ ಕಾಣಿಕೆ ನೀಡಿದ್ದರು.

ಆ ಸಂಭ್ರಮದ ನಂತರ ವಿಂಡೀಸ್ ತಂಡವು ಮತ್ತೆ ಪ್ರಶಸ್ತಿ ಜಯಿಸಿಲ್ಲ. ಆಗ ತಂಡದ ನಾಯಕರಾಗಿದ್ದ ಡರೆನ್ ಸ್ಯಾಮಿ ಈಗ ಕೋಚ್ ಆಗಿದ್ದಾರೆ. ರೋವ್ಮನ್ ಪೊವೆಲ್ ನಾಯಕತ್ವ ವಹಿಸಿದ್ದಾರೆ. ಐಪಿಎಲ್‌ನಲ್ಲಿ ಮಿಂಚಿ ಬಂದಿರುವ ನಿಕೊಲಸ್ ಪೂರನ್, ಆ್ಯಂಡ್ರೆ ರಸೆಲ್, ಶಿಮ್ರಾನ್ ಹೆಟ್ಮೆಯರ್ ಹಾಗೂ ರೊಮೆರಿಯೊ ಶೆಫರ್ಡ್ ಅವರು ತಮ್ಮ ದೇಶಕ್ಕೆ ಮತ್ತೆ ಟಿ20 ಕಿರೀಟ ತೊಡಿಸುವ ಉತ್ಸಾಹದಲ್ಲಿದ್ದಾರೆ.

ಆದರೆ, ತಂಡವು ಕಳೆದ ಎರಡು ಟೂರ್ನಿಗಳಲ್ಲಿ ಮಾಡಿದ್ದ ಲೋಪಗಳನ್ನೂ ತಿದ್ದಿಕೊಳ್ಳಬೇಕಿದೆ. 2021ರ ಟೂರ್ನಿಯಲ್ಲಿ ಸೂಪರ್ 12 ಹಂತದಲ್ಲಿ ಪರಾಭವಗೊಂಡಿತ್ತು. 2022ರಲ್ಲಿ ಮುಖ್ಯಸುತ್ತಿಗೆ ಕ್ವಾಲಿಫೈ ಆಗಲಿಲ್ಲ. ಕ್ರಿಕೆಟ್ ಲೋಕದ ಉದಯೋನ್ಮುಖ ತಂಡಗಳಾದ ಸ್ಕಾಟ್ಲೆಂಡ್ ಮತ್ತು ಐರ್ಲೆಂಡ್ ತಂಡಗಳ ಎದುರು ಆಘಾತ ಎದುರಿಸಿತ್ತು.

ವಿಂಡೀಸ್ ಸಾಮರ್ಥ್ಯಕ್ಕೆ ಹೋಲಿಸಿದರೆ ಪಾಪುವಾ ನ್ಯೂಗಿನಿ ಏನೇನೂ ಅಲ್ಲ. ಅನುಭವವೂ ಕಡಿಮೆ. ಈ ತಂಡಕ್ಕೆ ಇದು ಎರಡನೇ ವಿಶ್ವಕಪ್ ಟೂರ್ನಿಯಾಗಿದೆ. 2021ರಲ್ಲಿ ಆಡಿತ್ತು. ಆಗ ತಂಡದಲ್ಲಿದ್ದ ಅಸಾದುಲ್ಲಾ ವಾಲಾ ಈಗ ನಾಯಕರಾಗಿದ್ದಾರೆ. 15 ಆಟಗಾರರ ತಂಡದಲ್ಲಿ ಲೆಗ್‌ಸ್ಪಿನ್ ಆಲ್‌ರೌಂಡರ್ ಸಿ.ಜೆ. ಅಮಿನಿ, ಎಡಗೈ ಬೌಲರ್ ಸೆಮಾ ಕಾಮಿಯಾ, ಕಬುವಾ ವಾಗಿ ಮೊರಿಯಾ ಇದ್ದಾರೆ. ಸೆಮಾ ಮತ್ತು ಮೊರಿಯಾ ಅವರಿಬ್ಬರೂ ಕ್ವಾಲಿಫೈಯರ್ ಪಂದ್ಯದಲ್ಲಿ ಫಿಲಿಪಿನ್ಸ್ ವಿರುದ್ಧ ಹ್ಯಾಟ್ರಿಕ್ ಸಾಧನೆ ಮಾಡಿದ್ದರು.

ತಂಡಗಳು

ವೆಸ್ಟ್ ಇಂಡೀಸ್: ರೋವ್ಮನ್ ಪೊವೆಲ್ (ನಾಯಕ), ಅಲ್ಜರಿ ಜೋಸೆಫ್ (ಉಪನಾಯಕ), ಜಾನ್ಸನ್ ಚಾರ್ಲ್ಸ್, ರಾಸ್ಟನ್ ಚೇಸ್, ಶಿಮ್ರಾನ್ ಹೆಟ್ಮೆಯರ್, ಶಾಯ್ ಹೋಪ್, ಅಕೀಲ್ ಹುಸೇನ್, ಶಾಮರ್ ಜೋಸೆಫ್, ಬ್ರೆಂಡನ್ ಕಿಂಗ್, ಒಬೆದ್ ಮೆಕಾಯ್, ಗುಡಕೇಶ್ ಮೋತಿ, ನಿಕೊಲಸ್ ಪೂರನ್, ಆ್ಯಂಡ್ರೆ ರಸೆಲ್, ಶೆರ್ಫನ್ ರುದರ್‌ಫೋರ್ಡ್, ರೊಮೆರಿಯೊ ಜೋಸೆಫ್.

ಪಾಪುವಾ ನ್ಯೂಗಿನಿ: ಅಸಾದುಲ್ಲಾ ವಾಲಾ (ನಾಯಕ), ಅಲೀ ನಾವೊ, ಚಾದ್ ಸೋಫರ್, ಸಿಜೆ ಅಮಿನಿ, ಹಿಲಾ ವೇರ್, ಹಿರಿ ಹಿರಿ, ಜ್ಯಾಕ್ ಗಾರ್ಡನರ್, ಜಾನ್ ಕಾರಿಕೊ, ಕಬುವಾ ವಾಗಿ ಮೊರಿಯೆ, ಕಿಪ್ಲಿಂಗ್ ಡೊರಿಗಾ, ಲೆಗಾ ಸಿಯಾಕಾ, ನಾರ್ಮನ್ ವೆನುವಾ, ಸೆಮಾ ಕೆಮಿಯಾ, ಸೆಸೆ ಬಾವು. ಟೋನಿ ಉರಾ.

ಪಂದ್ಯ ಆರಂಭ: ರಾತ್ರಿ 8 (ಭಾರತೀಯ ಕಾಲಮಾನ)

ಬಾಂಗ್ಲಾ ವಿರುದ್ಧ ಭಾರತಕ್ಕೆ ಸುಲಭ ಜಯ

ರಿಷಭ್ ಪಂತ್ –ಎಎಫ್‌ಪಿ ಚಿತ್ರ

ನ್ಯೂಯಾರ್ಕ್ (ಪಿಟಿಐ): ರಿಷಭ್ ಪಂತ್ ಅರ್ಧಶತಕ ಹಾಗೂ ಹಾರ್ದಿಕ್ ಪಾಂಡ್ಯ ಮಿಂಚಿನ ಬ್ಯಾಟಿಂಗ್ ಬಲದಿಂದ ಭಾರತ ತಂಡವು ಶನಿವಾರ ಬಾಂಗ್ಲಾದೇಶದ ಎದುರು ನಡೆದ ಅಭ್ಯಾಸ ಪಂದ್ಯದಲ್ಲಿ 60 ರನ್‌ಗಳಿಂದ ಜಯ ಸಾಧಿಸಿತು.

ಟಾಸ್ ಗೆದ್ದ ಭಾರತ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿ ಕೊಂಡಿತು. ರಿಷಭ್ (53; 32ಎ, 4X4, 6X4) ಹಾಗೂ ಪಾಂಡ್ಯ (ಔಟಾಗದೆ 40; 23ಎ, 4X2, 6X4) ಮಿಂಚಿನ ಬ್ಯಾಟಿಂಗ್‌ನಿಂದ ತಂಡವು 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 182 ರನ್ ಗಳಿಸಿತು.

ಗುರಿಯನ್ನು ಬೆನ್ನತ್ತಿದ ಬಾಂಗ್ಲಾ ತಂಡಕ್ಕೆ ಅರ್ಷದೀಪ್ ಸಿಂಗ್ ಆರಂಭದಲ್ಲೇ ಪೆಟ್ಟು ನೀಡಿದರು. 7 ರನ್ ಗಳಿಸುವಷ್ಟರಲ್ಲಿ ಸೌಮ್ಯ ಸರ್ಕಾರ್ (0), ಲಿಟನ್ ದಾಸ್ (6) ಅವರನ್ನು ವಾಪಸ್ ಕಳುಹಿಸಿದರು. ನಾಯಕ ನಜ್ಮುಲ್ ಹುಸೇನ್ ಶಾಂಟೊ (0) ಮತ್ತು ತೌಹಿದ್ ಹೃದಯ್ (13) ನಿರಾಸೆ ಮೂಡಿಸಿದರು. ಶಕೀಬ್ ಅಲ್ ಹಸನ್ 28 ಮತ್ತು ಮಹಮ್ಮದುಲ್ಲಾ (40) ತುಸು ಹೋರಾಟ ತೋರಿದರು. ತಂಡವು 20 ಓವರ್‌ಗಳಲ್ಲಿ 9 ವಿಕೆಟ್‌ಗೆ 122 ರನ್ ಗಳಿಸಿ ಹೋರಾಟ ಮುಗಿಸಿತು.

ಇದಕ್ಕೆ ಮೊದಲು ಭಾರತ ತಂಡದ ಆರಂಭವೂ ಉತ್ತಮವಾಗಿರಲಿಲ್ಲ. ಎರಡನೇ ಓವರ್‌ನಲ್ಲಿಯೇ ಸಂಜು ಸ್ಯಾಮ್ಸನ್ (1 ರನ್) ಅವರನ್ನು ಶರಿಫುಲ್ ಇಸ್ಲಾಂ ಬೀಸಿದ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಈ ಹಂತದಲ್ಲಿ ರೋಹಿತ್ (23; 19ಎ) ಜೊತೆಗೂಡಿದ ಪಂತ್ ಎರಡನೇ ವಿಕೆಟ್ ಪಾಲುದಾರಿಕೆಯಲ್ಲಿ 48 ರನ್ ಸೇರಿಸಿದರು. ಏಳನೇ ಓವರ್‌ನಲ್ಲಿ ರೋಹಿತ್ ಔಟಾದರು. ಕ್ರೀಸ್‌ಗೆ ಬಂದ ಸೂರ್ಯಕುಮಾರ್ ಯಾದವ್ (31; 18ಎ) ಉಪಯುಕ್ತ ಕಾಣಿಕೆ ನೀಡಿದರು.

ಸಂಕ್ಷಿಪ್ತ ಸ್ಕೋರು: ಭಾರತ: 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 182 (ರೋಹಿತ್ ಶರ್ಮಾ 23, ರಿಷಭ್ ಪಂತ್ ಗಾಯಗೊಂಡು ನಿವೃತ್ತಿ 53, ಸೂರ್ಯಕುಮಾರ್ ಯಾದವ್ 31, ಹಾರ್ದಿಕ್ ಪಾಂಡ್ಯ ಔಟಾಗದೆ 40, ಮೆಹದಿ ಹಸನ್ 22ಕ್ಕೆ1, ಶರೀಫುಲ್ ಇಸ್ಲಾಂ 26ಕ್ಕೆ1). **ಬಾಂಗ್ಲಾದೇಶ:** 20 ಓವರ್‌ಗಳಲ್ಲಿ 9 ವಿಕೆಟ್‌ಗೆ 122 (ಶಕೀಬ್ ಅಲ್ ಹಸನ್ 28, ಮಹಮ್ಮದುಲ್ಲಾ 40, ಅರ್ಷದೀಪ್ ಸಿಂಗ್ 12ಕ್ಕೆ 2, ಶಿವಂ ದುಬೆ 11ಕ್ಕೆ 2). **ಫಲಿತಾಂಶ:** ಭಾರತಕ್ಕೆ 60 ರನ್‌ಗಳ ಜಯ

14 ಕೆ.ಜಿ ತೂಕ ಇಳಿಸಿದ ಸೂರ್ಯ

ನ್ಯೂಯಾರ್ಕ್ (ಪಿಟಿಐ): ಭಾರತ ಕ್ರಿಕೆಟ್ ತಂಡದ ಆಟಗಾರ ಸೂರ್ಯಕುಮಾರ್ ಯಾದವ್ ಅವರು ಸ್ಪೋರ್ಟ್ಸ್ ಹರ್ನಿಯಾ ಶಸ್ತ್ರಚಿಕಿತ್ಸೆಯ ನಂತರ ಕ್ರಿಕೆಟ್‌ಗೆ ಮರಳಲು ತಮ್ಮ ದೇಹದ 12 ರಿಂದ 14 ಕೆ.ಜಿ ತೂಕ ಇಳಿಸಿದ್ದರಂತೆ!

ಡಿಸೆಂಬರ್‌ನಲ್ಲಿ ತಮ್ಮ ಹಿಮ್ಮಡಿಯ ಗಾಯ ಹಾಗೂ ಸ್ಪೋರ್ಟ್ಸ್ ಹರ್ನಿಯಾ ಶಸ್ತ್ರಚಿಕಿತ್ಸೆ ಪಡೆದಿದ್ದರು. ಟಿ20 ಮಾದರಿಯಲ್ಲಿ ವಿಶ್ವದ ಅಗ್ರಮಾನ್ಯ ಬ್ಯಾಟರ್ ಅಗಿರುವ ಸೂರ್ಯ ಆ ಸಂದರ್ಭದಲ್ಲಿ ನಾಲ್ಕು ತಿಂಗಳು ವಿಶ್ರಾಂತಿ ಪಡೆದಿದ್ದರು.

ನಂತರ ಎನ್‌ಸಿಎಯಲ್ಲಿ ಪುನಶ್ಚೇತನ ಶಿಬಿರದಲ್ಲಿ ಪಾಲ್ಗೊಂಡರು. ನಂತರ ಆಹಾರದಲ್ಲಿಯೇ ಪಥ್ಯ ಮತ್ತು ಪೌಷ್ಟಿಕ ಆಹಾರ ಸೇವನೆ ಮೂಲಕ ತಮ್ಮ ದೇಹತೂಕ ಸರಿದೂಗಿಸಿಕೊಂಡಿದ್ದಾರೆ.

ಅಚ್ಚರಿ ಮೂಡಿಸಿದ 10 ಫಲಿತಾಂಶ

ಚುಟುಕು ವಿಶ್ವಕಪ್ ಇದುವರೆಗೆ ಅನೇಕ ಅಚ್ಚರಿಯ ಫಲಿತಾಂಶಗಳಿಗೆ ಸಾಕ್ಷಿಯಾ ಗಿದೆ. ಅನುಭವಿ ತಂಡಗಳು, ಪದಾರ್ಪಣೆ ಮಾಡಿದ ತಂಡಗಳಿಗೆ ತಲೆಬಾಗಿದ ನಿದರ್ಶನಗಳು ಇವೆ. ಯಾವುದೇ ತಂಡವನ್ನು ಲಘುವಾಗಿ ತೆಗೆದುಕೊಳ್ಳುವಂತಿಲ್ಲ ಎಂಬ ಸಂದೇಶವನ್ನು ಈ ಫಲಿತಾಂಶಗಳು ಸಾರಿವೆ. ಇಲ್ಲಿ ಅಂಥ ಹತ್ತು ಫಲಿತಾಂಶಗಳನ್ನು ನೀಡಲಾಗಿದೆ

- **2007:** ಜೊಹಾನೆಸ್‌ಬರ್ಗ್‌ನಲ್ಲಿ ವಿಶ್ವಕಪ್‌ನ ಗುಂಪು ಹಂತದ ಪಂದ್ಯದಲ್ಲಿ ವೆಸ್ಟ್ ಇಂಡೀಸ್, ಬಾಂಗ್ಲಾದೇಶಕ್ಕೆ ಆರು ವಿಕೆಟ್‌ಗಳಿಂದ ಸೋತಿತ್ತು.
- **2007:** ಕೇಪ್‌ಟೌನ್‌ನಲ್ಲಿ ನಡೆದ ಪಂದ್ಯದಲ್ಲಿ ಜಿಂಬಾಬ್ವೆ ಐದು ವಿಕೆಟ್‌ಗಳಿಂದ ಆಸ್ಟ್ರೇಲಿಯಾವನ್ನು ಬಗ್ಗುಬಡಿದಿತ್ತು. ಎಲ್ಟನ್ ಚಿಗುಂಬರ (20ಕ್ಕೆ3) ಮತ್ತು ಬ್ರೆಂಡನ್ ಟೇಲರ್ (ಅಜೇಯ 60) ಆಟ ಇದಕ್ಕೆ ಕಾರಣವಾಯಿತು.
- **2009:** ನೆದರ್ಲೆಂಡ್ಸ್ ತಂಡವು ಲಾರ್ಡ್ಸ್‌ನಲ್ಲಿ ಉದ್ಘಾಟನಾ ಪಂದ್ಯದಲ್ಲೇ ಆತಿಥೇಯ ಇಂಗ್ಲೆಂಡ್ ತಂಡವನ್ನು ನಾಲ್ಕು ವಿಕೆಟ್‌ಗಳಿಂದ ಸೋಲಿಸಿತು. ಈ ಪಂದ್ಯದಲ್ಲಿ ಇಂಗ್ಲೆಂಡ್ 5 ವಿಕೆಟ್‌ಗೆ 162 ರನ್ ಹೊಡೆಯಿತು. ನೆದರ್ಲೆಂಡ್ ಕೊನೆಯ ಎಸೆತದಲ್ಲಿ ಜಯ ಗಳಿಸಿತು. (20 ಓವರುಗಳಲ್ಲಿ 6 ವಿಕೆಟ್‌ಗೆ 163)
- **2009:** ಐರ್ಲೆಂಡ್ ತಂಡ ನಾಟಿಂಗಮ್‌ನಲ್ಲಿ ನಡೆದ ಗುಂಪು ಹಂತದ ಪಂದ್ಯದಲ್ಲಿ ಬಾಂಗ್ಲಾವನ್ನು 10 ಎಸೆತಗಳಿರುವಂತೆ 6 ವಿಕೆಟ್‌ಗಳಿಂದ ಸೋಲಿಸಿತ್ತು.
- **2014:** ಎರಡನೇ ಬಾರಿ ಚುಟುಕು ವಿಶ್ವಕಪ್‌ನಲ್ಲಿ ನೆದರ್ಲೆಂಡ್ಸ್ ತಂಡ, ಇಂಗ್ಲೆಂಡ್ ತಂಡವನ್ನು (ಈ ಸಲ 45 ರನ್‌ಗಳಿಂದ) ಸೋಲಿಸಿತು.
- **2014:** ಸಹಸದಸ್ಯ ರಾಷ್ಟ್ರವಾಗಿದ್ದ ಹಾಂಗ್‌ಕಾಂಗ್ ಚಿತ್ತಗಾಂಗ್‌ನಲ್ಲಿ ನಡೆದ 'ಎ' ಗುಂಪಿನ ಪಂದ್ಯದಲ್ಲಿ ಬಾಂಗ್ಲಾದೇಶವನ್ನು 2 ವಿಕೆಟ್‌ಗಳಿಂದ ಮಣಿಸಿತ್ತು.
- **2016:** ನಾಗ್ಪುರದಲ್ಲಿ ನಡೆದ ಸೂಪರ್ ಟೆನ್ ಹಂತದ ಪಂದ್ಯದಲ್ಲಿ ಅಫ್ಗಾನಿಸ್ತಾನ ಆರು ರನ್‌ಗಳಿಂದ ವೆಸ್ಟ್ ಇಂಡೀಸ್ ತಂಡವನ್ನು ಮಣಿಸಿತು. ಪಂದ್ಯದ ಆಟಗಾರ ನಜೀಬುಲ್ಲಾ ಜದ್ರಾನ್ 48 ರನ್ ಗಳಿಸಿದರು. ಆದರೆ ಈ ವಿಶ್ವಕಪ್‌ನಲ್ಲಿ ಚಾಂಪಿಯನ್ ಆಗಿದ್ದು ಕೊನೆಗೆ ಇದೇ ವೆಸ್ಟ್ ಇಂಡೀಸ್ ತಂಡ!
- **2016:** ಧರ್ಮಶಾಲಾದಲ್ಲಿ ನಡೆದ ಗುಂಪು ಹಂತದ ಪಂದ್ಯದಲ್ಲಿ ಮೊದಲ ಬಾರಿ ಆಡಿದ ಒಮಾನ್ ತನಗಿಂತ ಅನುಭವಿ ಐರ್ಲೆಂಡ್ ತಂಡವನ್ನು ಎರಡು ಎಸೆತಗಳಿರುವಂತೆ ಎರಡು ವಿಕೆಟ್‌ಗಳಿಂದ ಸೋಲಿಸಿತ್ತು.
- **2021:** ದುಬೈನಲ್ಲಿ ನಡೆದ 'ಬಿ' ಗುಂಪಿನ ಪಂದ್ಯದಲ್ಲಿ ಸ್ಕಾಟ್ಲೆಂಡ್ ಆರು ರನ್‌ಗಳಿಂದ ಪ್ರಬಲ ಬಾಂಗ್ಲಾದೇಶ ತಂಡವನ್ನು ಸೋಲಿಸಿತು.
- **2022:** ಆಸ್ಟ್ರೇಲಿಯಾದ ಗಿಲಾಂಗ್‌ನಲ್ಲಿ ನಡೆದ ಮೊದಲ ಪಂದ್ಯದಲ್ಲಿ ನಮೀಬಿಯಾ 55 ರನ್‌ಗಳ ದೊಡ್ಡ ಅಂತರದಿಂದ ಶ್ರೀಲಂಕಾವನ್ನು ಸೋಲಿಸಿತ್ತು. ಗೆಲುವಿಗೆ 164 ರನ್ ಗಳಿಸಬೇಕಾಗಿದ್ದ ಲಂಕಾ 108 ರನ್ನಿಗೆ ಕುಸಿಯಿತು.

(ಮಾಹಿತಿ: ಕ್ರಿಕೆಟ್ ವೆಬ್‌ಸೈಟ್‌ಗಳಿಂದ)

ಗಯಾನದಲ್ಲಿ ಉದ್ಘಾಟನಾ ಸಮಾರಂಭ

ಜಾರ್ಜ್‌ಟೌನ್, ಗಯಾನ (ಪಿಟಿಐ): ವೆಸ್ಟ್‌ಇಂಡೀಸ್ ಮತ್ತು ಅಮೆರಿಕ ಜಂಟಿ ಆತಿಥ್ಯದಲ್ಲಿ ನಡೆಯುತ್ತಿರುವ ಟಿ20 ವಿಶ್ವಕಪ್ ಉದ್ಘಾಟನಾ ಸಮಾರಂಭ ಗಯಾನದಲ್ಲಿ ನಡೆಯಲಿದೆ. ಜೂನ್ 2ರ ಸಂಜೆ 6ಕ್ಕೆ ಗಯಾನದ ರಾಷ್ಟ್ರೀಯ ಕ್ರೀಡಾಂಗಣದಲ್ಲಿ ಖ್ಯಾತ ಗಾಯಕರು ಸಂಗೀತ ಸಂಜೆ ನಡೆಸಿಕೊಡಲಿದ್ದಾರೆ.

ಮೊದಲ ಪಂದ್ಯ ಅಮೆರಿಕ–ಕೆನಡಾ ನಡುವೆ ಬೆಳಿಗ್ಗೆ 6 ಗಂಟೆ ನಡೆಯಲಿದೆ. ಎರಡನೇ ಪಂದ್ಯ ಅದೇ ದಿನ ವೆಸ್ಟ್ ಇಂಡೀಸ್–ಪಾಪುವಾ ನ್ಯೂಗಿನಿ ನಡುವೆ ರಾತ್ರಿ 8ಕ್ಕೆ ನಡೆಯಲಿದೆ. ಹಾಗಾಗಿ ಎರಡನೇ ಪಂದ್ಯಕ್ಕೂ ಮುನ್ನ ಉದ್ಘಾಟನಾ ಸಮಾರಂಭ ಹಮ್ಮಿಕೊಳ್ಳಲಾಗಿದೆ. ಟಿ20 ವಿಶ್ವಕಪ್ ಇತಿಹಾಸದಲ್ಲಿ ಮೊದಲ ಬಾರಿ 20 ತಂಡಗಳು ಭಾಗವಹಿಸಿವೆ. ಕಾರ್ಯಕ್ರಮದ ನೇರ ಪ್ರಸಾರವನ್ನು ಸ್ಟಾರ್‌ಸ್ಪೋರ್ಟ್ಸ್‌ನಲ್ಲಿ ವೀಕ್ಷಿಸಬಹುದು.

ಕರ್ನಾಟಕ ಸರ್ಕಾರ
(ಶಾಲಾ ಶಿಕ್ಷಣ ಇಲಾಖೆ)
ಕರ್ನಾಟಕ ಪಠ್ಯಪುಸ್ತಕ ಸಂಘ (ರಿ)
6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು–560003. ದೂರವಾಣಿ : 080–26422238/45
ಇ–ಮೇಲ್: mdktbs.tender@gmail.com ವೆಬ್‌ಸೈಟ್: https://www.ktbs.kar.nic.in
ಸಂಖ್ಯೆ: A6/TBS/ADM/PUTN/03/2023 e-22168 ದಿನಾಂಕ: 01.06.2024

ಟೆಂಡರ್ ಅಧಿಸೂಚನೆ
(ಇ.ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)
2024–25ನೇ ಸಾಲಿಗೆ ಕರ್ನಾಟಕದಲ್ಲಿ ವ್ಯಾಸಂಗ ಮಾಡುತ್ತಿರುವ ಪ್ರಥಮ ಮತ್ತು ದ್ವಿತೀಯ ಪಿ.ಯು.ಸಿ ವಿದ್ಯಾರ್ಥಿಗಳಿಗೆ ಅಂದಾಜು **2.54 ಲಕ್ಷ** ಪಠ್ಯಪುಸ್ತಕಗಳನ್ನು ಮುದ್ರಿಸಿ ಸರಬರಾಜು ಮಾಡಲು ಟೆಂಡರ್‌ನಲ್ಲಿ ನಿಗದಿಪಡಿಸಿರುವಂತೆ ಮೂಲಭೂತ ಸೌಲಭ್ಯವುಳ್ಳ ಕರ್ನಾಟಕ ಮತ್ತು ನೆರೆ ರಾಜ್ಯಗಳ ಅರ್ಹ ಮುದ್ರಕರುಗಳಿಂದ 2 ಬಿಡ್ ಪದ್ಧತಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಪೂರ್ಣ ವಿವರಗಳನ್ನು ಇ–ಪೋರ್ಟಲ್ ಹಾಗೂ ಇಲಾಖೆಯ ವೆಬ್‌ಸೈಟ್‌ನಲ್ಲಿ ಲಭ್ಯವಿರುವ ಟೆಂಡರ್ ದಸ್ತಾವೇಜಿನಲ್ಲಿ ಪರಿಶೀಲಿಸಬಹುದು. ಬಿಡ್‌ಗಳನ್ನು **ದಿನಾಂಕ: 10.06.2024ರಂದು ಸಂಜೆ 5.30**ರವರೆಗೂ ಸಲ್ಲಿಸಬಹುದಾಗಿರುತ್ತದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಪೂರ್ಣ ವಿಳಾಸ: https://kppp.karnataka.gov.in/ ಸಹಾಯವಾಣಿ::080-46010000 / 080-22631200. ಇಲಾಖೆಯ ವೆಬ್‌ಸೈಟ್: http://www.ktbs.kar.nic.in
ಸಹಿ/– ವ್ಯವಸ್ಥಾಪಕ ನಿರ್ದೇಶಕರು,
ಕರ್ನಾಟಕ ಪಠ್ಯಪುಸ್ತಕ ಸಂಘ(ರಿ), ಬೆಂಗಳೂರು.

ಕರ್ನಾಟಕ ಸರ್ಕಾರ
(ಲೋಕೋಪಯೋಗಿ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ರಾಯಚೂರು
ದೂರವಾಣಿ ಸಂಖ್ಯೆ : 08532–225778 & 234747

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್ ಪ್ರಕಟಣೆ (ಕೆ.ಡಬ್ಲ್ಯೂ–1, 2, 3 & 4)
THESE WORKS ARE GENARAL, SC & ST CONTRACTORS
1) **ಪ್ರಕಟಣೆ ಸಂಖ್ಯೆ ಮತ್ತು ದಿನಾಂಕ:** ಲೋಇ/ರಾವಿ/ತಾಂಶಾ–4/ಟೆಂಪ್ರ/2024–25/539 ದಿನಾಂಕ:31–05–2024 2) **ಕಾಮಗಾರಿ ಹೆಸರು:** ರಾಯಚೂರು ಜಿಲ್ಲೆಯ ಒಟ್ಟು 20 ಕಾಮಗಾರಿಗಳು. ರಾಯಚೂರು, ಮಾನವಿ, ದೇವದುರ್ಗ ಲಿಂಗಸುಗೂರು ಮತ್ತು ಸಿಂಧನೂರು ತಾಲೂಕು ವಿವಿಧಡೆ ಕಟ್ಟಡ ಮತ್ತು ರಸ್ತೆ ನಿರ್ವಹಣೆ ಕಾಮಗಾರಿಗಳು. 3) **ಕಾಮಗಾರಿಯ ಮೊತ್ತ:** ಕನಿಷ್ಠ ರೂ. 838539.00 ಗರಿಷ್ಠ ರೂ. 42015530.03 4) **ಮುಂಗಡ ಠೇವಣಿ ಮೊತ್ತ:** ಕನಿಷ್ಠ ರೂ. 21000.00 ಗರಿಷ್ಠ ರೂ. 630300.00 5) **ಕಾಲಾವಧಿ (ಮಳೆಗಾಲ ಸೇರಿ):** ಕನಿಷ್ಠ 2 (ಎರಡು) ತಿಂಗಳು: ಗರಿಷ್ಠ 11 (ಹನ್ನೊಂದು) ತಿಂಗಳು 6) **ಟೆಂಡರ್ ಸ್ವೀಕರಿಸುವ ಅಂತಿಮ ದಿನಾಂಕ:** 11–06–2024 ಸಂಜೆ 4.00 ಗಂಟೆಯವರೆಗೆ 7) **ಟೆಂಡರ್ ತೆರೆಯುವ ದಿನಾಂಕ:**12–06–2024 ಸಂಜೆ 4.30 ಗಂಟೆಯವರೆಗೆ ಹೆಚ್ಚಿನ ವಿವರಗಳು ವೆಬ್‌ಸೈಟ್ https://kppp.karnataka.gov.in/ ಮುಖಾಂತರ ನೋಡಬಹುದು.
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು,
ಲೋಕೋಪಯೋಗಿ ಇಲಾಖೆ, ವಿಭಾಗ
DIP/RCR/14/KSMC&A/14/2023-24 ರಾಯಚೂರು.

ಜಿಲ್ಲಾ ಪಂಚಾಯತ್ ತುಮಕೂರು,
ಕಾರ್ಯಪಾಲಕ ಅಭಿಯಂತರವರ ಕಚೇರಿ,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ತುಮಕೂರು ವಿಭಾಗ
ದೂ:0816-2252937
ಸಂಖ್ಯೆ: 03/ಕಾಪಾಅ/ಗ್ರಾ.ಕು.ನೀ.ನೈ ವಿ/ತುಮ/ಟೆಂಡರ್/AE–1&2&3/243/2024–25 **ದಿನಾಂಕ: 28.05.2024**

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 03/2023–24
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಮಾತ್ರ)
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ, ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ ಮತ್ತು ನೈರ್ಮಲ್ಯ ವಿಭಾಗ, ತುಮಕೂರು ಇವರು 2024–25 ನೇ ಸಾಲಿಗೆ ದ್ವಿ–ಲಕೋಟೆ ಪದ್ಧತಿಯಲ್ಲಿ ಟೆಂಡರನ್ನು ಸೂಕ್ತ ನೊಂದಾಯಿತ ಗುತ್ತಿಗೆದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಟೆಂಡರ್‌ನ ವಿವರ ಈ ಕೆಳಕಂಡಂತಿರುತ್ತದೆ. ತುಮಕೂರು ಜಿಲ್ಲೆ ವ್ಯಾಪ್ತಿಯಲ್ಲಿ ಜಲ ಜೀವನ್ ಮಿಷನ್ ಯೋಜನೆಯಡಿ ಅನುಮೋದನೆಗೊಂಡಿರುವ ಶಿರಾ, ತುರುವೇಕೆರೆ, ಮಧುಗಿರಿ, ಮತ್ತು ಕೊರಟಗೆರೆ ತಾಲ್ಲೂಕಿನ ಕಾಮಗಾರಿಗಳಿಗೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ (https://kppp.karnataka.gov.in) ಬಿಡ್ ಸಲ್ಲಿಸಬಹುದು ಹೆಚ್ಚಿನ ಮಾಹಿತಿಗಾಗಿ ಈ ಕೆಳಗೆ ಸಹಿ ಮಾಡಿರುವವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ಅ) ಕನಿಷ್ಠ ಕಾಮಗಾರಿ ಮೊತ್ತ ರೂ 23.16 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.46,320/– ಗಳು ಹಾಗೂ ಆ) ಗರಿಷ್ಟ ಮೊತ್ತ ರೂ 98.23 ಲಕ್ಷಗಳು, ಇ.ಎಂ.ಡಿ ಮೊತ್ತ ರೂ.1,96,460/– ಗಳು (1) ಭರ್ತಿ ಮಾಡಿದ ಟೆಂಡರ್‌ನ್ನು ಸಲ್ಲಿಸುವ ಅಂತಿಮ ದಿನಾಂಕ: 11–06–2024 ಸಂಜೆ 5:00 ಘಂಟೆ ವರೆಗೆ (2) ಪೂರ್ವಭಾವಿ ಸಭೆ (KW–3 ಕಾಮಗಾರಿಗಳಿಗೆ) ದಿನಾಂಕ: 07–06–2024 ಕಾರ್ಯಪಾಲಕ ಅಭಿಯಂತರರು, ಗ್ರಾ.ಕು.ನೀ&ನೈರ್ಮಲ್ಯ ವಿಭಾಗ ತುಮಕೂರು (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 12–06–2024 ಸಂಜೆ 05.30 ಘಂಟೆಯ ನಂತರ (4) ಆರ್ಥಿಕ ಬಿಡ್ ತೆರೆಯುವ ದಿನಾಂಕ: 15–06–2024 ಬೆಳಿಗ್ಗೆ 11.00 ಘಂಟೆಯ ನಂತರ.
ಸಹಿ/– ಕಾರ್ಯಪಾಲಕ ಅಭಿಯಂತರರು,
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ,
DIPR/TMK/18/KSMCA/2024-25 ತುಮಕೂರು ವಿಭಾಗ, ತುಮಕೂರು

ಕರ್ನಾಟಕ ನಗರ ಮೂಲಸೌಕರ್ಯ ಅಭಿವೃದ್ಧಿ ಮತ್ತು ಹಣಕಾಸು ನಿಗಮ ನಿಯಮಿತ
ನಗರಾಭಿವೃದ್ಧಿ ಭವನ, ನಂ.22, 17ನೇ 'ಎಫ್' ಕ್ರಾಸ್, ಹಳೆ ಮದ್ರಾಸು ರಸ್ತೆ, ಇಂದಿರಾನಗರ 2ನೇ ಹಂತ, ಬಿಎಂಟಿಸಿ ಡಿಪೋ ಹತ್ತಿರ, ಬೆಂಗಳೂರು–560 038. ದೂರವಾಣಿ: 91–80–25196100, 25196124 ಫ್ಯಾಕ್ಸ್: 080–25196110
ಇ–ಮೇಲ್ ವಿಳಾಸ: info@kuidfc.com ಅಂತರ್ಜಾಲ ವಿಳಾಸ: www.kuidfc.com
ಸಂಖ್ಯೆ: ಕೆಯುಐಡಿಎಫ್‌ಸಿ/ಯುಡಬ್ಲ್ಯೂಎಮ್/08/2024–25/01 ದಿನಾಂಕ: 01.06.2024

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ (3ನೇ ಕರೆ)
ಕೆಯುಐಡಿಎಫ್‌ಸಿ ಸಂಸ್ಥೆಯು N.G.T ಪರಿಹಾರ ನಿಧಿಯಡಿಯಲ್ಲಿ ಅನುಷ್ಠಾನಗೊಳಿಸಲು ಉದ್ದೇಶಿಸಿರುವ ಈ ಕೆಳಕಂಡ ಯೋಜನೆಗಳಿಗೆ ಅರ್ಹ ಗುತ್ತಿಗೆದಾರರಿಂದ ಟೆಂಡರ್ ಆಹ್ವಾನಿಸಿದೆ. ಟೆಂಡರ್ ವಿವರಗಳು ಕೆಪಿಪಿ ಪೋರ್ಟಲ್‌ನಲ್ಲಿ (https://kppp.karnataka.gov.in) ಲಭ್ಯವಿರುತ್ತದೆ.

ಕ್ರ ಸಂ.	ಕಾಮಗಾರಿ ಹೆಸರು	ಪ್ಯಾಕೇಜ್ ಸಂಖ್ಯೆ	ಟೆಂಡರ್ ಮೊತ್ತ (ಜಿಎಸ್‌ಟಿ ಒಳಗೊಂಡಂತೆ) ರೂ. ಕೋಟಿಗಳಲ್ಲಿ	ಮುಂಗಡ ಭದ್ರತಾ ಠೇವಣಿ ರೂ.ಲಕ್ಷಗಳಲ್ಲಿ
1	Construction of "Faecal Sludge Treatment Plants (FSTP) including Operation and Maintenance for 5 years under NGT Environmental Compensation funds on DBOT model" in 1 to 4 & 6 to 12 Packages (Call-3)	ಪ್ಯಾಕೇಜ್ 1	22.46	23.00
2		ಪ್ಯಾಕೇಜ್ 2	21.95	22.00
3		ಪ್ಯಾಕೇಜ್ 3	22.20	23.00
4		ಪ್ಯಾಕೇಜ್ 4	23.73	24.00
5		ಪ್ಯಾಕೇಜ್ 6	33.44	34.00
6		ಪ್ಯಾಕೇಜ್ 7	30.74	31.00
7		ಪ್ಯಾಕೇಜ್ 8	25.84	26.00
8		ಪ್ಯಾಕೇಜ್ 9	33.44	34.00
9		ಪ್ಯಾಕೇಜ್ 10	22.46	23.00
10		ಪ್ಯಾಕೇಜ್ 11	23.14	24.00
11		ಪ್ಯಾಕೇಜ್ 12	24.90	25.00

1) ಟೆಂಡರ್ ಆಹ್ವಾನಿಸಿರುವ ದಿನಾಂಕ: **01.06.2024**. 2) ಬಿಡ್ ಪೂರ್ವಭಾವಿ ಸಭೆಯ ದಿನಾಂಕ & ಸಮಯ: **10.06.2024 ಸಮಯ: 11.30 ಪೂರ್ವಾಹ್ನ**. 3) ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ & ಸಮಯ: **15.06.2024 ಸಮಯ: 4.30 ಅಪರಾಹ್ನ**. 4) ತಾಂತ್ರಿಕ ಬಿಡ್ ತೆರೆಯುವ ದಿನಾಂಕ & ಸಮಯ: **17.06.2024 ಸಮಯ: 5.00 ಅಪರಾಹ್ನ**. 5) ಆರ್ಥಿಕ ಬಿಡ್ ತೆರೆಯುವ ದಿನಾಂಕ & ಸಮಯ: **24.06.2024 ಸಮಯ: 11.30 ಪೂವಾಹ್ನ**.
ಆಸಕ್ತ ಟೆಂಡರ್‌ದಾರರು ಕೆಪಿಪಿ ಪೋರ್ಟಲ್ ಮುಖಾಂತರವೇ ಟೆಂಡರ್ ಸಲ್ಲಿಸತಕ್ಕದ್ದು. ಈ ಟೆಂಡರ್ ಬಗ್ಗೆ ಮುಂದಿನ ಯಾವುದೇ ಪ್ರಕಟಣೆಗಳನ್ನು ಕೆಪಿಪಿ ಪೋರ್ಟಲ್ ಹಾಗೂ KUIDFC Official Websiteಗಳಲ್ಲಿ ಮಾತ್ರ ಪ್ರಕಟಿಸಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು
ಯೋಜನಾ ಮೇಲ್ವಿಚಾರಣಾ ಘಟಕ, ಯುಡಬ್ಲ್ಯೂಎಮ್–ಕೆಯುಐಡಿಎಫ್‌ಸಿ, ಬೆಂಗಳೂರು
ವಾಸಾಸಂಇ/ವಾಪ್ರ/176/ಎಂಎಎ/2024–25

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ
Email: ee_pwdbellary@yahoo.com ದೂರವಾಣಿ ಸಂ: 08392 266123
ಸಂ:ಕಾನಿಇ/ಲೋಇ/ಬವಿ/ಟಿ.ಎಸ್–3/2023–24/620 ದಿನಾಂಕ: 29–05–2024.

ಅಲ್ಪಾವಧಿ ಟೆಂಡರ್ ಪ್ರಕಟಣೆ
ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಆಸಕ್ತಿಯುಳ್ಳ ಗುತ್ತಿಗೆದಾರರಿಂದ ಈ ಕೆಳಕಾಣಿಸಿದ ಕಾಮಗಾರಿಗಳಿಗೆ ಏಕ ಹಾಗೂ ದ್ವಿ ಲಕೋಟೆ ಪದ್ಧತಿಯಂತೆ ಟೆಂಡರುಗಳನ್ನು ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಪ್ರಕಟಣೆಯಲ್ಲಿನ ಕಾಮಗಾರಿಗಳನ್ನು ಅಂತರ್ಜಾಲದ ಮೂಲಕ ವೆಬ್ ಸೈಟ್ ವಿಳಾಸ **https:kppp.karnataka.gov.in**ವನ್ನು ಸಂದರ್ಶಿಸಬಹುದಾಗಿರುತ್ತದೆ. ಹೆಚ್ಚಿನ ಮಾಹಿತಿ ಬೇಕಾದಲ್ಲಿ ಗುತ್ತಿಗೆದಾರರು ಈ ಕೆಳಗೆ ಸಹಿ ಮಾಡಿದ ಅಧಿಕಾರಿಗಳ ಕಛೇರಿಯಲ್ಲಿ ಕಛೇರಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿರುತ್ತದೆ.

ಕ್ರ ಸಂ	ಕಾಮಗಾರಿಗಳ ವಿವರ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)
1)	PWD/2024-25/BD/WORK_INDENT10900 (Reserved for SC Category)	15.00
2)	PWD/2024-25/RD/WORK_INDENT8077 (Reserved for SC Category)	44.74
3)	PWD/2024-25/RD/WORK_INDENT10911 (Reserved for ST Category)	40.179
4)	PWD/2024-25/BD/WORK_INDENT10926 (Reserved for General Category)	14.47
5)	PWD/2024-25/RD/WORK_INDENT10717 (Reserved for General Category)	7.12
6)	PWD/2024-25/BD/WORK_INDENT10883 (Reserved for General Category)	33.06
7)	PWD/2024-25/BD/WORK_INDENT10891 (Reserved for General Category)	6.00
8)	PWD/2024-25/BD/WORK_INDENT10929 (Reserved for General Category)	11.18
9)	PWD/2024-25/RD/WORK_INDENT10706 (Reserved for General Category)	30.00
10)	PWD/2024-25/RD/WORK_INDENT10909 (Reserved for General Category)	96.429
11)	PWD/2024-25/RD/WORK_INDENT10918 (Reserved for General Category)	52.20
12)	PWD/2024-25/RD/WORK_INDENT10917	336.13
13)	PWD/2023-24/BD/WORK_INDENT8651/CALL-2 (General Category)	81.765

ಸೂಚನೆ: ಕಾರಣಾಂತರಗಳಿಂದ ಕೆಳಗೆ ತಿಳಿಯಪಡಿಸಿದ ಟೆಂಡರ್ ದಿನಾಂಕಗಳು ಬದಲಾದಲ್ಲಿ, ಮರು ಟೆಂಡರ್ ಆಹ್ವಾನಿಸಿದ್ದಲ್ಲಿ ಹಾಗೂ ಇನ್ನಿತರೆ ಬದಲಾವಣೆಗಳಿದ್ದಲ್ಲಿ ಗುತ್ತಿಗೆದಾರರು ಕೆ.ಪಿ.ಪಿ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಗಮನಿಸಬಹುದಾಗಿದೆ. ಇದಕ್ಕಾಗಿ ಪ್ರತ್ಯೇಕ ಜಾಹಿರಾತು ಹೊರಡಿಸಲಾಗುವುದಿಲ್ಲ.
ಟೆಂಡರಿಗಾಗಿ ನಿಗದಿಪಡಿಸಿದ ದಿನಾಂಕಗಳು ಕೆಳಗಿನಂತಿವೆ.
ಅ) ಕಾಮಗಾರಿಗಳಿಗೆ ನಿಗಧಿಪಡಿಸಿದ ಪ್ರಿ–ಬಿಡ್ ಸಭೆ ದಿನಾಂಕ ಮತ್ತು ಸಮಯ **01–06–2024 ರಂದು 11.00 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೊಪಯೋಗಿ ಇಲಾಖಾ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ.** ಆ) ಟೆಂಡರ್ ಆಕ್ಷೇಪಣೆಗಳಿಗಾಗಿ ನಿಗದಿಪಡಿಸಲಾದ ದಿನಾಂಕ **04–06–2024 ರಂದು 12.00 ಗಂಟೆಯ ವರೆಗೆ.** ಇ) ಕೆ.ಪಿ.ಪಿ ಪೋರ್ಟಲ್ ಮುಖಾಂತರ ಟೆಂಡರುಗಳನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ **07–06–2024 ರಂದು 16.00 ಗಂಟೆಯ ವರೆಗೆ.** ಈ) ಬಿಡ್‌ಗಳನ್ನು ತೆರೆಯುವ ದಿನಾಂಕ ಮತ್ತು ಸಮಯ. **10–06–2024 ರಂದು 16.30 ಗಂಟೆಗೆ ಕಾರ್ಯನಿರ್ವಾಹಕ ಇಂಜಿನೀಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಬಳ್ಳಾರಿ ಇವರ ಕಛೇರಿಯಲ್ಲಿ ತೆರೆಯಲಾಗುವುದು**
ಸಹಿ/–ಕಾರ್ಯನಿರ್ವಾಹಕ ಇಂಜಿನೀಯರ್,
ಲೋಕೋಪಯೋಗಿ ಇಲಾಖಾ ವಿಭಾಗ, ಬಳ್ಳಾರಿ.
ಡಿಐಪಿಆರ್/ಬಳ್ಳಾರಿ/29/ಕೆಎಸ್‌ಎಂಸಿಎ/2024–25

ಜಿಲ್ಲಾ ಶಸ್ತ್ರಚಿಕಿತ್ಸಕರ ಕಚೇರಿ, ಶ್ರೀ ನರಸಿಂಹರಾಜ ಜಿಲ್ಲಾ ಆಸ್ಪತ್ರೆ ಕೋಲಾರ
ದೂರವಾಣಿ ಸಂಖ್ಯೆ:08152–222035 ಇ–ಮೇಲ್: dskolar@gmail.com
ಸಂಖ್ಯೆ: ಎಸ್.ಎನ್.ಆರ್./ನಾನ್ ಕ್ಲಿನಿಕಲ್ ಸೇವೆ/26/2023–24
ದಿನಾಂಕ: 21.05.2024

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ
2024–25 ನೇ ಸಾಲಿಗೆ ಎಸ್.ಎನ್.ಆರ್ ಜಿಲ್ಲಾ ಆಸ್ಪತ್ರೆ, ಕೋಲಾರ ಇಲ್ಲಿಗೆ ಈ ಕೆಳಕಂಡಂತೆ ವಿವಿಧ ಹೊರಗುತ್ತಿಗೆ ಸೇವೆಗಳನ್ನು ಹಾಗೂ ಸರಕುಗಳನ್ನು ಒದಗಿಸಲು ಸರ್ಕಾರದಿಂದ ಮಾನ್ಯತೆ ಪಡೆದ ಅಧಿಕೃತ ಟೆಂಡರ್‌ದಾರರಿಂದ ಇ–ಪ್ರಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಆಹ್ವಾನಿಸಲಾಗಿದೆ. ಇ–ಟೆಂಡರ್ ನಮೂನೆಗಳು ಹಾಗೂ ಷರತ್ತು ನಿಬಂಧನೆಗಳನ್ನು **https://eproc.karnataka.gov.in** ಅಂತರ್ಜಾಲದಲ್ಲಿ ವೀಕ್ಷಿಸಬಹುದಾಗಿದೆ. ಟೆಂಡರ್‌ಗಳು ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪಾರದರ್ಶಕ ನಿಯಮಗಳು ಹಾಗೂ ಟೆಂಡರ್ ಸಮಿತಿಯ ಇತರೆ ಷರತ್ತಿಗೆ ಒಳಪಟ್ಟಿರುತ್ತದೆ. (1) ನಾನ್ ಕ್ಲಿನಿಕಲ್ ಸೇವೆಗಳನ್ನು ಒದಗಿಸುವ ಟೆಂಡರ್: ಅಧಿಸೂಚನೆ ಸಂಖ್ಯೆ: ಎಸ್.ಎನ್.ಆರ್/ನಾನ್‌ಕ್ಲಿನಿಕಲ್ ಸೇವೆ/26/2023–24, ದಿನಾಂಕ:21.05.2024. **ಟೆಂಡರ್ ಮೊತ್ತ ರೂ: 1 ಕೋಟಿ 42 ಲಕ್ಷ, ಇ.ಎಂ.ಡಿ: ರೂ. 3,56,000/–,** ಟೆಂಡರ್ ಸಲ್ಲಿಸಲು **ಕೊನೆ ದಿನಾಂಕ: 20.06.2024 ಮಧ್ಯಾಹ್ನ: 2.00 ವರೆಗೆ.** (2) ಗ್ರೂಪ್–ಡಿ ಸೇವೆಗಳನ್ನು ಒದಗಿಸುವ ಟೆಂಡರ್: ಅಧಿಸೂಚನೆ ಸಂಖ್ಯೆ: ಎಸ್.ಎನ್.ಆರ್/ಕೋ/ಹೊರಗುತ್ತಿಗೆ/27/2023–24, ದಿನಾಂಕ: 21.05.2024, **ಟೆಂಡರ್ ಮೊತ್ತ: ರೂ: 2 ಕೋಟಿ 53 ಲಕ್ಷ, ಇ.ಎಂ.ಡಿ. ರೂ. 6,32,500/–, ಟೆಂಡರ್ ಸಲ್ಲಿಸಲು ಕೊನೆ ದಿನಾಂಕ: 20.06.2024 ಮಧ್ಯಾಹ್ನ: 1.00 ವರೆಗೆ.** (3) ಒಳ ರೋಗಿಗಳಿಗೆ ಪಥ್ಯಾಹಾರಕ್ಕಾಗಿ ಆಹಾರ ಪದಾರ್ಥಗಳು ಹಾಗೂ ಬ್ರೆಡ್ ಒದಗಿಸುವ ಟೆಂಡರ್: ಅಧಿಸೂಚನೆ ಸಂಖ್ಯೆ: ಎಸ್.ಎನ್.ಆರ್/ಪಥ್ಯಾಹಾರ/01/2024–25, ದಿನಾಂಕ: 21.05.2024, **ಟೆಂಡರ್ ಮೊತ್ತ ರೂ: 65 ಲಕ್ಷ, ಇ.ಎಂ.ಡಿ. ರೂ. 1,62,500/–, ಟೆಂಡರ್ ಸಲ್ಲಿಸಲು ಕೊನೆ ದಿನಾಂಕ: 20–06–2024 ಮಧ್ಯಾಹ್ನ 3.00 ವರೆಗೆ.** ಹೆಚ್ಚಿನ ಮಾಹಿತಿಗಾಗಿ ಸಹಾಯಕ ಆಡಳಿತಾಧಿಕಾರಿಗಳು, ಎಸ್.ಎನ್.ಆರ್. ಜಿಲ್ಲಾ ಆಸ್ಪತ್ರೆ, ಕೋಲಾರರವರನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.
ಸಹಿ/– ಜಿಲ್ಲಾ ಶಸ್ತ್ರಚಿಕಿತ್ಸಕರು, ಎಸ್.ಎನ್.ಆರ್ ಜಿಲ್ಲಾ ಆಸ್ಪತ್ರೆ, ಕೋಲಾರ
ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:11/ಕೆಎಸ್‌ಎಂಸಿಎ/2024–25

ಪ್ರಜಾವಾಣಿ
ಭಾನುವಾರ, 2 ಜೂನ್ 2024
ಭಾನುವಾರದ ಪುರವಣಿ

125.20 ಕಿ.ಮೀ ಹೃಷಿಕೇಶ–ಕರ್ಣಪ್ರಯಾಗ ರೈಲ್ವೆ ಯೋಜನೆ ಉದ್ದ

12 ರೈಲು ನಿಲ್ದಾಣಗಳು

₹16,200 ಕೋಟಿ ಯೋಜನೆಯ ಅಂದಾಜು ವೆಚ್ಚ

2000 ಕ್ಕೂ ಅಧಿಕ ರೈಲು ಮಾರ್ಗ ನಿರ್ಮಾಣದಿಂದ ಸೃಷ್ಟಿಯಾದ ಉದ್ಯೋಗ

7 ರಿಂದ **2** ಗಂಟೆಗೆ ಇಳಿಕೆ ಪ್ರಯಾಣದ ಸಮಯ

15.1 ಕಿ.ಮೀ ಅತಿ ಉದ್ದದ ಸುರಂಗ (ದೇವಪ್ರಯಾಗ ಮತ್ತು ಲಚ್ಮೋಲಿ)

ಇದು ಅಂತಿಂಥ ರೈಲು ಸುರಂಗವಲ್ಲ!

ಉತ್ತರಾಖಂಡದ ಹೃಷಿಕೇಶದಿಂದ ಕರ್ಣಪ್ರಯಾಗದವರೆಗೆ ಸಿದ್ಧವಾಗುತ್ತಿರುವ ಹೊಸ ರೈಲು ಮಾರ್ಗದ ನಡುವೆ ಭಾರತದ ಅತಿ ಉದ್ದದ ರೈಲು ಸುರಂಗ ಮಾರ್ಗ ನಿರ್ಮಾಣವಾಗುತ್ತಿದೆ. ಇದು ಹಲವು ವೈಶಿಷ್ಟ್ಯಗಳನ್ನು ಹೊಂದಿದ್ದು, ಇದೇ ಡಿಸೆಂಬರ್‌ನಲ್ಲಿ ಕಾಮಗಾರಿ ಪೂರ್ಣಗೊಳಿಸುವ ಗುರಿ ನಿಗದಿ ಮಾಡಲಾಗಿದೆ.

ಎಸ್ ರವಿಪ್ರಕಾಶ್

ಹಿಮಾಲಯ ಪರ್ವತಗಳ ಶ್ರೇಣಿಯ ಒಂದು ಪಾದವದು. ಅಲ್ಲಿ ಮೊಸಳೆಯಂತೆ ದೊಡ್ಡದಾಗಿ ಬಾಯಿ ತೆರೆದುಕೊಂಡಿದ್ದ ಸುರಂಗದ ಮುಂದೆ ಒಂದಷ್ಟು ಮಂದಿ ಪತ್ರಕರ್ತರು ನಿಂತಿದ್ದೆವು. ಕತ್ತಲು ಆವರಿಸಿದ್ದ ಸುರಂಗದ ಬಾಯಿಯೊಳಗೆ ನಿಧಾನವಾಗಿ ಕಾಲಿಟ್ಟೆವು. ಮಂದ ಬೆಳಕಿನ ಸುರಂಗದೊಳಗೆ ಮುಂದೆ ಸಾಗುತ್ತಿದ್ದಂತೆ ಇಡೀ ವಾತಾವರಣವೇ ತಣ್ಣಗಾಗುತ್ತಾ ಹೋಯಿತು. ಬೆಳಕು ಮಾಯವಾಗಿ ಗವ್ವೆನ್ನುವ ಕತ್ತಲು ಆವರಿಸಿತ್ತು. ಮಣ್ಣಿನ ಗಾಢವಾದ ವಾಸನೆ ಮೂಗಿಗೆ ರಾಚಿತ್ತು.

ಸುರಂಗ ಮಾರ್ಗ ಆರಂಭವಾಗುವ ಸ್ಥಳ

ಕಾಲಿನ ಬೆರಳಿನ ಸಂದಿಯಲ್ಲಿ ಪಿಚ್... ಪಿಚ್ಚಿಕ್ ಎನ್ನುವ ಕೆಸರು. ಜಿನುಗುವ ನೀರು. ಪಾದ ಎಲ್ಲಿ ಹುದುಗಿ ಹೋದೀತೋ ಎನ್ನುವ ಭಯ. ಎಚ್ಚರಿಕೆಯಿಂದ ಪಾದಗಳನ್ನು ಎತ್ತಿ ಇಡಬೇಕಾಗುತ್ತಿತ್ತು. ಸುಮಾರು 500 ಮೀಟರ್ ಕ್ರಮಿಸಿದ ನಂತರ ಸುರಂಗದ ಗೋಡೆಗೆ ಅಂಟಿಕೊಂಡಂತಿದ್ದ ಸಣ್ಣ ಸಣ್ಣ ಟ್ಯೂಬ್‌ಲೈಟ್ ಬೆಳಕು ಕಾಣಿಸಿಕೊಂಡಿತು. ಬೆಳಕನ್ನು ಕಂಡ ಮನಸ್ಸು ಸ್ವಲ್ಪ ಹಗುರಾಯಿತು. ಇದೇ ಲಹರಿಯಲ್ಲಿದ್ದಾಗ, ಆ ಲಹರಿಗೆ ಭಂಗ ತಂದಿದ್ದು ರಭಸವಾಗಿ ಬಂದ ಟ್ರಕ್ಕು. ಮಣ್ಣು ಮತ್ತು ಬಂಡೆಗಳನ್ನು ತುಂಬಿಕೊಂಡು ಜೋರಾಗಿ ಸದ್ದು ಮಾಡುತ್ತಾ, ಹೊಗೆಯುಗುಳುತ್ತಾ ಬಂದು ಮುಂದಕ್ಕೆ ಹಾದು ಹೋಯಿತು. ಆ ಸದ್ದು ಕ್ಷೀಣವಾಗುತ್ತಿದ್ದಂತೆ, ವಾಹನಗಳ ಓಡಾಟ, ಕಾರ್ಮಿಕರ ಕೂಗಾಟದ ಸದ್ದು, ಪಾತಾಳದಿಂದ ಕೇಳಿಬಂದಂತಿತ್ತು....

ಏಕೆಂದರೆ ಆಗ ನಾವಿದ್ದಿದ್ದು ಪರ್ವತದ ಹೊಟ್ಟೆಯ ಯಾವುದೋ ಒಂದು ಮೂಲೆಯಲ್ಲಿ!

ಬೆಂಗಳೂರೋ, ಬೇರೆ ಯಾವುದೋ ನಗರದಲ್ಲಿ ಮೆಟ್ರೊ ಸುರಂಗಗಳನ್ನು ನೋಡಿರಬಹುದು. ಸಕಲೇಶಪುರದಿಂದ ಸುಬ್ರಹ್ಮಣ್ಯಕ್ಕೆ ರೈಲಿನಲ್ಲಿ ಹೋಗುವಾಗ ಪಶ್ಚಿಮಘಟ್ಟದ ಹೊಟ್ಟೆಯೊಳಗೆ ಹಾದು ಹೋದ ಸುರಂಗಗಳನ್ನೂ ನೋಡಿರುತ್ತೇವೆ. ಇವೆಲ್ಲ ಪುಟ್ಟ ಪುಟ್ಟ ಸುರಂಗಗಳು. ಕಾರ್ಗತ್ತಲು ಭೇದಿಸಿ ರೈಲು ಮುನ್ನುಗ್ಗುವಾಗ ಒಳಗೆಲ್ಲ ಕತ್ತಲು. ಮಕ್ಕಳು, ಯುವಕರು ‘ಹೋ...’ ಎಂದು ಏರು ಧ್ವನಿಯಲ್ಲಿ ಬೊಬ್ಬೆ ಹೊಡೆಯುವಾಗಲೇ ಕತ್ತಲಿನಿಂದ ಕೂಡಿದ ಸುರಂಗ ವಿಭಿನ್ನ ಅನುಭವ ನೀಡುತ್ತದೆ.

ಆದರೆ, ನಾನೀಗ ಹೇಳಲು ಹೊರಟಿರುವುದು ಭಾರತದ ಅತಿ ಉದ್ದದ ರೈಲು ಸುರಂಗ ಮಾರ್ಗದ ಬಗ್ಗೆ. ಉತ್ತರಾಖಂಡದ ಹೃಷಿಕೇಶದಿಂದ ಕರ್ಣಪ್ರಯಾಗದ ನಡುವೆ ಸಿದ್ಧವಾಗುತ್ತಿರುವ ಹೊಸ ರೈಲು ಮಾರ್ಗದಲ್ಲಿ ದೇವಪ್ರಯಾಗ ಮತ್ತು ಲಚ್ಮೋಲಿ ನಡುವೆ ಈ ಸುರಂಗ ನಿರ್ಮಾಣವಾಗುತ್ತಿದೆ. ಚಾರ್‌ಧಾಮ್ (ಕೇದಾರ, ಬದರಿ, ಗಂಗೋತ್ರಿ, ಯಮುನೋತ್ರಿ) ಯಾತ್ರೆ ಹೋದವರಿಗೆ ಹಿಮಾಲಯದ ಈ ಪ್ರದೇಶದ ದುರ್ಗಮ ಮತ್ತು ಕಠಿಣತೆ ತಕ್ಷಣವೇ ಅರಿವಿಗೆ ಬರುತ್ತದೆ. ಇಲ್ಲಿ ಪರ್ವತವನ್ನು ಕೊರೆದು ರೈಲು ಓಡಿಸುವ ಅತಿ ದೊಡ್ಡ ಯೋಜನೆ ನಿಜಕ್ಕೂ ವಿಸ್ಮಯಕಾರಿ. ಬ್ರಿಟಿಷರು ಕಷ್ಟ ಎಂದು ಕೈಬಿಟ್ಟಿದ್ದ ಯೋಜನೆಯನ್ನು ಈಗ ಕೈಗೆತ್ತಿಕೊಳ್ಳಲಾಗಿದೆ.

ಸುರಂಗಗಳನ್ನು ಕೊರೆಯುವ ತಂತ್ರಜ್ಞಾನ ಈಗ ಬಹಳಷ್ಟು ಬದಲಾವಣೆ ಆಗಿದೆ. ಆಧುನಿಕ ಮತ್ತು ಸ್ವಯಂಚಾಲಿತ ಬೃಹತ್ ಯಂತ್ರಗಳು ಬಂದಿವೆ. ಹಿಂದೆ ಈ ಕೆಲಸಗಳನ್ನು ನುರಿತ ಕಾರ್ಮಿಕರು ಮಾಡುತ್ತಿದ್ದರು. ಗುದ್ದಲಿ, ಹಾರೆ, ಪಿಕಾಸಿ ಹೀಗೆ ಹಲವು ಸಾಧನಗಳ ಜತೆಗೆ ಬಂಡೆಗಳನ್ನು ಸಿಡಿಸಲು ಡೈನಮೈಟ್‌ನಂತಹ ಸ್ಫೋಟಕಗಳನ್ನು ಬಳಸುತ್ತಿದ್ದರು. ಬಹಳ ಮಂದಗತಿಯಲ್ಲಿ ಕೆಲಸ ಸಾಗುತ್ತಿತ್ತು. ಸಕಲೇಶಪುರ–ಸುಬ್ರಹ್ಮಣ್ಯ ರೈಲು ಮಾರ್ಗ ಆಗಿದ್ದು ಬ್ರಿಟಿಷರ ಕಾಲದಲ್ಲಿ. ಆಗ ಕಾಡು ಮತ್ತು ಬೆಟ್ಟಗಳ ಮಧ್ಯೆ ಸುರಂಗ, ರೈಲು ಮಾರ್ಗ ನಿರ್ಮಾಣಕ್ಕೆ ಕಾರ್ಮಿಕರನ್ನು ಮುಂಜಾನೆ 5 ಗಂಟೆಯ ವೇಳೆಗೆ ಕಾಮಗಾರಿ ಸ್ಥಳಕ್ಕೆ ಒಯ್ಯುತ್ತಿದ್ದರು. ಮಧ್ಯಾಹ್ನ ಎರಡು–ಮೂರು ಗಂಟೆಗೆಲ್ಲಾ ಕೆಲಸ ಮುಗಿಸಿ ವಾಪಸ್ ಕರೆತರುತ್ತಿದ್ದರು. ಹುಲಿ, ಚಿರತೆ, ಆನೆಗಳಂತಹ ಕಾಡುಪ್ರಾಣಿಗಳ ದಾಳಿ ಭೀತಿಯ ಮಧ್ಯೆ ದಟ್ಟ ಕಾನನದಲ್ಲಿ ರೈಲು ಮಾರ್ಗ ಹಾಕುವುದು ಅಷ್ಟು ಸುಲಭವಾಗಿರಲಿಲ್ಲ.

ಈಗ ಆಧುನಿಕ ತಂತ್ರಜ್ಞಾನ ಸಾಕಷ್ಟು ಇದ್ದರೂ ಹಿಮಾಲಯದ ಗರ್ಭದಲ್ಲಿ ನಿರ್ಮಾಣವಾಗುತ್ತಿರುವ ಸುರಂಗಕ್ಕೆ ಸವಾಲುಗಳೇನೂ ಕಮ್ಮಿ ಇಲ್ಲ. ಭೂಕುಸಿತ, ಭೂಕಂಪ, ಮೇಘಸ್ಫೋಟದಿಂದ ಆಗುವ ಪ್ರವಾಹದಂತಹ ವಿದ್ಯಮಾನಗಳನ್ನು ತಾಳಿಕೊಂಡು ನಿಲ್ಲಬಲ್ಲ ತಂತ್ರಜ್ಞಾನವೇ ಬೇಕು. ನಿಸರ್ಗದ ಜತೆ ಸೆಣಸುತ್ತಲೇ ಅದು ಒಡ್ಡುವ ಸವಾಲುಗಳನ್ನು ಎದುರಿಸುತ್ತಲೇ ಸುರಂಗ ನಿರ್ಮಿಸಿ, ರೈಲು ಓಡಾಡಲು ಮಾರ್ಗ ಎಳೆಯಲೇಬೇಕಾಗಿದೆ.

ಚಾರ್‌ಧಾಮ್‌ಗೆಂದು ಈ ಮಾರ್ಗ ನಿರ್ಮಾಣ ಆಗುತ್ತಿದ್ದರೂ, ಚೀನಾದ ಆಕ್ರಮಣವನ್ನು ಹಿಮ್ಮೆಟ್ಟಿಸುವ ಉದ್ದೇಶದಿಂದ ಚೀನಾ ಗಡಿ ಉದ್ದಕ್ಕೂ ಭಾರತ ನಿರ್ಮಿಸುತ್ತಿರುವ ಮೂಲಸೌಕರ್ಯದ ಪ್ರದೇಶಕ್ಕೆ ಇದು ಸಂಪರ್ಕದ ಕೊಂಡಿಯೂ ಹೌದು. ಉತ್ತರಾಖಂಡದ ಮಾಣ ಗ್ರಾಮ ಚೀನಾ ಗಡಿಗೆ ಹೊಂದಿಕೊಂಡಿದೆ. ಆ ಗಡಿಯನ್ನು ಬೇಗ ಮುಟ್ಟುವುದಕ್ಕೆ ಅಥವಾ ನಮ್ಮ ಸೇನಾ ತುಕಡಿಗಳನ್ನು ಅತ್ಯಂತ ವೇಗವಾಗಿ ರವಾನಿಸುವುದಕ್ಕೆ ಹೊಸ ಮಾರ್ಗ ಅನುಕೂಲಕರ ಎಂಬ ಮಾತು ರಕ್ಷಣಾ ವಲಯದಿಂದ ಕೇಳಿ ಬಂದಿದೆ.

ಅದೇನೇ ಇರಲಿ, ಹಿಮಾಲಯದ ಗರ್ಭದಲ್ಲಿ ಸುರಂಗ ಕೊರೆದು ರೈಲು ಮಾರ್ಗ ಎಳೆಯುವುದು ಸುಲಭದ ಮಾತೇನಲ್ಲ. ಇದಕ್ಕೆ ಮುಖ್ಯ ಕಾರಣ ಅಲ್ಲಿನ ಮಣ್ಣಿನ ಗುಣ, ಬಂಡೆಗಳು, ಪರ್ವತದ ಭೂಮಿಯೊಳಗಿನ ಜಲದ ಹರಿವು. ಪದೇ ಪದೇ ಸಂಭವಿಸುವ ಭೂಕಂಪ, ಭೂಕುಸಿತ. ದಶಕದ ಹಿಂದೆ ಕೇದಾರದಲ್ಲಿ ಸಂಭವಿಸಿದ ಮೇಘಸ್ಫೋಟ ಮತ್ತು ಹಿಮಾಲಯದ ಹಲವು ಭಾಗಗಳಲ್ಲಿ ಈಗಲೂ ಭೂಕುಸಿತ ಸಂಭವಿಸುತ್ತಿರುವುದರಿಂದ ತಜ್ಞರಲ್ಲಿ ಸುರಂಗ ರೈಲು ಮಾರ್ಗ ಕುರಿತು ಆತಂಕ ಇದ್ದೇ ಇದೆ. ವಿಶ್ವದ ಅತ್ಯಾಧುನಿಕ ಮತ್ತು ಅಧಿಕ ಸಾಮರ್ಥ್ಯದ ಡ್ರಿಲ್ಲಿಂಗ್ ಯಂತ್ರಗಳೇ ಇಲ್ಲಿ ಸುರಂಗ ಕೊರೆಯಲು ನಿಂತಿವೆ. ಒಂದು ಕಡೆ ಸುರಂಗ ಕೊರೆಯುತ್ತಾ ಹೋಗುತ್ತಿದ್ದಂತೆ ಕಾಂಕ್ರೀಟ್ ಅನ್ನು ಮೆತ್ತುವ ಕೆಲಸವನ್ನೂ ಯಂತ್ರಗಳೇ ಅಚ್ಚುಕಟ್ಟಾಗಿ ಮಾಡುತ್ತವೆ. ಈ ಕಾಂಕ್ರೀಟ್ ಅತಿ ಬೇಗನೇ ಒಣಗಿ ಗಟ್ಟಿಯಾಗುತ್ತದೆ. ಇದರ ಮಧ್ಯೆಯೇ ಜಾಲರಿಯಂತೆ ರಾಡ್‌ಗಳನ್ನು ಅಳವಡಿಸಲಾಗುತ್ತದೆ. ಹೀಗಾಗಿ ಮಣ್ಣು ಕುಸಿಯುವುದನ್ನು ತಡೆಯಲು ಸಾಧ್ಯ ಎಂಬುದು ಅಧಿಕಾರಿಗಳ ವಿವರಣೆ.

11ನೇ ಪುಟಕ್ಕೆ...

ಬ್ರಿಟಿಷರ ಕಾಲದ ಕಲ್ಪನೆ...!

ಪರ್ವತದೊಳಗೆ ರೈಲು ಮಾರ್ಗ ಹಾಕುವ ಸಾಹಸದ ಕಲ್ಪನೆ ಮೂಡಿದ್ದು ಬ್ರಿಟಿಷರ ಕಾಲದಲ್ಲಿ. 1927 ರಲ್ಲಿ ಗಢ್‌ವಾಲ್ ಪರ್ವತ ಪ್ರದೇಶದಲ್ಲಿ ರೈಲು ಹಳಿ ಹಾಕಬೇಕು ಎಂಬ ಕಾರಣಕ್ಕೆ ಸಮೀಕ್ಷೆ ನಡೆಸಿದ್ದರು. ಈ ಮಾರ್ಗ ಲಾಭದಾಯಕವಲ್ಲ ಎಂಬ ಕಾರಣಕ್ಕೆ ಕೈಬಿಟ್ಟರು.

1938 ರಲ್ಲಿ ಜವಾಹರ್‌ಲಾಲ್ ನೆಹರು ಅವರು ಈ ಪ್ರದೇಶಕ್ಕೆ ಭೇಟಿ ನೀಡಿದಾಗ ರಸ್ತೆ ಸಂಪರ್ಕವೇ ಸರಿಯಾಗಿಲ್ಲದ್ದನ್ನು ಕಂಡು ಆಘಾತಕ್ಕೆ ಒಳಗಾದರು. ಹೃಷಿಕೇಶ–ಕರ್ಣಪ್ರಯಾಗ ರೈಲ್ವೆ ಯೋಜನೆ ಕೈಗೆತ್ತಿಕೊಳ್ಳದ ಬಗ್ಗೆಯೂ ಬೇಸರವನ್ನೂ ವ್ಯಕ್ತಪಡಿಸಿದ್ದರು. ಬದರೀನಾಥ, ಕೇದಾರನಾಥ, ಗಂಗೋತ್ರಿ, ಯುಮುನೋತ್ರಿ ಹೋಗುವ ಯಾತ್ರಿಕರಿಗೆ ಈ ವ್ಯವಸ್ಥೆ ಅಗತ್ಯವಾಗಿತ್ತು. ಆ ಬಳಿಕ ಈ ರೈಲ್ವೆ ಯೋಜನೆ ನನೆಗುದಿಗೆ ಬಿದ್ದಿತು.

ಮತ್ತೆ ಈ ಯೋಜನೆ ಚಿಗುರೊಡೆದದ್ದು 1996ರಲ್ಲಿ. ಮತ್ತೊಮ್ಮೆ ರೈಲು ಮಾರ್ಗದ ಸಮೀಕ್ಷೆ ಕೈಗೊಳ್ಳಲಾಯಿತು. ಇದಕ್ಕೆ ಮುತುವರ್ಜಿ ವಹಿಸಿದ್ದು ಸತ್ಪಾಲ್ ಮಹಾರಾಜ್. ರಾಷ್ಟ್ರೀಯ ಸುರಕ್ಷತೆ ಮತ್ತು ಜನಕಲ್ಯಾಣ ಎರಡನ್ನೂ ಗಮನದಲ್ಲಿಟ್ಟುಕೊಂಡು ಸಮೀಕ್ಷೆ ನಡೆಸಲಾಗಿತ್ತು. 2011ರಲ್ಲಿ ಯುಪಿಎ ಅಧ್ಯಕ್ಷೆ ಸೋನಿಯ ಗಾಂಧಿ ಈ ಯೋಜನೆಗೆ ಅಡಿಗಲ್ಲು ಹಾಕಿದರು. ಇದರ ಅಲೈನ್‌ಮೆಂಟ್ 2013 ರಲ್ಲಿ ಮುಗಿಯಿತು. ಬಳಿಕ ನಿಂತು ಹೋಯಿತು. ಪುನಃ ಯೋಜನೆ ಮುಂದುವರಿಸಲು 2015 ರಲ್ಲಿ ಪ್ರಧಾನಿ ಮೋದಿ ಹಸಿರು ನಿಶಾನೆ ತೋರಿದ್ದು ಮಾತ್ರವಲ್ಲದೇ, ಸಮರೋಪಾದಿಯಲ್ಲಿ ಕಾಮಗಾರಿ ನಡೆಸಲು ಒತ್ತಾಸೆ ನೀಡಿದರು. ಇದರ ಪರಿಣಾಮ ಇದೀಗ ಶೇ 70 ರಷ್ಟು ಕಾಮಗಾರಿ ಪೂರ್ಣಗೊಂಡಿದೆ.

ರೈಲು ಸುರಂಗ ಮಾರ್ಗ ನಿರ್ಮಾಣ ಕಾಮಗಾರಿ

ಪ್ರತಿಕ್ರಿಯೆಗಾಗಿ
bhanuvarada@prajavani.co.in

‘ಹಿಂದೂಸ್ತಾನ’ವು ಎಂದೂ ಮರೆಯದ ಕಾಲ

ಗಿರೀಶ ದೊಡ್ಡಮನಿ

ಕೈಗಡಿಯಾರಗಳ ಸಂಗ್ರಹಗಳನ್ನು ವೀಕ್ಷಿಸುತ್ತಿರುವ ಆಸಕ್ತರು
ಚಿತ್ರಗಳು:ಕೃಷ್ಣಕುಮಾರ್ ಪಿ.ಎಸ್.

‘ದೇಶದ ಸಮಯಪಾಲಕ ..’ ಮೂರು ದಶಕಗಳ ಹಿಂದೆ ಯಾವುದೇ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಈ ಎರಡು ಪದ ಕೇಳಿದರೆ ಸಾಕು ಶಾಲೆಯ ಮಕ್ಕಳೂ ಕಣ್ಣಗಲಿಸಿ, ಕಿರುನಗೆ ಮಿನುಗಿಸಿ ‘ಎಚ್‌ಎಂಟಿ’ ಎಂದು ಜೋರಾಗಿ ಹೇಳುತ್ತಿದ್ದರು.

ಮಕ್ಕಳಷ್ಟೇ ಅಲ್ಲ; ಹಿರಿಯರು, ವೃತ್ತಿಪರರು, ಅಧಿಕಾರಿಗಳು, ಕ್ರೀಡಾಪಟುಗಳು, ರೈತರು, ಕಾರ್ಮಿಕರು, ಮಹಿಳೆಯರು, ಹದಿಹರೆಯದವರು ಮತ್ತು ಎಲ್ಲ ವರ್ಗದವರ ನಾಡಿಮಿಡಿತವೇ ಆಗಿದ್ದವು ಎಚ್‌ಎಂಟಿ ಕೈಗಡಿಯಾರಗಳು. ಅಪ್ಪಟ ಚಿನ್ನ, ಹಿತ್ತಾಳೆ ಮತ್ತಿತರ ಲೋಹಗಳು ಮತ್ತು ಪ್ಲಾಸ್ಟಿಕ್ ಸಾಮಗ್ರಿಯಿಂದ ಬಗೆಬಗೆಯ ಕೈಗಡಿಯಾರಗಳನ್ನು ಉತ್ಪಾದಿಸಿದ ಹೆಗ್ಗಳಿಕೆ ಹಿಂದೂಸ್ತಾನ್ ಮಷಿನ್ ಟೂಲ್ಸ್ (ಎಚ್‌ಎಂಟಿ) ಕಂಪನಿಯದ್ದು. ಅಷ್ಟೇ ಅಲ್ಲ; ಭಾರತ ದೇಶದ ಜನರಲ್ಲಿ ಕೈಗಡಿಯಾರದ ‘ಕ್ರೇಜ್’ ಹುಟ್ಟುಹಾಕಿದ್ದು ಇದೇ ಬ್ರ್ಯಾಂಡ್. ಇದು ಅಪ್ಪಟ ದೇಶಿ ಮತ್ತು ಬೆಂಗಳೂರಿನ ಕೊಡುಗೆ ಎನ್ನುವುದೇ ಹೆಮ್ಮೆ.

ಆದರೆ ಜಾಗತೀಕರಣದ ನಂತರ ಸೃಷ್ಟಿಯಾದ ಪೈಪೋಟಿ ಚಂಡಮಾರುತದಲ್ಲಿ ಮೊದಲಿನ ಮಾರುಕಟ್ಟೆ ಕಾಪಾಡಿಕೊಳ್ಳುವಲ್ಲಿ ಯಶಸ್ವಿಯಾಗದ ಎಚ್‌ಎಂಟಿ ಜನಪ್ರಿಯತೆ ಮಾತ್ರ ಉಳಿಸಿಕೊಂಡಿದೆ. ಡಿಜಿಟಲ್ ಗಡಿಯಾರ, ಮೊಬೈಲ್‌ಗಳಲ್ಲಿ ಸಮಯ ತಿಳಿಯುವ ಅನುಕೂಲ ಇರುವ ಕಾಲಘಟ್ಟದಲ್ಲಿ ಕೈಗಡಿಯಾರ ಕೇವಲ ಅಲಂಕಾರಿಕ ಆಭರಣವಾಗಿ ಉಳಿದಿರುವುದು ಸುಳ್ಳಲ್ಲ. ಆದರೆ ವಾಚ್ ಸಂಗ್ರಹ ಮಾಡುವ ಹವ್ಯಾಸಿಗಳಿಗೆ ಎಚ್‌ಎಂಟಿ ವಾಚ್ ಎಂದರೆ ಪಂಚಪ್ರಾಣ. ಅದಕ್ಕಾಗಿಯೇ ಆನ್‌ಲೈನ್ ಹಾಗೂ ಬೆಂಗಳೂರಿನಲ್ಲಿರುವ ನಾಲ್ಕು ಮಾರಾಟ ಮಳಿಗೆಗಳ ಮೂಲಕ ಎಚ್‌ಎಂಟಿ ವಾಚ್ ಮಾರಾಟ ನಡೆಯುತ್ತಿದೆ.

ಈ ಕೈಗಡಿಯಾರಗಳ ಹುಟ್ಟು, ಬೆಳವಣಿಗೆ ಮತ್ತು ಸ್ವಾತಂತ್ರ್ಯನಂತರದ ಭಾರತದ ನಾಡಿಮಿಡಿತವಾದ ಘಟ್ಟಗಳನ್ನು ಅರಿಯಬೇಕೆಂದರೆ ಬೆಂಗಳೂರಿನ ಜಾಲಹಳ್ಳಿಯಲ್ಲಿರುವ ಎಚ್‌ಎಂಟಿ ಪರಂಪರೆ ಮತ್ತು ವಸ್ತುಸಂಗ್ರಹಾಲಯದೊಳಗೆ ಪ್ರವೇಶಿಸಬೇಕು. ಇಲ್ಲಿರುವ ಕೈಗಡಿಯಾರದ ವಿಸ್ಮಯ ಲೋಕ ಬೆರಗಾಗಿಸುತ್ತದೆ. ಮೆಕ್ಯಾನಿಕಲ್, ಅನಲಾಗ್ ಮತ್ತು ಆಟೊಮ್ಯಾಟಿಕ್ ಕೈಗಡಿಯಾರಗಳ ಜಗತ್ತು ಮೋಡಿ ಮಾಡುತ್ತದೆ. ಇಲ್ಲಿರುವ ಉಸ್ತುವಾರಿ ಅಧಿಕಾರಿಗಳು ಮತ್ತು ಸಿಬ್ಬಂದಿ ಹಂತಹಂತವಾಗಿ ವಿವರಣೆ ನೀಡುತ್ತಾರೆ. ಸಾಕ್ಷ್ಯಚಿತ್ರದ ಮೂಲಕ ಕಂಪನಿ ಕುರಿತ ಸವಿಸ್ತಾರ ಪರಿಚಯ ಮಾಡಿಸುತ್ತಾರೆ.

ಈ ಕಟ್ಟಡದ ಪ್ರವೇಶದ್ವಾರವನ್ನು ದಾಟಿ ಬಲಕ್ಕೆ ತಿರುಗಿದರೆ ದೊಡ್ಡ ಪಡಸಾಲೆಯಲ್ಲಿ ಎಚ್‌ಎಂಟಿ ಉದ್ಯಮವು ಬೆಳೆದು ಬಂದ ಹಂತಗಳನ್ನು ಚಿತ್ರ, ಮಾಹಿತಿಯ ರೂಪದಲ್ಲಿ ತಿಳಿಯಬಹುದು. 1952ರಲ್ಲಿ ಎಚ್‌ಎಂಟಿ ಯಂತ್ರೋಪಕರಣಗಳ ಉತ್ಪಾದನೆ ಕಾರ್ಖಾನೆ ಆರಂಭವಾಯಿತು. ಭಾರತವು ಕೈಗಾರಿಕೆಗಳ ಮೂಲಕ ಅಭಿವೃದ್ಧಿಯಾಗಬೇಕೆಂಬ ಮೊದಲ ಪ್ರಧಾನಿ ಜವಾಹರಲಾಲ್ ನೆಹರು ಅವರ ಕನಸಿನ ಕೂಸಾಗಿ ಈ ಉದ್ಯಮ ಆರಂಭವಾಯಿತು. ಪ್ರತಿವರ್ಷವೂ ಒಂದು ಹೊಸ ಘಟಕ ಅಥವಾ ಉದ್ಯಮ ಆರಂಭಿಸುವ ಯೋಜನೆ ಇತ್ತು. ದೇಶದ ಬೇರೆ ಬೇರೆ ಊರುಗಳಲ್ಲಿ ಮಷಿನ್ ಟೂಲ್ಸ್, ಮೋಟಾರ್ ಡಿವಿಷನ್ ಟ್ರ್ಯಾಕ್ಟರ್ ಉತ್ಪಾದನಾ ಘಟಕಗಳನ್ನು ಆರಂಭಿಸಲಾಯಿತು. ಇದೇ ಯೋಜನೆಯಲ್ಲಿ 1962ರಲ್ಲಿ ಬೆಂಗಳೂರಿನಲ್ಲಿ ಮೊಟ್ಟಮೊದಲ ವಾಚ್ ತಯಾರಿಕಾ ಘಟಕ ಆರಂಭವಾಯಿತು. ಜಪಾನ್‌ನ ಸಿಟಿಜನ್ ಕಂಪನಿಯ ಸಹಯೋಗದೊಂದಿಗೆ ವಾಚ್ ಉತ್ಪಾದನೆ ಆರಂಭಿಸಿತು.

ಈ ಮಾಹಿತಿಯನ್ನು ಮೆಲುಕು ಹಾಕುತ್ತ ಇನ್ನೊಂದು ಕೋಣೆಗೆ ಪ್ರವೇಶಿಸುತ್ತಿದ್ದಂತೆ ಕಂಪನಿಯಿಂದ ಮಾರುಕಟ್ಟೆಗೆ ಬಿಡುಗಡೆಯಾದ ಮೊಟ್ಟಮೊದಲ ಜನತಾ ವಾಚ್‌ನ ದೊಡ್ಡ ಪ್ರತಿಕೃತಿ ಗಮನ ಸೆಳೆಯುತ್ತದೆ. ಅದರ ಅಕ್ಕಪಕ್ಕದ ಶೋಕೇಸ್‌ಗಳಲ್ಲಿ ಇದುವರೆಗೆ ಉತ್ಪಾದನೆಯಾದ ಐಕಾನ್ ಕೈಗಡಿಯಾರಗಳ ಸಂಗ್ರಹ ಇದೆ. ಈ ವಾಚ್‌ಗಳಲ್ಲಿ ಬಳಕೆಯಾಗುತ್ತಿದ್ದ ಸೂಕ್ಷ್ಮವಾದ ಯಂತ್ರೋಪಕರಣಗಳ ವಿನ್ಯಾಸ, ಜೋಡಣೆಗಳನ್ನು ನೋಡಲು ಸೂಕ್ಷ್ಮದರ್ಶಕದ ವ್ಯವಸ್ಥೆಯೂ ಇದೆ. ಪುಟ್ಟಪುಟ್ಟ ಉಪಕರಣಗಳನ್ನು ಜೋಡಣೆ ಮಾಡುತ್ತಿದ್ದ ಆ ಕಾಲಘಟ್ಟದ ಕುಶಲಕರ್ಮಿಗಳ ನೈಪುಣ್ಯ ಬೆರಗು ಮೂಡಿಸುತ್ತದೆ. ಅಲ್ಲಿಯೇ ಪಕ್ಕದ ಗೋಡೆಯ ಮೇಲಿನ ಕಪ್ಪು ಬಿಳುಪು ಚಿತ್ರವೊಂದು ಗಮನ ಸೆಳೆಯುತ್ತದೆ. ವಾಚ್ ಅಂಗಡಿಯ ಮುಂದೆ ಎಚ್‌ಎಂಟಿ ಕೈಗಡಿಯಾರ ಖರೀದಿಸಲು ಸಾಲುಗಟ್ಟಿದ ಜನರದ್ದು!

12ನೇ ಪುಟಕ್ಕೆ...

ರಾಯಭಾರಿಯಾಗಿದ್ದ ಕಪಿಲ್ ದೇವ್!

ಪ್ರಧಾನಿಗಳಾಗಿದ್ದ ಇಂದಿರಾಗಾಂಧಿ, ರಾಜೀವ್‌ಗಾಂಧಿ, ಅಟಲ್ ಬಿಹಾರಿ ವಾಜಪೇಯಿ ಮತ್ತು ಅನೇಕ ಗಣ್ಯರ ಮನಸ್ಸು ಗೆಲ್ಲುವಲ್ಲಿ ಈ ಕೈಗಡಿಯಾರಗಳು ಯಶಸ್ವಿಯಾಗಿದ್ದವು. ಅಷ್ಟೇ ಅಲ್ಲ. 1983ರ ಕ್ರಿಕೆಟ್ ವಿಶ್ವಕಪ್ ವಿಜೇತ ಭಾರತ ತಂಡದ ನಾಯಕ ಕಪಿಲ್ ದೇವ್ ಈ ವಾಚ್‌ಗೆ ಪ್ರಚಾರ ರಾಯಭಾರಿಯಾಗಿದ್ದರು.

ಸಂಗ್ರಹಾಲಯದಲ್ಲಿರುವ ಚಿನ್ನದ ಕೈಗಡಿಯಾರ

ರಂಗೋಲಿಯಲ್ಲಿ ಭಾವ–ಜೀವ

ಇಮಾಮ್‌ಹುಸೇನ್ ಗೂಡುನವರ

ಸ್ನೇಹಿತರೊಬ್ಬರ ವಾಟ್ಸ್‌ಆ್ಯಪ್‌ಗೆ ಪಂಢರಪುರದ ವಿಠ್ಠಲ ಮತ್ತು ಆತನ ಭಕ್ತನ (ವಾರಕರಿ) ಚಿತ್ರಗಳು ಬಂದವು. ‘ಏನ್ ಮಸ್ತ್ ಫೋಟೊ ತೆಗೆದಾರಲ್ರೀ’ ಎಂದೆ. ‘ಇವು ಕ್ಯಾಮೆರಾದಲ್ಲಿ ಕ್ಲಿಕ್ಕಿಸಿದ ಫೋಟೊಗಳಲ್ಲ; ರಂಗೋಲಿಯಲ್ಲಿ ಅರಳಿದ ಚಿತ್ರ’ ಎಂದ ಗೆಳೆಯ. ರಂಗೋಲಿಯಲ್ಲಿ ಇಷ್ಟು ಅಚ್ಚುಕಟ್ಟಾಗಿ ಚಿತ್ರ ಬಿಡಿಸಲು ಸಾಧ್ಯವೆ ಎಂಬ ಕುತೂಹಲದಿಂದ ಬೆಳಗಾವಿಯ ವಡಗಾವಿಯ ನಾಜರ್ ಕ್ಯಾಂಪ್‌ನಲ್ಲಿರುವ ಕಲಾವಿದ ಅಜಿತ್ ಔರವಾಡಕರ ಅವರ ಫೋಟೊ ಸ್ಟುಡಿಯೊಗೆ ಭೇಟಿ ನೀಡಿದಾಗ ಅಲ್ಲಿ ರಂಗೋಲಿಯಲ್ಲಿ ಬಿಡಿಸಿದ ವೈವಿಧ್ಯಮಯ ಚಿತ್ರಗಳ ಲೋಕವೇ ಅನಾವರಣಗೊಂಡಿತು.

56ರ ಹರೆಯದ ಅಜಿತ್ ವೃತ್ತಿಯಿಂದ ಛಾಯಾಗ್ರಾಹಕ. ಎರಡು ದಶಕಗಳ ಹಿಂದೆ ಆಕರ್ಷಕವಾದ ಚಿತ್ರಕಲೆಗಳನ್ನು ಬಿಡಿಸುತ್ತಿದ್ದ ಅವರು, ಖಾಸಗಿ ಕಾಲೇಜೊಂದರಲ್ಲಿ ಚಿತ್ರಕಲಾ ಶಿಕ್ಷಕರಾಗಿದ್ದರು. ವೃತ್ತಿ ಬದುಕಿನಲ್ಲಿ ಎದುರಾದ ತೊಡಕುಗಳಿಗೆ ಬೇಸತ್ತು ಕಲಾ ಬದುಕಿಗೆ ವಿರಾಮ ನೀಡಿದ್ದರು. ತಾವು ರಚಿಸಿದ ಪೇಂಟಿಂಗ್‌ಗಳನ್ನೆಲ್ಲ ಮೂಲೆಗೆ ಎಸೆದು, ‘ಇನ್ಮೇಲೆ ಚಿತ್ರ ಬಿಡಿಸುವುದೇ ಬೇಡ. ಫೋಟೊ ಕ್ಲಿಕ್ಕಿಸುತ್ತ ಬದುಕಿನ ಬಂಡಿ ದೂಡಿದರಾಯಿತು’ ಎಂದು ನಿರ್ಧರಿಸಿ ಬದುಕಿನಲ್ಲಿ ಮುಂದೆ ಸಾಗಿದ್ದರು. ಹೀಗೆ ಒಂದು ದಶಕವೂ ಕಳೆದಿತ್ತು. ಈ ಅವಧಿಯಲ್ಲಿ ಬಣ್ಣ–ಕುಂಚ ಮುಟ್ಟಿರಲಿಲ್ಲ! ಇಂಥ ಗಟ್ಟಿ ನಿರ್ಧಾರ ಮಾಡಿದ್ದ ಅಜಿತ್ ಅವರನ್ನು ಮತ್ತೆ ಚಿತ್ರಗಳನ್ನು ಬಿಡಿಸುವಂತೆ ಮಾಡಿದ್ದು ರಂಗೋಲಿ. ಹೇಗೆ ಎಂಬುದನ್ನು ಅವರೇ ಇಲ್ಲಿ ವಿವರಿಸಿದ್ದಾರೆ...

‘2012ರ ನವೆಂಬರ್‌ನಲ್ಲಿ ಮಹಾರಾಷ್ಟ್ರದ ಶಿವಸೇನಾ ಮುಖ್ಯಸ್ಥ ಬಾಳಾಸಾಹೇಬ ಠಾಕ್ರೆ ನಿಧನರಾದರು. ಅದೇ ವೇಳೆಗೆ ದೀಪಾವಳಿ ಹಬ್ಬವೂ ಇದ್ದಿದ್ದರಿಂದ ಕುಟುಂಬದವರು ಮನೆಯಂಗಳದಲ್ಲಿ ಚಿತ್ರ ಬಿಡಿಸಲು ವಿವಿಧ ಬಣ್ಣಗಳ ರಂಗೋಲಿ ತಂದಿದ್ದರು. ಏನಾಯಿತೋ ಗೊತ್ತಿಲ್ಲ. ನನಗೇ ಅರಿವಿಲ್ಲದಂತೆ, ರಂಗೋಲಿಯಲ್ಲಿ ಬಾಳಾಸಾಹೇಬ ಠಾಕ್ರೆ ಚಿತ್ರ ಮೂಡಿಸಿದೆ. ನಾಲ್ಕಾರು ದಿನ ಸ್ಟುಡಿಯೊದಲ್ಲೂ ಅದನ್ನು ಪ್ರದರ್ಶಿಸಿದೆ. ನೂರಾರು ಜನ ವೀಕ್ಷಿಸಿ ‘ಭೇಷ್’ ಎಂದು ಬೆನ್ನುತಟ್ಟಿದರು’ ಎಂದು ಅಜಿತ್ ಮಾತು ಆರಂಭಿಸಿದರು.

ಶಹನಾಯಿ ವಾದಕ ಉಸ್ತಾದ್ ಬಿಸ್ಮಿಲ್ಲಾ ಖಾನ್



ಸಿದ್ಧಗಂಗಾ ಸ್ವಾಮೀಜಿ



ಪುನೀತ್ ರಾಜ್‌ಕುಮಾರ್

‘ಖ್ಯಾತ ಸಿತಾರ್ ವಾದಕ ರವಿಶಂಕರ್ ಅನಾರೋಗ್ಯಕ್ಕೆ ತುತ್ತಾಗಿದ್ದರು. ಆದರೆ, ಸಂಘಟಕರಿಗೆ ದಿನಾಂಕ ಕೊಟ್ಟಿದ್ದರಿಂದ ಸಲೈನ್ ಹಚ್ಚಿಕೊಂಡೇ ಕ್ಯಾಲಿಫೋರ್ನಿಯಾದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪಾಲ್ಗೊಂಡರು. ಅವರು ತಮ್ಮ ಆರೋಗ್ಯಕ್ಕಿಂತ ಕಲೆಗೆ ಎಷ್ಟೊಂದು ಬೆಲೆ ಕೊಡ್ತಾರೆ ಎಂದು ತಿಳಿಯಿತು. ಇವೆರಡೂ ಪ್ರಸಂಗಗಳು ಮತ್ತೆ ನನ್ನಲ್ಲಿ ಕಲೆಯ ಬಗ್ಗೆ ಪ್ರೀತಿ ಹುಟ್ಟಿಸಿದವು. ನನ್ನಲ್ಲಿನ ಕಲಾ ಪ್ರತಿಭೆ ವ್ಯರ್ಥ ಮಾಡಬಾರದು. ಭಿನ್ನವಾಗಿ ಚಿತ್ರಗಳನ್ನು ಬಿಡಿಸಬೇಕೆಂದು ಪ್ರೇರಣೆ ಮೂಡಿಸಿದವು. ಹಾಗಾಗಿ ರಂಗೋಲಿಯಲ್ಲಿ ಚಿತ್ರ ಬಿಡಿಸಲು ಆರಂಭಿಸಿದೆ’ ಎಂದು ಅನುಭವ ಹಂಚಿಕೊಂಡರು.

ಮಹಾನ್ ನಾಯಕರು, ಸಾಧು–ಸಂತರು, ಸಮಾಜಸುಧಾರಕರು, ವಿಜ್ಞಾನಿಗಳು, ಗಾಯಕರು, ಸಾಹಿತಿಗಳು, ಕ್ರೀಡಾಪಟುಗಳು, ಚಲನಚಿತ್ರ ನಟ–ನಟಿಯರು ಹೀಗೆ... ಯಾವುದೇ ಗಣ್ಯರ ಜನ್ಮದಿನದಂದು ಮತ್ತು ಅವರು ಮೃತಪಟ್ಟಾಗ ಅಜಿತ್ ರಂಗೋಲಿಯಲ್ಲಿ ಚಿತ್ರ ಬಿಡಿಸಿ ಗೌರವ ಸಮರ್ಪಿಸುತ್ತಾರೆ.

12ನೇ ಪುಟಕ್ಕೆ...

ಸಾಗರದಾಚೆಗೂ ತಲುಪಿದ 'ಕರುಂಬಿತ್ತಿಲ್' ಆಲಾಪ

ಗಣೇಶ ಚಂದನಶಿವ

ಸುತ್ತಲೂ ಹಚ್ಚ ಹಸಿರಿನ ಪರಿಸರ. ವಾದ್ಯಗಳಿಂದ ಹೊರಡುವ ಶ್ರುತಿ, ಸಂಗೀತದ ಆಲಾಪ ಅಲೆ ಅಲೆಯಾಗಿ ತೇಲಿ ಬರುತ್ತಿದ್ದರೆ, ಅದಕ್ಕೆ ಧ್ವನಿಗೂಡಿಸಿವೆ ಎಂಬಂತೆ ಪಕ್ಷಿಗಳ ಚಿಲಿಪಿಲಿ ಗಾನ. ಪ್ರತಿ ವರ್ಷವೂ ಈ ಸೊಬಗು ಮೇಳೈಸುವುದು ನಿಡ್ಲೆ ಎಂಬ ಪುಟ್ಟ ಹಳ್ಳಿಯಲ್ಲಿ. ಮೇ ತಿಂಗಳಲ್ಲಿ ಇಲ್ಲಿ ನಡೆಯುವ 'ಕರುಂಬಿತ್ತಿಲ್ ಸಂಗೀತ ಶಿಬಿರ'ದಲ್ಲಿ.

ಚೆನ್ನೈನಲ್ಲಿ ನೆಲೆಸಿರುವ ಪ್ರಸಿದ್ಧ ವಯೊಲಿನ್ ವಾದಕ ವಿಠ್ಠಲ ರಾಮಮೂರ್ತಿ ಅವರು ಸಂಗೀತ ಪ್ರೇಮಿ ಸ್ನೇಹಿತರೊಡಗೂಡಿ 'ಕರುಂಬಿತ್ತಿಲ್ ಸಂಗೀತ ಶಿಬಿರ'ವನ್ನು ಉಚಿತವಾಗಿ ನಡೆಸುತ್ತಿದ್ದಾರೆ. ದೇಶ–ವಿದೇಶದಲ್ಲಿರುವ ಸಂಗೀತದ ಕುಡಿಗಳನ್ನು ಬೆಸೆಯುತ್ತಿರುವ ಈ ಶಿಬಿರದಲ್ಲಿ, ಅನಿವಾಸಿ ಭಾರತೀಯ ಸಂಗೀತ ವಿದ್ಯಾರ್ಥಿಗಳು, ಹೊರ ದೇಶದ ಸಂಗೀತ ವಿದ್ವಾಂಸರು ಹಾಗೂ ಸಂಗೀತಾಸಕ್ತರು ಸೇರಿದಂತೆ ಈ ಬಾರಿ 320ಕ್ಕೂ ಹೆಚ್ಚು ಜನ ಪಾಲ್ಗೊಂಡಿದ್ದರು.

ಈ ವರ್ಷದ 'ಕರುಂಬಿತ್ತಿಲ್ ಸಂಗೀತ ಶಿಬಿರ' ಮೇ 15ರಿಂದ 19ರ ವರೆಗೆ ನಡೆಯಿತು. 24ನೇ ವರ್ಷದ ಈ ಶಿಬಿರದಲ್ಲಿ ಅನಿವಾಸಿ ಭಾರತೀಯರು, ಶ್ರೀಲಂಕಾದ ಸಂಗೀತ ಕಲಾವಿದರೂ ಪಾಲ್ಗೊಂಡು ಪುಳಕಿತರಾದರು.

ಕರುಂಬಿತ್ತಿಲ್ ಸಂಗೀತ ಶಿಬಿರದಲ್ಲಿ ಪಾಲ್ಗೊಂಡಿದ್ದ ಶಿಬಿರಾರ್ಥಿಗಳು

ಚಿತ್ರಗಳು: ಫಕ್ರುದ್ದೀನ್ ಎಚ್.

ಪ್ರತಿ ವರ್ಷ ಸಂಗೀತ ಕ್ಷೇತ್ರದ ವಿದ್ವಾಂಸರನ್ನು ಈ ಪುಟ್ಟ ಹಳ್ಳಿಗೆ ಕರೆಯಿಸಿ ಶಿಬಿರ ನಡೆಸಲಾಗುತ್ತದೆ. ಸಾಂಪ್ರದಾಯಿಕ ಶೈಲಿಯಲ್ಲಿರುವ ಪುರಾತನವಾದ ದೊಡ್ಡಮನೆ, ಅದರ ಆವರಣದಲ್ಲಿ ನಡೆಯುವ ಈ ಶಿಬಿರದಲ್ಲಿ, ಅಂದ–ಅಲಂಕಾರ, ಊಟ–ವಸತಿ ಹೀಗೆ ಪ್ರತಿ ಹಂತದಲ್ಲಿಯೂ ಹಳ್ಳಿಗಾಡಿನ, ತುಳುನಾಡಿನ ಸೊಗಡು ಇರುತ್ತದೆ. ಇಲ್ಲಿಯೇ ಸಾಂಪ್ರದಾಯಿಕ ಶೈಲಿಯಲ್ಲಿ ಅಡುಗೆ ತಯಾರಿಸಲಾಗುತ್ತದೆ. ಎಲ್ಲರೂ ಸೇರಿ ಊಟ ಮಾಡುತ್ತಾರೆ. ಮಕ್ಕಳು–ಹಿರಿಯರು ಎಲ್ಲರೂ ಒಂದೇಕಡೆ ಇದ್ದು ನಲಿಯುತ್ತಾರೆ. ಅತಿಥಿಗಳಿಗೆ ಮಾತ್ರ ಬೇರೆಡೆ ವಸತಿ ವ್ಯವಸ್ಥೆ ಕಲ್ಪಿಸಲಾಗುತ್ತದೆ. ಶಿಬಿರಾರ್ಥಿಗಳು ಈ ದೊಡ್ಡ ಮನೆಯಲ್ಲಿಯೇ ತಂಗುತ್ತಾರೆ. ಇವೆಲ್ಲವೂ ನಗರವಾಸಿಗಳಿಗೆ ಹೊಸ ಅನುಭವ ಕಟ್ಟಿಕೊಡುತ್ತಿವೆ.

ಈ ಬಾರಿಯ ಶಿಬಿರದಲ್ಲಿ ಉಡುಪಿ ಗೋಪಾಲಕೃಷ್ಣನ್, ಟಿ.ವಿ. ರಾಮಪ್ರಸಾದ್, ಚಾರುಮತಿ ರಘುರಾಮನ್, ಅನಂತ ಆರ್. ಕೃಷ್ಣನ್, ಅಭಿಷೇಕ್ ರಘುರಾಮನ್, ಸುಂದರ ಕುಮಾರ್, ವಿಠ್ಠಲ ರಂಗನ್, ವಿ.ವಿ. ರಮಣಮೂರ್ತಿ, ಎ. ಚಂದನ್ ಕುಮಾರ್, ರಮಣ ಬಾಲಚಂದ್ರನ್ ಸೇರಿ ಹಲವು ವಿದ್ವಾಂಸರು ಭಾಗವಹಿಸಿ ಸಂಗೀತ ಪಾಠ ಮಾಡಿದರು. ಕಛೇರಿ ನಡೆಸಿಕೊಟ್ಟರು.

ದಕ್ಷಿಣ ಕನ್ನಡ ಜಿಲ್ಲೆ ಧರ್ಮಸ್ಥಳ ಬಳಿಯ ನಿಡ್ಲೆ ಗ್ರಾಮದ 'ಕರುಂಬಿತ್ತಿಲ್' ಎಂಬುದು ವಿಠ್ಠಲ ರಾಮಮೂರ್ತಿ ಅವರ ಮನೆ ಇರುವ ಪ್ರದೇಶದ ಹೆಸರು (ಕರುಂಬಿತ್ತಿಲ್ ಎಂಬುದು ತುಳು ಪದ. ಕಬ್ಬು ಬೆಳೆಯುವ ಹಿತ್ತಿಲು ಎಂಬುದು ಇದರ ಅರ್ಥ). ಇಲ್ಲಿಯೇ ಇದ್ದು ಅವರು ಎಸ್ಎಸ್ಎಲ್ಸಿ ವರೆಗೆ ಓಗಿದರು. ಸಂಗೀತ ಕಲಿಯಲು ಇಲ್ಲಿ ಅಂತಹ ವಾತಾವರಣ ಇರಲಿಲ್ಲ. ಎರಡು ಕಡೆಯಿಂದ ನದಿ, ಮಧ್ಯ ಈ ಊರು ದ್ವೀಪದಂತೆ ಇತ್ತು. ಸೇತುವೆ ಇರಲಿಲ್ಲ. ಮಳೆಗಾಲದಲ್ಲಿ ಬೋಟ್‌ನಲ್ಲಿ ಹೋಗಬೇಕಿತ್ತು. ಬೋಟ್ ಕೆಟ್ಟು ನಿಂತಾಗ ಸಂಪರ್ಕವೇ ಸಾಧ್ಯವಾಗುತ್ತಿರಲಿಲ್ಲ. ತಾಯಿಯ ಆಸೆ ಮತ್ತು ಅಜ್ಜಿ–ಅಪ್ಪ ಅವರ ಸಹಕಾರದಿಂದ ಶಿವಮೊಗ್ಗಕ್ಕೆ ಹೋದ ವಿಠ್ಠಲ ರಾಮಮೂರ್ತಿ ಅಲ್ಲಿ ವೆಂಕಟರಮಣ ಅವರ ಬಳಿ ಸಂಗೀತ ಕಲಿತರು. ಮುಂದೆ ಚೆನ್ನೈಗೆ ತೆರಳಿ ಟಿ.ರುಕ್ಮಿಣಿ, ವಯೊಲಿನ್‌ನ ಮೇರು ಪರ್ವತ ಎಂದೇ ಕರೆಯಲಾಗುವ ಲಾಲಗುಡಿ ಜಯರಾಮ್ ಅವರಲ್ಲಿ ಹಾಗೂ ಗುರುಕುಲ ಪದ್ಧತಿಯಲ್ಲಿ ಸಂಗೀತ ಕಲಿತರು. ವಿಶ್ವದ ಬಹುತೇಕ ಕಡೆ ಕಾರ್ಯಕ್ರಮ ನೀಡಿ ಅಂತರರಾಷ್ಟ್ರೀಯ ಮಟ್ಟದಲ್ಲಿಯೂ ತಮ್ಮ ಕೀರ್ತಿ ಹರಡುವಂತೆ ಮಾಡಿದರು.

ಹುಟ್ಟಿದ ಊರಿಗೆ ಏನಾದರೂ ಮಾಡಬೇಕು ಎಂಬ ತುಡಿತ. ತಮ್ಮೂರಲ್ಲೇ ಕರ್ನಾಟಕ ಶಾಸ್ತ್ರೀಯ ಸಂಗೀತದ ಉಚಿತ ಶಿಬಿರ ನಡೆಸಿ, ಸಂಗೀತಗಾರರನ್ನು ಹುಟ್ಟುಹಾಕಬೇಕು, ಆ ಮೂಲಕ ತಮ್ಮೂರ ಕೀರ್ತಿ ಹೆಚ್ಚಿಸಬೇಕು ಎಂಬ ನಿರ್ಧಾರಕ್ಕೆ ಬಂದರು. ತಾಯಿ ಮತ್ತು ಸಹೋದರಿ ಒತ್ತಾಸೆಯಾಗಿ ನಿಂತರು. ತಮಗೆ ಆತ್ಮೀಯರಾಗಿರುವ ಕಲಾವಿದರನ್ನು ಶಿಬಿರಕ್ಕೆ ಕರೆತಂದು ಅವರ ಮೂಲಕ ಪಾಠ ಮಾಡಿಸುವ ನಿರ್ಧಾರಕ್ಕೆ ವಿಠ್ಠಲ ಅವರು ಬಂದರು. 2000ನೇ ಇಸ್ವಿಯಲ್ಲಿ ಕಸ್ತೂರಿ ರಂಗನ್ ಅವರನ್ನು ಮೊದಲ ಬಾರಿಗೆ ಇಲ್ಲಿಗೆ ಕರೆತಂದು ಎರಡು ದಿನಗಳ ಶಿಬಿರ ನಡೆಸಿದರು. ಅದರಲ್ಲಿ 10 ಮಕ್ಕಳು ಪಾಲ್ಗೊಂಡಿದ್ದರು. ಆ ನಂತರ ಪ್ರತಿ ವರ್ಷವೂ ಬೇಸಿಗೆಯಲ್ಲಿ ಈ ಶಿಬಿರ ನಡೆಯುತ್ತಿದೆ. ಐದು ಅಥವಾ ಏಳು ದಿನ ಶಿಬಿರ ನಡೆಸಲಾಗುತ್ತದೆ. ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಸಾಧನೆ ಮಾಡಬೇಕು ಎಂಬ ಹಂಬಲ ಇರುವವರು ಶಿಬಿರಕ್ಕೆ ಬರುತ್ತಾರೆ. ಬಾಲಮುರುಳಿಕೃಷ್ಣ ಅವರಂತಹ ಖ್ಯಾತ ನಾಮರು ನಾಲ್ಕು ದಿನ ಇಲ್ಲಿಯೇ ಇದ್ದು ಸಂಗೀತ ಕಲಿಸಿ ಹೋಗಿದ್ದಾರೆ. ಸಂಗೀತ ಕಲಿಕಾ ಕ್ಷೇತ್ರದಲ್ಲಿ 'ಮೇ' ಶಿಬಿರ ಎಂದೇ ಇದು ಪರಿಚಿತವಾಗುತ್ತಿದೆ.

ವಿಠ್ಠಲ ರಾಮಮೂರ್ತಿ ಅವರಿಂದ ಪ್ರಾತ್ಯಕ್ಷಿಕೆ

> **"ಕರ್ನಾಟಕ ಶಾಸ್ತ್ರೀಯ ಸಂಗೀತ ತುಂಬಾ ಸರಳ. ಅದಕ್ಕೆ ಮಡಿವಂತಿಕೆ ಎಂಬುದಿಲ್ಲ. ಶಿಸ್ತುಬೇಕು ಅಷ್ಟೇ. ಈ ಸಂಗೀತ ಆಸ್ವಾದಿಸುವವರು ವಿಶ್ವವ್ಯಾಪಿಯಾಗಿದ್ದಾರೆ. ನಮ್ಮ ಶಿಬಿರಗಳಿಂದ ಹೆಚ್ಚು ಹೆಚ್ಚು ಸಂಗೀತಗಾರರು ಬೆಳೆದು, ಕರ್ನಾಟಕ ಶಾಸ್ತ್ರೀಯ ಸಂಗೀತದ ನಿನಾದ ಜಗತ್ತಿನಾದ್ಯಂತ ಪಸರಿಸಬೇಕು ಎಂಬುದು ನನ್ನ ಬಯಕೆ"**
>
> **ವಿಠ್ಠಲ ರಾಮಮೂರ್ತಿ,** ಶಿಬಿರದ ರೂವಾರಿ

ಈ ಶಿಬಿರದಲ್ಲಿ ಪಾಲ್ಗೊಳ್ಳುವ ಮಕ್ಕಳು ಒಂದು ಹಂತದವರೆಗೆ ಸಂಗೀತ ಕಲಿತವರೇ ಆಗಿರುತ್ತಾರೆ. ಬೇರೆ ಬೇರೆ ಗುರುಗಳ ಬಳಿ ಸಂಗೀತ ಅಭ್ಯಾಸದಲ್ಲಿ ತೊಡಗಿರುವ ವಿದ್ಯಾರ್ಥಿಗಳನ್ನು ಅವರ ಗುರುಗಳು ಶಿಬಿರಕ್ಕೆ ಕರೆ ತರುತ್ತಾರೆ. ಸಂಗೀತ ಶಿಕ್ಷಕರು, ಮಕ್ಕಳ ಪಾಲಕರೂ ಬರುತ್ತಾರೆ. ವಿಠ್ಠಲ ರಾಮಮೂರ್ತಿ ಅವರ ಕೋರಿಕೆಯ ಮೇರೆಗೆ, ಅವರ ಸ್ನೇಹಿತರ ಬಳಗದಲ್ಲಿರುವ ಖ್ಯಾತನಾಮ ಸಂಗೀತ ದಿಗ್ಗಜರು ಸ್ವಯಂಪ್ರೇರಿತರಾಗಿ ಬರುತ್ತಾರೆ. ವಿಠ್ಠಲ ರಾಮಮೂರ್ತಿ ಅವರ ಇಡೀ ಕುಟುಂಬದವರು ಶಿಬಿರ ಮುಗಿಯುವವರೆಗೂ ಇಲ್ಲಿಯೇ ಇರುತ್ತಾರೆ. ಶಿಬಿರಕ್ಕೆ ತಗಲುವ ವೆಚ್ಚವನ್ನು ಸ್ಥಳೀಯ ದಾನಿಗಳು, ವಿಠ್ಠಲ ಅವರ ಗೆಳೆಯರು ಹಾಗೂ ಶಿಷ್ಯರು ಭರಿಸುತ್ತಾರೆ. ಇತ್ತೀಚಿನ ವರ್ಷಗಳಲ್ಲಿ ಇದೊಂದು ಊರ ಹಬ್ಬದ ರೂಪ ಪಡೆಯುತ್ತಿದೆ.

'ಈ ಸೇವೆ ನಮಗೂ ಖುಷಿ ಕೊಟ್ಟಿದೆ. ಗುರು–ಶಿಷ್ಯರ ಸಂಬಂಧವನ್ನೂ ಇದು ಗಟ್ಟಿಗೊಳಿಸುತ್ತದೆ' ಎಂಬುದು ಈ ವರ್ಷದ ಶಿಬಿರದಲ್ಲಿ ಪಾಲ್ಗೊಂಡಿದ್ದ ಹಿರಿಯ ಕಲಾವಿದರಾದ ಉಡುಪಿ ಗೋಪಾಲಕೃಷ್ಣನ್, ಶ್ರೀಲಂಕಾದ ಪ್ರಸಿದ್ಧ ಮೃದಂಗ ವಾದಕ ಸ್ವಾಮಿನಾಥನ್ ಶರ್ಮಾ ಅವರ ಮೆಚ್ಚುಗೆಯ ಮಾತು.

ಹೆಚ್ಚಿನ ಸಂಗೀತ ಅಧ್ಯಯನ ಬಯಸುವ ಆಸಕ್ತ ವಿದ್ಯಾರ್ಥಿಗಳು ಹಾಗೂ ಪ್ರಸಿದ್ಧ ಸಂಗೀತಗಾರರ ಬೆಸುಗೆಗೂ ಶಿಬಿರ ಕಾರಣವಾಗುತ್ತಿದೆ. ಶಿಬಿರಕ್ಕೆ ಬರುವ ವಿದ್ವಾಂಸರ ಬಳಿ ನೇರವಾಗಿ ವಿದ್ಯಾರ್ಥಿಗಳೇ ಕೇಳಿಕೊಂಡು, ಅವರ ಬಳಿ ಸಂಗೀತ ಕಲಿಯಲು ಹೋಗುತ್ತಾರೆ. ಇನ್ನು ಕೆಲವರು ತಮಗೆ ಇಂತಹ ಗುರುಗಳ ಬಳಿ ಸಂಗೀತ ಅಧ್ಯಯನ ಮಾಡಬೇಕು ಎಂದು ಬಯಸಿದರೆ, ಅದಕ್ಕೆ ಮಾರ್ಗದರ್ಶನ ಮಾಡಲಾಗುತ್ತದೆ.

ಈ ಶಿಬಿರದ ಯಶಸ್ಸಿನ ಬಗ್ಗೆ ಕೇಳಿದರೆ ವಿಠ್ಠಲ ರಾಮಮೂರ್ತಿ ಹೇಳುವುದು ಹೀಗೆ, 'ಈ ಶಿಬಿರದಿಂದ ಹೊರಬಂದ ಹನ್ನೆರಡು ವಿದ್ಯಾರ್ಥಿಗಳು ಪೂರ್ಣಾವಧಿ ಸಂಗೀತಗಾರರಾಗಿ ಬದುಕು ಕಟ್ಟಿಕೊಂಡಿದ್ದಾರೆ. ಈ ವರೆಗಿನ ಸಂಗೀತ ಶಿಬಿರದಲ್ಲಿ ಪಾಲ್ಗೊಂಡಿದ್ದ ಸುಮಾರು 60 ವಿದ್ಯಾರ್ಥಿಗಳು ಪ್ರಸಿದ್ಧ ಸಂಗೀತಗಾರರಲ್ಲಿ ಸಂಗೀತ ಕಲಿಯುತ್ತಿದ್ದಾರೆ. ಕೆಲವೇ ವರ್ಷಗಳಲ್ಲಿ ಅವರೆಲ್ಲರೂ ಉತ್ತಮ ಸಂಗೀತಗಾರರಾಗಿ ಹೊರಹೊಮ್ಮಲಿದ್ದು, ಇದು ಈ ಶಿಬಿರ ಕರ್ನಾಟಕ ಶಾಸ್ತ್ರೀಯ ಸಂಗೀತ ಕ್ಷೇತ್ರಕ್ಕೆ ಕೊಡಮಾಡುವ ದೊಡ್ಡ ಕೊಡುಗೆಯಾಗಲಿದೆ'.

ಹುಟ್ಟಿದ ಊರಿಗೆ ಏನಾದರೂ ಮಾಡಬೇಕು ಎನ್ನುವ ಬಯಕೆ ಹೊಂದಿರುವವರಿಗೆ ವಿಠ್ಠಲ ರಾಮಮೂರ್ತಿ ಅವರ ಮಾದರಿ ಕೆಲಸ ಪ್ರೇರಣೆ ಆಗಬಲ್ಲದು.

ಮುನ್ನೋಟ 02-06-2024 ರಿಂದ 08-06-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ

ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಮುನ್ನುಗ್ಗುವ ಉತ್ಸಾಹ ಬಹಳಷ್ಟಿರುತ್ತದೆ. ನಿರೀಕ್ಷಿತದ ಪ್ರಮಾಣದ ಆದಾಯ ಇರುತ್ತದೆ. ನಿಮ್ಮ ನಡವಳಿಕೆಯಲ್ಲಿ ವ್ಯವಹಾರಗಳ ಬಗ್ಗೆ ಹೆಚ್ಚು ಗಮನ ಇರುತ್ತದೆ. ತಾಯಿಯ ಆರೋಗ್ಯಕ್ಕಾಗಿ ಹಣ ಖರ್ಚು ಮಾಡಬೇಕಾಗುತ್ತದೆ. ಕೆಲವೊಂದು ಆರೋಗ್ಯ ಸಮಸ್ಯೆಗಳು ಬಿಡದೆ ಕಾಡಬಹುದು. ನಿಮ್ಮ ಕೆಲವು ಅಭಿಪ್ರಾಯಗಳನ್ನು ಸಂಗಾತಿ ವಿರೋಧಿಸುವರು. ಕೆಲವರಿಗೆ ಕೀಲು ನೋವು ಬಾಧಿಸಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಧೀಮಂತ ವ್ಯಕ್ತಿಯಂತೆ ವರ್ತಿಸಲು ಪ್ರಯತ್ನ ಪಡುವಿರಿ. ಆದಾಯವು ಅವಶ್ಯಕತೆಯನ್ನು ಪೂರೈಸುವಷ್ಟಿರುತ್ತದೆ. ಕೆಲಸ ಕಾರ್ಯಗಳಿಗೆ ಸ್ತ್ರೀಯರಿಂದ ಅಡ್ಡಿಯಾಗಬಹುದು. ಸರ್ಕಾರಿ ಸಂಸ್ಥೆಗಳಿಂದ ಅಥವಾ ಸಂಘ ಸಂಸ್ಥೆಗಳಿಂದ ನಿವೇಶನ ಪಡೆಯುವ ಯೋಗವಿದೆ. ಸಂಗಾತಿಯ ಆಸ್ತಿಯಲ್ಲಿ ಸಮಸ್ಯೆಗಳು ಏಳಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ವಾರದ ಆರಂಭದಲ್ಲಿ ಬಹಳ ಗೋಜಲು ನಿರ್ಧಾರಗಳಿರುತ್ತವೆ. ಆದಾಯವು ಸಾಮಾನ್ಯಗತಿಯಲ್ಲಿರುತ್ತದೆ. ನಿಮ್ಮ ಕೆಲಸ ಕಾರ್ಯಗಳಿಗೆ ಸಿಗುತ್ತಿದ್ದ ಸಾರ್ವಜನಿಕರ ನೆರವು ನಿಲ್ಲಬಹುದು. ಅಧ್ಯಯನಶೀಲರಿಗೆ ಸ್ವಲ್ಪ ಹಿನ್ನಡೆ ಇರುತ್ತದೆ. ಮೂಳೆ ತಜ್ಞರಿಗೆ ಹೆಚ್ಚು ಲಾಭವಿರುತ್ತದೆ. ಸಂಗಾತಿ ಅಲಂಕಾರಕ್ಕಾಗಿ ಹೆಚ್ಚು ಹಣ ಖರ್ಚಾಗುತ್ತದೆ. ಪುಸ್ತಕ ವ್ಯಾಪಾರಿಗಳಿಗೆ ಹೆಚ್ಚಿನ ವ್ಯಾಪಾರವಾಗುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಆದಾಯವು ನಿಮ್ಮ ಅವಶ್ಯಕತೆಯನ್ನು ಪೂರೈಸುತ್ತದೆ. ಕೆಲಸ ಕಾರ್ಯಗಳಲ್ಲಿ ಸ್ವಲ್ಪ ಆಲಸಿತನವನ್ನು ಕಾಣಬಹುದು. ಸಂಸಾರದಲ್ಲಿ ಸ್ವಲ್ಪ ಕಾವೇರಿದ ಮಾತುಗಳಾಗಬಹುದು. ಕ್ರೀಡಾಪಟುಗಳಿಗೆ ಹೆಚ್ಚಿನ ಪ್ರೋತ್ಸಾಹ ಮತ್ತು ಸೌಕರ್ಯ ದೊರೆಯುತ್ತವೆ. ಮೂತ್ರ ಸಂಬಂಧಿ ದೋಷಗಳು ಅಥವಾ ರಕ್ತ ಸಂಬಂಧಿ ದೋಷಗಳು ಕಾಣಿಸಬಹುದು. ಆರೋಗ್ಯಕ್ಕಾಗಿ ಹೆಚ್ಚು ಹಣ ಖರ್ಚಾಗುವುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಆತ್ಮಾಭಿಮಾನ ಜಾಸ್ತಿ ಇರುತ್ತದೆ. ಆದಾಯವು ಕಡಿಮೆ ಇರುತ್ತದೆ. ದ್ವಂದ್ವ ನಡವಳಿಕೆಗಳು ನಿಮ್ಮಲ್ಲಿ ಇರುತ್ತವೆ. ಆಸ್ತಿಯನ್ನು ಮಾಡುವ ವಿಚಾರದಲ್ಲಿ ಮುಂದುವರೆಯಬಹುದು. ಮಕ್ಕಳಿಂದ ನಿಮ್ಮ ವೃತ್ತಿಗೆ ಸಹಕಾರ ಸಿಗುತ್ತದೆ. ಆಹಾರ ವ್ಯತ್ಯಾಸದಿಂದ ಹೊಟ್ಟೆಯಲ್ಲಿ ತೊಂದರೆ ಕಾಣಿಸಬಹುದು. ಸಂಗಾತಿಯು ನಿಮ್ಮ ಕೆಲವೊಂದು ನಡವಳಿಕೆಗಳನ್ನು ವಿರೋಧಿಸುವರು. ವೃತ್ತಿಯಲ್ಲಿ ಉತ್ತಮ ಹೆಸರು ಹಾಗೂ ಗಳಿಕೆ ಇರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಒಂದು ರೀತಿಯ ಹತಾಶ ಮನೋಭಾವ ನಿಮ್ಮಲ್ಲಿ ಇರುತ್ತದೆ. ಆದಾಯವು ಕಡಿಮೆ ಇರುತ್ತದೆ. ಸಂಗಾತಿಗೆ ಹಿರಿಯರಿಂದ ಆಸ್ತಿ ಬರಬಹುದು. ಮಕ್ಕಳಿಗಾಗಿ ಹೆಚ್ಚು ಹಣ ಖರ್ಚು ಮಾಡಲೇಬೇಕಾದ ಪರಿಸ್ಥಿತಿ ಇರುತ್ತದೆ. ಕಫದ ತೊಂದರೆ ಇರುವವರು ಎಚ್ಚರ ವಹಿಸಿ. ತಾಯಿಯಿಂದ ಹೆಚ್ಚಿನ ಸಹಾಯ ದೊರೆಯುತ್ತದೆ. ವೃತ್ತಿಯಲ್ಲಿ ನಿಧಾನ ಗತಿಯ ಅಭಿವೃದ್ಧಿ ಇದೆ. ಅದಿರನ್ನು ತೆಗೆಯುವವರಿಗೆ ಬೇಡಿಕೆ ಹೆಚ್ಚುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3

ಆದಾಯ ನಿಮ್ಮ ಖರ್ಚನ್ನು ತೂಗುವಷ್ಟು ಇರುತ್ತದೆ. ನಿಮ್ಮ ಕಾರ್ಯಚಟುವಟಿಕೆಗಳು ಕೆಲವರಿಗೆ ವಿರೋಧಿಸುವಂತೆ ಮಾಡುತ್ತದೆ. ಸಾಂಪ್ರದಾಯಿಕ ಕೃಷಿ ಮಾಡುವವರಿಗೆ ಏಳಿಗೆ ಇರುತ್ತದೆ. ಜಲಸಂಬಂಧಿ ದೋಷಗಳು ಕೆಲವರಿಗೆ ಕಾಣಿಸಬಹುದು. ಸಂಗಾತಿಯ ಅತಿ ಅಧಿಕಾರ ನಿಮ್ಮನ್ನು ಬಹಳ ಪೇಚಿಗೆ ಸಿಲುಕಿ ಸುತ್ತದೆ. ವೃತ್ತಿಯಲ್ಲಿ ಬಹಳ ಯಶಸ್ಸು ಇರುವುದಿಲ್ಲ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ

ಬಹಳ ಸೌಮ್ಯ ನಡವಳಿಕೆಯನ್ನು ಪ್ರದರ್ಶನ ಮಾಡುವಿರಿ. ಆದಾಯವು ನಿಮ್ಮ ನಿರೀಕ್ಷೆಯಷ್ಟಿರುತ್ತದೆ. ಯಾವುದೇ ಕೆಲಸವನ್ನು ಶ್ರಮಪಟ್ಟು ಮಾಡುವಿರಿ. ವಿದೇಶದಲ್ಲಿರುವವರು ಸ್ವದೇಶದಲ್ಲಿ ಆಸ್ತಿಯನ್ನು ಮಾಡಿಕೊಳ್ಳಬಹುದು. ಸೈನಿಕರಿಗೆ ಅಭಿವೃದ್ಧಿ ಇರುತ್ತದೆ. ನೀರಿನ ವ್ಯತ್ಯಾಸ ಅಥವಾ ಆಹಾರದ ವ್ಯತ್ಯಾಸದಿಂದ ಸ್ವಲ್ಪ ಅನಾರೋಗ್ಯವಾಗಬಹುದು. ವ್ಯವಹಾರದಲ್ಲಿ ಸಂಗಾತಿಯ ಸಹಾಯ ದೊರೆಯುತ್ತದೆ.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1

ಬಹಳ ಗಂಭೀರ ನಡವಳಿಕೆ ನಿಮ್ಮಲ್ಲಿ ಇರುತ್ತದೆ. ಆದಾಯವು ಕಡಿಮೆ ಇದ್ದರೂ, ಅದರಲ್ಲೇ ಸರಿದೂಗಿಸುವಿರಿ. ಎಲ್ಲರಿಗೂ ನ್ಯಾಯಯುತವಾದ ಗೌರವವನ್ನು ಕೊಡುವಿರಿ. ಆಸ್ತಿ ವಿಚಾರದಲ್ಲಿ ಮುಂದುವರೆಯದಿರುವುದು ಒಳ್ಳೆಯದು. ಕ್ರೀಡಾಪಟುಗಳಿಗೆ ಸಾಧನೆ ಮಾಡುವ ಅವಕಾಶವಿರುತ್ತದೆ. ಹೆಚ್ಚು ಸಾಲ ಮಾಡುವುದು ಬೇಡ. ಅನಿರೀಕ್ಷಿತವಾಗಿ ಗಣಿಗಾರಿಕೆಗೆ ಇಳಿಯಬಹುದು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ನ್ಯಾಯನೀತಿಯಿಂದ ನಡೆಯುವಿರಿ. ಆದಾಯ ಕಡಿಮೆ ಇದ್ದರೂ ಸಹ ಅದರಲ್ಲಿಯೇ ಸರಿಯಾಗಿ ನಿರ್ವಹಣೆಯನ್ನು ಮಾಡುವಿರಿ. ಸ್ತ್ರೀಯರಿಂದ ನಿಮ್ಮ ಕೆಲಸ ಕಾರ್ಯಗಳಿಗೆ ಅಡ್ಡಿಯಾಗಬಹುದು. ಕೃಷಿ ಭೂಮಿ ಹೊಂದುವ ಯೋಗವಿದೆ. ಕೃಷಿ ಅಭಿವೃದ್ಧಿಗಾಗಿ ಹೆಚ್ಚು ಶ್ರಮ ಪಡುವಿರಿ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಹಿರಿಯರು ಸಮಾಜವನ್ನು ತಿದ್ದುವ ಪ್ರಯತ್ನ ಮಾಡುವರು. ಆದಾಯದಷ್ಟೇ ಖರ್ಚು ಇರುವ ಸಾಧ್ಯತೆಗಳಿವೆ. ಬಹಳ ಚುರುಕಾಗಿ ಕೆಲಸ ಮಾಡುವಿರಿ. ಸಾಹಸ ಕಲಾವಿದರುಗಳಿಗೆ ಬೇಡಿಕೆ ಹೆಚ್ಚಾಗಿ, ಸಂಪಾದನೆ ಹೆಚ್ಚುತ್ತದೆ. ಮಕ್ಕಳಿಂದ ಗೌರವ ದೊರೆಯುತ್ತದೆ. ಬಾಯಿತೊಂದರೆ ಅಥವಾ ನಾಲಿಗೆ ಹುಣ್ಣು ಕಾಣಿಸಬಹುದು.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ನಿಮ್ಮ ನಗೆಯ ಹಿಂದೆ ವ್ಯಂಗ್ಯವಿರುವುದು ಜನರಿಗೆ ತಿಳಿಯುತ್ತದೆ. ಆದಾಯವು ಮಂದಗತಿಯಲ್ಲಿ ಇರುತ್ತದೆ. ಕೆಲಸ ಕಾರ್ಯಗಳಿಗೆ ಎಲ್ಲರಿಂದ ಸಹಕಾರ ಸಿಗುತ್ತದೆ. ಆಸ್ತಿ ಮಾಡುವ ಹಂಬಲ ಹೆಚ್ಚಾಗಿರುತ್ತದೆ. ಮಕ್ಕಳು ನಿಮ್ಮಿಂದ ಹಣವಸೂಲಿ ಮಾಡುವರು. ಕಫದ ತೊಂದರೆ ಹೆಚ್ಚು ಕಾಣಿಸಬಹುದು.

ಜಗಮೆಚ್ಚಿದ ಜಲಯೋಧರ ಕಾಯಕ

ಬೆಂಗಳೂರಿನ ಜಲಯೋಧರು (ಅಬ್ದುಲ್ ರಹಿಮಾನ್, ಮೇ 26) ಲೇಖನ ಸಕಾಲಿಕವಾಗಿತ್ತು. ನೀರಿನ ಅಭಾವ ಕುರಿತು ಬೇಸಿಗೆಯಲ್ಲಿ ಮಾತ್ರ ನೆನಪಿಸಿಕೊಳ್ಳುವುದಲ್ಲ, ಮಳೆಗಾಲದಲ್ಲಿ ಮಳೆ ನೀರನ್ನು ಭೂಮಿಗೆ ಇಳಿಸಬೇಕು. ಇಂಥ ಕಾರ್ಯದಲ್ಲಿ ತೊಡಗಿಕೊಂಡಿರುವ ಬೋವಿ ಸಮುದಾಯದವರು ಆಧುನಿಕ ಭಗೀರಥರು.

ವಿನಾಯಕ. ಆರ್.,ಜಾಲಹಳ್ಳಿ, ರಾಯಚೂರು ಜಿಲ್ಲೆ

ನೀರಿನ ಕೊರತೆಯಿಂದ ಬಳಲಿದ ಬೆಂಗಳೂರು ಜನರಿಗೆ ನೀರನ್ನು ಯಾವ ರೀತಿ ಜಲ ಮರುಪೂರಣ ಮಾಡಬೇಕು ಎನ್ನುವ ಅರಿವು ಮೂಡಿಸಿದ್ದು ನನ್ನ ಜನ. ಇದು ಬೋವಿ ಸಮುದಾಯದವರಿಗೆ ಹೆಮ್ಮೆ ವಿಚಾರ.

ಮಂಜುನಾಥ್ ಕೆ. ನಿಕಟ ಪೂರ್ವ ಅಧ್ಯಕ್ಷರು, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ಚಿತ್ರದುರ್ಗ

ಬೆಂಗಳೂರಿನ ನೀರಿನ ಸಮಸ್ಯೆಗೆ ಶಾಶ್ವತ ಪರಿಹಾರವನ್ನು ಇಂಥ ಅನುಭವಿಗಳಿಂದ ಕಂಡುಕೊಳ್ಳಬೇಕಿದೆ. ಸರ್ಕಾರ, ಸಂಘಸಂಸ್ಥೆಗಳು ಇವರನ್ನು ಬಳಸಿಕೊಳ್ಳುವ ಮೂಲಕ ಅವರ ಬದುಕನ್ನು ಉತ್ತಮಪಡಿಸಬೇಕು.

ಎಸ್.ವಿಶ್ವನಾಥ ಐನಹಳ್ಳಿ ಬೋಗಾದಿ, ಮೈಸೂರು

ಬೆಂಗಳೂರಿನಲ್ಲಿ ಅಂತರ್ಜಲ ಕುಸಿತದಿಂದ ನೀರಿಗಾಗಿ ಆಹಾಕಾರ ಉಂಟಾಗಿತ್ತು. ಈ ಮಳೆಗಾಲದಲ್ಲಿ ನೀರನ್ನು ಸರಿಯಾದ ಕ್ರಮದಲ್ಲಿ ನಿರ್ವಹಣೆ ಮಾಡಿ ಬಾವಿ ಮತ್ತು ಇಂಗುಬಾವಿಗಳನ್ನು ಮಾಡುವುದು ಅಗತ್ಯವಿದೆ.

ಬುಂಡ ಲಕ್ಷ್ಮಣ ನಾಯ್ಕ ಕ.ವಿ.ವಿ, ಹಂಪಿ

ಭೂವಿಜ್ಞಾನದ ವಿದ್ಯಾರ್ಥಿನಿಯಾದ ನಾನು ಅಂತರ್ಜಲ ಹೆಚ್ಚಳ, ಮರುಪೂರಣ, ಮಳೆ ನೀರು ಸಂಗ್ರಹ ಕುರಿತು ಯೋಚಿಸುತ್ತಿದ್ದೆ. ಈ ಎಲ್ಲಾ ತರಬೇತಿಯಿಂದ ನುರಿತು ಕೆಲಸವನ್ನು ಅಚ್ಚುಕಟ್ಟಾಗಿ ನಿರ್ವಹಿಸಿ ಜನಜೀವನಕ್ಕೆ ಜೀವಜಲವನ್ನೊದಗಿಸಿದ, ಒದಗಿಸುತ್ತಿರುವ ಸಮುದಾಯಕ್ಕೆ ಧನ್ಯವಾದಗಳು.

ವಿಶ್ವಪೂರ್ವ ಸತ್ಯಂಪೇಟೆ ಸುರಪುರ

ಇಂಥವರ ಸಂಖ್ಯೆ ಹೆಚ್ಚಾಗಲಿ

ಬಿಸಿಲೂರಲ್ಲಿ ಹಚ್ಚಹಸುರಿನ ಕಾನನ! (ಬಸವರಾಜ್ ಸಂಪಳ್ಳಿ) ಲೇಖನವನ್ನು ಓದಿ ಮರಳುಗಾಡಿನಲ್ಲಿ ಓಯಸಿಸ್ ಕಂಡಂತೆ ಆಯಿತು. ಸಚಿವ ಎಂ.ಬಿ. ಪಾಟೀಲ ಹಾಗೂ ಅರಣ್ಯ ಅಧಿಕಾರಿ ಸಂತೋಷ ಅಜೂರ ಅವರ ಶ್ರಮದಿಂದ ಬರಡಾಗಿದ್ದ ಮಮದಾಪುರದಲ್ಲಿ ಕಿರುಕಾಡು ರೂಪುಗೊಂಡಿದೆ. ಇಂಥವರ ಸಂಖ್ಯೆ ಹೆಚ್ಚಾಗಲಿ.

ಪುಷ್ಪಾ ಶ್ರೀರಾಮರಾಜು ಪ್ಯಾಲೇಸ್ ಗುಟ್ಟಹಳ್ಳಿ, ಬೆಂಗಳೂರು

ವಿಜಯಪುರ ಜಿಲ್ಲೆಯ ಮಮದಾಪುರ ಕೆರೆಯ ಪುನಶ್ಚೇತನ ಮತ್ತು ನೆಡುತೋಪ ಸೃಷ್ಟಿ ನಿಜಕ್ಕೂ ಮಾದರಿ ಕೆಲಸ. ಜನಪ್ರತಿನಿಧಿಗಳು ಮತ್ತು ಅಧಿಕಾರಿಗಳು ಹವಾನಿಯಂತ್ರಿಕ ಕೊಠಡಿಗಳಿಂದ ಹೊರಬಂದರೆ ಇಂತಹ ಪವಾಡವನ್ನೇ ಮಾಡಬಹುದು.

ಬೀರಪ್ಪ ಡಿ.ಡಂಬಳಿ ಕೋಹಳ್ಳಿ, ಅಥಣಿ

ಕಲಾವಿದರ ತಾಯಿ ಯಕ್ಷಧ್ರುವ(ಸಂಧ್ಯಾ ಹೆಗಡೆ) ಲೇಖನ ಕಣ್ಣು ತೆರೆಸುವಂತಿದೆ. ಮಂಗಳೂರಿನ ಯಕ್ಷಧ್ರುವ ಪಟ್ಲ ಫೌಂಡೇಶನ್ ಕಲಾವಿದರ ಬಾಳಲ್ಲಿ ಭರವಸೆಯ ಬೆಳಕು ಮೂಡಿಸಿರುವುದು ಶ್ಲಾಘನೀಯ. ನಾನೂ ಕೂಡ ಚಂದಾ ಕೊಡಬೇಕು ಅನಿಸಿದೆ.

ಸಿಹಿಮೊಗೆ ರಮೇಶ್ ಮೈಸೂರು

ಪ್ರತಿಕ್ರಿಯೆ

ಜಲಯೋಧರು ರಾಜ್ಯದ ಪ್ರತಿ ಊರಿಗೂ ಬೇಕಾಗಿದ್ದಾರೆ. ಮುಂಬರುವ ದಿನಗಳಲ್ಲಿ ಇಂಗುಬಾವಿ ನಿರ್ಮಾಣಕ್ಕೆ ಎಲ್ಲರೂ ಜೈ ಎನ್ನಬೇಕಾದೀತು.

ವೆಂಕಟೇಶ್ ಮುದಗಲ್ ಕಲಬುರಗಿ

'exploratory ಪ್ರಶ್ನೆಗಳನ್ನು ಕೇಳಬಹುದಿತ್ತು'

ಹಯವದನದ ಪದ್ಮಿನಿ ಸತಿ ಹೋಗಬೇಕಿರಲಿಲ್ಲ (ಪ್ರತಿಭಾ ನಂದಕುಮಾರ್) ಸಂದರ್ಶನ ಓದಿದೆ. 'ಹಯವದನ' ಒಂದು ಪರಿಣಾಮಕಾರಿ ನಾಟಕ. ಇದನ್ನು ಆಕಾಶವಾಣಿಯಲ್ಲಿ ಕೇಳಿಯೂ ಆನಂದಿಸಿದ್ದೇನೆ. ನೀಲಂರವರು 'ಸಮಕಾಲೀನತೆಗೆ ಸ್ಪಂದಿಸಬೇಕು' ಎಂದು ಪದ್ಮಿನಿ ಪಾತ್ರದ ಅಂತ್ಯವನ್ನು ಬದಲಿಸಿದರೆ ಸರಿಯಾಗುತ್ತದೆಯೆ? ದೇಹ, ಮನಸ್ಸುಗಳಲ್ಲಿ ಯಾವುದು ಹೆಚ್ಚು ಮುಖ್ಯ-ಇದು ಅಲ್ಲಿಯ ಪ್ರಶ್ನೆ. ಬೌದ್ಧಿಕತೆ ಬೇಕಾದರೆ ಪದ್ಮಿನಿ ಕಪಿಲ ಬೇಕೆಂದು ಬಯಸಬಾರದು. ಪ್ರತಿಭಾ ಇನ್ನೂ exploratory ಪ್ರಶ್ನೆಗಳನ್ನು ಕೇಳಬಹುದಾಗಿತ್ತು.

ಎಚ್.ಎಸ್.ಮಂಜುನಾಥ ಗೌರಿಬಿದನೂರು

'ಮಾನವೀಯತೆ ಹಾಗೇ ಇದೆ'

ಸಪೋನ್ ನೆಪ ವೈವಿಧ್ಯತೆ ಜಪ (ಶೈಲಾ ಹೆಚ್.ಎಸ್.) ಅವರ ಪ್ರವಾಸ ಕಥನ ಇಷ್ಟವಾಯಿತು. ನಾನೂ ಕೂಡ ಕೆಲಸದ ನಿಮಿತ್ತ ಉತ್ತರ ಭಾರತದ ಕೆಲವು ಭಾಗಗಳಲ್ಲಿ ಪ್ರವಾಸ ಮಾಡಿದ್ದೇನೆ. ಲೇಖಕಿ ಬರೆದಂತೆ ಭಾಷೆ ವೇಷ ಬೇರೆಯಾದರೂ ಆತ್ಮೀಯತೆ ಮತ್ತು ಮಾನವೀಯತೆ ಹಾಗೇ ಇದೆ.

ರಾಮಚಂದ್ರ ಸಿ. ಎನ್. ಬೆಂಗಳೂರು

ಇನ್ನೊಂದು ಮುಖವನ್ನು ಡಾರ್ಜಿಲಿಂಗ್ ಪ್ರವಾಸದಲ್ಲಿ ನೋಡಿದೆ. ಅಲ್ಲಿರುವ ಹೋಟೆಲ್‌ಗಳಲ್ಲಿ ಕೆಲಸ ಮಾಡುವ ಸ್ಥಳೀಯರಿಗೆ ಬೆಂಗಳೂರಿಗರನ್ನು ನೋಡಿದರೆ ಮುಖ ಅರಳುತ್ತದೆ. ಅಲ್ಲಿನ ಬಹುತೇಕ ಹೋಟೆಲ್, ಟ್ಯಾಕ್ಸಿಗಳಲ್ಲಿ ಕೆಲಸ ಮಾಡುವವರು ಬೆಂಗಳೂರಿನಲ್ಲಿ ಇದ್ದವರು. ನಮ್ಮನ್ನು ಆತ್ಮೀಯವಾಗಿ ಬರಮಾಡಿಕೊಳ್ಳುತ್ತಾರೆ, ಅದರಲ್ಲೂ ಕೆಲವರು ಕನ್ನಡವನ್ನು ಚೆನ್ನಾಗಿ ಮಾತಾಡುತ್ತಾರೆ.

ಪಿ. ಎನ್. ಎಂ ಗುಪ್ತ ಬೆಂಗಳೂರು

ನಿರ್ಮಾಣ ಕಾಮಗಾರಿ ನಡೆಯುತ್ತಿರುವ ಸ್ಥಳದ ವಿಹಂಗಮ ನೋಟ

ಇದು ಅಂತಿಂಥ ರೈಲು ಸುರಂಗವಲ್ಲ!

10ನೇ ಪುಟದಿಂದ...

ಈ ಕಾರ್ಯ ನಿರಂತರವಾಗಿ ಸಾಗುತ್ತಿದೆ. ಈ ಮಾರ್ಗ ಮಧ್ಯೆ ಎದುರಾದ ಪ್ರಮುಖ ಸವಾಲು ಎಂದರೆ ಒಂದು ಕಡೆ ಭೂಮಿಯೊಳಗಿನ ನೀರಿನ ದೊಡ್ಡ ಸಂಗ್ರಹ ಸಿಕ್ಕಿದ್ದು. ಇದು ಸುರಂಗ ಮಾರ್ಗದೊಳಗೆ ಸೋರಿಕೆಯಾಗುವ ಅಪಾಯವಿತ್ತು.

ಹೀಗಾಗಿ ನೀರಿನ ಹರಿವನ್ನು ಬೇರೆ ಕಡೆಗೆ ತಿರುಗಿಸಿದ್ದೂ ಅಲ್ಲದೆ ಸುರಂಗದೊಳಗೆ ಸೋರಿಕೆ ಆಗದಂತೆ ಕ್ರಮವಹಿಸಿದ್ದು ಮಹತ್ವದ ಕಾರ್ಯ. ಒಂದು ವೇಳೆ ಸೋರಿಕೆ ಆಗಿ ಹೋಗಿದ್ದರೆ ಸುರಂಗದೊಳಗೆ ಭಾರೀ ಪ್ರಮಾಣದಲ್ಲಿ ನೀರು ನುಗ್ಗುವ ಸಾಧ್ಯತೆ ಇತ್ತು. ಆ ಸಮಸ್ಯೆ ಬಗೆಹರಿದಿದೆ. ನೀರು ಸುರಂಗಕ್ಕೆ ಯಾವುದೇ ರೀತಿ ತೊಂದರೆ ಆಗದಂತೆ ಹರಿವಿನ ದಿಕ್ಕು ಬದಲಿಸಲಾಗಿದೆ ಎನ್ನುತ್ತಾರೆ ಈ ಯೋಜನೆಯ ಚೀಫ್ ಪ್ರಾಜೆಕ್ಟ್ ಮ್ಯಾನೇಜರ್ ಅಜಿತ್ ಸಿಂಗ್ ಯಾದವ್.

ಹೀಗೆ ಯಾದವ್ ಅವರ ಜತೆ ಮಾತನಾಡುತ್ತಲೇ ಮುಂದೆ ಸಾಗಿದೆವು. ಮುಖ್ಯ ಸುರಂಗಕ್ಕೆ ಸಮಾನಾಂತರವಾಗಿ ಪಕ್ಕದಲ್ಲೇ ನಿರ್ಮಿಸುತ್ತಿರುವ 'ರೆಸ್ಕ್ಯೂ ಟನೆಲ್' ಪ್ರವೇಶಿಸುವ ಮಾರ್ಗ ಸಿಕ್ಕಿತು. ದೊಡ್ಡ ಸುರಂಗಕ್ಕೆ ಸಮಾನಾಂತರವಾಗಿ ನಿರ್ಮಿಸಲಾದ ಸಣ್ಣ ಸುರಂಗಕ್ಕೆ ಅಡಿ ಇಟ್ಟೆವು. ಸಮಾನಾಂತರ ಸುರಂಗ ಇಲ್ಲಿನ ವಿಶೇಷ ಎಂದೇ ಹೇಳಬಹುದು. ಭವಿಷ್ಯದಲ್ಲಿ ರೈಲು ಓಡಾಡುವಾಗ ಸಮಸ್ಯೆಗೆ ಸಿಲುಕಿಕೊಂಡು ಮಧ್ಯದಲ್ಲೇ ನಿಂತರೆ; ತ್ವರಿತವಾಗಿ ಪ್ರಯಾಣಿಕರನ್ನು ಸುರಕ್ಷಿತವಾಗಿ ಅಲ್ಲಿಂದ ತೆರವುಗೊಳಿಸಲು ಈ ಮಾರ್ಗವನ್ನು ನಿರ್ಮಿಸಲಾಗುತ್ತಿದೆ. ಈ ಸುರಂಗದಲ್ಲಿ ಆ್ಯಂಬುಲೆನ್ಸ್ ಸೇರಿ ಇತರ ಅಗತ್ಯ ವಾಹನಗಳ ಸಂಚಾರಕ್ಕೆ ಅವಕಾಶ ಇದೆ ಎಂದವರು ವಿವರಿಸಿದರು.

ದೊಡ್ಡ ಸುರಂಗದೊಳಗೆ ಹೊಕ್ಕಿದ್ದ ನಾವು ಸಣ್ಣ ಸುರಂಗದ ಮೂಲಕ ಹೊರಜಗತ್ತಿಗೆ ಕಾಲಿಟ್ಟೆವು. ಇವೆಲ್ಲ ಮುಗಿದು ರೈಲು ಓಡಾಡಲು ಆರಂಭಿಸಿದ ಬಳಿಕ ಸುರಂಗದ ಪ್ರವೇಶದ ಬಳಿ ಆನೆಗಳು ಬಂದು ಅಡ್ಡಗಟ್ಟಿ ನಿಂತರೆ ಏನು ಮಾಡೋದು? ಇತರ ಪ್ರಾಣಿಗಳು ಅಡ್ಡ ನಿಂತರೆ ಏನು ಮಾಡೋದು? ಎಂಬ ಪ್ರಶ್ನೆ ಅವರಿಂದ ಬಂತು. ಅದಕ್ಕೂ ಉಪಾಯ ಕಂಡುಕೊಳ್ಳುತ್ತಿದ್ದೇವೆ ಎಂಬ ಉತ್ತರವೂ ಅವರಿಂದಲೇ ಬಂದಿತು.

ಸುರಂಗದ ತುದಿಯಲ್ಲಿ ಬೆಳಕು ಇರುತ್ತದೆ ಎನ್ನುವ ಮಾತೊಂದಿದೆ. ಈ ಸುರಂಗ ನಿರ್ಮಾಣದಿಂದ ಉತ್ತರಾಖಂಡದ ಹಲವು ನಗರ, ಪಟ್ಟಣ, ಹಳ್ಳಿಗರ ಬದುಕಿನಲ್ಲಿ ಭರವಸೆಯ ಬೆಳಕು ಮೂಡಬಹುದು.

ಭರದಿಂದ ಸಾಗಿರುವ ನಿರ್ಮಾಣ ಕಾಮಗಾರಿ

ಪದಬಂಧ 2844

ಮೇಲಿನಿಂದ ಕೆಳಕ್ಕೆ

1. ಅವಕಾಶದಲ್ಲಿರುವ ಬೃಹತ್ ಆಗಸ 3
2. ರಾತ್ರಿ ಹೊತ್ತು ಮಿನುಗುವ ಬಾನ್ಹುಕ್ಕಿ 3
3. ನಿಮ್ಮ ಕೈಗೆ ಬರುವ ಸಮೂಹ 3
4. ಭಯದಿಂದ ಉಂಟಾಗುವ ಮೈ ಕಂಪನ 3
6. ಜೀವನ ಯಾತ್ರೆಯಲ್ಲಿ ಸಾಗುವವ 3
8. ಆಗಮದ ಜೊತೆ ಸರಿಹೊಂದುವ ಸರ್ಕಾರಿ ಸಂಸ್ಥೆ 3
10. ಹಾಕುವುದಕ್ಕೆ ಆಗದ ಹೊದಿಕೆಯ ಮನೆ 3
11. ಒಂದೊಂದು; ಮೂಲವಲ್ಲದ ನಕಲು 2
12. ಗೋಡೆಗೆ ತಗಲುಹಾಕಿದ ಚಿತ್ರ ತಲೆಕೆಳಕಾಗಿದೆ 2
14. ವೃತ್ತಿಯಲ್ಲಿ ಚೆನ್ನಾಗಿ ಪಳಗಿದವ 3
16. ಸಾಮೀಪ್ಯಕ್ಕೆ ಬಲು ಹತ್ತಿರ 3
17. ಜೀವನದ ಆಗುಹೋಗುಗಳನ್ನು ನಿರ್ಧರಿಸುವ ಗ್ರಹ ಬಲದ ಅಂಕಣ 3
18. ಸಂಗೀತದ ಎರಡು ಸ್ವರಗಳಿಂದ ಮೂಡುವ ಕೊರಳ ಶಬ್ಧ 2
19. ರಂಗೋಲಿಯಿಂದ ಅಲಂಕೃತವಾದ ಮಂಗಳ ಪೀಠ 2
20. ಎಲ್ಲೆಯನ್ನು ಕಾಣದ ಪರಿಣಿತ 3
23. ಪಾಪ ಮಾಡಿದವರಿಗೆ ಚುಚ್ಚುವ ಕಳ್ಳಿ 3
24. ಸಂಸ್ಕೃತದ ಉಪ್ಪು 3
25. ತಮಿಳು ಭಾಷಿಗರಿಗೆ ಮುದ್ದಿನ ಕಾರ್ತಿಕೇಯ 3
26. ಗುಜರಾತ್ ಮತ್ತಿತರ ಪಡುವಣ ಪ್ರದೇಶಗಳಲ್ಲಿ ನೆಲೆಸಿದ ಆರ್ಯಮೂಲದ ವಂಶ 3

ಎಡದಿಂದ ಬಲಕ್ಕೆ

1. ಪರಸ್ಪರ ಅಪ್ಪುಗೆಯಲ್ಲಿ ಈಶ್ವರನ ಸಂಕೇತವಿದೆ 4
3. ನಿಯಮದಂತೆ ಮಿತವಾದದ್ದು 4
5. ದಯಮಾಡಿ ಮನ್ನಿಸಿ ಎಂದು ಕೇಳಿಕೊಳ್ಳುವವ 5
7. ಬಿಡದೆ ಕಾಡಿ ಧರ್ಮದ ಮಾರ್ಗ ತೋರಿಸುವ ಏಳರಾಟದ ಗ್ರಹದ ಸ್ನೇಹಿತ 4
9. ಸಾತ್ವಿಕಕ್ಕೂ ತಾಮಸಕ್ಕೂ ನಡುವಣ ರೂಪ 4
11. ಮುದ್ರಣದ ನಂತರ ಬೆಳಕು ಕಂಡಿದ್ದು 3
13. ಮನುಜ ಕುಲದ ನೆನಪಿನಲ್ಲಿರುವ ಆಚಾರ ಸಂಹಿತೆ 4
15. ಒಂದು ರೀತಿ ನಮ್ಮನ್ನು ಮಾಲೆಯಂತೆ ಸುತ್ತಿರುವ ವಾತಾವರಣ 4
17. ನಮ್ಮ ಧರ್ಮಗ್ರಂಥಗಳಿಂದ ಹುಟ್ಟಿದ ಅಗ್ನಿ 4
19. ತೊಟ್ಟು ತೊಟ್ಟು ಜೇನು ಸೇರಿದಾಗ ಪ್ರೇಯಸಿಯನ್ನು ಮತ್ತೆ ಮತ್ತೆ ಕರೆಯಿರಿ 4
21. ಬಯಕೆ ಫಲಿಸದಿದ್ದಾಗ ಆಗುವ ಹತಾಶೆ 3
23. ರುಚಿಯಾದ ಅಡುಗೆ ಸಿದ್ಧವಾಗುವ ಅಡುಗೆಮನೆ 4
25. ಚುಂಬಿಸಬೇಕೆನಿಸುವ ಸುಂದರ ಕೂಸು 4
27. ಮದುವೆಯಾಗುವ ಇರ್ವರು 5
28. ಮದನ ಹಿಡಿವ ಹೂವಿನ ಅಂಬು 4
29. ಸಮಯದ ಎಲ್ಲೆಯನ್ನು ಗುರುತಿಸುವ ಸಾಧನ 4

ಪದಬಂಧ ಉತ್ತರ -2843

ಮೇಲಿಂದ ಕೆಳಕ್ಕೆ

1.ಪದವಿ 2.ಕಳವಳ 3.ಪರಿಪಾಕ 4.ಹರಣ 6.ಯೋಗಿನಿ 8. ಗ್ರಹಿಸು 10. ವಚನಭ್ರಷ್ಟ 12.ನಿಸರ್ಗ 14.ಕೃಪಾಂಕ 17.ವಸಡು 18.ಸಜೀವ 19.ಅತಿಯಾಸೆ 20.ಮಮಕಾರ 21.ಕಳಂಕ 23. ಕೆಳಗೆ

ಎಡದಿಂದ ಬಲಕ್ಕೆ

1. ಪಠ್ಯಪುಸ್ತಕ 3.ಪದಸಂಗ್ರಹ 5.ವಿಜಯೋತ್ಸವ 7.ಪಾಣಿಗ್ರಹಣ 9.ಆವಕ 11.ಮಾನಿನಿ 13.ಸುಕೃತ 15.ಕಾಮನಬಿಲ್ಲು 16.ಭಾರ್ಗವ 18.ಸಕಲ 19.ಅಷ್ಟಮ 21.ಕರಡುಪ್ರತಿ 22.ಮನವರಿಕೆ 24.ಕತ್ತಿವರಸೆ 25.ರಸಘಳಿಗೆ

ಪ್ರಗತಿಪರ ಚಿಂತನೆಯ ಕಥೆಗಾರ್ತಿ ದೇವಕಿ

ಕೆ. ಉಷಾ ಪಿ ರೈ

ದೇವಕಿ ಎಂ. ಶೆಟ್ಟಿ

ಮಹಿಳಾ ಸಾಹಿತ್ಯವನ್ನು ಸಂಪೂರ್ಣ ಕಡೆಗಣಿಸಿದ್ದ ಕಾಲದಲ್ಲಿ ಹೆಚ್ಚಿನ ಪ್ರೋತ್ಸಾಹದ ನಿರೀಕ್ಷೆಯೂ ಸಾಧ್ಯವಿರಲಿಲ್ಲ. ಕಳೆದ ಶತಮಾನದ ನಾಲ್ಕು, ಐದರ ದಶಕದಲ್ಲಿ ಮಹಿಳೆಯರು ಬರೆಯುತ್ತಿದ್ದುದೇ ಅಪರೂಪ. ಆಗ ಬಂಟರಲ್ಲಿ ಬರೆಯುತ್ತಿದ್ದವರು ಚಂದ್ರಭಾಗಿ ರೈ ಮತ್ತು ದೇವಕಿ ಎಂ.ಶೆಟ್ಟಿ ಇಬ್ಬರೇ ಎಂದು ಹೇಳಬಹುದು. ಆಗಿನ ಸಾಹಿತ್ಯವನ್ನು ಈಗಿನಂತೆ ವರ್ಗೀಕರಣ ಮಾಡುವುದಾದರೆ ದೇವಕಿಯವರು ಬರೆದದ್ದನ್ನು ದಲಿತ-ಬಂಡಾಯ ಸಾಹಿತ್ಯವೆಂದು ಪರಿಗಣಿಸಬಹುದು. ಕೆಳವರ್ಗದ ಜನರ ಜೀವನವನ್ನೂ ಅವರು ಹತ್ತಿರದಿಂದ ನೋಡಿದ್ದರಿಂದ ಅದನ್ನೇ ಅವರು ತಮ್ಮ ಸಾಹಿತ್ಯದಲ್ಲಿ ಬಿಂಬಿಸಿದ್ದಾರೆ.

20ನೇ ಶತಮಾನದ ಪ್ರಾರಂಭದಲ್ಲಿ ಹುಟ್ಟಿ ಎರಡು ಮಹಾಯುದ್ಧಗಳ ಬೇಗೆಯಲ್ಲಿ ಬೆಂದು, ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸುತ್ತಿದ್ದ ದೇಶಭಕ್ತರ ಮಧ್ಯೆ ಬೆಳೆದು, ಸಾತಂತ್ರ್ಯ ಸಿಕ್ಕಿದ ಸಂಭ್ರಮವನ್ನು ಅನುಭವಿಸಿ, ಮನೆಯಲ್ಲಿದ್ದುಕೊಂಡೇ ಗಾಂಧಿತತ್ವಗಳಿಗೆ ಮನಸೋತು ಅವರ ಆದರ್ಶಗಳಲ್ಲಿ ಬದುಕುವ ಪಣತೊಟ್ಟ ಹುಡುಗಿ ಲೇಖನಿ ಹಿಡಿದಾಗ ಹರಿದು ಬಂದದ್ದು ಅಂದಿನ ಬದುಕಿನ ಚಿತ್ರಣಗಳೇ.

ಬಾಲ್ಯದಲ್ಲಿ ದೇವಕಿಯವರನ್ನು ಕಾಡಿದ್ದು ಸಾಮಾಜಿಕ ಅವ್ಯವಸ್ಥೆ, ಜಾತಿ ವ್ಯವಸ್ಥೆ, ದೇಶಭಕ್ತಿ, ಪಾಕಿಸ್ತಾನದ ವಿಭಜನೆ ಇತ್ಯಾದಿ... ಅವರ ಕಥೆಗಳಲ್ಲಿ ನಿರೂಪಿತವಾದದ್ದು ಜನರನ್ನು ಕಾಡುತ್ತಿದ್ದ ಮೂಢನಂಬಿಕೆಗಳು, ಅಸ್ಪೃಶ್ಯತಾ ನಿವಾರಣೆ, ಜಾತಿ ಪದ್ಧತಿಯ ನಿರಾಕರಣೆ, ಪಾಕಿಸ್ತಾನ ವಿಭಜನೆಯಿಂದ ಜನರು ಅನುಭವಿಸಿದ ನೋವು.

ಚಿಕ್ಕಂದಿನಿಂದಲೂ ಧೈರ್ಯವಂತೆ. ಅನ್ಯಾಯ ಕಂಡರೆ ಸಿಟ್ಟಾಗುತ್ತಿದ್ದರು. ಹೆಣ್ಣು ಮಕ್ಕಳಿಗೆ ವಿದ್ಯೆ ಬೇಡ ಎನ್ನುವ ಕಾಲದಲ್ಲೂ ಮೆಟ್ರಿಕ್ಯುಲೇಶನ್ ವರೆಗೆ ಓದಿದ್ದರು. ಅಕ್ಷರ ಕಲಿತ ಹುಡುಗಿ ಮೇಲೆ ಗಾಂಧೀಜಿಯ ಸಮಾಜ ಸುಧಾರಣಾ ಕೆಲಸಗಳು ಪ್ರಭಾವ ಬೀರಿದ್ದವು. ಜಾತಿ ತಾರತಮ್ಯವನ್ನು ನೋಡುತ್ತಲೇ ಬೆಳೆದಿದ್ದರು. ಹಾಗಾಗಿ ಅವರು ಬರೆಯಲು ಆರಿಸಿಕೊಂಡದ್ದು ಅವರ ಕಾಲದಲ್ಲಿ ದಲಿತರಿಗಾಗುತ್ತಿದ್ದ ಅನ್ಯಾಯದ ವಸ್ತುಗಳು.

ಅವರು ಬರೆದ ಕಥೆಗಳು, ನಗೆ ಬರಹಗಳನ್ನು ನವಯುಗ, ಅಂತರಂಗ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದವು. ಬೇಸರದ ಸಂಗತಿಯೆಂದರೆ ಈಗ ಅವೆಲ್ಲೂ ಲಭ್ಯವಿಲ್ಲ.

ದೇವಕಿಯವರ ಸಾಹಿತ್ಯ ರಚನೆ ಆದದ್ದು ಸುಮಾರು 1945 ರಿಂದ 1960 ರ ವರೆಗೆ. ಆ ಮೇಲೆ ಅವರ ಜೀವನದಲ್ಲಿ ಎದ್ದ ಬಿರುಗಾಳಿ ಅವರ ಸಾಹಿತ್ಯ ಸಾಧನೆಗೆ ಮಾರಕವಾಯಿತು. ಅಲ್ಲದೇ ಮನೆಯಲ್ಲಿ ಅವರ ಬರಹಕ್ಕೆ ಹೆಚ್ಚಿನ ಪ್ರೋತ್ಸಾಹ ಸಿಗಲಿಲ್ಲ. ಅಕ್ಕನ ಹಾಗೂ ಭಾವನವರ ಪ್ರೋತ್ಸಾಹದಿಂದ ಬರವಣಿಗೆ ಸಾಗಿದ್ದರೂ ಮಕ್ಕಳ ಆರೈಕೆ, ಅವರ ಕೆಲಸಗಳೇ ಕೈತುಂಬಾ ಇರುವಾಗ ಬರೆಯುವ ಸಮಯವಾಗಲಿ, ನೆಮ್ಮದಿಯಾಗಲಿ ಇರಲಿಲ್ಲ. ಜನರು ಅವರ ಕಥೆಗಳನ್ನು ಮೆಚ್ಚುವುದು, ಹೊಗಳುವುದು, ಪತ್ರ ಬರುವುದು ಹಿರಿಯರಿಗೆ ಮೆಚ್ಚುಗೆಯಾಗುತ್ತಿರಲಿಲ್ಲ. ಇದರಿಂದ ದೇವಕಿಯವರ ಬರೆಯುವ ಹುಮ್ಮಸ್ಸು ಇಳಿದುದರಲ್ಲಿ ಅಚ್ಚರಿಯಿಲ್ಲ. ಬರೆಯಬೇಕೆನ್ನುವ ತುಡಿತ ತೀವ್ರವಾಗಿದ್ದರೂ ಮನೆಯ ಪ್ರತಿಕೂಲ ವಾತಾವರಣ ಅವರನ್ನು ಬರವಣಿಗೆಯಿಂದ ದೂರ ಇಟ್ಟಿತ್ತು. ಅವರ ಬರವಣಿಗೆಗೆ ಮನಪೂರ್ವಕ ಪ್ರೋತ್ಸಾಹ ಸಿಕ್ಕಿದ್ದು ನವಯುಗದ ಸಂಪಾದಕರಾಗಿದ್ದ ಕೆ.ಹೊನ್ನಯ್ಯ ಶೆಟ್ಟಿಯವರಿಂದ.

> ಸ್ವಾತಂತ್ರ್ಯಪೂರ್ವದಲ್ಲೇ ಪುರೋಗಾಮಿ ಚಿಂತನೆ ಮೂಲಕ ಕಥೆಗಳು, ನಗೆಬರಹಗಳಿಂದ ಹೆಸರಾಗಿದ್ದ ಕೆದಂಬಾಡಿ ದೇವಕಿ ಎಂ.ಶೆಟ್ಟಿ ತಮ್ಮ 97 ವಯಸ್ಸಿನಲ್ಲಿ ಮೇ 23 ರಂದು ಮಂಗಳೂರಿನಲ್ಲಿ ನಿಧನರಾದರು.

ದೇವಕಿಯವರು ಮೊದಲ ಕಥೆ ಬರೆದದ್ದು ಅವರು 9ನೇ ತರಗತಿಯಲ್ಲಿರುವಾಗ. ಅದು 'ಜಾತಿ ಭೂತಕ್ಕೆ ಬಲಿ'. ತಾಯಿಮನೆಗೆ ಬಂದಿದ್ದ ಅಕ್ಕ ಪದ್ಮ ಈ ಕಥೆಯನ್ನು ಓದಿ ಅಭಿಮಾನದಿಂದ ತಂದು ಗಂಡನ ಕೈಯಲ್ಲಿಟ್ಟಿದ್ದರು. ಅದನ್ನು ಭಾವ ಓದಿ ಖುಷಿ ಪಟ್ಟು ತಾವು ಪ್ರಕಟಿಸುತ್ತಿದ್ದ ಅಂದಿನ ಕಥೆಗಳಿಗೆಂದೇ ಮೀಸಲಾಗಿದ್ದ ಜನಪ್ರಿಯ ಮಾಸಿಕ ಅಂತರಂಗದಲ್ಲಿ ಪ್ರಕಟಿಸಿದ್ದರು. ಮತ್ತೆ ಅದು ಅವರೇ ಪ್ರಕಟಿಸಿದ 'ಕಥಾವಳಿ' ಕಥಾ ಸಂಕಲನದಲ್ಲಿ ಪ್ರಕಟವಾಗಿ ನಾಲ್ಕು ಮರುಮುದ್ರಣಗಳನ್ನು ಕಂಡಿತ್ತು. ಆದರೆ ಇವತ್ತು ಅದರ ಪ್ರತಿಗಳು ಲಭ್ಯವಿಲ್ಲ.

ವಿಮರ್ಶಕ ಜಿ.ಎಸ್. ಆಮೂರ ಅವರು ಸುಮಾರು ಎಂಟು ವರ್ಷಗಳ ಹಿಂದೆ ಕನ್ನಡ ವಿಶ್ವವಿದ್ಯಾಲಯದ ಮಹಿಳಾ ಅಧ್ಯಯನ ಕೇಂದ್ರದವರು ಪ್ರಕಟಿಸಿದ್ದ ಪುಸ್ತಕದಲ್ಲಿ ಸ್ವಾತಂತ್ರ್ಯ ಪೂರ್ವ ಲೇಖಕಿಯರ ಕಥೆಗಳನ್ನು ಸಮೀಕ್ಷಿಸುವ ಲೇಖನ ಬರೆದಿದ್ದರು. ಅದರಲ್ಲಿ ಆಗಿನ ಕಾಲದ ಲೇಖಕಿಯರಿಗಿಂತ ಭಿನ್ನವಾಗಿ ಬರೆದ ದಕ್ಷಿಣ ಕನ್ನಡದ ಕೆ.ದೇವಕಿಯವರ 'ಜಾತಿಭೂತಕ್ಕೆ ಬಲಿ' ಕಥೆಯನ್ನು ಗುರುತಿಸಿದ್ದರು. ಆ ಕಥೆಯಲ್ಲಿನ ಪುರೋಗಾಮಿ ದೃಷ್ಟಿ ಅಚ್ಚರಿ ಹುಟ್ಟಿಸುತ್ತದೆ ಎನ್ನುವ ಮಾತನ್ನು ಬರೆದಿದ್ದರು. ಆಮೂರರಂತಹ ವಿಮರ್ಶಕರಿಂದ ಗುರುತಿಸಲ್ಪಟ್ಟ ಈ ಲೇಖಕಿ ಯಾರ ಗಮನವನ್ನೂ ಸೆಳೆದಿರದಿರುವುದು ಅಚ್ಚರಿಯೇ.

1950 ರಲ್ಲಿ ನವಭಾರತ ಪುಸ್ತಕ ಪ್ರಕಾಶನದಲ್ಲಿ ಪುಸ್ತಕರೂಪದಲ್ಲಿ 'ಯಮನ ಸೋಲು ಮತ್ತು ಇತರ ಕಥೆಗಳು' ಹೆಸರಿನಲ್ಲಿ ಪ್ರಕಟವಾಗಿತ್ತು. ಇದರಲ್ಲಿ ಒಟ್ಟು ಆರು ಕಥೆಗಳಿವೆ. ಯಮನಸೋಲು, ನಕ್ಕರೂ ನಗಬಹುದು, ಅಬ್ಬಾ... ಕುಲೆ, ಕರುಳಿನ ಭೇದ, ಇತ್ಯಾದಿ. 'ನಕ್ಕರೂ ನಗಬಹುದು' ಕೃತಿಚೌರ್ಯವನ್ನು ಗೇಲಿ ಮಾಡಿ ಬರೆದ ಕಥಾರೂಪದ ನಗೆಬರಹ. ಓದುಗರಿಗೆ ಕಚಗುಳಿ ಇಡುತ್ತಲೇ ಸಾಗುವ ಕಥೆ ಒಂದು ಹಾಸ್ಯಕಥೆಯಾಗಿ ಮೂಡಿ ಬಂದಿರುವುದು ಲೇಖಕಿಯ ಕಥೆ ಹೇಳುವ ಜಾಣ್ಮೆಗೆ ನಿದರ್ಶನವಾಗಿದೆ. "ಅಬ್ಬಾ... . ಕುಲೆ' ಭೂತಗಳ ಮೇಲಿನ ಅಂದಿನ ಮೂಢನಂಬಿಕೆಯನ್ನೇ ಬಂಡವಾಳವಾಗಿಟ್ಟುಕೊಂಡು ಬರೆದ ಕಥೆ. 'ಕರುಳಿನ ಭೇದ' ಮನಮಿಡಿಯುವ ಕಥೆ. ಎಲ್ಲರೂ ಒಂದೇ ಎನ್ನುವ ಭಾವವಿದ್ದ ಲೇಖಕಿ ತಾಯಿಯೇ ತೋರಿಸುವ ಭೇದಕ್ಕೆ ತೋರಿಸಿದ ಪ್ರತಿಭಟನೆ ಇಲ್ಲಿ ವ್ಯಕ್ತವಾಗಿದೆ.

1956ರಲ್ಲಿ 'ಆ ಹೆಂಗಸು' ಎನ್ನುವ ನೀಳ್ಗತೆ ಧಾರಾವಾಹಿಯಾಗಿ ಮತ್ತು 'ಭಿಕ್ಷುಕ ನೀಡಿದ ಪಾಠ ' ನವಯುಗದಲ್ಲಿ ಪ್ರಕಟವಾಗಿತ್ತು. 'ಆ ಹೆಂಗಸು' ಪಾಕಿಸ್ತಾನ ವಿಭಜನೆಯಲ್ಲಿ ಭಾರತಕ್ಕೆ ಬಂದು ಸೇರಿದ ಹೆಂಗಸೊಬ್ಬಳ ಕಥೆ. ಭಾರತಕ್ಕೆ ಬಂದಾಗ ಅವಳು ಅನುಭವಿಸಿದ ನೋವುಗಳ ಚಿತ್ರಣ ಇಲ್ಲಿದೆ.

ಕೊನೆಯದಾಗಿ ಅವರು ಮಾಡಿದ ಸಾಹಿತ್ಯಿಕ ಕೆಲಸ ಅವರ ಮಗಳು ಗೌತಮಿ ಕಾಲೇಜಿಗೆ ಹೋಗುತ್ತಿರುವಾಗ ಸಂಗ್ರಹಿಸಿಟ್ಟಿದ್ದ ಚಾರಿತ್ರಿಕವಾದ ಕೊಹಿನೂರು ವಜ್ರದ ಕಥೆಯನ್ನು ಒಟ್ಟು ಸೇರಿಸಿ 'ಕೊಹಿನೂರ ದುರಂತ' ಎನ್ನುವ ಚಾರಿತ್ರಿಕ ಕಾದಂಬರಿಯನ್ನು ಪ್ರಕಟಿಸಿದ್ದರು.

ಕನ್ನಡ ಸಾಹಿತ್ಯದಲ್ಲಿ 90-100 ವರ್ಷಗಳ ಹಿಂದಿನಿಂದ ಮಹಿಳೆಯರು ಬರೆದಿರುವ ಸಾಹಿತ್ಯಿಕ ಇತಿಹಾಸವಿದೆ. ಲೇಖಕಿಯರನೇಕರು ಈ ಇತಿಹಾಸದಲ್ಲಿ ಹೆಜ್ಜೆ ಮೂಡಿಸಿ ಹೋಗಿದ್ದಾರೆ. ಕೆಲವರು ದಾಖಲಾಗಿದ್ದಾರೆ, ಕೆಲವರು ಎಲ್ಲೂ ದಾಖಲಾಗಿಲ್ಲ ಎನ್ನುವುದೂ ಸತ್ಯ. ಅವರೆಲ್ಲರ ಜೀವನವೂ ಒಂದೊಂದು ಯಶೋಗಾಥೆಯೇ. ಕೆದಂಬಾಡಿ ದೇವಕಿ ಎಂ.ಶೆಟ್ಟಿಯವರು ಸಣ್ಣ ಕಥೆಗಾರ್ತಿಯಾಗಿ ಕೆಲವು ಉತ್ತಮ ಕಥೆಗಳನ್ನು ಬರೆದಿದ್ದರೂ ಅವರ ಪುಸ್ತಕಗಳು ಈಗ ಓದಲು ಸಿಗದಿರುವುದು ನಿಜಕ್ಕೂ ನೋವಿನ ಸಂಗತಿ.

ಕಥೆ
ಮೂಲ: ಪ್ರೇಮಚಂದ್
ಕನ್ನಡಕ್ಕೆ: ಡಿ.ಎನ್. ಶ್ರೀನಾಥ್
ಅವರ
ಸಭ್ಯತೆಯ ರಹಸ್ಯ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಅಭಿಷೇಕ ಬಳೆ ಮಸರಕಲ್
ಅವರ
ಎದೆ ಬೀದಿಯ ಸಾಲುಗಳು...
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ-ಮೇಲ್‌ಗೆ ಕಳುಹಿಸಿ bhanuvara@prajavani.co.in

'ಹಿಂದೂಸ್ತಾನ'ವು ಎಂದೂ ಮರೆಯದ **ಕಾಲ**

10ನೇ ಪುಟದಿಂದ...

'ಆ ಕಾಲದಲ್ಲಿ ಎಚ್‌ಎಂಟಿ ವಾಚ್ ಎನ್ನುವುದು ಪ್ರತಿಷ್ಠೆಯ ಸಂಕೇತವಾಗಿತ್ತು. ಮದುವೆ, ಜನ್ಮದಿನ ಇತ್ಯಾದಿ ಸಂದರ್ಭಗಳಲ್ಲಿ ಈ ವಾಚ್ ನೀಡುವುದೇ ಒಂದು ಗೌರವದ ವಿಷಯವಾಗಿತ್ತು. ಮಕ್ಕಳು ಉತ್ತಮ ಅಂಕ ಪಡೆದರೆ ಎಚ್‌ಎಂಟಿ ವಾಚ್ ಕೊಡಿಸುವುದಾಗಿ ಹೇಳುವ ತಂದೆ, ತಾಯಿಗಳಿದ್ದರು. ಹೆಣ್ಣು ಹೆತ್ತವರು ಗಂಡಿಗೆ ನೀಡುವ ವರೋಪಚಾರದಲ್ಲಿ ಈ ವಾಚ್ ಇರಲೇಬೇಕಿತ್ತು. ಆದರೆ ಆಗಲೂ, ಈಗಲೂ ಈ ಕೈಗಡಿಯಾರಗಳ ದರಗಳು ಮಧ್ಯಮ ವರ್ಗಕ್ಕೆ ಎಂದೂ ಹೊರೆಯಾಗಲಿಲ್ಲ. ಶ್ರೀಮಂತರಿಗೆ ಬೇಕಾದ ಮಾಡೆಲ್‌ಗಳು ಇವೆ. ಒಂದು ಗ್ರಾಂ ಚಿನ್ನದ ಪುಟ್ಟ ಬಿಸ್ಕೆಟ್ ಇರುವ ಮಾಡೆಲ್ ಬಹಳ ಜನಪ್ರಿಯವಾಗಿತ್ತು. ಆಗಿನ ಕಾಲದಲ್ಲಿಯೇ ಎಳೆಂಟು ಸಾವಿರ ಬೆಲೆ ಬಾಳುತ್ತಿತ್ತು. ಅದರೊಳಗಿನ ಕುಸುರಿ ಕೆಲಸ ಅತ್ಯಂತ ಆಕರ್ಷಕವಾಗಿತ್ತು' ಎಂದು ವಸ್ತುಸಂಗ್ರಹಾಲಯದ ಅಧಿಕಾರಿಗಳು ವಿವರಿಸುತ್ತಾರೆ.

ಇದನ್ನು ದಾಟಿ ದೊಡ್ಡ ಕೋಣೆಗೆ ಕಾಲಿಟ್ಟರೆ ಕೈಗಡಿಯಾರಗಳ ಲೋಕ ತೆರೆದುಕೊಳ್ಳುತ್ತದೆ. ಮೊಟ್ಟಮೊದಲ ಜನತಾ ವಾಚ್, ಅತ್ಯಂತ ಬೇಡಿಕೆಯ ಪೈಲೆಟ್ ವಾಚ್, ಹೆಣ್ಣುಮಕ್ಕಳಿಗಾಗಿ ಬಗೆಬಗೆಯ ವಿನ್ಯಾಸದ ಆಕರ್ಷಕ ಕೈಗಡಿಯಾರಗಳು, ಆಯಾ ಕಾಲಘಟ್ಟದ ಯುವಸಮುದಾಯಕ್ಕೆ ಬೇಕಾದಂತಹ ವಿನ್ಯಾಸದ ಕ್ವಾರ್ಟ್ಜ್, ಆಟೋಮ್ಯಾಟಿಕ್ ಗಡಿಯಾರಗಳನ್ನು ಸಿದ್ಧಗೊಳಿಸಲಾಗಿತ್ತು. ಕ್ರೀಡಾಕೂಟಗಳಲ್ಲಿ ಬಳಕೆಯಾಗುವ ಸ್ಟಾಪ್ ವಾಚ್‌ಗಳೂ ಇಲ್ಲಿ ಉತ್ಪಾದನೆಯಾಗಿವೆ.

ಅಂಧರಿಗಾಗಿ ಬ್ರೈಲ್ ಲಿಪಿ ಇರುವ ಕೈಗಡಿಯಾರಗಳನ್ನು ಉತ್ಪಾದಿಸಿದ್ದು ಈ ಸಂಸ್ಥೆಯ ಹೆಗ್ಗಳಿಕೆ. ಈ ವಾಚ್‌ಗಳನ್ನು ಹೇಗೆ ಬಳಸುವುದು ಎಂದು ಬ್ರೈಲ್ ಲಿಪಿಯಲ್ಲೇ ಕಿರುಹೊತ್ತಿಗೆಯನ್ನೂ ಸಂಸ್ಥೆ ತಯಾರಿಸಿದೆ.

'ನಮ್ಮ ಸಂಸ್ಥೆಯು ಸಾಂದರ್ಭಿಕ ಮಾದರಿಗಳನ್ನೂ ಸಿದ್ಧಗೊಳಿಸುತ್ತದೆ. ಭಾರತ ಸ್ವಾತಂತ್ರ್ಯ ಗಳಿಸಿ ಅಮೃತ ಮಹೋತ್ಸವಕ್ಕಾಗಿ ಒಂದು ಮಾಡೆಲ್ ಬಿಡುಗಡೆ ಮಾಡಲಾಗಿತ್ತು. ಇದಲ್ಲದೇ ಬೇರೆ ಬೇರೆ ಸಂಘ ಸಂಸ್ಥೆಗಳು ತಮ್ಮ ಸದಸ್ಯರು ಹಾಗೂ ಉದ್ಯೋಗಿಗಳಿಗೆ ನೀಡಲು ವಿಶೇಷ ವಿನ್ಯಾಸದ ಕೈಗಡಿಯಾರಗಳನ್ನು ನೀಡುತ್ತವೆ. ಅವುಗಳನ್ನು ನಾವು ಸಿದ್ಧಗೊಳಿಸುತ್ತೇವೆ. ಈ ಹಿಂದೆ ಡಾ. ಬಿ.ಆರ್. ಅಂಬೇಡ್ಕರ್ ಅವರ ಸ್ಮರಣಾರ್ಥ ಗಡಿಯಾರ ಮಾಡಲಾಗಿತ್ತು. ಈಗಲೂ ಕೆಲವು ಸಂಘಟನೆಗಳು ಈ ಮಾದರಿಗೆ ಬೇಡಿಕೆ ಇಟ್ಟು ಖರೀದಿಸುತ್ತವೆ' ಎಂದು ಸಂಸ್ಥೆ ಅಧಿಕಾರಿಗಳು ಹೇಳುತ್ತಾರೆ.

ಬದಲಾದ ಕಾಲಘಟ್ಟದಲ್ಲಿ ಎಚ್‌ಎಂಟಿಯ ಕೆಲವು ವಾಚ್ ಘಟಕಗಳು ಬಂದ್ ಆಗಿವೆ. ಬೆಂಗಳೂರಿನಲ್ಲಿರುವ ಘಟಕದಲ್ಲಿ 70-ರಿಂದ 80 ಜನ ಕುಶಲಕರ್ಮಿಗಳು ಇದ್ದಾರೆ. ಮಾರುಕಟ್ಟೆಯಲ್ಲಿ ಹಲವಾರು ಬಗೆಯ ವಾಚ್‌ಗಳಿದ್ದರೂ ಎಚ್‌ಎಂಟಿಯೇ ಬೇಕು ಎನ್ನುವ ವರ್ಗವೂ ಇದೆ. ಆನ್‌ಲೈನ್‌ನಲ್ಲಿ (https://www.hmtwatches.in/mens) ಬಹಳಷ್ಟು ಬೇಡಿಕೆ ಇದೆ. ಕರ್ನಾಟಕದ ಖ್ಯಾತಿಯನ್ನು ಕಾಲಜ್ಞಾನದಲ್ಲಿಯೂ ಅಜರಾಮರವಾಗಿಸಿದ ಎಚ್‌ಎಂಟಿ ಇನ್ನೂ ಜನರ ಮಣಿಕಟ್ಟಿನಲ್ಲಿ ಸ್ಥಾನಪಡೆದಿದೆ. ಆ ವೈಭವದ ದಿನಗಳನ್ನು ನೋಡಿ ಹೆಮ್ಮೆ ಪಡಲು ಮ್ಯೂಸಿಯಂಗೆ (www.hmtmuseum.in)ಭೇಟಿ ನೀಡಬಹುದು.

ವಿಳಾಸ: ಎಚ್‌ಎಂಟಿ ಕಾಲೋನಿ, ಎಚ್‌ಎಂಟಿ ಎಸ್ಟೇಟ್, ಜಾಲಹಳ್ಳಿ, ಬೆಂಗಳೂರು -560013
ಸಮಯ: ಬೆಳಿಗ್ಗೆ 10ರಿಂದ ಸಂಜೆ 6.30 (ಮಂಗಳವಾರ ರಜೆ)
ಪ್ರವೇಶ ಶುಲ್ಕ: ₹ 30 (ಶಾಲೆಗಳಿಂದ ಬರುವ ವಿದ್ಯಾರ್ಥಿ ತಂಡಗಳಿಗೆ ಟ್ರ್ಯಾಕ್ಟರ್ ರೈಡ್ ಕೂಡ ಇದೆ)


ಬೆಂಗಳೂರಿನಲ್ಲಿರುವ ಎಚ್‌ಎಂಟಿ ಪರಂಪರಾ ಕೇಂದ್ರ ಮತ್ತು ವಸ್ತು ಸಂಗ್ರಹಾಲಯದಲ್ಲಿರುವ ಕೈಗಡಿಯಾರಗಳ ಸಂಗ್ರಹ

ರಂಗೋಲಿಯಲ್ಲಿ ಭಾವ-ಜೀವ

ಕಲಾವಿದ ಅಜಿತ್ ಔರವಾಡಕರ ಬಿಡಿಸಿದ ಶಿವಾಜಿ ಮಹಾರಾಜರ ರಾಜ್ಯಾಭಿಷೇಕದ ಚಿತ್ರ

> "ನಾನು ಎಲ್ಲ ರೀತಿಯ ಚಿತ್ರವನ್ನು ಬಿಡಿಸಿದೆ ಎನ್ನಲಾಗದು. ಕಲಾವಿದನ ಬದುಕು ಎಂದಿಗೂ ಪರಿ ಪೂರ್ಣವಾಗದು. ಹಾಗಾಗಿ ಉಸಿರು ಇರುವವರೆಗೂ ಸುಂದರವಾದ ಆಕರ್ಷಕವಾದ ಚಿತ್ರ ಬಿಡಿಸುತ್ತೇನೆ. ಕಲಿಯಲಿಚ್ಛಿಸುವವರಿಗೂ ಮಾರ್ಗದರ್ಶನವನ್ನೂ ನೀಡುತ್ತೇನೆ"
> ಅಜಿತ್ ಔರವಾಡಕರ, ಕಲಾವಿದ



10ನೇ ಪುಟದಿಂದ...

ಇದಲ್ಲದೆ ವಿವಿಧ ಧಾರ್ಮಿಕ ಸ್ಥಳಗಳು ಮತ್ತು ದೇವರ ಚಿತ್ರಗಳಿಗೆ ರಂಗೋಲಿಯಲ್ಲಿ ರೂಪ ನೀಡಿ ಜೀವ ತುಂಬಿದ್ದಾರೆ.

ಇವರು 2 ಅಡಿ ಅಗಲ-3 ಅಡಿ ಉದ್ದದ ಮತ್ತು 4 ಅಡಿ ಅಗಲ-6 ಅಡಿ ಉದ್ದದ ಪ್ಲೈವುಡ್ ಮೇಲೆ ಕಲೆ ಪ್ರದರ್ಶನಕ್ಕೆ ಅಣಿಯಾಗುತ್ತಾರೆ. ಒಂದು ಕೈಯಲ್ಲಿ ಬಿಡಿಸಿಬೇಕಾದವರ ಭಾವಚಿತ್ರ ಹಿಡಿದು, ಮತ್ತೊಂದು ಕೈಯಿಂದ ಪೆನ್ಸಿಲ್‌ನಲ್ಲಿ ರೇಖಾಚಿತ್ರ ಮೂಡಿಸುತ್ತಾರೆ. ನಂತರ ವಿನ್ಯಾಸಕ್ಕೆ ತಕ್ಕಂತೆ ರಂಗೋಲಿ ಬಳಸಿ ಚಿತ್ರಕ್ಕೆ ಜೀವ ನೀಡುತ್ತಾರೆ. ಒಂದೊಂದು ಚಿತ್ರ ಬಿಡಿಸುವುದಕ್ಕೆ 14 ತಾಸಿಗಿಂತ ಅಧಿಕ ಸಮಯ ತೆಗೆದುಕೊಳ್ಳುತ್ತಾರೆ. ಕೆಲವೊಂದು ಚಿತ್ರಕ್ಕೆ 48 ತಾಸು ಶ್ರಮಿಸಿದ ಉದಾಹರಣೆಗಳೂ ಇವೆ.

'ಪೆನ್ಸಿಲ್‌ನಲ್ಲಿ ಚಿತ್ರ ಬಿಡಿಸುವುದು ಕಷ್ಟ. ಎಲ್ಲರಿಗೂ ಆ ಕಲೆ ಒಲಿಯದು. ರಂಗೋಲಿಯಲ್ಲಿ ಬಿಡಿಸುವುದಂತೂ ಸಾಹಸವೇ. ರಂಗೋಲಿಯಲ್ಲಿ ಚಿತ್ರ ಬಿಡಿಸುವಾಗ ಹೆಚ್ಚಿನ ಗಾಳಿ ಬೀಸಬಾರದು, ಒಂದು ಹನಿಯೂ ಬೀಳಬಾರದು. ನೊಣ ಬಂದರೂ ಮತ್ತು ಪ್ಲೈವುಡ್ ತುಸು ಅಲುಗಾಡಿದರೂ ಇಡೀ ಚಿತ್ರವೇ ಹಾಳಾಗುತ್ತದೆ. ಇವೆಲ್ಲ ಎಚ್ಚರಿಕೆಗಳನ್ನು ಇಟ್ಟುಕೊಂಡೇ ನನ್ನ ಹವ್ಯಾಸದಲ್ಲಿ ತೊಡಗಿದ್ದೇನೆ' ಎನ್ನುವ ಅವರ ಮಾತಲ್ಲಿ ಪರಿಶ್ರಮ ವ್ಯಕ್ತವಾಯಿತು.

ವಿಭಿನ್ನವಾಗಿ ಚಿತ್ರ ರಚಿಸುವಲ್ಲಿ ನಿರತರವಾದ ಅವರು, 200ಕ್ಕೂ ಅಧಿಕ ಚಿತ್ರಗಳಿಗೆ ರಂಗೋಲಿಯಲ್ಲಿ ಜೀವ ತುಂಬಿದ್ದಾರೆ.

ಪಂಢರಪುರ ವಿಠ್ಠಲ-ವಾರಕರಿ, ಶಿವಾಜಿ ಮಹಾರಾಜರ ರಾಜ್ಯಾಭಿಷೇಕ, ಅಯೋಧ್ಯೆಯಲ್ಲಿ ನಿರ್ಮಾಣವಾದ ನೂತನ ರಾಮಮಂದಿರಕ್ಕೆ ಬಾಲರಾಮನ ಆಗಮನ ಚಿತ್ರ ಕಣ್ಮನ ಸೆಳೆಯುತ್ತಿವೆ. ಮಹಾತ್ಮ ಗಾಂಧಿ, ಲಾಲ್ ಬಹಾದ್ದೂರ್ ಶಾಸ್ತ್ರಿ, ಸರ್ದಾರ್ ವಲ್ಲಭಭಾಯಿ ಪಟೇಲ್, ಬಿ.ಆರ್. ಅಂಬೇಡ್ಕರ್, ಬಾಲಗಂಗಾಧರ ತಿಲಕ, ಸಿದ್ಧೇಶ್ವರ ಸ್ವಾಮೀಜಿ, ಸಿದ್ಧಗಂಗಾ ಸ್ವಾಮೀಜಿ, ಇಂದಿರಾ ಗಾಂಧಿ, ಅಟಲ್ ಬಿಹಾರಿ ವಾಜಪೇಯಿ, ಎಪಿಜೆ ಅಬ್ದುಲ್ ಕಲಾಂ, ಲತಾ ಮಂಗೇಶ್ಕರ್, ಉಸ್ತಾದ್ ಬಿಸ್ಮಿಲ್ಲಾ ಖಾನ್, ಅಮಿತಾಬ್ ಬಚ್ಚನ್, ಪುನೀತ್ ರಾಜ್‌ಕುಮಾರ್, ಭೀಮಸೇನ್ ಜೋಶಿ ಹೀಗೆ.. ಹಲವಾರು ದಿಗ್ಗಜರು ಸೊಗಸಾಗಿ ಮೂಡಿದ್ದು, ಅಜಿತ್ ಕಲಾ ನೈಪುಣ್ಯಕ್ಕೆ ಕೈಗನ್ನಡಿ ಹಿಡಿದಂತಿವೆ.

'ನಾನು ಬಿಡಿಸಿದ ಸ್ಥಳಗಳಲ್ಲೇ ಚಿತ್ರ ಪ್ರದರ್ಶಿಸಬೇಕು. ಯಾವ ಕಾರಣಕ್ಕೂ ಪ್ಲೈವುಡ್ ಅಲುಗಾಡಿಸುವಂತಿಲ್ಲ. ನನ್ನ ಚಿತ್ರಗಳನ್ನೆಲ್ಲ ಸ್ಟುಡಿಯೊದಲ್ಲೇ ವಾರದವರೆಗೆ ಪ್ರದರ್ಶಿಸುತ್ತೇನೆ. ಕೆಲವೊಂದಕ್ಕೆ ಹೆಚ್ಚಿನ ಜನಸ್ಪಂದನೆ ಸಿಕ್ಕಾಗ, ಎರಡೂ ವಾರಗಳವರೆಗೆ ಪ್ರದರ್ಶಿಸಿದ ಹೆಮ್ಮೆಯಿದೆ' ಎನ್ನುತ್ತಾರೆ.

ಮನೆಯಂಗಳದಲ್ಲಿ ಮಹಿಳೆಯರ ಕೈಯಲ್ಲಿ ಚುಕ್ಕಿ ಮತ್ತು ಗೆರೆಗಳಲ್ಲಿ ಮೂಡುವ ವೈವಿಧ್ಯ ರಂಗೋಲಿಗಳು ಒಂದು ಕಡೆಯಾದರೆ, ಅಜಿತರ ಕೈಯಲ್ಲಿ ಅದೇ ರಂಗೋಲಿಯಲ್ಲಿ ದೇಶದ ಪ್ರಸಿದ್ಧರು ಜೀವ ತಳೆಯುವುದು ಅದ್ಭುತವೇ ಸರಿ.

ಮೊದಲ ಓದು

ಗ್ರಾಮಮುಖಿ ಕೆಲಸಗಳಿಗೆ ಕೈದೀವಿಗೆ

ಅಖಂಡ ಭಾರತದ ಸಂಸ್ಕೃತಿಯ ಜೀವಾಳ- ತಾಯಿ ಬೇರು ಇರುವುದು ಪ್ರತಿ ಹಳ್ಳಿಯಲ್ಲಿ. ಹಳ್ಳಿಗಳು ಸಂಸ್ಕೃತಿಯ ಬೇರುಗಳನ್ನು ಭದ್ರವಾಗಿ ಕಾಪಿಟ್ಟುಕೊಂಡಿವೆ. ಆದರೆ, ಎಷ್ಟೋ ಹಳ್ಳಿಗಳಲ್ಲಿ ಈ ಬೇರು ಒಣಗಿ ಹೋಗಿರುವುದು ಮತ್ತು ಈಗಲೂ ಒಣಗಿ ಹೋಗುತ್ತಿರುವುದನ್ನು ಕಾಣುತ್ತಿದ್ದೇವೆ. ಆದರೆ, ಇಂತಹ ದುರಿತ ಕಾಲದಲ್ಲಿ ನಾಗತಿಹಳ್ಳಿಯಲ್ಲಿ ವರ್ಷಕ್ಕೊಮ್ಮೆ ನಡೆಯುವ 'ನಾಗತಿಹಳ್ಳಿ ಸಂಸ್ಕೃತಿ ಹಬ್ಬ'ಕ್ಕೆ ನಾಡಿನ ಪ್ರಸಿದ್ಧ ಕಲಾವಿದರೆಲ್ಲ ಬಂದು ಊರಿನವರಿಗೆ ಮನೋಲ್ಲಾಸ ನೀಡುವ, ಬೌದ್ಧಿಕವಾಗಿ ಚಿಂತನೆಗೆ ಹಚ್ಚುವ ಜತೆಗೆ ಊರ ಜನರ ಮನಸ್ಸು ಕೂಡ ಸಂಸ್ಕೃತಿಮಯವಾಗುವಂತೆ ಮಾಡುತ್ತಿದ್ದಾರೆ.

ಇಂತಹ 'ನಾಗತಿಹಳ್ಳಿ ಸಂಸ್ಕೃತಿ ಹಬ್ಬ'ದ ಪಯಣ ಎರಡು ದಶಕ ಪೂರೈಸಿದೆ. ಈ ಹಬ್ಬದ ಇಪ್ಪತ್ತನೆ ವರ್ಷದ ನೆನಪಿಗಾಗಿ ಸಂಪಾದಿಸಿ ಹೊರತಂದಿರುವ ಕೃತಿಯೇ 'ಮಣ್ಣುಖುಣ'. ನಮ್ಮ ಹಳ್ಳಿಗಾಡಿನ ಬದುಕನ್ನು ಚೈತನ್ಯಗೊಳಿಸಲು ಬೇಕಾದ ಚಿಕಿತ್ಸಾತ್ಮಕ ಚಿಂತನೆಗಳ ಬರೆಹಗಳು ಇದರಲ್ಲಿವೆ.

ಕಳೆದ ಎರಡು ದಶಕಗಳಲ್ಲಿ ನಾಗತಿಹಳ್ಳಿಯಲ್ಲಿ ನಡೆದ ಪ್ರಯೋಗಗಳ ಪರಾಮರ್ಶೆಯ ಸಾರವನ್ನು ಈ ಕೃತಿಯಲ್ಲಿ ಕಟ್ಟಿಕೊಡಲಾಗಿದೆ. ಇದರಲ್ಲಿ ನಾಲ್ಕು ಭಾಗಗಳಿದ್ದು, 1. ನಮ್ಮ ಗ್ರಾಮ ಬದುಕಿಗೆ ಚಿಂತನೆ, 2. ನಮ್ಮ ಗ್ರಾಮ ಬದುಕಿಗೆ ಚಿಕಿತ್ಸೆ, 3. ನಮ್ಮ ಗ್ರಾಮ ಬದುಕಿಗೆ ಚೈತನ್ಯ ಹಾಗೂ 4ನೇ ಭಾಗದಲ್ಲಿ ಸಂಸ್ಕೃತಿ ಹಬ್ಬದ ರೂವಾರಿ ನಾಗತಿಹಳ್ಳಿ ಚಂದ್ರಶೇಖರ ಅವರೊಡನೆ ಕೃತಿಯ ಸಂಪಾದಕರು ನಡೆಸಿರುವ ಸಂದರ್ಶನದ ಪೂರ್ಣಪಾಠವಿದೆ. ಪ್ರತಿ ಹಳ್ಳಿಯಲ್ಲೂ ಪ್ರಗತಿಪರ ಹಾಗೂ ಗ್ರಾಮಮುಖಿ ಕೆಲಸಗಳನ್ನು ಮಾಡಲು ಬಯಸುವವರಿಗೆ ಈ ಕೃತಿ ಒಂದು ಕೈದೀವಿಗೆಯಾಗುವಂತಿದೆ.

'ನಾಗತಿಹಳ್ಳಿ ಸಂಸ್ಕೃತಿ ಹಬ್ಬ'ದಲ್ಲಿ ಪಾಲ್ಗೊಂಡವರು, ಅದರ ಮಹತ್ತನ್ನು ಅರಿತವರು, ನಾಡಿನ ಕಲಾವಿದರು, ಬುದ್ಧಿಜೀವಿಗಳು, ರೈತರು, ಸಾಹಿತಿಗಳು, ಪತ್ರಕರ್ತರು ಬರೆದ ಸುಮಾರು 60ಕ್ಕೂ ಹೆಚ್ಚು ಚಿಂತನಾ ಬರೆಹಗಳು ಈ ಕೃತಿಯಲ್ಲಿವೆ. ಈ ಬರೆಹಗಳು ಮುಂದೊಮ್ಮೆ ಹಳ್ಳಿಗಳ ಬಗೆಗಿನ ನೋಟವನ್ನು ಪುನರ್‌ರಚಿಸುವ ಕೆಲಸಕ್ಕೆ ಖಂಡಿತವಾಗಿಯೂ ನೆರವಾಗಬಲ್ಲವು.



ಪು: 332 ₹350

ಮಣ್ಣುಖುಣ
ಗೌರವ ಸಂಪಾದಕ: ಪ್ರೊ.ಎಂ. ಕೃಷ್ಣೇಗೌಡ
ಸಂ: ಶಿಲ್ಪಶ್ರೀ ಹರವು, ಶಿವಕುಮಾರ ಕಾರೇಪುರ
ಪ್ರ: ಅಭಿವ್ಯಕ್ತಿ ಸಾಂಸ್ಕೃತಿಕ ವೇದಿಕೆ
ಸಂ: 99005 55255

ಬದುಕಿಗೊಂದು ಸರಳ ಮಾರ್ಗಸೂಚಿ

ಪು: 120 ₹165

ಬದುಕಿಗೊಂದು ಪುಟ್ಟ ಥ್ಯಾಂಕ್ಸ್
ಲೇ: ಸುಷ್ಮ ಸಿಂಧು
ಪ್ರ: ಸಾಹಿತ್ಯಲೋಕ ಪಬ್ಲಿಕೇಷನ್ಸ್
ಮೊ: 99459 39436

ಪ್ರಪಂಚದೊಳಗೆ ನಾವಿರುವಂತೆ ನಮ್ಮೊಳಗೆ ಒಂದು ಪುಟ್ಟ ಪ್ರಪಂಚವಿದೆ. ಹೊರಗಿನ ಪ್ರಪಂಚ ಮತ್ತು ಒಳಗಿನ ಪ್ರಪಂಚಗಳೆರಡೂ ಒಂದಕ್ಕೊಂದು ಬೆಸೆದುಕೊಂಡಿದೆ. ಒಂದನ್ನೊಂದು ಬೆರೆತು, ಒಂದರಿಂದ ಮತ್ತೊಂದು ಪಡೆದುಕೊಂಡು, ಪಡೆದುಕೊಂಡಷ್ಟೆ ಸಲೀಸಾಗಿ ಬೇಡದ್ದನ್ನು ಅಲ್ಲಗಳೆಯುವಷ್ಟು ಗಟ್ಟಿ ಮನಸ್ಥಿತಿಯೊಂದನ್ನು ಕಟ್ಟಿಕೊಳ್ಳುವುದರಲ್ಲಿಯೇ ಬದುಕಿನ ಸ್ವಾರಸ್ಯ ಅಡಗಿದೆ.

ಧಾವಂತದ ಬದುಕಿನಲ್ಲಿ ಸ್ವೀಕರಿಸುವಷ್ಟೆ ಸರಳವಾಗಿ ನಿರಾಕರಿಸುವುದನ್ನು ಕಲಿಯಬೇಕು. ಅಂಥ ಕಲಿಕೆಗೆ ಸರಳ ಮಾರ್ಗಸೂಚಿಯಂತೆ ಕಾಣುತ್ತದೆ 'ಬದುಕಿಗೊಂದು ಪುಟ್ಟ ಥ್ಯಾಂಕ್ಸ್' ಎಂಬ ಪುಸ್ತಕ.

ನಾವಾಡುವ ಪ್ರತಿ ಮಾತಿನ ಹಿಂದೆಯೂ ಜವಾಬ್ದಾರಿಯುತ ನಡೆಯಿರಲಿ. ಪ್ರತಿ ಬಾರಿ ಸಂಕಲ್ಪ ಮಾಡುವಾಗ ಅಗಾಧ ಬದ್ಧತೆಯೊಂದು ಕೈಹಿಡಿದು ನಡೆಸುತ್ತಿರಲಿ, ಕೋಪಗೊಳ್ಳದೆ ಕ್ಷಮಿಸುವುದನ್ನು ಕಲಿತಾಗಲೇ ಜೀವನಪಥ ಮುಂದೆ ಸಾಗುತ್ತದೆ ಎಂಬಂಥ ಹಲವು ಆಶಯಗಳನ್ನು ಈ ಪುಸ್ತಕದಲ್ಲಿ ಕಾಣಬಹುದು. ಇಲ್ಲಿರುವ ಲೇಖನಗಳು ಬೋಧನೆಯಾಗದೆ ಆಪ್ತಸಲಹೆಯಂತಿವೆ. ಬಿಡಿ ಬಿಡಿ ಲೇಖನಗಳನ್ನು ಸಮಗ್ರವಾಗಿ ಗ್ರಹಿಸಿದಾಗ ಹಲವು ವಿಷಯಗಳ ಮೇಲೆ ಕೇಂದ್ರೀಕರಿಸಿದ ಪ್ರಬಂಧದಂತೆ ಅನಿಸದೇ ಇರಲಾರದು.

ಅನುಭವದ್ರವ್ಯ ಒಟ್ಟುಗೂಡಿದಷ್ಟು ಆಪ್ತಸಮಾಲೋಚನೆಯ ಹಾದಿ ಸರಾಗ. ಕೇಳಿಸಿಕೊಳ್ಳುವ ಕಿವಿಗಳ ಹಿಂದಿರುವ ಮನಸ್ಸು ತೆರೆದುಕೊಂಡಷ್ಟು ದುಗುಡ, ಹತಾಶೆ ತುಂಬಿಕೊಂಡ ಮನಸ್ಸು ಮುಕ್ತವಾಗಿ ಮುಂದುವರಿಯುತ್ತದೆ.

ಮನುಷ್ಯನ ಮನಸ್ಸಿನಾಳದಲ್ಲಿ ತಿಳಿ ನೀರಿನ ಕೊಳಕ್ಕೆ ಜಾಗವಿರುವಂತೆ ವ್ಯಾಕುಲತೆ, ಅಸ್ವಸ್ಥತೆ, ಬೇಸರ, ಹಟ, ದುಮ್ಮಾನ, ದುಃಖ, ಹತಾಶೆ, ನೋವು, ಸಂಕಟ ಎಲ್ಲವನ್ನು ಒಡಲಿನಲ್ಲಿಟ್ಟುಕೊಂಡ ಭಾವಸಮುದ್ರವೊಂದು ಭೋರ್ಗರೆಯುತ್ತಿರುತ್ತದೆ. ಇವೆರಡರಲ್ಲಿಯೂ ಈಜದೇ ಬದುಕು ಪುಟಕ್ಕಿಟ್ಟ ಬಂಗಾರವಾದೀತೆ?

ಸುಷ್ಮ ಸಿಂಧು ಅವರ ಈ ಲೇಖನಗಳು ಪತ್ರಿಕೆಗಾಗಿ ರೂಪುಗೊಂಡಿರುವುದರಿಂದ ಮನೋಭಿತ್ತಿಗೆ ಸಂಬಂಧಿಸಿದ ಮಾತುಗಳೆಲ್ಲ ಆಳಕ್ಕೆ ಇಳಿಯುವಷ್ಟು ವ್ಯವಧಾನವನ್ನು ತೋರಿಸುವುದಿಲ್ಲ. ನಿರ್ದಿಷ್ಟ ಸಮಸ್ಯೆ ಎದುರಿಸುತ್ತಿರುವವರು ನಿರ್ದಿಷ್ಟ ಲೇಖನ ಓದಿ ಆ ಕ್ಷಣಕ್ಕೆ ಬಿಡುಗಡೆ ಪಡೆಯಲಂತೂ ಅಡ್ಡಿಯಿಲ್ಲ.

ಅಲೆಮಾರಿ ಬದುಕಿನ ಆತ್ಮಕಥನ

ವಲಸೆ ಹಕ್ಕಿಗಳಂತೆ ಸಂಚರಿಸುವ ಲಂಬಾಣಿಗರದ್ದು ಮೂಲತಃ ಅಲೆಮಾರಿ ಸಮುದಾಯ. ಸಣ್ಣ ತಾಂಡಾಗಳಲ್ಲಿ ವಾಸಿಸುವ ಈ ಸಮುದಾಯ ಆರ್ಥಿಕವಾಗಿ ಸುಸ್ಥಿತಿಯಲ್ಲಿ ಇಲ್ಲದಿದ್ದರೂ, ಸಾಂಸ್ಕೃತಿಕವಾಗಿ ಶ್ರೀಮಂತವಾದದ್ದು. ಅಂಥ ಸಮುದಾಯದಲ್ಲಿ ಹುಟ್ಟಿ ಬೆಳೆದ ಪ್ರೊ. ಕೃಷ್ಣ ನಾಯಕ ಅವರ 'ವಲಸೆ ಹಕ್ಕಿಯ ಹಾಡು' ಆತ್ಮಕಥನ ಹಲವು ಕಾರಣಗಳಿಗಾಗಿ ಮಹತ್ವದ್ದು.

ಆತ್ಮಕಥನವೆಂದರೆ ಆತ್ಮರತಿಯೇ ಹೆಚ್ಚಾಗಿ, ತಪ್ಪುಗಳನ್ನು ಮರೆಮಾಚುವವರ ಸಂಖ್ಯೆಯೇ ಅಧಿಕ. ಆದರೆ, ವೃತ್ತಿಯಲ್ಲಿ ಪ್ರಾಧ್ಯಾಪಕರಾಗಿದ್ದ ಕೃಷ್ಣ ನಾಯಕ ಅವರ ಈ ಕೃತಿ ಬಿಚ್ಚಿದ ಜೋಳಿಗೆಯಂಥದ್ದು. ಕಲಬುರಗಿ ಜಿಲ್ಲೆಯ ಜೇವರ್ಗಿ ತಾಲ್ಲೂಕಿನ ಬದನಿಹಾಳದಂಥ ಕುಗ್ರಾಮದಲ್ಲಿ ಜನಿಸಿದ್ದರೂ ಶಿಕ್ಷಣ ಪ್ರೇಮಿ ಅಪ್ಪನ ಕಾರಣದಿಂದ ಕೃಷ್ಣ ನಾಯಕ ಅವರು ಅಕ್ಷರ ವಂಚಿತರಾಗಲಿಲ್ಲ. ಬ್ರಿಟಿಷರ ವಿರುದ್ಧ ಸಿಡಿದೆದ್ದ ತಾತಾ ಮಾನಸಿಂಗ ನಾಯಕ ಅವರಿಂದ ಶುರುವಾಗುವ ಆತ್ಮಕಥನ ಮೂರು ತಲೆಮಾರುಗಳ ಬದುಕಿನ ಚಿತ್ರಣವನ್ನು ಕಟ್ಟಿಕೊಡುತ್ತದೆ. ತಾಂಡಾದ ಯುವಕನೊಬ್ಬ ಕಲಬುರಗಿಯ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಯಲ್ಲಿ ಪ್ರಾಧ್ಯಾಪಕನಾಗಿ ಸೇರಿ, ಬದುಕನ್ನು ವೈಚಾರಿಕವಾಗಿ ಕಟ್ಟಿಕೊಳ್ಳುವ, ಅದಕ್ಕಾಗಿ ಪಡುವ ನೋವು-ನಲಿವುಗಳ ಚಿತ್ರಣ ಇಲ್ಲಿದೆ.

ತಮ್ಮ ಬದುಕಿನೊಂದಿಗೆ ಹಾಸುಹೊಕ್ಕಾಗಿರುವ ಗ್ರಾಮೀಣ ಜನಜೀವನದ ಸೊಗಡನ್ನು ಹೇಳುತ್ತಲೇ ಲೇಖಕರು, ತಾಂಡಾದೊಳಗಿನ ಸಂಪ್ರದಾಯ, ಮೌಢ್ಯವನ್ನೂ ತೆರೆದಿಡುತ್ತಾರೆ. ಕೃಷ್ಣ ನಾಯಕ ಅವರು ತಮ್ಮ ವೈಯಕ್ತಿಕ ಜೀವನದಲ್ಲಿ ಮೌಢ್ಯವನ್ನು ಮೆಟ್ಟಿ ನಿಂತ ಹಲವು ಘಟನೆಗಳನ್ನು ಉಲ್ಲೇಖಿಸುತ್ತಾರೆ.

ಅಪ್ಪನ ಅಕ್ಷರ ಪ್ರೀತಿ, ಅವ್ವ-ಅಕ್ಕಂದಿರ ಮಮತೆಯ ಜತೆಗೆ ಲೇಖಕರು ಗ್ರಾಮ್ಯ ಜನ್ಯ ಬದುಕಿನ ಹಂತಿ ಪದಗಳು, ಗ್ರಾಮೀಣ ಕ್ರೀಡೆಗಳ ಸಡಗರವನ್ನೂ ನೆನಪಿಸಿಕೊಳ್ಳುತ್ತಾರೆ. ಗಂಡು ಮಕ್ಕಳೇ ಸಂಸಾರದ ಕಣ್ಣು ಎನ್ನುವ ಪರಿಸರದ ನಡುವೆಯೇ ತಮ್ಮಿಬ್ಬರು ಹೆಣ್ಣುಮಕ್ಕಳಿಗೆ ಉನ್ನತ ಶಿಕ್ಷಣ ಕೊಡಿಸಿ ಸ್ವಾವಲಂಬಿ ಮಾಡಿ ಮಾದರಿಯಾಗುತ್ತಾರೆ. ಪ್ರಾಧ್ಯಾಪಕ ವೃತ್ತಿಯ ನಡುವೆಯೇ ತಮ್ಮೊಳಗಿನ ಜವಾರಿ ಕಥೆಗಾರನನ್ನೂ ಬೆಳಕಿಗೆ ತರುವ ಪ್ರಯತ್ನದಲ್ಲಿ ಕಂಡ ಯಶಸ್ಸು, ಬೆಳೆದು ದೊಡ್ಡವರಾದ ಮಕ್ಕಳು ತಮ್ಮ ಗೂಡು ಸೇರಿಕೊಂಡ ಬಳಿಕ ಮಡದಿಯೊಂದಿಗೆ ಕೈಗೊಂಡ ಪ್ರವಾಸಕಥನವನ್ನೂ ಹಿಡಿದಿಟ್ಟಿದ್ದಾರೆ.

ವಲಸೆ ಬಂದ ಹಕ್ಕಿಯೊಂದು ತನಗಾಗಿ ಪುಟ್ಟ ಗೂಡು ಕಟ್ಟಿಕೊಂಡು, ನೆಮ್ಮದಿಯ ನಾಳೆಗಳನ್ನು ಅರಸುತ್ತಲೇ, ತಾನು ಬೆಳೆದ ಪರಿಸರವನ್ನು ಜ್ಞಾಪಿಸಿಕೊಳ್ಳುತ್ತಾ ನೆನಪಿನ ಬುತ್ತಿ ಗಂಟನ್ನು ಬಿಚ್ಚುವಂತೆ ಇಲ್ಲಿನ ಸಂಗತಿಗಳು ಹಿಡಿದಿಡುತ್ತವೆ.



ಪು: 280 ₹300

ವಲಸೆ ಹಕ್ಕಿಯ ಹಾಡು (ಆತ್ಮಕಥನ)
ಲೇ: ಪ್ರೊ. ಕೃಷ್ಣನಾಯಕ
ಪ್ರ: ವಿಶ್ವ ಪ್ರಕಾಶನ
ಸಂ: 99643 51655

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಚಿತ್ರಯೋಗಿ

ಚಿತ್ರ ಸಿದ್ಧಾಂತವನ್ನು ಯೋಗದ ರೀತಿ ಅನುಸರಿಸಿ ವರ್ಣಶಿಲ್ಪಿಯಾಗಿ ಖ್ಯಾತರಾದವರು ಶ್ರೀ ಕೆ.ವೆಂಕಟಪ್ಪನವರು. ಅವರು ರಚಿಸಿದ 'ಶಕುಂತಲೆ ಕಣ್ವಾಶ್ರಮದಿಂದ ಬೀಳ್ಕೊಳ್ಳುವ ಮೃತ್ತಿಕಾ ಚಿತ್ರದಿಂದ ಪ್ರೇರಿತವಾಗಿ' ಕುವೆಂಪು ಅವರು 'ವರ್ಣಶಿಲ್ಪಿ ವೆಂಕಟಪ್ಪನವರಿಗೆ' ಕವನ ರಚಿಸಿದ್ದಾರೆ. ಆ ಚಿತ್ರ ಭೂತಕಾಲದ ಘಟನೆಯಾಗಿ, ವರ್ತಮಾನದಲ್ಲಿ ಶೋಭಿಸುತ್ತ, ಭವಿತವ್ಯದ ಚಿತ್ರಕಲಾ ಚತುರರಿಗೆ ಮಾರ್ಗದರ್ಶಿಯಾಗಿದೆ ಎಂದು ಹೇಳುತ್ತ ಕುವೆಂಪು ಅವರು ವೆಂಕಟಪ್ಪನವರ ಕುಶಲತೆಗೆ ತಲೆಬಾಗಿ 'ಚಿತ್ರಯೋಗಿ' ಎಂದು ಬಣ್ಣಿಸಿದ್ದಾರೆ.

'ಭೂತಕಾಲವ ಸುಲಿದು ವರ್ತಮಾನಕೆ ನೀಡಿ
ಭವಿತವ್ಯಕಿಣುಕುತಿದೆ, ಚಿತ್ರಯೋಗಿ!'

ಹೊಗೆವಳ್ಳಿ

ಕುವೆಂಪು ಅವರು ಒಮ್ಮೆ ಸ್ನೇಹಿತ ಮೂರ್ತಿಯೊಂದಿಗೆ ಮಲೆನಾಡಿನ ಬೆಟ್ಟಗಳನ್ನು ಏರಿ ಸಾಗುವ ಸೊಬಗಿನ ಚಿತ್ರಣದ ಕವನ 'ವೈಶಾಖ ಸೂರ್ಯೋದಯ'. ಮುಗಿಲಿನ ಮಟ್ಟ ಸೇರಿ ಕೆಳಗಡೆ ಕಣಿವೆಯಲ್ಲಿ ಅಲ್ಲಲ್ಲಿ ತಲೆಯೆತ್ತಿರುವ 'ಬಿಂಕದ ಹುಲ್ಮನೆ ನೋಟಗಳನ್ನು ನೋಡುತ್ತಾರೆ. ಕವಿಯು ಆ ಮನೆಗಳಿಂದ ಮೆಲ್ಲಗೆ ಮೇಲಕ್ಕೆ ಏರುವ ಹೊಗೆಯ ಆಕಾರವನ್ನು ಬಳ್ಳಿಗೆ ಹೋಲಿಸಿ ಹೊಸ ಪದ 'ಹೊಗೆವಳ್ಳಿ'ಯಿಂದ ಹೀಗೆ ಚಿತ್ರಿಸಿದ್ದಾರೆ:

ಮನೆಮನೆಯಿಂದ ಸುನೀಲಾಕಾಶಕೆ
ಮೆಲ್ಲಗೇರ್ವ ಹೊಗೆವಳ್ಳಿಗಳು
ನೀಲಿಯ ಕನಸಿನ ಬಳ್ಳಿಗಳು!

ಜಪಾನ್‌ನಲ್ಲಿ ವಿಸ್ಟೇರಿಯಾ ಹೂ ಹಬ್ಬ

ಜಪಾನ್‌ನಲ್ಲಿ ವಸಂತ ಕಾಲದಲ್ಲಿ ಅರಳಿ ಪರಿಮಳ ಸೂಸುವ ವಿಸ್ಟೇರಿಯಾ ಹೂಗಳದೇ ಜಾತ್ರೆ. ಎಲ್ಲಿ ನೋಡಿದರೂ ನೇರಳೆ ಬಣ್ಣವನ್ನು ಹೊದ್ದುಕೊಂಡ ಬಳ್ಳಿ, ಚಪ್ಪರ, ಮರಗಳದೇ ಪಾರಮ್ಯ. ಟೋಕಿಯೊದಲ್ಲಿ ಅಕೌಂಟೆಂಟ್ ಆಗಿ ಕೆಲಸ ಮಾಡುತ್ತಿರುವ ಚಿಕ್ಕಮಗಳೂರಿನ **ಶ್ವೇತ ಆರಾಧ್ಯ** ಈ ಕುರಿತು ಆಪ್ತವಾಗಿ ಬರೆದಿದ್ದಾರೆ.

ವಿಸ್ಟೇರಿಯಾ ಹೂವುಗಳನ್ನು ಹೊದ್ದುನಿಂತ ಮರ

‘ಜಪಾನ್‌ನಲ್ಲಿ ಅತ್ಯಂತ ಸುಂದರವಾದ ಕಾಲ ಯಾವುದು?’–ತವರು ರಾಜ್ಯ ಕರ್ನಾಟಕದಲ್ಲಿರುವ ಗೆಳತಿ ಕೇಳಿದಳು. ‘ವಸಂತ ಕಾಲ’ ಎಂದು ಕ್ಷಣಾರ್ಧದಲ್ಲಿ ಹೇಳಿದೆ. ವಸಂತ ಕಾಲ ನನಗಷ್ಟೇ ಅಲ್ಲ, ಇಡೀ ಜಪಾನಿಗೇ ಇಷ್ಟ. ಈ ಸಮಯದಲ್ಲಿ ಎಲ್ಲಿ ನೋಡಿದರೂ ವಿಸ್ಟೇರಿಯಾ ಹೂವುಗಳು ಕಣ್ಣಿಗೆ ಹಬ್ಬವನ್ನುಂಟು ಮಾಡುತ್ತವೆ. ನಾನು ಟೋಕಿಯೊದಲ್ಲಿರುವ ಬೌದ್ಧ ದೇವಾಲಯದಲ್ಲಿ ‘ವಿಸ್ಟೇರಿಯಾ ಹೂ ಹಬ್ಬ’ಕ್ಕೆ ಹೋಗಿದ್ದೆ. ಅಲ್ಲಿಗೆ ಜನಸಾಗರವೇ ಹರಿದುಬರುತ್ತದೆ.

ನೇರಳೆ ಬಣ್ಣದ ಅಂಕುಡೊಂಕಾದ ಬಳ್ಳಿಗಳ ಚಪ್ಪರ, ಅದರ ಕೆಳಗೆ ದ್ರಾಕ್ಷಿ ಗೊಂಚಲಿನಂತೆ ತೂಗಾಡುವ ವಿಸ್ಟೇರಿಯಾ ಹೂವುಗಳನ್ನು ಹತ್ತಿರದಿಂದ ನೋಡುವುದೇ ಸೊಗಸು. ಜಪಾನಿ ಭಾಷೆಯಲ್ಲಿ ‘ಫುಜಿ’ ಎಂದು ಕರೆಯಲ್ಪಡುವ ವಿಸ್ಟೇರಿಯಾ ಹೂವಿನ ಪರಿಮಳ ತಂಪಾದ ಗಾಳಿಯೊಂದಿಗೆ ಎಲ್ಲಾ ಕಡೆ ಪಸರಿಸುತ್ತಿತ್ತು. ಜನರೆಲ್ಲರೂ ಉತ್ಸಾಹದಿಂದ ನೋಡುತ್ತಾ ಅದರ ಸೌಂದರ್ಯಕ್ಕೆ ಮೈಮರೆತ್ತಿದ್ದರು. ಕೆಲವರು ಫೋಟೊ ತೆಗೆದುಕೊಳ್ಳುವುದಕ್ಕೆ ಸರಿಯಾದ ಜಾಗವನ್ನು ಹುಡುಕುತ್ತಿದ್ದರು. ಜಾಗ ಸಿಕ್ಕ ಕೂಡಲೇ ಹೂವಿನ ಸೌಂದರ್ಯವನ್ನು ಸವಿಯುತ್ತಾ ಅಲ್ಲೇ ನಿಂತುಬಿಡುತ್ತಿದ್ದರು. ಇದನ್ನು ನೋಡಿದ ಉಳಿದವರು ‘ಅವರು ಯಾವಾಗ ಹೊರಡುತ್ತಾರೆ, ನಾವೂ ಕೆಲವು ಫೋಟೊಗಳನ್ನು ಕ್ಲಿಕ್ಕಿಸಿಕೊಳ್ಳಬೇಕು. ಅದಕ್ಕೆ ಅವಕಾಶ ಸಿಗುತ್ತದೆಯೋ ಇಲ್ಲವೋ’ ಎಂದು ಚಡಪಡಿಸುತ್ತಿದ್ದರು. ಅವರಲ್ಲಿ ನಾನೂ ಒಬ್ಬಳಾಗಿದ್ದೆ. ಜೇನುನೊಣ ಅತೀ ವೇಗವಾಗಿ ‘ಗುಂಯ್’ ಎಂದು ಸದ್ದು ಮಾಡುತ್ತಾ ಬಂದಿತು. ಅದಕ್ಕೆ ಹೆದರಿ ಓಡುವ ಮಂದಿ ಒಂದು ಕಡೆಯಾದರೆ, ವಿಸ್ಟೇರಿಯಾ ಹೂವಿನ ಮಕರಂದವನ್ನು ಹೀರುತ್ತಿರುವ ಜೇನುನೊಣವನ್ನು ಹಿಂದೆ ಸರಿಸಿ ಹೂವಿನ ಪರಿಮಳವನ್ನು ಸವಿಯುತ್ತಾ ನಿಂತ ಜನರನ್ನು ನೋಡಿ ಆಶ್ಚರ್ಯವಾಯಿತು.

ವಿಸ್ಟೇರಿಯಾ ಹೂವುಗಳ ಹಬ್ಬ ನಡೆಯುವ ಬೌದ್ಧ ದೇವಾಲಯ

ಪಕ್ಕದಲ್ಲೇ ಇದ್ದ ಕೊಳದಲ್ಲಿ ವಿಸ್ಟೇರಿಯಾ ಹೂಗಳ ಪ್ರತಿಬಿಂಬ ನೀರಿನೊಳಗೆ ಮೂಡುತ್ತಿತ್ತು. ಒಂದೆರಡು ಆಮೆಗಳು ಬಿಸಿಲಿಗೆ ಮೈವೊಡ್ಡಿ ಕಲ್ಲಿನ ಮೇಲೆ ಪ್ರಶಾಂತವಾಗಿ ಕುಳಿತ್ತಿದ್ದವು. ಅಂದು ಪ್ರವಾಸಿಗರ ದಂಡೇ ನೆರೆದಿತ್ತು. ಹವಾಮಾನ ಕೂಡ ಬೆಚ್ಚಗಿತ್ತು. ಹಾಗಾಗಿ ಜನ ಜಾತ್ರೆ ಸೇರಿತ್ತು. ಎರಡು ಮುದ್ದಾದ ನಾಯಿಮರಿಗಳನ್ನು ಚೆಂದದ ಉಡುಪಿನಿಂದ ಅಲಂಕರಿಸಿ ಟ್ರಾಲಿಯಲ್ಲಿ ತರುತ್ತಿದ್ದರು. ನಾನು ಅವರಿಗೆ ಮನವಿ ಮಾಡಿ ಅವುಗಳನ್ನು ವಿಸ್ಟೇರಿಯಾ ಹೂವುಗಳ ಕೆಳಗೆ ಕೂರಿಸಿ ಫೋಟೊ ಕ್ಲಿಕ್ಕಿಸುತ್ತಿಸುತ್ತಿದ್ದೆ. ಇದನ್ನು ಕಂಡು ಮತ್ತಷ್ಟು ಜನರು ಬಂದು ಸೇರಿದರು. ಅಲ್ಲಿ ದೊಡ್ಡ ಗುಂಪೇ ಕೂಡಿತ್ತು. ಹುಡುಗಿಯರು ಮುದ್ದಾದ ನಾಯಿಮರಿಗಳೊಂದಿಗೆ ಸೆಲ್ಫಿ ತೆಗೆದುಕೊಂಡರೆ, ಅಜ್ಜಿಯರು ಅವುಗಳನ್ನು ಪ್ರೀತಿಯಿಂದ ಮಾತನಾಡಿಸುತ್ತಿದ್ದರು. ಇಲ್ಲಿಯ ಜನರಿಗೆ ನಾಯಿಗಳೆಂದರೆ ಪ್ರಾಣ.

ದೂರದಲ್ಲಿ ದೊಡ್ಡಗುಂಪು ಕಂಡಿತು. ಹತ್ತಿರ ಹೋಗಿ ನೋಡಿದರೆ ಅಲ್ಲಿ ಅಜ್ಜಿಯರೇ ಇದ್ದರು. ‘ಈ ವರ್ಷ ವಿಸ್ಟೇರಿಯಾ ಹೂವುಗಳು ಬೇಗ ಅರಳಿವೆ. ಕಳೆದ ವರ್ಷಕ್ಕಿಂತ ಸೊಗಸಾಗಿವೆ. ಏನು ಅದೃಷ್ಟ ನಮ್ಮದು, ನಾವೂ ಕೂಡ ಸರಿಯಾದ ಸಮಯಕ್ಕೆ ಬಂದಿದ್ದೀವಿ’ ಎಂದು ಮಾತಾಡಿಕೊಳ್ಳುತ್ತಿದ್ದದ್ದು ನನ್ನ ಕಿವಿಗೆ ಬಿತ್ತು. ನನಗೂ ಸಹ ಹೌದಲ್ಲವೇ, ಕಳೆದ ವರ್ಷ ಇಷ್ಟು ಹೂವುಗಳಿರಲಿಲ್ಲವಲ್ಲ, ಹಾಗಾದರೆ ನಾನೂ ತಡವಾಗಿ ಬಂದಿದ್ದೇನೋ ಅನಿಸಿತು.

ಜಪಾನಿನ ಜನರು ಏಕೆ ವಿಸ್ಟೇರಿಯಾ ಹೂವವನ್ನು ಇಷ್ಟಪಡುತ್ತಾರೆ ಎನ್ನುವ ಪ್ರಶ್ನೆ ಬಹುವಾಗಿ ಕಾಡುತ್ತಿತ್ತು. ಇದಕ್ಕೆ ಉತ್ತರ ಹುಡುಕುತ್ತಾ ಹೋದೆ...

ಜಪಾನಿನಲ್ಲಿ ವಿಸ್ಟೇರಿಯಾವನ್ನು ಹಲವು ಶತಮಾನಗಳಿಂದ ಬೆಳೆಸಲಾಗುತ್ತಿದೆ. ಸಾವಿರದ ಇನ್ನೂರು ವರ್ಷಗಳಷ್ಟು ಹಳೆಯದಾದ ಕೆಲವು ವಿಸ್ಟೇರಿಯಾ ಮರಗಳಿವೆ! ಆ ಜಾಗಗಳನ್ನು ನೋಡಲು ಪ್ರತಿ ವರ್ಷ ಜನ ಕಿಕ್ಕಿರಿದು ಸೇರುತ್ತಾರೆ. ವಿಸ್ಟೇರಿಯಾ ಹೂವುಗಳ ಸೌಂದರ್ಯ, ಸಾಂಕೇತಿಕತೆ ಹಾಗೂ ಸಾಂಸ್ಕೃತಿಕ ಪ್ರಾಮುಖ್ಯತೆಯಿಂದಾಗಿ ಇಲ್ಲಿನ ಜನರ ಹೃದಯದಲ್ಲಿ ವಿಶೇಷ ಸ್ಥಾನ ಪಡೆದುಕೊಂಡಿವೆ. ಹೂವುಗಳನ್ನು ನೋಡುವುದನ್ನೇ ಜಾತ್ರೆಯಂತೆ ಸಂಭ್ರಮಿಸುತ್ತಾರೆ. ಜಪಾನಿನಲ್ಲಿ ನೇರಳೆ ಬಣ್ಣವು ಯಾವಾಗಲೂ ವಿಶೇಷ ಅರ್ಥವನ್ನು ಸೂಚಿಸುತ್ತದೆ. ಸಾವಿರದ ನಾಲ್ಕುನೂರು ವರ್ಷಗಳ ಹಿಂದೆ ರಾಜಮನೆತನದವರು ಮತ್ತು ಉನ್ನತ ಮಟ್ಟದ ಅಧಿಕಾರಿಗಳು ಮಾತ್ರ ನೇರಳೆ ಬಣ್ಣದ ಬಟ್ಟೆಗಳನ್ನು ಧರಿಸಬಹುದಾಗಿತ್ತು.

ಕಲೆಗೆ ಸ್ಫೂರ್ತಿ

ಜಪಾನಿನ ಇತಿಹಾಸದುದ್ದಕ್ಕೂ ವಿಸ್ಟೇರಿಯಾ ಹೂವು ಅಸಂಖ್ಯಾತ ಕಲಾವಿದರು, ಕವಿಗಳು ಮತ್ತು ಕುಶಲಕರ್ಮಿಗಳಿಗೆ ಸ್ಫೂರ್ತಿಯಾಗಿದೆ. ಇದರ ಸುಂದರವಾದ ರೂಪ ಮತ್ತು ರೋಮಾಂಚಕ ಬಣ್ಣಗಳನ್ನು ವರ್ಣಚಿತ್ರಗಳು, ಪಿಂಗಾಣಿ ವಸ್ತುಗಳು ಹಾಗೂ ಜಪಾನಿಯರ ಸಾಂಪ್ರದಾಯಿಕ ಉಡುಗೆಯಾದ ‘ಕಿಮೋನೋ’ಗಳಲ್ಲಿ ಚಿತ್ರಿಸಲಾಗಿದೆ.

ಸಾಮಾನ್ಯವಾಗಿ ಈ ಹೂವುಗಳು ಏಪ್ರಿಲ್‌ನಿಂದ ಮೇವರೆಗೆ ಅರಳುತ್ತವೆ. ಈ ಸಮಯದಲ್ಲಿ ಜಪಾನಿಗೆ ಪ್ರವಾಸಕ್ಕೆಂದು ಬಂದರೆ ವಿಸ್ಟೇರಿಯಾವನ್ನು ತಪ್ಪದೇ ವೀಕ್ಷಿಸಿ. ಸರಿಯಾದ ಪೂರ್ವಸಿದ್ಧತೆಯಿದ್ದರೆ ಚೆರ್ರಿ ಹೂಗಳು, ವಿಸ್ಟೇರಿಯಾ ಮತ್ತು ಇನ್ನೂ ಅನೇಕ ಹೂವುಗಳನ್ನು ನೋಡಬಹುದು.

ಈ ವಿಸ್ಟೇರಿಯಾ ಹೂವುಗಳು ಸಂಪ್ರದಾಯ ಮತ್ತು ಆಧುನಿಕತೆಯ ಎಳೆಗಳನ್ನು ಒಟ್ಟಿಗೆ ನೇಯ್ಗೆ ಮಾಡುತ್ತವೆ. ಪ್ರೀತಿ ಮತ್ತು ದೀರ್ಘಾಯುಷ್ಯವನ್ನು ಸಂಕೇತಿಸುತ್ತವೆ. ಹಾಗಾಗಿ ಜಪಾನಿನ ಕಲೆ ಮತ್ತು ಹಬ್ಬಗಳಲ್ಲಿ ಈ ಹೂವುಗಳನ್ನು ಹೆಚ್ಚು ಗೌರವಿಸಲಾಗುತ್ತದೆ.

ನಾನು ಮತ್ತೊಂದು ವಸಂತಕ್ಕಾಗಿ ಕಾತರಳಾಗಿದ್ದೇನೆ... ❖

ಚ್ಯುಯಿಂಗಮ್‌ನಂಥ ದಾಂಗೋ

ವಿಸ್ಟೇರಿಯಾ ಹೂವುಗಳನ್ನು ನೋಡಲು ಸುತ್ತಾಡುತ್ತಾ ಬಹಳ ಹಸಿವಾಗಿತ್ತು. ತಿನ್ನಲು ಹುಡುಕಾಡುತ್ತಿದ್ದೆ. ಆಗ ಜೋಳದ ತೆನೆಯನ್ನು ಕೆಂಡದಲ್ಲಿ ಸುಡುವ ಹಾಗೆ ಅಕ್ಕಿಯಲ್ಲಿ ಮಾಡಿದ ಮೂರು ಉಂಡೆಗಳನ್ನು ಕಡ್ಡಿಯಲ್ಲಿ ಚುಚ್ಚಿ ಕೆಂಡದಲ್ಲಿ ಸುಡುತ್ತಿದ್ದರು. ಅದು ಇಲ್ಲಿಯ ಜನರ ಅಚ್ಚುಮೆಚ್ಚಿನ ತಿಂಡಿ. ಜಪಾನಿನಲ್ಲಿ ಯಾವುದೇ ಜಾತ್ರೆಗೆ ಹೋದರೂ ತಪ್ಪದೇ ಇದನ್ನು ಕೊಂಡುಕೊಳ್ಳುತ್ತೇನೆ. ಇದನ್ನು ‘ದಾಂಗೋ’ ಎಂದು ಕರೆಯುತ್ತಾರೆ. ಬಿಸಿಬಿಸಿಯಾದ ‘ದಾಂಗೋ’ ಸವಿಯಲು ಆರಂಭಿಸಿದೆ, ಚ್ಯುಯಿಂಗಮ್ ತಿನ್ನುವಾಗ ಬಾಯಿಗೆ ಹೇಗೆ ಅಂಟುತ್ತೋ ಹಾಗೆ ಅನ್ನಿಸಿತು, ಆದರೆ ಅಕ್ಕಿಯಲ್ಲಿ ಮಾಡಿದ ತಿಂಡಿಯಾದ್ದರಿಂದ ತುಂಬಾ ರುಚಿಯಾಗಿತ್ತು.

ಇದು ದ್ರಾಕ್ಷಿಯಲ್ಲ! ವಿಸ್ಟೇರಿಯಾ ಹೂವುಗಳ ಗೊಂಚಲು.



ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡಗ್ಗ ಚಕ್ಕು ಶೀಶ್ರಷ್ಟ ಕಥೆಯ | ರಿಂಗ್ ಮಾಸ್ಟರ್ ಎಡವಟ್ಟು!

• ಕಲೆ–ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಗುಂಡ ಸರ್ಕಸ್ ನೋಡಲು ಹೋಗಿದ್ದ. ಅಲ್ಲಿ ಹಲವು ಬಗೆಯ ಆಟಗಳನ್ನು ನೋಡಿ ಖುಷಿಗೊಂಡ. ಪ್ರದರ್ಶನದ ಕೊನೆಯ ಆಟವೊಂದು ಉಳಿದಿತ್ತು. ಗುಂಡ ಬಹಳ ಆಸಕ್ತಿಯಿಂದ ಅದನ್ನು ನೋಡಲು ಕಾಯುತ್ತಿದ್ದ. ರೋಮದಿಂದ ತುಂಬಿತುಳುಕುತ್ತಿದ್ದ ಸಾಕಿದ ನಾಯಿಯೊಂದನ್ನು ರಿಂಗ್ ಮಾಸ್ಟರ್ ವೇದಿಕೆಗೆ ಕರೆತಂದ. ನೋಡನೋಡುತ್ತಿದ್ದಂತೇ ಮೇಲಿಂದ ಬೆಂಕಿಯ ರಿಂಗ್ ಒಂದು ಕೆಳಕ್ಕೆ ಬಂತು. ರಿಂಗ್ ಮಾಸ್ಟರ್ ಕೂಡಲೇ ತನ್ನ ನಾಯಿಗೆ ಜಿಗಿಯಲು ಆದೇಶಿಸಿದ. ಅದು ಏಕಾಏಕಿ ರಿಂಗ್ ಒಳಕ್ಕೆ ಜಿಗಿಯಿತು. ಆದರೆ ರೋಮಕ್ಕೆ ಬೆಂಕಿ ತಗುಲಿ, ರಿಂಗ್‌ನಿಂದ ಹೊರಬರುವ ವೇಳೆಗೆ ರಿಂಗ್‌ಮಾಸ್ಟರ್‌ಗೇ ಗುರುತುಸಿಗದಂತೆ ನಾಯಿ ಕಪ್ಪಾಗಿತ್ತು.

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು

ತೇಜಸ್ವಿ ಪಿ.
ಬೆಂಗಳೂರು

ಪ್ರತೀಕ್ಷಾ ಜೋಯಿಸ್
ಆನಂದಪುರಂ

ಧನಶ್ರೀ ಡಿ.ಜಾಧವ್
ವಿಜಯಪುರ

ತನ್ಮಯ ಮ.ಕನವಳ್ಳಿ
ಕಲಘಟಗಿ

ಸಾನ್ವಿ ಟಿ.
ಹಾಸನ

ವೈಷ್ಣವಿ ಎಸ್.
ಶಿರೋಳ

ಹುಡುಕಾಟ

ಇಲ್ಲಿ ಕೊಟ್ಟಿರುವ ಸಿನಿಮಾ ಹೆಸರುಗಳಿಂದ ಒಂದೊಂದು ಅಕ್ಷರ ಆಯ್ಕೆ ಮಾಡಿಕೊಂಡು ಪ್ರಾಚೀನ ಕಾಲದ ಓರ್ವ ಮಹಿಳಾ ಕವಯತ್ರಿಯ ಹೆಸರನ್ನು ಹುಡುಕಿ

1. ಹಾವಿನ ಹೆಡೆ
2. ಅವಳ ಹೆಜ್ಜೆ
3. ದೇವತಾ ಮನುಷ್ಯ
4. ಮನಸಾಕ್ಷಿ
5. ಎರಡು ಕನಸು
6. ಒಂದು ಮೊಟ್ಟೆಯ ಕಥೆ
7. ಗಿರಿಕನ್ಯೆ
8. ಯಾರಿವನು?
9. ನ್ಯಾಯವೇ ದೇವರು
10. ನಮ್ಮ ಸಂಸಾರ

ಪ್ರಾಸಪದ ಬಂಧ

ಅಕ್ಷರ ಪಟ್ಟಿ

ಗ	ನಿ	ಕ	ಹ
ಪ್ರ	ಜಿ	ಗಿ	ಪ್ರ
ಬ	ಗು	ಬಿ	ವಿ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

1		2		3		4		5		6	
	ಮ ಟ		ಸ್ತಾ ರ		ಟಾ ರು		ವೃ ತ್ತಿ		ಗ ಲು		ಗಿ ತ
	ಮ ಟ		ಸ್ತಾ ರ		ಟಾ ರು		ವೃ ತ್ತಿ		ಗ ಲು		ಗಿ ತ

ಜಾಣಪದ ಆಟ

ಇಲ್ಲಿ ಕೊಟ್ಟಿರುವ ‘ಪ್ರ’ ಅಕ್ಷರದ ಮುಂದೆ ಅಕ್ಷರ ಪಟ್ಟಿಯಿಂದ ಆಯ್ದ ಎರಡು ಅಕ್ಷರಗಳನ್ನು ತುಂಬಿ ಮೂರು ಅಕ್ಷರದ ಅರ್ಥಬದ್ಧ ಪದ ಮಾಡಿ.

ಅಕ್ಷರ ಪಟ್ಟಿ

ಯ	ಕಾ	ಧಾ	ರ	ವಾ
ಭಾ	ಶಾಂ	ಪ	ರ	ರ
ದೀ	ಖ	ಚಾ	ವ	ತ
ತ್ನ	ಭಾ	ಮು	ನ	ಸ

1	ಪ್ರ		
2	ಪ್ರ		
3	ಪ್ರ		
4	ಪ್ರ		
5	ಪ್ರ		
6	ಪ್ರ		
7	ಪ್ರ		
8	ಪ್ರ		
9	ಪ್ರ		
10	ಪ್ರ		

ಹೀಗಂದ್ರ ಏನು?

ಭಾಷಾ ಬೆಡಗು

ಎದೆ ಸೀಳಿದ್ರ ಮೂರಕ್ಷರ ಗೊತ್ತಿಲ್ಲ–ಕನ್ನಡ ಭಾಷೆಯಲ್ಲಿ ಕೆಲವು ಪಡೆ ನುಡಿಗಳು ನಿಗೂಢ ರೀತಿಯಲ್ಲಿ ಬಳಕೆಯಾಗುತ್ತವೆ. ಆದರೆ ಅದರ ಹಿನ್ನೆಲೆ ಸ್ವಾರಸ್ಯವಾಗಿರುತ್ತದೆ. ಅಂತಹದೇ ಇದೂ ಒಂದು ಪಡೆ ನುಡಿ. ಕನ್ನಡದಲ್ಲಿ ಷ, ಶ, ಸ ಅಕ್ಷರಗಳು ಉಚ್ಚಾರದಲ್ಲಿ ಸ್ವಲ್ಪ ಬದಲಾವಣೆಯೊಂದಿಗೆ ಬಳಸಲಾಗುತ್ತದೆ. ನಾವು ಕೆಲವೊಮ್ಮೆ ಯಾವುದೋ ಅಕ್ಷರದ ಬದಲಾಗಿ ಯಾವುದೋ ಅಕ್ಷರ ಬಳಸಿಬಿಡುತ್ತೇವೆ. ‘ಶ’ ಬದಲಾಗಿ ‘ಸ’, ‘ಸ’ ಬದಲಾಗಿ ‘ಷ’ ಉಪಯೋಗಿಸುತ್ತೇವೆ. ಯಾವುದಕ್ಕೆ ಯಾವ ಅಕ್ಷರ ಸರಿ ಎಂಬುದು ಗೊತ್ತಿರುವುದಿಲ್ಲ. ಆಗ ಈ ಅಕ್ಷರ ಜ್ಞಾನ ಇಲ್ಲದ ಪ್ರಸಂಗದಲ್ಲಿ ಈ ನುಡಿ ಬಳಕೆಗೆ ಬಂದಿರಬಹುದು.

ಕಳೆದ ಸಂಚಿಕೆಯ ಸರಿ ಉತ್ತರಗಳು

ಸಿನಿ ಸ್ವಾರಸ್ಯ: 1.ಅವಳ ಹೆಜ್ಜೆ(ಅರಸು) 2.ಆರದ ಗಾಯ(ಆರಕ್ಷಕ) 3.ಇಮ್ಮಡಿ ಪುಲಕೇಶಿ 4.ಈ ಬಂಧನ 5.ಉಯ್ಯಾಲೆ 6.ಊರ್ವಶಿ 7.ಋಣ ಮುಕ್ತಳು 8.ಎರಡು ಕನಸು 9. ಏಟು–ಎದುರೇಟು 10.ಐರಾವತ

ಇಂಗ್ಲಿಷ್‌ನಲ್ಲಿ ವಿನೋದ: 1. BOY 2.CRY 3.DRY 4.DAY 5.KEY 6.LAY 7.MAY 8.PAY 9.RAY 10.SAY

ಪ್ರಾಸಪದಬಂಧ: 1.ಸಮಿತಿ–ಭೂಮಿತಿ 2.ಗಂಗಾಳ–ಬಂಗಾಳ 3.ಕೊಪ್ಪಳ–ಹಪ್ಪಳ 4.ಕೇರಳ–ಹೇರಳ 5.ಹಡಗು–ಕೊಡಗು 6.ಕರಾಟೆ–ಭರಾಟೆ

ಮೇ ಪದ ಆಟ: 1.ಮೇಕೆ 2.ಮೇಳ 3.ಮೇಲೆ 4.ಮೇನಕೆ 5.ಮೇದಸ್ಸು 6.ಮೇಧಾವಿ 7.ಮೇಘಾಲಯ 8.ಮೇಣದಬತ್ತಿ 9.ಮೇರುಕೃತಿ

ಪಂಚಕ್ವಿಜ್ಞಾಯ: 1.ದ.ರಾ.ಬೇಂದ್ರೆ 2.ಕುವೆಂಪು 3.ಶಿವರಾಮ ಕಾರಂತ 4.ರಾವಬಹದ್ದೂರ 5.ತ.ರಾ.ಸು

ಚೂರು–ಮರಿ

ಇಂಗ್ಲಿಷ್‌ನಲ್ಲಿ ಪದ ಉಚ್ಚಾರ ಮಾಡುವಾಗ ಶಬ್ದದ ಕೊನೆಯಲ್ಲಿ ‘E’ ಬಂದರೆ ಅದು ಉಚ್ಚಾರವಾಗುವುದಿಲ್ಲ. ಉದಾ: Here, More, Care...

ಗಣಿತದಲ್ಲಿ ಗರ್ದಿ ಗಮ್ಮತ್ತು

ಗುಣಾಕಾರದಲ್ಲಿ ತ್ರಿವಳಿ ಸಂಖ್ಯೆಗಳು

1. 14430 X 7 =101010
2. 15873 X 7 =111111

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ...

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ತೈವಾನ್ ಓಪನ್: ಪುರುಷರ ಜಾವೆಲಿನ್ ಥ್ರೋ ಸ್ಪರ್ಧೆ

ಕನ್ನಡಿಗ ಮನುಗೆ ಚಿನ್ನದ ಪದಕ

ಭಾರತದ ಡಿ.ಪಿ. ಮನು —ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಕನ್ನಡಿಗ ಡಿ.ಪಿ. ಮನು ಅವರು ಶನಿವಾರ ತೈವಾನ್ ಓಪನ್ ಕೂಟದ ಪುರುಷರ ಜಾವೆಲಿನ್ ಥ್ರೋ ಸ್ಪರ್ಧೆಯಲ್ಲಿ 81.58 ಮೀಟರ್ ಸಾಧನೆಯೊಂದಿಗೆ ಚಿನ್ನ ಗೆದ್ದರು.

ಏಷ್ಯನ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನ ಬೆಳ್ಳಿ ವಿಜೇತ ಮನು, ಆರು ಪ್ರಯತ್ನಗಳ ಪೈಕಿ ಕೊನೆಯ ಯತ್ನದಲ್ಲಿ ಅತ್ಯುತ್ತಮ ಎಸೆತವನ್ನು ದಾಖಲಿಸಿದರು.

24 ವರ್ಷದ ಭಾರತದ ಅಥ್ಲೀಟ್, ಫೈನಲ್‌ನಲ್ಲಿ 78.32 ಮೀಟರ್ ಎಸೆತದೊಂದಿಗೆ ಅಭಿಯಾನ ಆರಂಭಿಸಿದರು. ಎರಡನೇ ಪ್ರಯತ್ನದಲ್ಲಿ 76.80 ಮೀ. ದೂರ ಎಸೆದರು. ಮೂರನೇ ಮತ್ತು ಐದನೇ ಪ್ರಯತ್ನದಲ್ಲಿ ಕ್ರಮವಾಗಿ 80.59 ಮೀ. ಮತ್ತು 81.52 ಮೀ. ಎಸೆದರೆ, ನಾಲ್ಕನೇ ಯತ್ನದಲ್ಲಿ ಫೌಲ್ ಆದರು.

ಮನು ಅವರ ವೈಯಕ್ತಿಕ ಶ್ರೇಷ್ಠ ಪ್ರದರ್ಶನ 84.35 ಮೀಟರ್ ಆಗಿದೆ. ಕಳೆದ ತಿಂಗಳು ಭುವನೇಶ್ವರದಲ್ಲಿ ನಡೆದ ಫೆಡರೇಷನ್ ಕಪ್‌ನಲ್ಲಿ ಋತುವಿನ ಅತ್ಯುತ್ತಮ ಪ್ರಯತ್ನದೊಂದಿಗೆ (82.06 ಮೀ) ಅವರು ಬೆಳ್ಳಿ ಗೆದ್ದಿದ್ದರು. ಅಲ್ಲಿ ವಿಶ್ವ ಚಾಂಪಿಯನ್ ನೀರಜ್ ಚೋಪ್ರಾ ಚಿನ್ನ ಗೆದ್ದಿದ್ದರು.

ಕಳೆದ ವರ್ಷ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಆರನೇ ಸ್ಥಾನ ಪಡೆದಿದ್ದ ಮನು ಅವರಿಗೆ ಪ್ಯಾರಿಸ್ ಒಲಿಂಪಿಕ್ಸ್ ಕೋಟಾ ಲಭಿಸಿಲ್ಲ. ಒಲಿಂಪಿಕ್ಸ್ ಅರ್ಹತಾ ಮಟ್ಟ (85.50 ಮೀ) ತಲುಪಲು ಅವರಿಗೆ ಸಾಧ್ಯವಾಗಿಲ್ಲ. ಹಾಲಿ ಚಾಂಪಿಯನ್ ಚೋಪ್ರಾ ಮತ್ತು ಒಡಿಶಾದ ಕಿಶೋರ್ ಜೇನಾ ಒಲಿಂಪಿಕ್ಸ್‌ಗೆ ಈಗಾಗಲೇ ಅರ್ಹತೆ ಪಡೆದಿದ್ದಾರೆ.

ಮಹಿಳೆಯರ 100 ಮೀಟರ್ ಹರ್ಡಲ್ಸ್ ಸ್ಪರ್ಧೆಯಲ್ಲಿ ತಮಿಳುನಾಡಿನ ನಿತ್ಯಾ ರಾಮರಾಜ್ (13.23 ಸೆಕೆಂಡ್) ಎರಡನೇ ಸ್ಥಾನ ಪಡೆದರು. ಹಿಂದಿನ ದಿನದ ಹೀಟ್ಸ್‌ನಲ್ಲಿ ಅವರು (13.12 ಸೆ) ವೈಯಕ್ತಿಕ ಅತ್ಯುತ್ತಮ ಓಟವನ್ನು ದಾಖಲಿಸಿದ್ದರು. ಮಹಿಳೆಯರ 400 ಮೀ ಓಟದ ಫೈನಲ್‌ನಲ್ಲಿ ಕೇರಳದ ವಿ.ಕೆ. ವಿಸ್ಮಯಾ (53.49 ಸೆ) ಮೂರನೇ ಸ್ಥಾನ ಪಡೆದರು.

ಫೆಡರೇಷನ್ ಕಪ್ ವಿಜೇತೆ ತಮಿಳುನಾಡಿನ ರೋಸಿ ಮೀನಾ ಮಹಿಳೆಯರ ಪೋಲ್‌ವಾಲ್ಟ್ ಸ್ಪರ್ಧೆಯಲ್ಲಿ (3.75 ಮೀ) ಆರನೇ ಸ್ಥಾನ ಪಡೆದರು.

ತೈವಾನ್ ಓಪನ್, ವಿಶ್ವ ಅಥ್ಲೆಟಿಕ್ಸ್‌ನ ಕಾಂಟಿನೆಂಟಲ್ ಟೂರ್‌ನ ಭಾಗವಾಗಿದೆ.

ಸಿಂಗಪುರ ಓಪನ್: ಟ್ರೀಸಾ–ಗಾಯತ್ರಿ ಜೋಡಿಗೆ ನಿರಾಸೆ

ಸಿಂಗಪುರ (ಪಿಟಿಐ): ಭಾರತದ ಟ್ರೀಸಾ ಜೋಳಿ ಮತ್ತು ಗಾಯತ್ರಿ ಗೋಪಿಚಂದ್ ಅವರು ಶನಿವಾರ ಸಿಂಗಪುರ ಓಪನ್ ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಡಬಲ್ಸ್‌ನ ಸೆಮಿಫೈನಲ್‌ನಲ್ಲಿ ವಿಶ್ವದ 4ನೇ ಕ್ರಮಾಂಕದ ಜಪಾನ್‌ನ ನಮಿ ಮತ್ಸುಯಾಮಾ ಮತ್ತು ಚಿಹಾರು ಶಿಡಾ ಜೋಡಿ ಎದುರು ನೇರ್ ಗೇಮ್‌ಗಳಿಂದ ಸೋತರು. ಇದರೊಂದಿಗೆ ಟೂರ್ನಿಯಲ್ಲಿ ಭಾರತದ ಸವಾಲು ಕೊನೆಗೊಂಡಿತು.

ಹ್ಯಾಟ್ರಿಕ್ ಗೆಲುವಿನ ಮೇಲೆ ಕಣ್ಣಿಟ್ಟಿದ್ದ ಶ್ರೇಯಾಂಕರಹಿತ ಭಾರತದ ಜೋಡಿಗೆ ನಿರಾಸೆ ಉಂಟಾಯಿತು. 47 ನಿಮಿಷಗಳ ಸೆಣಸಾಟದಲ್ಲಿ ಜಪಾನ್ ಜೋಡಿ 23-21, 21-11 ರಲ್ಲಿ ಭಾರತ ಜೋಡಿಗೆ ಆಘಾತ ನೀಡಿತು.

ಫೆಬ್ರುವರಿಯಲ್ಲಿ ನಡೆದ ಏಷ್ಯಾ ಟೀಮ್ ಚಾಂಪಿಯನ್‌ಷಿಪ್‌ನಲ್ಲಿ ಟ್ರೀಸಾ-ಗಾಯತ್ರಿ ವಿರುದ್ಧ ಸೆಮಿಫೈನಲ್ ಸೋಲಿಗೆ ಜಪಾನ್ ಜೋಡಿ ಇಲ್ಲಿ ಮುಯ್ಯಿ ತೀರಿಸಿಕೊಂಡಿತು.

ಕಾಮನ್‌ವೆಲ್ತ್ ಗೇಮ್ಸ್ ಕಂಚಿನ ಪದಕ ವಿಜೇತರಾದ ಟ್ರೀಸಾ ಮತ್ತು ಗಾಯತ್ರಿ ಮೊದಲ ಗೇಮ್‌ನಲ್ಲಿ 5-10 ರಿಂದ ಹಿನ್ನಡೆ ಅನುಭವಿಸಿ, ಬಳಿಕ ಚೇತರಿಸಿಕೊಂಡು 16-16 ರಲ್ಲಿ ಮುನ್ನಡೆ ಸಾಧಿಸಿದರು.

ಆದರೆ, ಮತ್ಸುಯಾಮಾ ಮತ್ತು ಶಿಡಾ ಪ್ರಾಬಲ್ಯ ಮುಂದುವರಿಸಿ ಮೊದಲ ಗೇಮ್ ಗೆದ್ದರು. ಎರಡನೇ ಗೇಮ್‌ನಲ್ಲಿ ಜಪಾನಿಯರು 20-6 ರಿಂದ ಮುನ್ನಡೆ ಸಾಧಿಸಿ, ಎದುರಾಳಿಗೆ ಪುಟಿದೇಳಲು ಅವಕಾಶ ನೀಡಲಿಲ್ಲ.



ಫ್ರೆಂಚ್ ಓಪನ್: ನಾಲ್ಕನೇ ಸುತ್ತಿಗೆ ಎಲೆನಾ, ಸಬಲೆಂಕಾ

ಬಾಲಾಜಿ- ಮಾರ್ಟಿನೆಜ್ ಮುನ್ನಡೆ

ಪ್ಯಾರಿಸ್ (ಪಿಟಿಐ): ಭಾರತದ ಎನ್.ಶ್ರೀರಾಮ್ ಬಾಲಾಜಿ ಮತ್ತು ಅವರ ಜೊತೆಗಾರ ಮೆಕ್ಸಿಕೊದ ಮಿಗುಯೆಲ್ ಏಂಜೆಲ್ ರೆಯೆಸ್- ವರೆಲಾ ಮಾರ್ಟಿನೆಜ್ ಫ್ರೆಂಚ್ ಓಪನ್ ಟೆನಿಸ್ ಟೂರ್ನಿಯಲ್ಲಿ ಶನಿವಾರ ಡಾನ್ ಆಡ್ ಮತ್ತು ಥಿಯೊ ಅರಿಬೇಜ್ ಜೋಡಿಯನ್ನು ಸೋಲಿಸಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ.

ಎರಡನೇ ಸುತ್ತಿನ ಪಂದ್ಯದಲ್ಲಿ 1 ತಾಸು 42 ನಿಮಿಷಗಳ ಸೆಣಸಾಟದಲ್ಲಿ ಭಾರತ– ಮೆಕ್ಸಿಕೊ ಜೋಡಿ 6–4, 3–6, 6–2 ರಿಂದ ಫ್ರೆಂಚ್ ಜೋಡಿಯನ್ನು ಸೋಲಿಸಿತು. ಪ್ರಿ-ಕ್ವಾರ್ಟರ್‌ಫೈನಲ್‌ನಲ್ಲಿ ಬಾಲಾಜಿ ಮತ್ತು ಮಾರ್ಟಿನೆಜ್ ಅವರಿಗೆ ಆಸ್ಟ್ರೇಲಿಯನ್ ಓಪನ್ ಚಾಂಪಿಯನ್‌ಗಳಾದ ರೋಹನ್ ಬೋಪಣ್ಣ ಮತ್ತು ಮ್ಯಾಥ್ಯೂ ಎಬ್ಡೆನ್ ಅವರನ್ನು ಎದುರಿಸಬಹುದು.

ಎಲೆನಾ, ಸಬಲೆಂಕಾ ಮುನ್ನಡೆ: ಎರಡನೇ ಶ್ರೇಯಾಂಕದ ಅರಿನಾ ಸಬಲೆಂಕಾ ಮತ್ತು ನಾಲ್ಕನೇ ಶ್ರೇಯಾಂಕದ ಎಲೆನಾ ರಿಬಾಕಿನಾ ಮತ್ತು ಮಹಿಳೆಯರ ಸಿಂಗಲ್ಸ್‌ನಲ್ಲಿ ನಾಲ್ಕನೇ ಸುತ್ತು ತಲುಪಿದರು. ಕಜಕಸ್ತಾನದ ರಿಬಾಕಿನಾ ಅವರು ಬೆಲ್ಜಿಯಂನ ಎಲಿಸ್ ಮೆರ್ಟೆನ್ಸ್ ಅವರನ್ನು 6-4, 6-2 ಸೆಟ್‌ಗಳಿಂದ ಸೋಲಿಸಿದರು. ಸಬಲೆಂಕಾ 7-5, 6-1 ಸೆಟ್ ಗಳಿಂದ ಪೌಲಾ ಬಡೋಸಾ ವಿರುದ್ಧ ಗೆದ್ದರು.

ಜ್ವೆರೆವ್ ಜಯ: ಪುರುಷರ ಸಿಂಗಲ್ಸ್‌ನಲ್ಲಿ ನಾಲ್ಕನೇ ಶ್ರೇಯಾಂಕದ ಅಲೆಕ್ಸಾಂಡರ್ ಜ್ವೆರೆವ್ (ಜರ್ಮನಿ) ಮೂರನೇ ಸುತ್ತಿನ ಪಂದ್ಯದಲ್ಲಿ 3-6, 6-4, 6-2, 4-6, 7-6ರಿಂದ ಟ್ಯಾಲನ್ ಗ್ರೀಕ್ಸ್‌ಪೂರ್ ವಿರುದ್ಧ ಜಯ ಸಾಧಿಸಿದರು.

ಕಜಕಸ್ತಾನದ ಎಲೆನಾ ರಿಬಾಕಿನಾ ಆಟ —ಎಎಫ್‌ಪಿ ಚಿತ್ರ

ಐದನೇ ಶ್ರೇಯಾಂಕದ ಡೇನಿಯಲ್ ಮೆಡ್ವೆಡೆವ್ (ರಷ್ಯಾ) 7-6 (7/4), 7-5, 1-6, 6-4ರಿಂದ ಥಾಮಸ್ ಮಚಾಕ್ ಅವರನ್ನು ಸೋಲಿಸಿ ಸತತ ಇಲ್ಲಿ ಸತತ ಮೂರನೇ ಬಾರಿ ಪ್ರಿ ಕ್ವಾರ್ಟರ್ ಫೈನಲ್‌ಗೆ ಲಗ್ಗೆ ಹಾಕಿದರು.

ಹಾಕಿ: ಭಾರತಕ್ಕೆ ಮಣಿದ ಜರ್ಮನಿ

ಲಂಡನ್ (ಪಿಟಿಐ): ಹರ್ಮನ್ ಪ್ರೀತ್ ಸಿಂಗ್ ನೇತೃತ್ವದ ಭಾರತ ತಂಡ ಎಫ್‌ಐಎಚ್ ಪ್ರೊ ಲೀಗ್ ಹಾಕಿ ಲಂಡನ್ ಲೆಗ್‌ನಲ್ಲಿ ಶನಿವಾರ ವಿಶ್ವ ಚಾಂಪಿಯನ್ ಜರ್ಮನಿ ತಂಡವನ್ನು 3–0 ಗೋಲುಗಳ ಅಂತರದಿಂದ ಸೋಲಿಸುವ ಮೂಲಕ ಶುಭಾರಂಭ ಮಾಡಿತು.

ಡ್ರ್ಯಾಗ್ ಫ್ಲಿಕರ್ ಹರ್ಮನ್‌ಪ್ರೀತ್ (16ನೇ ನಿಮಿಷ), ಸುಖಜೀತ್ ಸಿಂಗ್ (41ನೇ ನಿ) ಮತ್ತು ಗುರ್ಜಂತ್ ಸಿಂಗ್ (44ನೇ ನಿ) ಗೋಲು ಗಳಿಸಿದರು.

13 ಪಂದ್ಯಗಳಿಂದ 24 ಅಂಕ ಗಳಿಸಿರುವ ಭಾರತ ಅಂಕಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದ್ದರೆ, ನೆದರ್ಲೆಂಡ್ಸ್ (12 ಪಂದ್ಯಗಳಿಂದ 26) ಅಗ್ರಸ್ಥಾನದಲ್ಲಿದೆ.

ಮೊದಲ ಕ್ವಾರ್ಟರ್‌ನಲ್ಲಿ ಭಾರತ ತಂಡದ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಅವರು ಜರ್ಮನಿಯ ಎರಡು ಪೆನಾಲ್ಟಿ ಕಾರ್ನರ್‌ಗಳನ್ನು ವಿಫಲಗೊಳಿಸಿದರು. ಎರಡನೇ ಕ್ವಾರ್ಟರ್‌ನ ಮೊದಲ ನಿಮಿಷದಲ್ಲಿ ಹರ್ಮನ್‌ಪ್ರೀತ್, ದೊರೆತ ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಗೋಲು ಗಳಿಸಿದರು. ನಂತರ ಸುಖಜೀತ್ ಮುನ್ನಡೆಯನ್ನು ದ್ವಿಗುಣಗೊಳಿಸಿದರು. ಮೂರು ನಿಮಿಷಗಳ ನಂತರ ಗುರ್ಜಂತ್ ಅಮೋಘ ರೀತಿ ಗೋಲು ಗಳಿಸಿ ತಂಡದ ಮುನ್ನಡೆಯನ್ನು 3–0ಗೆ ವಿಸ್ತರಿಸಿದರು.

ಭಾರತದ ಜೂನ್ 2 ಮತ್ತು 9ರಂದು ಇಂಗ್ಲೆಂಡ್ ವಿರುದ್ಧ ಸೆಣಸಲಿದೆ. ಜೂನ್ 8ರಂದು ಜರ್ಮನಿಯನ್ನು ಎದುರಿಸಲಿದೆ.

ಮಹಿಳಾ ತಂಡಕ್ಕೆ ಐದನೇ ಸೋಲು

ಭಾರತ ಮಹಿಳಾ ಹಾಕಿ ತಂಡವು ಇಂಗ್ಲೆಂಡ್ ಲೆಗ್‌ನ ಮೊದಲ ಪಂದ್ಯದಲ್ಲಿ 1–3 ರಿಂದ ಜರ್ಮನಿ ವಿರುದ್ಧ ಪರಾಭವಗೊಂಡಿತು.

ಭಾರತ ತಂಡಕ್ಕೆ ಇದು ಸತತ ಐದನೇ ಸೋಲಾಗಿದೆ. ಯುರೋಪಿಯನ್ ಲೆಗ್ ನಲ್ಲಿ ಬೆಲ್ಜಿಯಂ ಮತ್ತು ಅರ್ಜೆಂಟೀನಾ ತಂಡಗಳ ವಿರುದ್ಧ ತಲಾ ಎರಡು ಪಂದ್ಯಗಳಲ್ಲಿ ಸೋತಿತ್ತು. ಭಾರತ ಪರ ದೀಪಿಕಾ (23ನೇ ನಿ.) ಏಕೈಕ ಗೋಲು ದಾಖಲಿಸಿದರು. ಭಾರತ ಭಾನುವಾರ ಬ್ರಿಟನ್ ತಂಡವನ್ನು ಎದುರಿಸಲಿದೆ.

ಅಧಿಕೃತ ಘೋಷಣೆ ಮಾಡಿದ ವಿಕೆಟ್‌ಕೀಪರ್–ಬ್ಯಾಟರ್

ಕ್ರಿಕೆಟ್‌ಗೆ ದಿನೇಶ್ ಕಾರ್ತಿಕ್ ವಿದಾಯ

ಚೆನ್ನೈ (ಪಿಟಿಐ): ಎರಡು ದಶಕಗಳ ಕಾಲ ರಾಷ್ಟ್ರೀಯ ತಂಡ ಪ್ರತಿನಿಧಿಸಿದ್ದ ಮಾಜಿ ವಿಕೆಟ್ ಕೀಪರ್, ಬ್ಯಾಟರ್ ದಿನೇಶ್ ಕಾರ್ತಿಕ್, ಕ್ರಿಕೆಟ್‌ನ ಎಲ್ಲ ಮಾದರಿಗಳಿಗೆ ಶನಿವಾರ ವಿದಾಯ ಹೇಳಿದರು.

ವೆಸ್ಟ್‌ಇಂಡೀಸ್ ಮತ್ತು ಅಮೆರಿಕ ಜಂಟಿ ಆತಿಥ್ಯದಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ವೀಕ್ಷಕ ವಿವರಣೆಗಾರರಾಗಿ ಕಾರ್ಯನಿರ್ವಹಿಸಲಿದ್ದಾರೆ.

ಐಪಿಎಲ್ ಎಲಿಮಿನೇಟರ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಹೊರಬಿದ್ದ ಬಳಿಕ ಕಾರ್ತಿಕ್ ತಮ್ಮ ನಿವೃತ್ತಿ ಬಗ್ಗೆ ನಿರ್ಧರಿಸಿದ್ದರು. ಅಧಿಕೃತವಾಗಿ ತಿಳಿಸಲು ತಮ್ಮ 39ನೇ ಜನ್ಮದಿನವನ್ನು (ಜೂನ್ 1) ಆಯ್ಕೆ ಮಾಡಿಕೊಂಡಿದ್ದಾರೆ.

26 ಟೆಸ್ಟ್, 94 ಏಕದಿನ ಹಾಗೂ 60 ಟಿ20 ಪಂದ್ಯಗಳಲ್ಲಿ ಭಾರತ ತಂಡವನ್ನು ಪ್ರತಿನಿಧಿಸಿದ್ದಾರೆ. ಮೂರು ಮಾದರಿಗಳಿಂದ 180 ಪಂದ್ಯಗಳಲ್ಲಿ ದೇಶವನ್ನು ಪ್ರತಿನಿಧಿಸಿದ್ದಾರೆ. ಏಕೈಕ ಟೆಸ್ಟ್ ಶತಕ ಮತ್ತು 17 ಅರ್ಧಶತಕಗಳೊಂದಿಗೆ 3463 ರನ್ ಗಳಿಸಿದ್ದಾರೆ. 91 ಸ್ಟಂಪಿಂಗ್ ಮಾಡಿದ್ದಾರೆ.

2004ರಲ್ಲಿ ಅವರು ಲಾರ್ಡ್ಸ್‌ನಲ್ಲಿ ಇಂಗ್ಲೆಂಡ್ ಎದುರಿನ ಏಕದಿನ ಪಂದ್ಯದಲ್ಲಿ ಭಾರತದ ಪರ ಪದಾರ್ಪಣೆ ಮಾಡಿದ್ದರು. ಇಂಗ್ಲೆಂಡ್ ತಂಡದ ನಾಯಕ ಮೈಕೆಲ್ ವಾನ್ ಅವರನ್ನು ಮಿಂಚಿನ ಸ್ಟಂಪಿಂಗ್ ಮಾಡುವ ಮೂಲಕ ತಮ್ಮ ಚೊಚ್ಚಲ ಪಂದ್ಯವನ್ನು ಅವಿಸ್ಮರಣೀಯಗೊಳಿಸಿಕೊಂಡಿದ್ದರು.

ರೋಹಿತ್ ಶರ್ಮಾ ನಾಯಕತ್ವದಲ್ಲಿ 2022ರ ಟಿ20 ವಿಶ್ವಕಪ್‌ನಲ್ಲಿ ಕೊನೆಯ ಬಾರಿಗೆ ಆಡಿದ್ದರು. ಈ ನಡುವೆ ರಾಹುಲ್ ದ್ರಾವಿಡ್, ಅನಿಲ್ ಕುಂಬ್ಳೆ, ಮಹೇಂದ್ರ ಸಿಂಗ್ ಧೋನಿ ಮತ್ತು ವಿರಾಟ್ ಕೊಹ್ಲಿ ನಾಯಕತ್ವದಲ್ಲೂ ಆಡಿದ್ದಾರೆ.

ದಿನೇಶ್ ಕಾರ್ತಿಕ್ —ಎಎಫ್‌ಪಿ ಚಿತ್ರ

‘ಕೆಲ ಸಮಯದಿಂದ ಸಾಕಷ್ಟು ಯೋಚಿಸಿದ ನಂತರ, ನಾನು ಸ್ಪರ್ಧಾತ್ಮಕ ಕ್ರಿಕೆಟ್ ಆಡುವುದನ್ನು ಮುಂದುವರಿಸದಿರಲು ನಿರ್ಧರಿಸಿದ್ದೇನೆ. ಅಧಿಕೃತವಾಗಿ ನನ್ನ ನಿವೃತ್ತಿಯನ್ನು ಘೋಷಿಸಿದ್ದೇನೆ’ ಎಂದು ಕಾರ್ತಿಕ್ 'ಎಕ್ಸ್' ನಲ್ಲಿ ಬರೆದಿದ್ದಾರೆ.

‘ಈ ದೀರ್ಘ ಪ್ರಯಾಣವನ್ನು ಆನಂದಮಯವಾಗಿಸಿದ ನನ್ನ ಎಲ್ಲಾ ತರಬೇತುದಾರರು, ತಂಡದ ನಾಯಕರು, ಆಯ್ಕೆದಾರರು ಮತ್ತು ಸಹಾಯಕ ಸಿಬ್ಬಂದಿಗೆ ಆಭಾರಿಯಾಗಿರುವೆ’ ಎಂದು ಹೇಳಿದ್ದಾರೆ.

ವಿಶ್ವ ಒಲಿಂಪಿಕ್ ಬಾಕ್ಸಿಂಗ್ ಕ್ವಾಲಿಫೈಯರ್: ಜಾಸ್ಮಿನ್‌ಗೆ ಗೆಲುವು

ಬ್ಯಾಂಕಾಕ್ (ಪಿಟಿಐ): ಕಾಮನ್‌ವೆಲ್ತ್ ಗೇಮ್ಸ್ ಕಂಚಿನ ಪದಕ ವಿಜೇತೆ ಜಾಸ್ಮಿನ್ ಲಂಬೋರಿಯಾ ಅವರು ವಿಶ್ವ ಒಲಿಂಪಿಕ್ ಬಾಕ್ಸಿಂಗ್ ಕ್ವಾಲಿಫೈಯರ್‌ನ 57 ಕೆ.ಜಿ ತೂಕದ ವಿಭಾಗದಲ್ಲಿ ಸ್ವಿಟ್ಜರ್ಲೆಂಡ್‌ನ ಅನಾ ಮರಿಜಾ ಮಿಲಿಸಿಕ್ ವಿರುದ್ಧ ಗೆಲುವು ಸಾಧಿಸಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದಾರೆ. ಪ್ಯಾರಿಸ್ ಒಲಿಂಪಿಕ್ಸ್ ಅರ್ಹತೆ ಗಳಿಸಲು ಮತ್ತಷ್ಟು ಹತ್ತಿರವಾದರು.

22 ವರ್ಷದ ಜಾಸ್ಮಿನ್, 16ನೇ ಸುತ್ತಿನಲ್ಲಿ ಸರ್ವಾನುಮತದ ತೀರ್ಪಿನ ಮೂಲಕ (5-0) ಮರಿಜಾ ಅವರನ್ನು ಸೋಲಿಸಿದರು. ಪ್ಯಾರಿಸ್ ಕ್ರೀಡಾಕೂಟಕ್ಕೆ ಅರ್ಹತೆ ಪಡೆಯಲು ಅವರು ಭಾನುವಾರ ಕ್ವಾರ್ಟರ್ ಫೈನಲ್‌ನಲ್ಲಿ ಗೆಲ್ಲಬೇಕಾಗಿದೆ.

ಪುರುಷರ 57 ಕೆ.ಜಿ ವಿಭಾಗದ ಸೆಮಿಫೈನಲ್‌ನಲ್ಲಿ ಮಾಜಿ ಯುವ ವಿಶ್ವ ಚಾಂಪಿಯನ್ ಸಚಿನ್ ಸಿವಾಚ್ ಟೋಕಿಯೊ ಒಲಿಂಪಿಕ್ಸ್ ಬೆಳ್ಳಿ ಪದಕ ವಿಜೇತ ಫಿಲಿಪ್ಪೈನ್ಸ್‌ನ ಕಾರ್ಲೊ ಪಾಲಮ್ ವಿರುದ್ಧ 0-5 ಅಂತರದಲ್ಲಿ ಸೋತರು.

ಆದರೂ 57 ಕೆ.ಜಿ ವಿಭಾಗದಲ್ಲಿ ಮೂರು ಕೋಟಾ ಹೊಂದಿರುವುದರಿಂದ ಸಚಿನ್ ಒಲಿಂಪಿಕ್ಸ್‌ಗೆ ಅರ್ಹತೆ ಪಡೆಯಲು ಮತ್ತೊಂದು ಅವಕಾಶ ಸಿಗಲಿದೆ. ಸೆಮಿಫೈನಲ್‌ನಲ್ಲಿ ಸೋತವರು ಭಾನುವಾರ ಕೋಟಾಕ್ಕಾಗಿ ಪರಸ್ಪರ ಸೆಣಸುವರು.



ಜಾಸ್ಮಿನ್ ಲಂಬೋರಿಯಾ

ಚೆಸ್: ಆತಿಥ್ಯಕ್ಕೆ ದೆಹಲಿ ಬಿಡ್

ನವದೆಹಲಿ (ಪಿಟಿಐ): ಹದಿಹರೆಯದ ಚೆಸ್ ತಾರೆ ಭಾರತದ ಡಿ.ಗುಕೇಶ್ ಮತ್ತು ಹಾಲಿ ವಿಶ್ವ ಚಾಂಪಿಯನ್ ಚೀನಾದ ಡಿಂಗ್ ಲಿರೆನ್ ನಡುವಣ ನಡೆಯಲಿರುವ ವಿಶ್ವ ಚೆಸ್ ಚಾಂಪಿಯನ್‌ಷಿಪ್ ಆತಿಥ್ಯಕ್ಕೆ ದೆಹಲಿ ಬಿಡ್ ಸಲ್ಲಿಸಿದೆ. ಚೆನ್ನೈ ಮತ್ತು ಸಿಂಗಪುರ ಈಗಾಗಲೇ ಬಿಡ್ ಸಲ್ಲಿಸಿವೆ.

ಅಖಿಲ ಭಾರತ ಚೆಸ್ ಫೆಡರೇಷನ್ ದೆಹಲಿ ಬಿಡ್ ಅನ್ನು ಬೆಂಬಲಿಸಿದೆ.

‘ಮೂರು ನಗರಗಳು ತಮ್ಮ ಬಿಡ್‌ಗಳನ್ನು ಸಲ್ಲಿಸಿವೆ ಮತ್ತು ಮಾನದಂಡಗಳನ್ನು ಪೂರೈಸಿವೆ. ಈ ವರ್ಷದ ನವೆಂಬರ್– ಡಿಸೆಂಬರ್‌ನಲ್ಲಿ ನಡೆಯುವ ಚಾಂಪಿಯನ್‌ಷಿಪ್‌ಗೆ ಚೆನ್ನೈ ಮೊದಲು ಬಿಡ್ ಸಲ್ಲಿಸಿದ್ದು, ದೆಹಲಿ ಕೊನೆಯದಾಗಿ ಬಿಡ್ ಸಲ್ಲಿಸಿದೆ’ ಎಂದು ವಿಶ್ವ ಚೆಸ್‌ನ ಅಧಿಕೃತ ಸಂಸ್ಥೆಯಾದ ಫಿಡೆ ಸಿಇಒ ಎಮಿಲ್ ಸುತೋವ್‌ಸ್ಕಿ ಶನಿವಾರ ‘ಎಕ್ಸ್’ ನಲ್ಲಿ ತಿಳಿಸಿದ್ದಾರೆ.

‘ಮುಂದಿನ ವಾರ ಫಿಡೆ ಕೌನ್ಸಿಲ್ ಸಭೆಯಲ್ಲಿ ಈ ಬಗ್ಗೆ ಚರ್ಚಿಸಲಾಗುವುದು. ವಿವರಗಳನ್ನು ಹಂಚಿಕೊಳ್ಳಲು ಬಿಡ್‌ದಾರರ ಪ್ರತಿನಿಧಿಗಳನ್ನು ಆಹ್ವಾನಿಸಲಾಗಿದೆ. ಜೂನ್‌ನಲ್ಲಿ ಅಂತಿಮ ನಿರ್ಧಾರ ಕೈಗೊಳ್ಳಲಾಗುವುದು’ ಎಂದು ಸುತೋವ್‌ಸ್ಕಿ ಹೇಳಿದರು.

ಚೆನ್ನೈ ಬಿಡ್ ಅನ್ನು ತಮಿಳುನಾಡಿನ ಕ್ರೀಡಾ ಅಭಿವೃದ್ಧಿ ಪ್ರಾಧಿಕಾರ ಮಾಡಿದರೆ, ಅಖಿಲ ಭಾರತ ಚೆಸ್ ಫೆಡರೇಷನ್ ನವದೆಹಲಿಗೆ ಬಿಡ್ ಮಾಡಿದೆ.

‘ರಾಷ್ಟ್ರೀಯ ಚೆಸ್ ಫೆಡರೇಷನ್, ನವದೆಹಲಿ ಅನ್ನು ಟೂರ್ನಿಯ ಸ್ಥಳವಾಗಿ ಬಿಡ್ ಮಾಡಿದೆ ಮತ್ತು ಕೇಂದ್ರ ಸರ್ಕಾರದಿಂದ ನಿರಾಕ್ಷೇಪಣಾ ಪ್ರಮಾಣಪತ್ರ (ಎನ್‌ಒಸಿ) ತೆಗೆದುಕೊಳ್ಳಲಾಗಿದೆ’ ಎಂದು ಎಐಸಿಎಫ್ ಅಧ್ಯಕ್ಷ ನಿತಿನ್ ನಾರಂಗ್ ತಿಳಿಸಿದ್ದಾರೆ.

‘ಫಿಡೆಗೆ ಬಿಡ್ ಕಳುಹಿಸುವ ಮೊದಲು ತಮಿಳುನಾಡು ಸರ್ಕಾರ ಎಐಸಿಎಫ್ ಅನ್ನು ಸಂಪರ್ಕಿಸಿಲ್ಲ ಅಥವಾ ಅದರ ಬಗ್ಗೆ (ಚೆನ್ನೈ ಟೂರ್ನಿಯ ಸ್ಥಳವಾಗಿ) ನಮ್ಮೊಂದಿಗೆ ಯಾವುದೇ ಮಾತುಕತೆ ನಡೆಸಿಲ್ಲ’ ಎಂದರು.

ಏಪ್ರಿಲ್‌ನಲ್ಲಿ ಕೆನಡಾದಲ್ಲಿ ನಡೆದ ಕ್ಯಾಂಡಿಡೇಟ್ಸ್ ಟೂರ್ನಿಯನ್ನು ಗೆಲ್ಲುವ ಮೂಲಕ ಚೆನ್ನೈನ 17 ವರ್ಷದ ಗುಕೇಶ್, ವಿಶ್ವ ಚೆಸ್ ಪಟ್ಟಕ್ಕೆ ಅತಿ ಕಿರಿಯ ಚಾಲೆಂಜರ್ ಎನಿಸಿದ್ದರು.

ಎಐಸಿಎಫ್ ಬಿಡ್ ಗೆದ್ದಲ್ಲಿ, ಸುಮಾರು ₹71 ಕೋಟಿ ನೀಡಬೇಕಾಗುತ್ತದೆ.

ಓಪನ್ ಸರ್ಫಿಂಗ್; ಸೆಮಿಯಲ್ಲಿ ಪೂಜಾರ್ ಸಹೋದರರು

ತಮಿಳುನಾಡು ಸರ್ಫರ್‌ಗಳ ಪೈಪೋಟಿ

ಪ್ರಜಾವಾಣಿ ವಾರ್ತೆ

ಮಂಗಳೂರು: ತಮಿಳುನಾಡಿನ ಸಂಜಯ್ ಕುಮಾರ್ ಎಸ್, ಶ್ರೀಕಾಂತ್, ಸಂಜಯ್ ಸೆಲ್ವಮಣಿ ಮತ್ತು ಅಜೀಶ್ ಅಲಿ ಇಲ್ಲಿನ ಸುರತ್ಕಲ್ ಸಮೀಪದ ಸಸಿಹಿತ್ಲು ಬೀಚ್‌ನಲ್ಲಿ ನಡೆಯುತ್ತಿರುವ ರಾಷ್ಟ್ರೀಯ ಓಪನ್ ಸರ್ಫಿಂಗ್ ಚಾಂಪಿಯನ್‌ಷಿಪ್‌ನ ಪುರುಷರ ಮುಕ್ತ ವಿಭಾಗದ ಪ್ರಶಸ್ತಿಗಾಗಿ ಭಾನುವಾರ ಸೆಣಸಲಿದ್ದಾರೆ.

ನಗರದ ಮಂತ್ರ ಸರ್ಫ್ ಕ್ಲಬ್ ಮತ್ತು ಸರ್ಫಿಂಗ್ ಸ್ವಾಮಿ ಫೌಂಡೇಷನ್ ಸಹಯೋಗದಲ್ಲಿ ಭಾರತ ಸರ್ಫಿಂಗ್ ಫೆಡರೇಷನ್ ಆಯೋಜಿಸಿರುವ ಚಾಂಪಿಯನ್‌ಷಿಪ್‌ನ ಎರಡನೇ ದಿನವೂ ತಮಿಳುನಾಡು ಸರ್ಫರ್‌ಗಳು ಪಾರಮ್ಯ ಮೆರೆದರು. ಮಂತ್ರ ಸರ್ಫ್ ಕ್ಲಬ್‌ನ ರಾಜು ಪೂಜಾರ್, ಪ್ರದೀಪ್ ಪೂಜಾರ್ ಮತ್ತು ಆಕಾಶ್ ಪೂಜಾರ್ ಬಾಲಕರ ವಿಭಾಗದ ಫೈನಲ್‌ನಲ್ಲಿ ಸ್ಥಾನ ಗಳಿಸಿದರು. ಮಹಿಳೆಯರ ವಿಭಾಗದಲ್ಲಿ ಗೋವಾದ ಸುಗರ್ ಬನಾರಸಿ, ತಮಿಳುನಾಡಿನ ನೇಹಾ ವೈದ್ ಮತ್ತು ಮರೀಲಿ ವುಂಡೆರಿಂಕ್ ಫೈನಲ್ ಪ್ರವೇಶಿಸಿದರು.

ಪುರುಷರ ವಿಭಾಗದಲ್ಲಿ ಮೊದಲ ದಿನ ಅತ್ಯಧಿಕ ಸ್ಕೋರ್ ಗಳಿಸಿದ ಕ್ರೀಡಾಪಟು ಎನಿಸಿಕೊಂಡಿದ್ದ ತಮಿಳುನಾಡು ಸರ್ಫರ್, ಅಗ್ರ ಶ್ರೇಯಾಂಕದ ಶಿವರಾಜ್ ಬಾಬು ಎರಡನೇ ದಿನವೂ ಗರಿಷ್ಠ ಸ್ಕೋರ್ ಗಳಿಸಿ ಗಮನ ಸೆಳೆದರು.

ಆಕಾಶ್ ಪೂಜಾರ್

ಬೆಳಿಗ್ಗೆ ನಡೆದ ಪುರುಷರ ಮುಕ್ತ ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ 15.17 ಸ್ಕೋರ್‌ನೊಂದಿಗೆ ಅವರು ಈ ಸಾಧನೆ ಮಾಡಿದರು. ಆದರೆ ಸೆಮಿಫೈನಲ್‌ನಲ್ಲಿ ಅವರಿಗೆ ನಿರಾಸೆ ಕಾಡಿತು. ಸೆಮಿಫೈನಲ್‌ನ ಎರಡನೇ ಹೀಟ್ಸ್‌ನಲ್ಲಿ ಸ್ಪರ್ಧಿಸಿದ ಅವರಿಗೆ 8.60 ಸ್ಕೋರು ಗಳಿಸಲಷ್ಟೇ ಸಾಧ್ಯವಾಯಿತು. 9.90 ಸ್ಕೋರುಗಳೊಂದಿಗೆ ಶ್ರೀಕಾಂತ್ ಡಿ ಮತ್ತು 9.70 ಸ್ಕೋರು ಗಳಿಸಿದ ಅಜೀಶ್ ಅಲಿ ಪ್ರಶಸ್ತಿ ಸುತ್ತು ಪ್ರವೇಶಿಸಿದರು. ಒಂದನೇ ಹೀಟ್ಸ್‌ನಲ್ಲಿ ಸ್ಪರ್ಧಿಸಿದ್ದ ಸಂಜಯ್ ಕುಮಾರ್ ಎಸ್ ಮತ್ತು ಸಂಜಯ್ ಸೆಲ್ವಮಣಿ ಫೈನಲ್‌ಗೆ ಪ್ರವೇಶಿಸಿದರು.

ಕಳೆದ ಬಾರಿ ಮಹಿಳೆಯರ ಮತ್ತು ಬಾಲಕಿಯರ ವಿಭಾಗದಲ್ಲಿ ಚಾಂಪಿಯನ್ ಆಗಿದ್ದ ತಮಿಳುನಾಡಿನ ಕಮಲಿ ಮೂರ್ತಿ ಮೋಹಕ ಪ್ರದರ್ಶನದೊಂದಿಗೆ ಮಹಿಳೆಯರ ವಿಭಾಗದ ಫೈನಲ್ ಪ್ರವೇಶಿಸಿದರು. ಮೊದಲ ಸೆಮಿಫೈನಲ್ ಹೀಟ್‌ನಲ್ಲಿ 11.23 ಸ್ಕೋರು ಕಲೆ ಹಾಕಿದ ಅವರೊಂದಿಗೆ ಗೋವಾದ ಸುಗರ್ ಬನಾರಸಿ ಕೂಡ ಫೈನಲ್ ತಲುಪಿದರು. ಭರವಸೆ ಮೂಡಿಸಿದ್ದ ಸ್ಥಳೀಯ ಪ್ರತಿಭೆ ಸಿಂಚನಾ ಗೌಡ ಅವರಿಗೆ 4.97 ಸ್ಕೋರು ಗಳಿಸಲಷ್ಟೇ ಸಾಧ್ಯವಾಯಿತು. ಎರಡನೇ ಸೆಮಿಫೈನಲ್ ಹೀಟ್‌ನಲ್ಲಿದ್ದ ತಮಿಳುನಾಡಿನ ನೇಹಾ ವೈದ್ ಮತ್ತು ಮರೀಲಿ ವುಂಡೆರಿಕ್ ಅಂತಿಮ ಘಟ್ಟಕ್ಕೆ ಅರ್ಹತೆ ಪಡೆದರು.

ಸಹೋದರರ ಕಮಾಲ್: ಮಂತ್ರ ಸರ್ಫ್ ಕ್ಲಬ್ ಪ್ರತಿನಿಧಿಸಿದ ಬಾಗಲಕೋಟೆ ಜಿಲ್ಲೆ ಬಾದಾಮಿಯ ಬೆಳವಲಕೊಪ್ಪದ ಸಹೋದರರಾದ ರಾಜು ಪೂಜಾರ್, ಪ್ರದೀಪ್ ಪೂಜಾರ್ ಮತ್ತು ಆಕಾಶ್ ಪೂಜಾರ್ ಬಾಲಕರ ವಿಭಾಗದ ಸೆಮಿಫೈನಲ್ ಪ್ರವೇಶಿಸಿದರು. ಬಾಲಕರ ವಿಭಾಗದ ರಾಷ್ಟ್ರೀಯ ಕ್ರಮಾಂಕದಲ್ಲಿ ಐದನೇ ಸ್ಥಾನದಲ್ಲಿರುವ ಹರೀಶ್ ಪಿ ಅವರ ಜೊತೆ ತಯಿನ್ ಅರುಣ್, ಪ್ರಹ್ಲಾದ್ ಶ್ರೀರಾಮ್, ಯೋಗೇಶ್ ಎ ಮತ್ತು ಸೋಮ್ ಸೇಥಿ ಕೂಡ ಸೆಮಿಫೈನಲ್‌ಗೆ ಅರ್ಹತೆ ಪಡೆದರು.

ಆಕಾಶ್ ಕ್ವಾರ್ಟರ್ ಫೈನಲ್ ಒಂದನೇ ಹೀಟ್‌ನಲ್ಲಿ ತಮಿಳುನಾಡಿನ ಲೋಕೇಶ್‌ಗೆ ಪ್ರಬಲ ಪೈಪೋಟಿ ನೀಡಿ ಎರಡನೇ ಸ್ಥಾನ ಗಳಿಸುವುದರೊಂದಿಗೆ ಸೆಮಿಫೈನಲ್ ಪ್ರವೇಶಿಸಿದರು.